ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 16, 2011 ಪುಟ 20 ರೂ. 14/-

ಶಾಲೆಗಳ ವಿಲೀನಕ್ಕೂ ಮುಚ್ಚುವುದಕ್ಕೂ ಏನು ವ್ಯತ್ಯಾಸ?


ಗಾಯಗೊಂಡ ಹುಲಿ ಬೋನಿನಿಂದ ಹೊರಕ್ಕೆ




ಯಡ್ಡಿ ಜೊತೆಯಲಿ RSS ಲೂಟಿ



ಬೊಮ್ಮಾಯಿ ಬಗಲಲ್ಲಿ ರೇಪಿಸ್ಟರು



ಜಯಶ್ರೀನಿವಾಸನ್ ದಡ್ಡರ ಗುರು!



ನಿರಾಣಿಯ ರಕ್ಕಸ ತಮ್ಮಂದಿರು



ಮರಿ ಟೈಗರ್ ವಿನೋದಾವಳಿ

ರಂಜನೆ ಬೋಧನೆ ಪ್ರಬೋಧನೆ ಲಂಕೇಶ್



ಶಾಲೆಗಳ ವಿಲೀನಕ್ಕೂ, ಮುಚ್ಚುವುದಕ್ಕೂ ಏನು ವ್ಯತ್ಯಾಸ?

ರಾಜ್ಯೋತ್ಸವದ ದಿನ ಇಡೀ ರಾಜ್ಯದ ಜನರನ್ನೇ ಮುಠ್ಠಾಳರನ್ನಾಗಿ ಮಾಡುವ ಹೇಳಿಕೆಯೊಂದನ್ನು ಸರ್ಕಾರ ನೀಡಿದೆ. ಮುಖ್ಯಮಂತ್ರಿ ಸದಾನಂದಗೌಡ "ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುತ್ತೇವೆಯೇ ವಿನಃ ಮುಚ್ಚುವುದಿಲ್ಲ" ಎಂದು ಹೇಳಿದ್ದಾರೆ. ತಕ್ಷಣವೇ ಅದನ್ನು ಯಥಾವತ್ ಒಪ್ಪಿಕೊಂಡ ಮಾಧ್ಯಮಗಳು ಅದರ ಅರ್ಧಭಾಗವನ್ನು ಮಾತ್ರ - ಅಂದರೆ ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ ಎಂಬುದನ್ನು ಮಾತ್ರ - ಪ್ರಚಾರ ಮಾಡುವ ತಾವೂ ಮುಠ್ಠಾಳರಾಗಿದ್ದಲ್ಲದೆ ಜನರನ್ನು ಮುಠ್ಠಾಳರನ್ನಾಗಿ ಮಾಡಿದವು.

ಆ ಹೇಳಿಕೆಯ ಉಳಿದರ್ಧ ಭಾಗದ ಅರ್ಥವೇನು? ವಿಲೀನಗೊಳಿಸುತ್ತೇವೆ ಎಂದರೇನು?

ಎರಡಿದ್ದದ್ದನ್ನು ಒಂದು ಮಾಡಿ ಒಂದನ್ನು ಮುಚ್ಚುತ್ತೇವೆ ಎಂದೇ ಅಲ್ಲವೇ. ಬಿಜೆಪಿ ಸರ್ಕಾರ ತನ್ನ ಭ್ರಷ್ಟತೆಯನ್ನು ಶಬ್ದ ಭ್ರಷ್ಟತೆ ಮತ್ತು ವಚನ ಭ್ರಷ್ಟತೆಗೂ ವಿಸ್ತರಿಸಿಕೊಂಡಿದೆ, ಅಷ್ಟೆ.

ವಾಸ್ತವವಾಗಿ 3,000ಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಸರ್ಕಾರ ಮಾಡಿ ತಿಂಗಳು ಕಳೆದಿದೆ. ಅದಕ್ಕೆ ಸಂಬಂಧಪಟ್ಟಂತೆ ಶಾಲೆಯ ಮಧ್ಯಾಹ್ನದ ಊಟದ ಸಿಬ್ಬಂದಿಯನ್ನು ತೆಗೆದುಹಾಕುವ ಮತ್ತು ದೊಡ್ಡ ಊರಿನ ಶಾಲೆಗೆ ಹೋಗಲು ಬೇಕಾದ ವೆಚ್ಚವನ್ನು ಭರಿಸಲೂ ಸುತ್ತೋಲೆ ಮತ್ತು ನಿಯಮಾವಳಿಯನ್ನು ಸಹ ಸರ್ಕಾರ ಹೊರಡಿಸಿ ತಿಂಗಳು ಕಳೆದಿದೆ. ಈಗ ಎಲ್ಲೆಡೆ ಸರ್ಕಾರಿ ಶಾಲೆ ಮುಚ್ಚುವುದರ ವಿರುದ್ಧ ಭುಗಿಲೆದ್ದಿರುವ ಪ್ರತಿಭಟನೆ ಮತ್ತು ರಾಜ್ಯೋತ್ಸವದ ಕನ್ನಡ ಭಾವಾವೇಶದ ಸಂದರ್ಭದ ಹಿನ್ನೆಲೆಯಲ್ಲಿ ಸರ್ಕಾರ ತಾನು ಶಾಲೆಯನ್ನು ಮುಚ್ಚುವ ನಿರ್ಧಾರವನ್ನೇ ತೆಗೆದುಕೊಂಡಿಲ್ಲವೆಂಬ ಹಸಿಹಸಿ ಸುಳ್ಳನ್ನು ಹೇಳುತ್ತಿದೆ.



ರಾಜ್ಯೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ನೀಡಿದ "ಶಾಲೆಗಳನ್ನು ಮುಚ್ಚುವುದಿಲ್ಲ, ಆದರೆ ವಿಲೀನಗೊಳಿಸುತ್ತೇವೆ" ಎಂಬ ಹೇಳಿಕೆಗೆ ಅರ್ಥ, ಸಣ್ಣ ಸಣ್ಣ ಶಾಲೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ದೊಡ್ಡದರಲ್ಲಿ ಐಕ್ಯವಾಗುವುದು ಎಂದೇ ಅಲ್ಲವೇ? ಅಂದರೆ ಸಣ್ಣಶಾಲೆಗಳನ್ನು ಮುಚ್ಚುತ್ತಾರೆ ಎಂದೇ ಅದರ ಅರ್ಥ. ಆದರೂ ಕನ್ನಡ ಶಾಲೆಗಳನ್ನು ವಿಲೀನಗೊಳಿಸುತ್ತೇವೆಯೇ ಹೊರತು ಮುಚ್ಚುವುದಿಲ್ಲ ಎಂದು ಹೇಳಿಕೆ ನೀಡುವುದರ ಮೂಲಕ ಮುಖ್ಯಮಂತ್ರಿಗಳು ರಾಜ್ಯೋತ್ಸವದ ದಿನ ಇಡೀ ರಾಜ್ಯದ ಜನತೆಯನ್ನು ಮುಠ್ಠಾಳರನ್ನಾಗಿ ಮಾಡಲು ಯತ್ನಿಸಿದ್ದಾರೆ.


ಕೇಂದ್ರ ಸರ್ಕಾರ 20 ಮಕ್ಕಳಿಗಿಂತ ಕಡಿಮೆ ಇರುವ ಶಾಲೆಗಳನ್ನು ಮುಚ್ಚುವ ಸಲಹೆ ಮಾಡಿದ್ದರೂ ತಾವು ಅದನ್ನು ಐದು ಮಕ್ಕಳಿಗಿಂತ ಕಡಿಮೆ ಇರುವ ಶಾಲೆಗೆ ಅನ್ವಯಿಸಲು ನಿರ್ಧರಿಸಿದ್ದಾಗಿ ರಾಜ್ಯೋತ್ಸವ ಸಮಾರಂಭದಲ್ಲಿ ಹೇಳುವ ಮೂಲಕವೂ ಮುಖ್ಯಮಂತ್ರಿಗಳು ಕನ್ನಡ ಶಾಲೆಗಳನ್ನು ಮುಚ್ಚುವ ಸ್ಪಷ್ಟ ಸಂದೇಶ ಕೊಟ್ಟಿದ್ದಾರೆ. ಹಾಗೂ ಎಂಥಾ ಶಾಲೆಗಳನ್ನು ಮುಚ್ಚಬೇಕು ಎಂದು ಗುರುತಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗುವುದು ಎಂಬ ಮತ್ತೊಂದು ಸೋಗಲಾಡಿ ಪ್ರಜಾತಂತ್ರದ ಮಾತಾಡಿದ್ದಾರೆ.

ಇದು ಮುಚ್ಚುವ ಶಾಲೆಗಳನ್ನು ಗುರುತಿಸುವ ಆಡಳಿತಾತ್ಮಕ ಕ್ರಮವೇ ವಿನಃ ಐದು ಮಕ್ಕಳಿಗಿಂತ ಕಡಿಮೆ ಇರುವ ಶಾಲೆಗಳನ್ನು ಉಳಿಸಿಕೊಳ್ಳುವ ಅಧಿಕಾರ ವಿಕೇಂದ್ರೀಕರಣವೇನೂ ಅಲ್ಲ.

ಅಷ್ಟು ಮಾತ್ರವಲ್ಲ, ತನ್ನ ಜನವಿರೋಧಿ ನೀತಿಗಳ ಅನುಷ್ಠಾನದಲ್ಲಿ ಇತರರನ್ನೂ ಒಳಸೆಳೆದುಕೊಂಡು ತನ್ನ ವಿರುದ್ಧ ಪ್ರತಿರೋಧ ಬರದಂತೆ ತಡೆದುಕೊಳ್ಳುವ ಕ್ರಮವೂ ಆಗಿದೆ. ಈಗಾಗಲೇ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವೇ ಈ ಕ್ರಮದ ಮುಂಚೂಣಿಯಲ್ಲಿರುವುದರಿಂದ ಅವರ ವಿರೋಧಕ್ಕೆ ಅರ್ಥವಿರುವುದಿಲ್ಲ. ಇನ್ನು ಜೆಡಿಎಸ್‌ನ ರಾಜ್ಯಾಧ್ಯಕ್ಷ ಕುಮಾರಸ್ವಾಮಿ "ಎರಡು ಮೂರು ಮಕ್ಕಳಿರುವ ಸರ್ಕಾರಿ ಶಾಲೆಗಳನ್ನು ಮುಂದುವರೆಸಲು ಸಾಧ್ಯವಿಲ್ಲ, ಈ ವಿಷಯದಲ್ಲಿ ರಾಜಕಾರಣ ಮಾಡಲು ಬಯಸುವುದಿಲ್ಲ. ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಹಾಜರಾತಿ ಇಲ್ಲದಿದ್ದರೆ ಅವುಗಳನ್ನು ಮುಚ್ಚದಿರಲು ಸಾಧ್ಯವೇ? ಆದರೆ ಬಡಮಕ್ಕಳ ಹಿತವನ್ನು ಕಾಪಾಡುವಲ್ಲಿ ಸರ್ಕಾರ ವೈಜ್ಞಾನಿಕ ಕ್ರಮ ತೆಗೆದುಕೊಳ್ಳಬೇಕಷ್ಟೆ" ಎಂದು ಸರ್ಕಾರದ ಕ್ರಮಕ್ಕೆ ಕ್ಲೀನ್ ಚಿಟ್ ಕೊಟ್ಟಿದ್ದಾರೆ.

ಹೀಗಾಗಿ ಈ ಜನವಿರೋಧಿ ನೀತಿಗೆ ಅಧಿಕೃತ ವಿರೋಧವೇ ಇಲ್ಲ.

ಕೆಲವೇ ಕೆಲವು ಜನಪರ, ಕನ್ನಡಪರ ಸಂಘಟನೆಗಳನ್ನು ಬಿಟ್ಟರೆ ಮುಖ್ಯಮಂತ್ರಿಯ ಹೇಳಿಕೆಯನ್ನು ಉಳಿದವರು ತಮಗೆ ಅನುಕೂಲಕರವಾಗಿಯೇ ವ್ಯಾಖ್ಯಾನ ಮಾಡಿಕೊಂಡು ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ತೃಪ್ತಿ ಪಟ್ಟುಕೊಳ್ಳುತ್ತಿದ್ದಾರೆ. ಆದ್ದರಿಂದ ಈಗಲಾದರೂ ಜನರ ಹಿತದ ಬಗ್ಗೆ ಯೋಚನೆ ಮಾಡುವವರು ತಮ್ಮ ಅಲ್ಪತೃಪ್ತಿ ಅಥವಾ ಅನೂಕುಲಸಿಂಧು ತಿಳುವಳಿಕೆಯಿಂದ ಹೊರಬಂದು ಸರ್ಕಾರದ ಕ್ರಮದ ವಿರುದ್ಧ ತೀವ್ರ ಹೋರಾಟ ನಡೆಸದಿದ್ದರೆ ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಉಳಿಗಾಲವಿಲ್ಲ.



ಶಿವಸುಂದರ್ ಚಾರ್ವಾಕ

ಹಾಗೆ ನೋಡಿದರೆ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಯೋಜನಾ ಆಯೋಗ ಹೊರತಂದ ದಸ್ತಾವೇಜೊಂದು ಹೀಗೆ ಹೇಳುತ್ತದೆ:

"ಭಾರತದ ಶೈಕ್ಷಣಿಕ ಸಾಮರ್ಥ್ಯ ಕಳೆದ ಐದು ದಶಕಗಳಲ್ಲಿ ತೀವ್ರ ಏರಿಕೆಯನ್ನು ಕಂಡಿದ್ದರೂ ಅದರ ನಿಜವಾದ ಶಕ್ತಿಯನ್ನು ಹೊರತರುವಷ್ಟು ಆಗಿಲ್ಲ ಎಂದೇ ಹೇಳಬೇಕು. ಪ್ರಾಥಮಿಕ ಶಾಲೆಗಳಲ್ಲಿ ಈಗಲೂ ಒಟ್ಟಾರೆ ನೋಂದಾವಣಿ ಶೇ. 77ರಷ್ಟಿದ್ದರೆ ಉನ್ನತ ಶಾಲೆಗಳ ಮಟ್ಟದಲ್ಲಿ ಅದು ಶೇ. 60ಅಷ್ಟೆ. ಆದರೆ ಪ್ರಪಂಚದ ಬಹುಪಾಲು ಬಡದೇಶ[ಗಳಲ್ಲೂ] ಸಹ ಪ್ರಾಥಮಿಕ ಶಾಲೆಗಳಲ್ಲಿ ಶೇ. 99ರಷ್ಟು ನೋಂ[ದಣಿ] ದಾಖಲಾಗುತ್ತಿರುವುದನ್ನು ಗಮನಿಸಿದರೆ ಭಾರತದ[...] ಎಲ್ಲಿದೆ ಎಂಬುದು ಅರ್ಥವಾಗುತ್ತದೆ. ಕಳೆದ[...] ವರ್ಷಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲೇ ಶಾಲೆ[...] ಹೊರಬೀಳುವವರ ಸಂಖ್ಯೆ ಶೇ. 45ರಷ್ಟು. ದೇಶದಲ್ಲಿ[...] ವಯೋಮಾನದ 20 ಕೋಟಿ ಮಕ್ಕಳಿದ್ದರೆ ಅದರಲ್ಲಿ[...] 12 ಕೋಟಿ ಮಕ್ಕಳಷ್ಟೆ ಶಾಲೆಗಳಲ್ಲಿದ್ದಾರೆ.."

ವಾಸ್ತವ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಬಿಡಿಸಿಡುವ[...] ಈ ಪರಿಸ್ಥಿತಿಗೆ ಪ್ರಧಾನ ಕಾರಣ:

"ಔಪಚಾರಿಕ ಶಾಲಾ ವ್ಯವಸ್ಥೆಯನ್ನು[...] ವಿಸ್ತರಿಸಬೇಕು. ಐದು ಲಕ್ಷ ಹಳ್ಳಿಗಳಲ್ಲೂ ಶಾಲೆ[...] ತೆರೆಯದ ಹೊರತು ಶಾಲಾ ಹಾಜರಾತಿ ಪ್ರ[...] ಹೆಚ್ಚುವುದಿಲ್ಲ ಮತ್ತು ಶಿಕ್ಷಣದ ಗುಣಮಟ್ಟ[...] ಗೈರುಹಾಜರಾತಿಯ ಸಾಮಾಜಿಕ ಕಾರಣಗಳನ್ನು ನಿ[...] ಈ ಸವಾಲನ್ನು ಎದುರಿಸಲು ಸಾಧ್ಯವಿಲ್ಲ. ಈ ಸ[...] ಎದುರಿಸಬೇಕೆಂದರೆ ಶಿಕ್ಷಣಕ್ಕೆ ನೀಡುತ್ತಿರುವ[...] ಹೆಚ್ಚಬೇಕು. ಈಗ ಸರ್ಕಾರವು ತನ್ನ ಒಟ್ಟು ರಾ[...] ಆದಾಯದ ಕೇವಲ ಶೇ: 3-4ರಷ್ಟನ್ನು ಮಾತ್ರ[...] ಮಾಡುತ್ತಿದೆ. ಆದರೆ ದಕ್ಷಿಣ ಆಫ್ರಿಕಾದಲ್ಲೂ ಸಹ ಅ[...] 7.9ರಷ್ಟಿದೆ. ಭಾರತದಲ್ಲೂ ಅದು ಅಷ್ಟಾದರೂ ಹ[...] ಔಪಚಾರಿಕ ಶಿಕ್ಷಣದ ಜಾಲ ವಿಸ್ತಾರಗೊಳ್ಳು[...] ಹಾಜರಾತಿ ಮತ್ತು ಸಾಕ್ಷರತೆ ಹೆಚ್ಚುವುದಿಲ್ಲ"

(ಡಾ.ಎಸ್.ಪಿ. ಗುಪ್ತಾ ನೇತೃತ್ವದ ವಿಷನ್ 2020[...] ಯೋಜನಾ ಆಯೋಗ)

ಎಂದು ಪರಿಹಾರವನ್ನೂ ಸೂಚಿಸುತ್ತದೆ. ಕುಗ್ರಾಮ[...] ಶಾಲೆಗಳು ಮತ್ತು ಗುಣಮಟ್ಟದ ಶಿಕ್ಷಣ ಹಾಗೂ ಔ[...] ಶಿಕ್ಷಣದ ವಿಸ್ತರಣೆ ಮತ್ತು ಅದಕ್ಕೆ ಬೇಕಾದ ಸಂಪನ್ಮೂ[...] ಸರ್ಕಾರ ಕಡ್ಡಾಯವಾಗಿ ಒದಗಿಸಬೇಕೆಂಬುದು ಈ ವ[...] ಸಾರಾಂಶ.

ಇದನ್ನು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಒಪ್ಪಿಕೊ[...] ಆದರೆ ಆಚರಣೆಯಲ್ಲಿ ಏನು ಬದಲಾವಣೆ ಬರಲಿಲ್ಲ[...] ಈಗ ಅದರ ಬದಲಿಗೆ ಇರುವುದನ್ನೂ ಕಿತ್ತುಕೊಳ್ಳಲಾ[...]

ಇದಕ್ಕೆ ಸ್ಪಷ್ಟ ಕಾರಣವಿದೆ. ಕೇಂದ್ರದ ಕಾಂಗ್ರೆಸ್[...] ರಾಜ್ಯದ ಬಿಜೆಪಿ ಸರ್ಕಾರಗಳೆರಡೂ ಸರ್ಕಾರಿ ವೆ[...] ಕಡಿತಗೊಳಿಸುವ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸಂ[...] ಖಾಸಗೀಕರಿಸುವ ವಿಶ್ವ ಬ್ಯಾಂಕಿನ ಆದೇಶದಂತೆ[...] ನಡೆಸುತ್ತಿವೆಯೇ ವಿನಃ ಸಂವಿಧಾನದ ನಿರ್ದೇಶನದ[...]

ಹೀಗಾಗಿ 20ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರು[...] ಶಾಲೆಗಳನ್ನು ಮುಚ್ಚಬೇಕೆಂಬ ಕೇಂದ್ರ, ಐದಕ್ಕಿಂತ ಕ[...] ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚಬೇಕೆಂಬ[...] ಸರ್ಕಾರ ಸಾರಾಂಶದಲ್ಲಿ ಕುಗ್ರಾಮದಲ್ಲಿರುವ ಬಡ [...] ದಲಿತ ಮಕ್ಕಳಿಗೆ ಅದರಲ್ಲ[...] ಹೆಣ್ಣುಮಕ್ಕಳಿಗೆ ಅಕ್ಷರ ಜ್ಞಾ[...] ನಿರಾಕರಿಸಿ ಖಾಸಗಿ ಶಿಕ್ಷಣ ಬಂಡವಾಳಿಗರ ಲಾಭವನ್ನು ಹೆಚ್ಚಿಸುತ್ತಿದೆ.

ಆದ್ದರಿಂದ ಸರ್ಕಾರಿ ಶಾಲೆಗಳನ್ನು ಮುಚ್ಚಬಾ[...] ಚಳವಳಿ ಮುಖ್ಯಮಂತ್ರಿಗಳ ಮಾತಿನ ಹಿಂದಿನ ಮೋ[...] ಅರ್ಥಮಾಡಿಕೊಂಡು ಅಲ್ಪತೃಪ್ತಿಗೆ ಗುರಿಯಾಗದೆ[...] ಸಂಖ್ಯೆಯ ಮಕ್ಕಳಿದ್ದರೂ ಕುಗ್ರಾಮದಲ್ಲಿರುವ ಶಾ[...] ಮುಚ್ಚಬಾರದೆಂದು ಆಗ್ರಹಿಸಿ ಇನ್ನಷ್ಟು ತೀವ್ರವಾಗಿ ನ[...] ಅಗತ್ಯವಿದೆ.

ನೋ ಕಾಮೆಂಟ್ಸ್

"ದಲಿತ ಸಂಘರ್ಷ ಸಮಿತಿ- ನಿನ್ನೆ, ಇಂದು, ನಾಳೆ. ನಾಳೆ ಗೊತ್ತಿಲ್ಲ. ಇಂದು ಚೆನ್ನಾಗಿಲ್ಲ. ನಿನ್ನೆ ಪರವಾಗಿಲ್ಲ. ದಲಿತ ಹೋರಾಟಗಾರರಲ್ಲಿ ಇಂದು ಬಂಧುತ್ವ ಕಡಿಮೆಯಾಗುತ್ತಿದೆ. ದಲಿತ ಸಂಘರ್ಷ ಸಮಿತಿಯನ್ನು ಬಿ. ಕೃಷ್ಣಪ್ಪ, ಸಿದ್ಧಲಿಂಗಯ್ಯ ಮತ್ತು ನಾನು ಪ್ರಭಾವಿಸುತ್ತಿದ್ದೆವು. ಕೃಷ್ಣಪ್ಪನವರು ಅಂಬೇಡ್ಕರ್‌ವಾದಿಗಳು, ಸಿದ್ಧಲಿಂಗಯ್ಯನವರನ್ನು ಕಮ್ಯುನಿಸ್ಟರೆಂದೂ, ನನ್ನನ್ನು ಸಮಾಜವಾದಿಯೆಂದೂ ಕರೆಯುತ್ತಿದ್ದರು. ಆದರೆ ನಾವು ಮೂರು ಜನ ಆ ದಿನಗಳಲ್ಲಿ ವೇದಿಕೆಯ ಮೇಲೆಯೇ ಸೈದ್ಧಾಂತಿಕವಾದ ಜಗಳ ಮಾಡಿಕೊಳ್ಳುತ್ತಿದ್ದೆವು. ಆದರೆ ಅದಾದ ಮೇಲೂ ನಮ್ಮ ನಡುವೆ ಅಪಾರ ಬಂಧುತ್ವ ಉಳಿದಿರುತ್ತಿತ್ತು."

-ದೇವನೂರು ಮಹಾದೇವ

"ಲೇಡಿ ಗಾಗಾ ಶೋನ ದರ ಒಂದು ಟಿಕೆಟ್ಟಿಗೆ 40,000 ರೂ. ಆದರೆ ತನ್ನ ಜೀವನಾಧಾರವನ್ನೇ ಕಳೆದುಕೊಂಡ ರೈತ ಪಡೆದುಕೊಂಡದ್ದು ಕೇವಲ ಒಂದು ಮೀಟರ್‌ಗೆ 800 ರೂ."

-ದೆಹಲಿಯ ಎಫ್-1 ಟ್ರ್ಯಾಕ್‌ಗೆ ಜಮೀನು ಕಳೆದುಕೊಂಡವರು

"ಪ್ರತಿದಿನ ರಸ್ತೆ ನಿರ್ಮಾಣದ ಕಾಂಟ್ರಾಕ್ಟರುಗಳ ಲಾಭಕ್ಕೆಂದು ಸಂಗ್ರಹಿಸಲಾಗುವ ಸುಂಕದಿಂದ ಸರ್ಕಾರ ಏನಿಲ್ಲವೆಂದರೂ ದಿನಕ್ಕೆ ಒಂದು ಕೋಟಿ ರೂ.ಗಳನ್ನು ಕಳೆದುಕೊಳ್ಳುತ್ತದೆ."

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿ

"ಹಣದ ಮೂಲದ ಮಾಹಿತಿ ನೀಡದ ದಾನಿಗಳಿಗೆ 42.55 ಲಕ್ಷ ವಾಪಸ್ ಮಾಡುವುದಾಗಿ ಅಣ್ಣಾ ತಂಡ ಹೇಳಿದೆ. ಸೂಪರ್. ಯಾರೆಂದು ಗೊತ್ತಿಲ್ಲದ ದಾನಿಗಳಿಂದ ಹಣ ಸಂಗ್ರಹಿಸಿ ನಂತರ ಅದನ್ನೇ ವಾಪಸ್ ಮಾಡುವುದು ಸೂಪರ್ ಹೀರೋಗಳಿಗೆ ಮಾತ್ರ ಸಾಧ್ಯ."

- ದಿಗ್ವಿಜಯ ಸಿಂಗ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಕಳೆದ 25 ವರ್ಷಗಳಲ್ಲಿ ಒಟ್ಟು 6 ರಥಯಾತ್ರೆ ಮಾಡಿದ್ದೀನಿ. ಆದರೆ ಭ್ರಷ್ಟಾಚಾರದ ವಿರುದ್ಧದ ಜನಚೇತನಾ ಯಾತ್ರೆಗೆ ಸಿಕ್ಕಷ್ಟು ಜನರ ಬೆಂಬಲ ಬೇರೆ ಯಾವುದೇ ಯಾತ್ರೆಗೆ ಸಿಕ್ಕಿರಲಿಲ್ಲ. ಬಹುಶಃ ಇದು ರಾಜಕಾರಣದ ರಥಯಾತ್ರೆಯಾಗಿದ್ದರೆ ಜನ ಸ್ಪಂದಿಸುತ್ತಿರಲಿಲ್ಲ."

- ಅಡ್ವಾಣಿ

"ಮುಖ್ಯಮಂತ್ರಿ ಸದಾನಂದ ಗೌಡರ ಮೇಲೆ ಯಾರ ಒತ್ತಡವೂ ಇಲ್ಲ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ."

- ಆರ್. ಅಶೋಕ್

"ಹಿಸ್ಸಾರ್ ಉಪಚುನಾವಣೆಯಲ್ಲಿ ತುಳಿದ ಹಾದಿಯಿಂದ 'ಆಂತರಿಕ ಒತ್ತಡ'ಕ್ಕೆ ಸಿಲುಕಿರುವ ಅಣ್ಣಾ ಹಜಾರೆ, ಸದ್ಯದಲ್ಲೇ ಐದು ರಾಜ್ಯಗಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್ ವಿರುದ್ಧ ಪ್ರಚಾರ ಮಾಡದಿರಲು ನಿರ್ಧರಿಸಿದೆ."

- ವರದಿ

ಇದನ್ನು ನಿಮ್ಮ ಭೈರಪ್ಪನವರಿಗೆ ಹೇಳಿ ಸ್ವಾಮಿ

"ಸಾಹಿತ್ಯ ಮನಸ್ಸಿಗೆ ಆನಂದ ಮತ್ತು ಉಲ್ಲಾಸವನ್ನು ತರಬೇಕು. ಲೇಖನಿಗೆ ದೊಡ್ಡ ಶಕ್ತಿ ಇರುವುದು ನಿಜ. ಆದರೆ ಕೆಲವರು 'ಲೇಖನಿ ಭಯೋತ್ಪಾದನೆಯನ್ನು' ಮಾಡುತ್ತಾರೆ. ಲೇಖನಿಯನ್ನು ವಿವಾದ ಮತ್ತು ವ್ಯಸನಗಳಿಗೆ ಬಳಸಿಕೊಳ್ಳುವುದು ವಿಷಾದಕರ."

- ಶ್ರೀ ಶ್ರೀ ಶ್ರೀ ರವಿಶಂಕರ್

ಕುಮಾರಿ-ಕಾಗೇರಿ ಭಾಯ್ ಭಾಯ್!

"ಎರಡು ಮೂರು ಮಕ್ಕಳಿರುವ ಸರ್ಕಾರಿ ಶಾಲೆಗಳನ್ನು ಮುಂದುವ[ರೆಸಲು] ಸಾಧ್ಯವಿಲ್ಲ. ಈ ವಿಷಯದಲ್ಲಿ ರಾಜಕಾರಣ ಮಾಡಲು ಬಯಸುವುದಿಲ್ಲ. ಸ[ರ್ಕಾರಿ] ಶಾಲೆಗಳಲ್ಲಿ ಕನಿಷ್ಠ ಹಾಜರಾತಿ ಇಲ್ಲದಿದ್ದರೆ ಅವುಗಳನ್ನು ಮುಚ್ಚದಿರಲು ಸಾ[ಧ್ಯವೇ?] ಆದರೆ ಬಡಮಕ್ಕಳ ಹಿತವನ್ನು ಕಾಪಾಡುವಲ್ಲಿ ಸರ್ಕಾರ ವೈಜ್ಞಾನಿಕ [...] ತೆಗೆದುಕೊಳ್ಳಬೇಕಷ್ಟೆ."

- ಎಚ್. ಡಿ. ಕುಮಾರ[...]

ಸರ್ಕಾರಿ ಶಾಲೆ ಮುಚ್ಚುವುದಿಲ್ಲ, ಆದರೆ ನಡೆಸುವುದೂ ಇ[...]

"ರಾಜ್ಯದ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚುವ ಇಚ್ಛೆ ಸರ್ಕಾ[...] ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಶಾಲೆಗಳಲ್ಲಿ ಮಕ್ಕಳು [...] ಇದ್ದರೆ ಅವರನ್ನು ಸಮೀಪದ ಶಾಲೆಗೆ ನಿಯೋಗಿಸುವ ಯೋಚನೆ ಸರ್ಕಾ[...] ಮುಂದಿತ್ತು. ವಿವಾದದ ಹಿನ್ನೆಯಲ್ಲಿ ತೀರ್ಮಾನವನ್ನು ತೆಗೆದುಕೊ[...] ಅಧಿಕಾರವನ್ನು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತ್ತಿಗೆ ನೀಡಲಾಗಿದೆ."

- ಸದಾನಂದ[...]

ವಿಜ್ಞಾನದ ಬಗ್ಗೆ ಮೌಢ್ಯ ವಿಶ್ಲೇಷಣೆ!

"ಮನುಷ್ಯರಲ್ಲಿ ಆತ್ಮವಿಶ್ವಾಸ ಮೂಡಿಸುವ ಹಾಗೂ ಸ್ಫೂರ್ತಿ ನೀಡುವ[...] ಜ್ಯೋತಿಷ್ಯದ ಕುರಿತು ಅರಿವು ಮೂಡಿಸಬೇಕಾದ ಅವಶ್ಯಕತೆ ಇದೆ. ಜ್ಯೋ[ತಿಷ್ಯದ] ಬಗ್ಗೆ ಅಪನಂಬಿಕೆ ಹೋಗಲಾಡಿಸಿ ಅದರಲ್ಲಿನ ವೈಜ್ಞಾನಿಕ ಸತ್ಯದ ಬಗ್ಗೆ [...] ಅರಿವು ಮೂಡಿಸಬೇಕು. ಜ್ಯೋತಿಷ್ಯ ಶಾಸ್ತ್ರಕ್ಕೆ ವೈಜ್ಞಾನಿಕ ಹಿನ್ನೆಲೆ ಇದೆ."

- ಜ್ಯೋತಿಷಿ ಅರುಳ[...]

ಲೂಟಿವೀರರ ಕರ್ಮಕಥೆ ಕೋಟಿ ಗೆದ್ದೋನ ಯಶೋಗಾಥೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಯಡಿಯೂರಪ್ಪನಿಗೆ ಪರಪ್ಪನ ಅಗ್ರಹಾರದಿಂದ ಸದ್ಯಕ್ಕೆ ಬಿಡುಗಡೆ ಸಿಗುವಂತೆ ಕಾಣಿಸುತ್ತಿದೆ. (ಯಡ್ಡಿ ವಿರುದ್ಧ ಇರುವ ಎಲ್ಲಾ ಆರೋಪಗಳ ವಿಚಾರಣೆ ನಡೆದ ನಂತರ ಆತ ಕೆಲ ವರ್ಷಗಳ ಕಾಲ ಜೈಲು ಪಾಲಾಗುವುದು ಗ್ಯಾರಂಟಿ ಎಂಬುದು ಬೇರೆ ಮಾತು). ಆದರೆ ಯಡ್ಡಿಗೆ ಸದ್ಯ ಲಭ್ಯವಾದಷ್ಟು ಅದೃಷ್ಟ ಆತನ ಮಾಜಿ ವೈರಿ ಮತ್ತು ಬಿಜೆಪಿ 'ನಾಯಕ' ಜನಾರ್ದನ ರೆಡ್ಡಿಗೆ ಸಿಕ್ಕಿಲ್ಲ. ಆತ ಇವತ್ತಿಗೂ ಆಂಧ್ರದ ಚಂಚಲಗುಡ ಜೈಲಿನಲ್ಲಿ ಸಾಮಾನ್ಯ ಕೈದಿಯಾಗಿ ದಿನಗಳನ್ನು ಕಳೆಯುತ್ತಿದ್ದಾನೆ.

ತಾನು ರಾಜ ಕೃಷ್ಣದೇವರಾಯನ ಹೊಸ ಅವತಾರ ಎಂದು ಬಗೆದಿದ್ದ ಗಣಿ ಕಳ್ಳ ರೆಡ್ಡಿಗೆ ಜೈಲಿನಲ್ಲಿ ಯಡ್ಡಿಗೆ ಸಿಕ್ಕಿದ್ದ ವಿಶೇಷ ಕೊಠಡಿಯಾಗಲಿ, ಇತರೆ ಸೌಲಭ್ಯಗಳಾಗಲಿ ಸಿಕ್ಕಿಲ್ಲ. ಬದಲಾಗಿ ಆತನನ್ನು ಇತರೆ ಹಲವಾರು ಕೈದಿಗಳೊಂದಿಗೆ ಒಂದು ಕೊಠಡಿಯಲ್ಲಿ ಬಂಧಿಸಲಾಗಿದೆಯಲ್ಲದೆ ಆತ ಇತರರೊಂದಿಗೆ ಬಯಲಲ್ಲಿ, ಮರದ ಅಡಿ ಸ್ನಾನ ಮಾಡುವಂತಾಗಿದೆ. ಬಂಧನಕ್ಕೆ ಮುನ್ನ ಅಕ್ರಮವಾಗಿ ಗಳಿಸಿದ್ದ ಹಣದಲ್ಲಿ ಮಾಡಿಸಿಕೊಂಡಿದ್ದ ಚಿನ್ನದ ಕುರ್ಚಿಯಲ್ಲಿ ಕೂರುತ್ತಿದ್ದ, ಚಿನ್ನದ ತಟ್ಟೆಯಲ್ಲಿ ಊಟ ಮಾಡುತ್ತಿದ್ದ, ಇಷ್ಟವಾದಾಗ ವಜ್ರಖಚಿತ ಕಿರೀಟ ಧರಿಸುತ್ತಿದ್ದ ರೆಡ್ಡಿಗೆ ಸಹಜವಾಗಿಯೇ ಇದೆಲ್ಲದರಿಂದ ರೋಸಿ ಹೋಗಿದೆ. ಅದಕ್ಕೇ ಆತ ತನ್ನ ವಕೀಲರನ್ನು ಭೇಟಿ ಆದಾಗಲೆಲ್ಲ "ಹೇಗಾದರೂ ಮಾಡಿ ನನಗೆ ಬೇಲ್ ಸಿಗುವಂತೆ ನೋಡಿಕೊಳ್ಳಿರಿ" ಎಂದು ವಕೀಲರ ಕೈ ಕಾಲು ಹಿಡಿಯುತ್ತಿದ್ದಾನೆ. ಆದರೆ ಕಾನೂನಿನ ಮುಂದೆ ವಕೀಲರು ತಾನೇ ಏನು ಮಾಡಿಯಾರು?

ಹೋಗಲಿ, ಬೇಲ್ ಸಿಗದಿದ್ದರೂ ತನಗೆ ಜೈಲಿನಲ್ಲಿ ಕನಿಷ್ಠ ಸೌಲಭ್ಯಗಳಾದರೂ ಸಿಗಲಿ ಎಂದು ರೆಡ್ಡಿ ಮೊನ್ನೆ ನ್ಯಾಯಾಲಯದ ಮುಂದೆ ಒಂದು ಅರ್ಜಿ ಸಲ್ಲಿಸಿದ್ದ. ಆ ಅರ್ಜಿಯಲ್ಲಿ ತಾನು ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿರುವವನು, ಮೇಲ್ದರ್ಜೆಯ ಜೀವನ ಶೈಲಿ ನಡೆಸುತ್ತಿದ್ದವನು, ಈ ಹಿಂದೆ ಮಂತ್ರಿ ಆಗಿದ್ದವನು, ಈಗಲೂ ಶಾಸಕನಾಗಿರುವವನು... ಈ ಎಲ್ಲ ಕಾರಣಗಳಿಗಾಗಿ ಜೈಲಿನಲ್ಲಿ ತನಗೆ ವಿಶೇಷ ಕೊಠಡಿಯನ್ನು ನೀಡಬೇಕೆಂದು ರೆಡ್ಡಿ ಕೇಳಿದ್ದ.

ಆದರೆ ರೆಡ್ಡಿಯ ಈ ಮನವಿಯನ್ನು ಸಿಬಿಐ ವಕೀಲರಾದ ಬಿ.ರವೀಂದ್ರನಾಥ್ ಅವರು ನ್ಯಾಯಾಲಯದಲ್ಲಿ ವಿರೋಧಿಸಿದರು. ರೆಡ್ಡಿ ಎಸ್‌ಎಸ್‌ಎಲ್‌ಸಿ ಫೇಲ್ ಆಗಿರುವಾತ. ಓರ್ವ ಪೊಲೀಸ್ ಪೇದೆಯ ಮಗ. ಶಾಸಕನಾಗುವ ಮುನ್ನ ಆತನಿಗೆ ಸಮಾಜದಲ್ಲಿ ಯಾವ ಸ್ಥಾನಮಾನವೂ ಇರಲಿಲ್ಲ. ಈಗ ಆತ ಒಂದಿಷ್ಟು ಹೆಸರು ಮಾಡಿದ್ದರೆ ಅದಕ್ಕೆ ಕಾರಣ ಆತ ನಡೆಸಿದ ಅಕ್ರಮ ಗಣಿಗಾರಿಕೆ. ಹಾಗೆಯೇ ರೆಡ್ಡಿ ಚುನಾಯಿತನಾದ ಶಾಸಕನಲ್ಲ ಬದಲಾಗಿ ನೇಮಕಗೊಂಡ ಎಮ್‌ಎಲ್‌ಸಿ... ಈ ಎಲ್ಲ ಕಾರಣಗಳಿಗೆ ರೆಡ್ಡಿಗೆ ಜೈಲಿನಲ್ಲಿ ವಿಶೇಷ ಕೊಠಡಿಯನ್ನು ಕೊಡುವ ಅಗತ್ಯವಿಲ್ಲ ಎಂದು ರವೀಂದ್ರನಾಥ್ ವಾದಿಸಿದರು.

ಆಗ ರೆಡ್ಡಿಯ ವಕೀಲರು ಸತ್ಯಂ ಕಂಪ್ಯೂಟರ್ಸ್ ಕಂಪನಿಯ ರಾಮಲಿಂಗ ರಾಜುಗೆ ಮತ್ತು ಭ್ರಷ್ಟಾಚಾರ ವಿರೋಧಿ ಆಂದೋಲನದ ನಾಯಕ ಅಣ್ಣಾ ಹಜಾರೆ ಅವರಿಗೆ ಜೈಲಿನಲ್ಲಿ ವಿಶೇಷ ಕೊಠಡಿ ಕೊಟ್ಟಿದ್ದರಿಂದ ರೆಡ್ಡಿಗೂ ಕೊಡಬೇಕೆಂದು ವಾದಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿಬಿಐ ವಕೀಲ ರವೀಂದ್ರನಾಥ್ ಅವರು "ಅವರಿಬ್ಬರನ್ನು ರೆಡ್ಡಿಯೊಂದಿಗೆ ಹೋಲಿಸಬೇಡಿ. ಸತ್ಯಂ ಕಂಪನಿಯ ರಾಮಲಿಂಗ ರಾಜು ಅವರು ಉನ್ನತ ಕುಟುಂಬದಲ್ಲಿ ಹುಟ್ಟಿದವರು, ಅವರು ಸ್ಥಾಪಿಸಿದ ಕಂಪನಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದವರು. ರಾಜು ತನ್ನ ಕಂಪನಿಯಲ್ಲಿ ಬಂಡವಾಳ ಹೂಡಿದವರಿಗೆ ವಂಚನೆ ಮಾಡಿರಬಹುದು. ಆದರೆ ಅವರು ರೆಡ್ಡಿಯಂತೆ ಸರ್ಕಾರಕ್ಕೇ ವಂಚನೆ ಮಾಡಲಿಲ್ಲ. ಇನ್ನು ಅಣ್ಣಾ ಹಜಾರೆ ವಿಷಯಕ್ಕೆ ಬಂದರೆ ಅವರು ಓರ್ವ ಪ್ರಮುಖ ಹೋರಾಟಗಾರರು. ಅವರೊಂದಿಗೆ ರೆಡ್ಡಿಯನ್ನು ಹೋಲಿಸಲಾಗುವುದಿಲ್ಲ" ಎಂದಿದ್ದಾರೆ.


ರೆಡ್ಡಿಗೆ ಜೈಲಿನಲ್ಲಿ ವಿಶೇಷ ಸ್ಥಾನಮಾನ ಕೊಡಬೇಕೋ ಬೇಡವೋ ಎಂಬುದರ ಬಗ್ಗೆ ನ್ಯಾಯಾಲಯ ಇನ್ನೂ ತನ್ನ ತೀರ್ಪನ್ನು ನೀಡಿಲ್ಲ. ಅಲ್ಲಿಯ ತನಕ ಖದೀಮ ರೆಡ್ಡಿಗೆ ಪಿಕ್‌ಪಾಕೆಟ್‌ಗಳು, ಸಣ್ಣಪುಟ್ಟ ಕಳ್ಳರು ಜೊತೆಗಾರರಾಗಿರುತ್ತಾರೆ. ಇಲ್ಲಿ ಒಂದು ಪ್ರಶ್ನೆ: ಹಸಿವನ್ನು ತಾಳಲಾರದೆ ಕಳ್ಳತನ ಮಾಡಿದ ಬಡವನಿಗೆ, ಶೋಕಿಗಾಗಿ ಕಾರ್ ಅಥವಾ ಬೈಕ್ ಕದ್ದ ಪುಂಡನಿಗೆ ಜೈಲಿನಲ್ಲಿ ಯಾವ ಸವಲತ್ತುಗಳೂ ಇಲ್ಲದಿರುವಾಗ ಸಾರ್ವಜನಿಕರ ಆಸ್ತಿಯನ್ನು ಲೂಟಿ ಮಾಡಿದ ಸಿದ್ದಿ, ನೈಸರ್ಗಿಕ ಸಂಪತ್ತನ್ನು ನಾಶ ಮಾಡಿದ ರೆಡ್ಡಿ ತರಹದ ಧನ ಪಿಶಾಚಿಗಳಿಗೆ ಜೈಲಿನಲ್ಲಿ ಯಾಕೆ ವಿಶೇಷ ಸವಲತ್ತುಗಳನ್ನು ನೀಡಬೇಕು?

* * * * * *

ಸುಶೀಲ್ ಕುಮಾರ ಎಂಬ ಬಿಹಾರಿ ಯುವಕ ಮೊನ್ನೆ 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮದಲ್ಲಿ ಬರೋಬ್ಬರಿ ಐದು ಕೋಟಿ ರೂಪಾಯಿಗಳನ್ನು ಗೆಲ್ಲುವ ಮೂಲಕ ಸುದ್ದಿ ಮಾಡಿದ್ದಾನೆ.

ಬಿಹಾರದ ರಾಜಧಾನಿ ಪಾಟ್ನಾದಿಂದ ಸುಮಾರು 150 ಕಿಲೋಮೀಟರ್ ದೂರವಿರುವ ಮೋಥಿಹರಿ ಎಂಬ ಚಿಕ್ಕ ಗ್ರಾಮ ಸುಶೀಲ್ ಕುಮಾರನ ಊರು. ಕಷ್ಟಕಾಲದಲ್ಲಿ ಸಾಲಸೋಲ ಮಾಡಿದ್ದರಿಂದ ಪಿತ್ರಾರ್ಜಿತವಾದ, ಆದರೆ ಈಗ ಹಾಳುಬಿದ್ದಿರುವ ಸ್ವಂತ ಮನೆಯನ್ನು ಸಾಲಗಾರರಿಗೆ ಅಡ ಇಟ್ಟು ಈತನ ತಂದೆ, ತಾಯಿ, ಸಹೋದರರು ಪುಟ್ಟ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಸುಶೀಲನ ತಂದೆ ಓರ್ವ ಕ್ಲರ್ಕ್; ಸಹೋದರರೂ ಚಿಕ್ಕಪುಟ್ಟ ಕೆಲಸಗಳಲ್ಲಿದ್ದಾರೆ. ಸ್ವತಃ ಸುಶೀಲ್ ಕುಮಾರ್ ಒಂದಿಷ್ಟು ಕಂಪ್ಯೂಟರ್ ಕಲಿತಿರುವುದರಿಂದ ಉದ್ಯೋಗ ಖಾತರಿ ಯೋಜನೆಯಡಿ ಈಗ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಪಡೆದಿದ್ದಾನೆ. ಈತನ ಮಾಸಿಕ ಸಂಬಳ ಆರು ಸಾವಿರ ರೂಪಾಯಿಗಳು ಮಾತ್ರ. ಇದು ಕಡಿಮೆ ಆದ್ದರಿಂದ ಕೆಲವು ಮಕ್ಕಳಿಗೆ ಪಾಠ ಮಾಡುವ ಮೂಲಕ ಒಂದಿಷ್ಟು ಹೆಚ್ಚಿನ ಆದಾಯವನ್ನು ಸುಶೀಲ್ ಕುಮಾರ್ ಪಡೆಯುತ್ತಿದ್ದಾನೆ.

27 ವರ್ಷ ವಯಸ್ಸಾಗಿರುವ ಸುಶೀಲ್ ಕುಮಾರ್ ಇತ್ತೀಚೆಗೆ ಮದುವೆ ಆಗಿದ್ದಾನೆ. ತನ್ನ ಮದುವೆ ದಿನದಂದು ಮೊದಲ ಬಾರಿಗೆ ಶೂ ಧರಿಸಿದ್ದ ಆತ ಮತ್ತೆ ಶೂ ತೊಟ್ಟಿದ್ದು ಅಮಿತಾಭ್ ಬಚ್ಚನ್ ನಡೆಸುವ 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮಕ್ಕೆ. ಆವತ್ತು ಯಾರೋ ಒಬ್ಬರು ಈತನ ಶೂ ಗಮನಿಸಿ ಲೇಸ್‌ಗಳನ್ನು ಸರಿಯಾಗಿ ಕಟ್ಟಿಲ್ಲ ಎಂದರಂತೆ.



ಮೊದಲಿನಿಂದಲೂ ಸುಶೀಲನಿಗೆ 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮವೆಂದರೆ ಇಷ್ಟ. ಆದರೆ ಅವರ ಮನೆಯಲ್ಲಿ ಟಿವಿ ಇರಲಿಲ್ಲವಾದ್ದರಿಂದ ಆತ ಅಕ್ಕಪಕ್ಕದ ಮನೆಗಳಲ್ಲಿ ಅದನ್ನು ನೋಡುತ್ತಿದ್ದ. ಆತನಿಗೆ ಒಂದು ಕೆಲಸ ಅಂತ ಸಿಕ್ಕನಂತರವೇ ಅವರ ಮನೆಗೆ ಟಿವಿ ಸೆಟ್ ಒಂದು ಬಂದದ್ದು.

ಮೂರು ವರ್ಷಗಳ ಹಿಂದೆ ಬಿಡುಗಡೆಗೊಂಡಿದ್ದ 'ಸ್ಲಂಡಾಗ್ ಮಿಲಿನೇರ್' ಎಂಬ ಇಂಗ್ಲಿಷ್ ಸಿನಿಮಾ ಎಂಟು ಆಸ್ಕರ್ ಪ್ರಶಸ್ತಿಗಳನ್ನು ಗೆದ್ದಿತ್ತು. ಆ ಸಿನಿಮಾದ ಕತೆ ಮುಂಬೈನ ಸ್ಲಮ್ಮಿನ ಯುವಕನೊಬ್ಬ ಹೇಗೆ ಅನಿರೀಕ್ಷಿತವಾಗಿ 'ಕೌನ್ ಬನೇಗಾ ಕರೋಡ್‌ಪತಿ' ತರಹದ ಕಾರ್ಯಕ್ರಮದಲ್ಲಿ ಗೆಲ್ಲುತ್ತಾನೆ ಎಂಬುದೇ ಆಗಿತ್ತು. ಆದರೆ ನಿಜ ಜೀವನದಲ್ಲಿ ಸುಶೀಲ್ ಕುಮಾರನ ಈಗಿನ ಗೆಲುವು ಆ ಚಿತ್ರದ ಕತೆಯನ್ನೇ ಹೋಲುವುದು ಅಚ್ಚರಿ ಮೂಡಿಸುತ್ತದೆ.

'ಸ್ಲಂಡಾಗ್...' ಚಿತ್ರದಲ್ಲಿ ಬದುಕಿನ ಆಕಸ್ಮಿಕ ತಿರುವುಗಳು ಆ ಚಿತ್ರದ ನಾಯಕ ಜಮಾಲ್ ಮಲಿಕ್‌ನಿಗೆ ಕಠಿಣ ಪ್ರಶ್ನೆಗಳಿಗೂ ಉತ್ತರಗಳನ್ನು ಕಲಿಸಿದ್ದರೆ, ಸುಶೀಲನಿಗೆ ತನ್ನ ಬಿಹಾರ್ ರಾಜ್ಯಕ್ಕೆ ಸಂಬಂಧಿಸಿದ ಒಂದೆರೆಡು ವಿಷಯಗಳು ಮತ್ತು ಆತ ಶಾಲೆ ಮತ್ತು ಕಾಲೇಜಿನಲ್ಲಿ ಓದಿದ್ದ ಪಠ್ಯ ಪ್ರಶ್ನೆಗಳ ರೂಪದಲ್ಲಿ ಎದುರಾಗಿ ಆತ 'ಪಂಚ ಕೋಟಿಪತಿ' ಆಗುವ ಹಾದಿಯನ್ನು ಸುಗುಮಗೊಳಿಸಿತು. ಉದಾಹರಣೆಗೆ ಆತನಿಗೆ ಕೇಳಲಾದ ಒಟ್ಟು ಹದಿಮೂರು ಪ್ರಶ್ನೆಗಳಲ್ಲಿ ನಾಲ್ಕನೇ ಪ್ರಶ್ನೆಯು ಸುಶೀಲನ ಬಿಹಾರ್ ರಾಜ್ಯದ ಒಂದು ಪ್ರಮುಖ ಕಲೆಗೆ ಸಂಬಂಧಿಸಿದ್ದಾಗಿತ್ತು. ಹಾಗೆಯೇ ಐದನೆ ಪ್ರಶ್ನೆಯು ಆತನ ರಾಜ್ಯದ ಮಾಜಿ ಮುಖ್ಯಮಂತ್ರಿಯ ದನಿ ಸುರುಳಿಯಾಗಿತ್ತು. ಏಳನೇ ಪ್ರಶ್ನೆಗೆ ಉತ್ತರ ಆತನಿಗೆ ಕಾಲೇಜಿನಲ್ಲಿ ಪಠ್ಯವಾಗಿತ್ತು. ಹನ್ನೆರಡನೆ ಪ್ರಶ್ನೆಗೆ ಆತ ಪತ್ರಕರ್ತ ಪಂಕಜ್ ಪಚೌರಿಯವರ ನೆರವು ಪಡೆದ. ಸುಶೀಲನ ಅದೃಷ್ಟಕ್ಕೆ ಪಚೌರಿಗೆ ಸರಿಯಾದ ಉತ್ತರ ಗೊತ್ತಿತ್ತು. ಆದರೆ ಸೋಜಿಗದ ವಿಷಯ ಯಾವುದೆಂದರೆ ಈ ಸುಶೀಲ್ ಕುಮಾರ್ ಸ್ವತಃ ಕಂಪ್ಯೂಟರ್ ಆಪರೇಟರ್ ಆಗಿದ್ದರೂ ಕಂಪ್ಯೂಟರ್‌ಗೆ ಸಂಬಂಧಿಸಿದಂತೆ ಆತನನ್ನು ಕೇಳಲಾದ ಮೂರನೆ ಪ್ರಶ್ನೆಗೆ ಆತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರೇಕ್ಷಕರ ನೆರವು ಪಡೆದ!

ಕೊನೆಯ ಪ್ರಶ್ನೆಗೆ ಆತ ಉತ್ತರಿಸುವ ಮುನ್ನ ಪ್ರೇಕ್ಷಕರ ನಡುವೆ ಕೂತಿದ್ದ ಆತನ ಪತ್ನಿ ನಿಶಬ್ಧವಾಗಿ ಪ್ರಾರ್ಥಿಸಲಾರಂಭಿಸಿದ್ದಳು. ಸ್ವತಃ ಸುಶೀಲ್ ಕುಮಾರ್ ಟೆನ್ಸ್ ಆಗಿದ್ದ. ಆದರೆ ಆತ ಇತರರಂತೆ ಅಷ್ಟು ಹೊತ್ತಿಗೆ ತನ್ನ ನಾಲ್ಕು ಲೈಫ್‌ಲೈನ್‌ಗಳಲ್ಲಿ ಕೇವಲ ಎರಡನ್ನು ಉಪಯೋಗಿಸಿದ್ದ. ಅದು ಅವನನ್ನು ಗೆಲುವಿನತ್ತ ತೆಗೆದುಕೊಂಡು ಹೋಯಿತು. 'ಕೌನ್ ಬನೇಕಾ ಕರೋಡ್‌ಪತಿ' ಕಾರ್ಯಕ್ರಮವು ಈಗ ನಾಲ್ಕನೇ ವರ್ಷ ನಡೆಯುತ್ತಿದ್ದು ಇಲ್ಲಿಯ ತನಕ ಒಬ್ಬರು ಮಾತ್ರ ಒಂದು ಕೋಟಿ ರೂಪಾಯಿ ಗೆದ್ದಿದ್ದರು. ಆದರೆ ಬರೋಬ್ಬರಿ ಐದು ಕೋಟಿ ರೂಪಾಯಿಗಳನ್ನು ಗೆದ್ದ ಮೊದಲಿಗ ಸುಶೀಲ್ ಕುಮಾರ್ ಎಂಬ ಸಾಧಾರಣ ಯುವಕ. ಆತ ಗೆದ್ದ ತಕ್ಷಣ ಎಷ್ಟು ಹರ್ಷಿತನಾದನೆಂದರೆ ಅಮಿತಾಭ್ ಬಚ್ಚನ್ ಅವರ ಕಾಲಿಗೆ ಎರಗಿದ. ಆತನ ಪತ್ನಿಯಂತೂ ಬಚ್ಚನ್ ಅವರನ್ನು ಬಿಗಿಯಾಗಿ ಅಪ್ಪಿಕೊಂಡಳು.

ನಮ್ಮ ಓದುಗರೂ ತಮ್ಮ ಸಾಮಾನ್ಯ ಜ್ಞಾನವನ್ನು ಪರೀಕ್ಷಿಸಿಕೊಳ್ಳಲಿ ಎಂದು 'ಕೌನ್ ಬನೇಗಾ...' ಕಾರ್ಯಕ್ರಮದಲ್ಲಿ ಸುಶೀಲ್ ಕುಮಾರನಿಗೆ ಕೇಳಿದ ಪ್ರಶ್ನೆಗಳನ್ನು ಇಲ್ಲಿ ನೀಡುತ್ತಿದ್ದೇನೆ. ಇದನ್ನು ಮಿತ್ರ ರಂಗನಾಥ್ ಕಂಟನಕುಂಟೆ ಅನುವಾದ ಮಾಡಿ ಸಹಕರಿಸಿದ್ದಾರೆ.

1. "ಬೇವಕೂಫ್ ಮಾಡುವುದು" (ಮೂರ್ಖನನ್ನಾಗಿಸುವುದು) ಎಂದರೇನು?
ಎ. ಚಪ್ಪಲಿ ಎಸೆಯುವುದು
ಬಿ. ಟೋಪಿ ಹಾಕುವುದು
ಸಿ. ಹಣ ತೂರುವುದು
ಡಿ. ಉಪವಾಸ ಮಾಡುವುದು

2. 'ಕನ್ಯಾಪೂಜೆ' - ಯಾವ ಹಿಂದೂ ಹಬ್ಬಕ್ಕೆ ಸೇರಿದ ಆಚರಣೆ?
ಎ. ಗಂಗಾರ್ ಬಿ. ಅಹೋಯ್ ಅಷ್ಟಮಿ
ಸಿ. ಹರಿತಾಲಿಕಾ ತೀಜ್ ಡಿ. ಅಹೋಯ್ ಅಷ್ಟಮಿ

3. ಕಂಪ್ಯೂಟರಿನ ಯಾವ ಭಾಗದೊಂದಿಗೆ 'ಇಂಟೆಲ್ ಇನ್ ಸೈಡ್' ಎಂಬ ಜಾಹೀರಾತಿನ ಘೋಷಣೆ ಸಂಬಂಧಿಸಿದೆ?
ಎ. BIOS ಬಿ. RAM
ಸಿ. USB ಡಿ. Processor

4. 'ಮಿಥಿಲಾ' ಮತ್ತು 'ಮಧುಬನಿ' ಯಾವ ಜನಪದ ಕಲೆಗಳು?
ಎ. ಎಂಬ್ರಾಯಿಡರಿ ಬಿ. ಹ್ಯಾಂಡಿಕ್ರಾಫ್ಟ್
ಸಿ. ಜಾನಪದ ಹಾಡುಗಳು ಡಿ. ಚಿತ್ರಕಲೆ

5. ಇದು ಯಾರ ಧ್ವನಿ?
ಎ. ಮುಲಾಯಂ ಸಿಂಗ್ ಯಾದವ್
ಬಿ. ರಾಮ್ ವಿಲಾಸ್ ಪಾಸ್ವಾನ್
ಸಿ. ಲಾಲೂ ಪ್ರಸಾದ್ ಯಾದವ್
ಡಿ. ನಿತೀಶ್ ಕುಮಾರ್

6. 1969 ರಿಂದ 2011 ರವರೆಗೆ ಆಡಳಿತ ನಡೆಸಿದ ಮುಹಮ್ಮದ್ ಗಡಾಫಿ ಯಾವ ದೇಶದವನು?
ಎ. ಲಿಬಿಯಾ ಬಿ. ಟ್ಯೂನಿಶಿಯಾ
ಸಿ. ಸುಡಾನ್ ಡಿ. ಈಜಿಪ್ಟ್

7. 'ಅಂಧೇರ್ ನಗರಿ' ನಾಟಕದ ಕರ್ತೃ ಯಾರು?
ಎ. ಮೋಹನ್ ರಾಕೇಶ್
ಬಿ. ಅಮೃತ್ ಲಾಲ್ ನಗರ್
ಸಿ. ಭರತೇಂದು ಹರಿಶ್ಚಂದ್ರ
ಡಿ. ಧರಂವೀರ್ ಭಾರತಿ

8. ಯಾವ ವಯಸ್ಸಿನವರನ್ನು 2011-12 ರ ಬಜೆಟ್ ಪ್ರಕಾರ ಅತಿ ಹಿರಿಯ ನಾಗರಿಕರೆಂದು ಪರಿಗಣಿಸಲಾಗಿದೆ?
ಎ. 65 ಬಿ. 75
ಸಿ. 80 ಡಿ. 90

9. ಸಚಿನ್ ತೆಂಡೂಲ್ಕರ್ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿಹೆಚ್ಚು ರನ್ ಗಳಿಸಿರುವ ಭಾರತೀಯ ಕ್ರಿಕೆಟಿಗನಾರು?
ಎ. ಸುನಿಲ್ ಗವಾಸ್ಕರ್
ಬಿ. ರಾಹುಲ್ ದ್ರಾವಿಡ್
ಸಿ. ಮಹಮದ್ ಅಜರುದ್ದೀನ್
ಡಿ. ವಿ.ವಿ.ಎಸ್. ಲಕ್ಷ್ಮಣ್

10. ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ತನಿಖೆ ಮಾಡಲು 2009 ರಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ತನಿಖಾ ಸಂಸ್ಥೆ ಯಾವುದು?
ಎ. ನ್ಯಾಷನಲ್ ಸೆಕ್ಯುರಿಟಿ ಗಾರ್ಡ್
ಬಿ. ಸ್ಪೆಷಲ್ ಟಾಸ್ಕ್ ಫೋರ್ಸ್
ಸಿ. ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ
ಡಿ. ಆಂಟಿ-ಟೆರರಿಸ್ಟ್ ಸ್ಕ್ವಾಡ್

11. ಹಿಂದೂ ಪುರಾಣಗಳ ಪ್ರಕಾರ 'ಅಪ್ಸರೆ' ಮತ್ತು 'ಋಷಿ'ಯೊಬ್ಬರ ಮಗಳಾಗಿ ಹುಟ್ಟಿದವಳು ಯಾರು?
ಎ. ದೇವಕಿ ಬಿ. ರುಕ್ಮಿಣಿ
ಸಿ. ಶಕುಂತಲಾ ಡಿ. ಗಂಗಾ

12. ಲಾಲ್ ಬಹದ್ದೂರ್ ಶಾಸ್ತ್ರಿಯವರು ತಮ್ಮ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯ ರೂಪದಲ್ಲಿ ಖಾದಿಯ ಜೊತೆಗೆ ಪಡೆದ ವಸ್ತು ಯಾವುದು?
ಎ. ಭಗವದ್ಗೀತಾ ಬಿ. ಕಾದುವಾನ್
ಸಿ. ಗಾಂಧಿ ಟೋಪಿ ಡಿ. ಚರಕ

13. ಭಾರತದಲ್ಲಿ 1868 ಅಕ್ಟೋಬರ್ 16 ರಂದು ನಿಕೋಬಾರ್ ದ್ವೀಪದ ಹಕ್ಕುಗಳನ್ನು ಬ್ರಿಟಿಷರಿಗೆ ಮಾರಿಕೊಳ್ಳುವ ಮೂಲಕ ಯಾವ ದೇಶದ ವಸಾಹತುಶಾಹಿ ಅಧಿಕಾರ ಕೊನೆಗೊಂಡಿತು?
ಎ. ಬೆಲ್ಜಿಯಂ ಬಿ. ಇಟಲಿ
ಸಿ. ಡೆನ್ಮಾರ್ಕ್ ಡಿ. ಫ್ರಾನ್ಸ್

ಮೇಲಿನ ಪ್ರಶ್ನೆಗಳಿಗೆ ಸರಿ ಉತ್ತರಗಳು

1. ಟೋಪಿ ಹಾಕುವುದು 2. ನವರಾತ್ರಿ
3. ಪ್ರೊಸೆಸರ್ 4. ಚಿತ್ರಕಲೆ
5. ಲಾಲೂ ಪ್ರಸಾದ್ ಯಾದವ್
6. ಲಿಬಿಯಾ 7. ಭರತೇಂದು ಹರಿಶ್ಚಂದ್ರ
8. 80 ವರ್ಷಗಳು
10. ನ್ಯಾಷನಲ್ ಇನ್ವೆಸ್ಟಿಗೇಷನ್ ಏಜನ್ಸಿ
11. ಶಕುಂತಲಾ 12. ಚರಕ 13. ಡೆನ್ಮಾರ್ಕ್

ಅಪೆಕ್ಸ್ ಬ್ಯಾಂಕಿಗೆ ಕನ್ನ!
ನಿರಾಣಿಯ ರಕ್ಕಸ ತಮ್ಮಂದಿರ ಅಟ್ಟಹಾಸ


ಆಲಂಪಾಷಾ ವಿರುದ್ಧ ನಿರಾಣಿ ಛೂಬಿಟ್ಟ ರೌಡಿಗ್ಯಾಂಗು

ನನ್ನ ಪ್ರಾಣಕ್ಕೇನಾದರೂ ಆಪತ್ತಾದರೆ ಅದಕ್ಕೆ ಮಂತ್ರಿ ನಿರಾಣಿಯೇ ಕಾರಣ . ನಿರಾಣಿ ನನ್ನ ಮೇಲೆ ರೌಡಿಗಳನ್ನು ಛೂಬಿಟ್ಟಿದ್ದಾರೆ. ನನ್ನ ಇಬ್ಬರು ಹೆಣ್ಣುಮಕ್ಕಳನ್ನು ರೌಡಿಗಳನ್ನು ಬಿಟ್ಟು ಪೀಡಿಸಿದ್ದಾರೆ. ನನಗೆ ರಕ್ಷಣೆ ಕೊಡಿ... ಇತ್ಯಾದಿಯಾಗಿ ಕಂಡಕಂಡ ಪೊಲೀಸ್ ಅಧಿಕಾರಿಗಳ ಕಾಲಿಗೆ ಬಿದ್ದು ಗೋಳಾಡುತ್ತಿರುವ ಆಲಂಪಾಷಾ ಎಂಬ ಉದ್ಯಮಿಯೇ ನಿರಾಣಿ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಿದ ಧೈರ್ಯವಂತ.

ಇಲ್ಲಿಗೆ ತಿಂಗಳ ಹಿಂದೆಯೇ ಕೆಐಎಡಿಬಿಯ ಅಧಿಕಾರಿಗಳು ತನ್ನ ಸಹಿಯನ್ನು ಫೋರ್ಜರಿ ಮಾಡಿ ತನಗೆ ಮಂಜೂರಾಗಿದ್ದ ಕೆಐಎಡಿಬಿಯ ಜಮೀನನ್ನು ವಂಚಿಸಿದ್ದಾರೆಂದು ಪಾಷಾ ಬೊಬ್ಬೆಯಿಟ್ಟಿದ್ದ. ನಿರಾಣಿಯ ಹಿಕಮತ್ತಿಲ್ಲದೆ ಕೆಐಎಡಿಬಿಯ ಯಾವೊಬ್ಬ ಅಧಿಕಾರಿಯೂ ಈ ಮಟ್ಟದ ಧೈರ್ಯ ಮಾಡಲಾರ. ಅಲ್ಲಿಗೆ ನಿರಾಣಿಯ ಮೂಗಿನ ನೇರಕ್ಕೆ ಪಾಷಾರನ್ನು ವಂಚಿಸಲಾಗಿತ್ತು. ತನ್ನನ್ನು ಈ ರೀತಿ ವಂಚಿಸಿದ ಕೈಗಾರಿಕಾ ಮಂತ್ರಿಯ ಬುಡಕ್ಕೆ ಕೈಯಿಟ್ಟ ಆಲಂಪಾಷಾ ನಿರಾಣಿಯ ಒಂದೊಂದೇ ಹಗರಣವನ್ನು ಬಯಲಿಗೆಳೆದರು. ಮೊನ್ನೆ ಅಂದರೆ ಅಕ್ಟೋಬರ್ 20ರಂದು ನೇರ ಲೋಕಾಯುಕ್ತ ಕೋರ್ಟಿಗೆ ಬಂದು ದೂರು ದಾಖಲಿಸಿಬಿಟ್ಟರು.

ಪಾಷಾ ದೂರು ಕೊಟ್ಟಿದ್ದೇ ತಡ ಎಲೆಕ್ಟ್ರಾನಿಕ್ಸ್‌ಸಿಟಿಯಲ್ಲಿದ್ದ ಅವರ ಸೈಟಿನ ಮೇಲೆ ರೌಡಿಗಳ ದಾಳಿಯಾಗಿದೆ. ಅಕ್ಟೋಬರ್ 20ರ ಶುಕ್ರವಾರ ದೂರು ದಾಖಲಾಗಿದ್ದೇ ತಡ ನೂರೈವತ್ತು ಮಂದಿ ತಮಿಳು ರೌಡಿಗಳ ಗ್ಯಾಂಗ್ ಏಕಾಏಕಿ ಪಾಷಾರ ಸೈಟಿಗೆ ನುಗ್ಗಿದ್ದೇ ಕಾಂಪೌಂಡ್ ಹಾಕಲು ಯತ್ನಿಸಿದೆ. ಇದರ ಮರುದಿನವೂ ಇದೇ ಗ್ಯಾಂಗ್ ಪಾಷಾರ ಕೆಐಎಡಿಬಿಯ ಆಸ್ತಿಯ ಮೇಲೆ ಹಾವಳಿಯಿಟ್ಟರೆ, ಮತ್ತೊಂದೆಡೆ ಎರಡು ಕಾರುಗಳಲ್ಲಿದ್ದ ಮತ್ತೊಂದು ತಂಡ ಪಾಷಾರ ಇಬ್ಬರೂ ಹೆಣ್ಣುಮಕ್ಕಳನ್ನು ಪೀಡಿಸಲಾರಂಭಿಸಿದೆ. ರೇಷ್ಮಾ ಮತ್ತು ಶಿಫಾ ಎಂಬ ಪಾಷಾರ ಹೆಣ್ಣುಮಕ್ಕಳಿಬ್ಬರು ಕೋರಮಂಗಲದ ಕಾಲೇಜೊಂದರಲ್ಲಿ ಎಂಬಿಎ ಕೋರ್ಸ್‌ಗೆ ದಾಖಲಾಗಿದ್ದಾರೆ.

ಅಕ್ಟೋಬರ್ 21 ಶುಕ್ರವಾರ ಮತ್ತು 22ರ ಶನಿವಾರದ ಎರಡೂ ದಿನ ಅವರನ್ನು ರೌಡಿಗಳಿದ್ದ ಎರಡು ಕಾರುಗಳು ಕಾಲೇಜಿನ ತನಕ ಹಿಂಬಾಲಿಸಿ ಬಂದಿವೆ. ತಮ್ಮನ್ನು ರೌಡಿಗ್ಯಾಂಗ್ ಸುತ್ತುವರೆದು ಚೇಷ್ಟೆ ನಡೆಸುತ್ತಿದ್ದದ್ದಕ್ಕೆ ಬೆದರಿದ ಹೆಣ್ಣುಮಕ್ಕಳಿಬ್ಬರೂ ತಂದೆಗೆ ಫೋನ್ ಮಾಡಿದ್ದಾರೆ. ಪಾಷಾ ಧಾವಿಸುವ ಹೊತ್ತಿಗಾಗಲೇ ಗ್ಯಾಂಗ್ ಮರೆಯಾಗಿತ್ತು. ತಕ್ಷಣವೇ ಕಮೀಷನರ್ ಮಿರ್ಜಿ ಮತ್ತು ಅಡಿಷನಲ್ ಕಮೀಷನರ್ ಸುನೀಲ್ ಕುಮಾರ್‌ರನ್ನು ಕಂಡು ಪಾಷಾ ರಕ್ಷಣೆ ಕೋರಿದ್ದಾರೆ. ಹುಷಾರಾದ ಸುನೀಲ್‌ಕುಮಾರ್ ಪೊಲೀಸ್ ಬಂದೋಬಸ್ತ್‌ಗೆ ಆದೇಶಿಸಿದ್ದಾರೆ. ಹೆಣ್ಣುಮಕ್ಕಳ ಮೇಲೆ ರೌಡಿಗಳನ್ನು ಛೂ ಬಿಡುವ ಮಟ್ಟಕ್ಕೆ ಮಂತ್ರಿ ನಿರಾಣಿ ಇಳಿಯುತ್ತಾನೆಂದರೆ ಏನೆನ್ನಬೇಕು?




ನಿರಾಣಿಯ ಕೊರಳ ಕುಣಿಕೆ ದಿನೇದಿನೇ ಬಿಗಿಯಾಗುತ್ತಿದೆ. ಲೋಕಾಯುಕ್ತ ಎಸ್.ಪಿ. ಶಿವಶಂಕರ್ ಮೇಲೆ ಕಂಡಕಂಡ ಪೊಲೀಸ್ ಅಧಿಕಾರಿಗಳ ಮೂಲಕ ದಬಾವು ಮಾಡಿಸುತ್ತಿರುವುದಕ್ಕೆ ತಕ್ಕ ಪ್ರತಿಫಲವೂ ಇಷ್ಟರಲ್ಲೇ ದೊರಕಲಿದೆ. ಕೋರ್ಟ್ ಆದೇಶದಂತೆ ಎಫ್‌ಐಆರ್ ದಾಖಲಿಸಿದ ಲೋಕಾಯುಕ್ತ ಎಸ್.ಪಿ. ಶಿವಶಂಕರ್‌ಗೆ ತಮ್ಮಂದಿರ ಹೆಸರಲ್ಲಿ ನಕಲಿ ಕಂಪನಿಗಳನ್ನು ಸೃಷ್ಟಿಸಿ ಬಡರೈತರ ಭೂಮಿ ದೋಚುವ ನಿರಾಣಿಯ ಮೋಸಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭಿಸಿವೆ. ಅಂಥ ಹತ್ತಾರು ದಾಖಲೆಗಳನ್ನು ಒದಗಿಸಲು ಪತ್ರಿಕೆ ಕೂಡ ಸಿದ್ಧವಾಗಿದೆ.

ಒಂದೆಡೆ ತಮ್ಮಂದಿರ ನಕಲಿ ಕಂಪನಿಗಳಿಗೆ ಜಮೀನು ಮಂಜೂರು ಮಾಡಿದ್ದೂ ಅಲ್ಲದೆ ದೇವನಹಳ್ಳಿ, ನೆಲಮಂಗಲಗಳಲ್ಲಿ ಒಂದರ ಮೇಲೊಂದು ಡೀನೋಟಿಫಿಕೇಷನ್ನಿಗೆ ಕೈಯಿಟ್ಟ ನಿರಾಣಿಯ ಮತ್ತೂ ಒಂದು ಹಗರಣವನ್ನು ಈ ಮೂಲಕ ಪತ್ರಿಕೆ ಹೊರಹಾಕುತ್ತಿದೆ. ಅದು ಸರ್ಕಾರಿ ಸ್ವಾಮ್ಯದ ಅಪೆಕ್ಸ್ ಬ್ಯಾಂಕ್ ಕರ್ಮಕಾಂಡ!

ರಿಸರ್ವ್ ಬ್ಯಾಂಕ್ ನಿಬಂಧನೆಯಂತೆ ಯಾವುದೇ ಸರ್ಕಾರಿ ಸ್ವಾಮ್ಯದ ಬ್ಯಾಂಕೊಂದು ಕಂಪೆನಿಯೊಂದರ ಒಟ್ಟೂ ಬಂಡವಾಳದ ಮೂರು ಪಟ್ಟಿಗಿಂತ ಅಧಿಕ ಸಾಲ ನೀಡುವಂತಿಲ್ಲ. ಹೇಳಿಕೇಳಿ ಅಪೆಕ್ಸ್ ಬ್ಯಾಂಕ್ ಕರ್ನಾಟಕ ಸರ್ಕಾರದ ಅಧೀನ ಬ್ಯಾಂಕು. ನೇರವಾಗಿ ಸಹಕಾರಿ ಇಲಾಖೆಯ ಅಧೀನಕ್ಕೆ ಒಳಪಡುವ ಈ ಬ್ಯಾಂಕಿನ ಅಷ್ಟೂ ವ್ಯವಹಾರ, ಆಡಳಿತ, ನೇಮಕಾತಿ ಇತ್ಯಾದಿಗಳೆಲ್ಲ ಸರ್ಕಾರದ ಮೂಗಿನ ನೇರಕ್ಕೇ ನಡೆಯುತ್ತದೆ. ಇದೇ ಬ್ಯಾಂಕ್ 2010-11 ನೇ ಸಾಲಿಗೆ ಮುಧೋಳದ ನಿರಾಣಿ ಶುಗರ್ಸ್‌ಗೆ 66 ಕೋಟಿ ರೂಪಾಯಿಗಳ ಭಾರೀ ಮೊತ್ತದ ಸಾಲ ಬಿಡುಗಡೆ ಮಾಡಿದೆ!

ಆದರೆ ಸಾಲ ಕೊಡುವುದಕ್ಕೂ ನೀತಿ ನಿಯಮಾವಳಿಯಿದೆ. ಬೇಕಾಬಿಟ್ಟಿ ಸಾಲ ನೀಡುವಂತಿಲ್ಲ. ಕಂಪನಿಯೊಂದರ ಒಟ್ಟೂ ಬಂಡವಾಳದ ಮೂರು ಪಟ್ಟು ಸಾಲವನ್ನಷ್ಟೇ ನೀಡಬೇಕು. ನೀಡುವ ಸಾಲಕ್ಕಿಂತ ದೊಡ್ಡ ಮೊತ್ತದ ಸಾಲ ಮೊದಲೇ ಇತ್ತೆಂದರೆ ಯಾವುದೇ ಕಾರಣಕ್ಕೂ ಸಾಲ ನೀಡುವಂತಿಲ್ಲ. ಆದರೆ ನಿರಾಣಿ ಈಗಾಗಲೇ ನಿರಾಣಿ ಶುಗರ್ಸ್ ಹೆಸರಲ್ಲಿ ಐಡಿಬಿಐ ಮತ್ತು ಬ್ಯಾಂಕ್ ಆಫ್ ಇಂಡಿಯಾಗಳಿಂದ ಬರೋಬ್ಬರಿ 228 ಕೋಟಿ ರೂಪಾಯಿಗಳ ಸಾಲ ಎತ್ತಾಗಿದೆ. ಅವೆರಡೂ ಖಾಸಗಿ ಬ್ಯಾಂಕುಗಳು. ಸಾಲ ನೀಡುವುದು ವಸೂಲಿ ಮಾಡುವುದು ಅವುಗಳ ವಿವೇಚನೆಗೇ ಬಿಟ್ಟ ವಿಚಾರ. ಇದು ಗೊತ್ತಿದ್ದೂ ಸರ್ಕಾರಿ ಸೌಮ್ಯದ ಅಪೆಕ್ಸ್ ಬ್ಯಾಂಕ್ ಹೇಗೆ 66 ಕೋಟಿ ರೂಪಾಯಿಗಳ ಸಾಲ ನೀಡಲು ಸಾಧ್ಯ?



APEX BANK

ಇಲ್ಲೇ ನಿರಾಣಿಯ ಅಧಿಕಾರ ದುರುಪಯೋಗಕ್ಕೆ ಪುರಾವೆ ಹುಟ್ಟುತ್ತದೆ. ಮುಧೋಳದ ನಿರಾಣಿ ಶುಗರ್ಸ್‌ಗೆ ಮಂತ್ರಿ ನಿರಾಣಿಯ ತಮ್ಮ ಸಂಗಮೇಶ್ ನಿರಾಣಿಯೇ ಅಧಿಪತಿ. ಬೀಳಗಿ ತಾಲ್ಲೂಕು ಹಂಚಿನಾಳದ ಭೂಮಾಲೀಕ ರುದ್ರಪ್ಪ ನಿರಾಣಿಯ ನಾಲ್ವರು ಪುತ್ರರತ್ನರ ಪೈಕಿ ಮುರುಗೇಶ್ ನಿರಾಣಿ ಹಿರಿಯ ಮಗನಾದರೆ ಎರಡನೆಯವನು ಹನುಮಂತಪ್ಪ ನಿರಾಣಿ. ಈತ ಬೀಳಗಿಯ ಸುನಗ ಕ್ಷೇತ್ರದಿಂದ ಜಿಲ್ಲಾ ಪಂಚಾಯ್ತಿಗೆ ಗೆದ್ದಿದ್ದಾನೆ. ಇಡೀ ಬೀಳಗಿಯ ಅಷ್ಟೂ ಆಗುಹೋಗುಗಳನ್ನು ನಿರಾಣಿಯ ಜಾಗದಲ್ಲಿ ನಿಂತು ನಿಭಾಯಿಸುವವನೇ ತಮ್ಮ ಹನುಮಂತಪ್ಪ ನಿರಾಣಿ. ಸದ್ಯ ಈತನೇ ಬೀಳಗಿಯ ಅನಭಿಷಕ್ತ ದೊರೆ. ಪಕ್ಕದ ಮುಧೋಳದಲ್ಲಿ ಕಾರಜೋಳರನ್ನು ನಿಷ್ಕ್ರಿಯಗೊಳಿಸಿ ತನ್ನ ಆಧಿಪತ್ಯ ಸ್ಥಾಪಿಸಲು ಮಂತ್ರಿ ನಿರಾಣಿ ಛೂಬಿಟ್ಟಿದ್ದು ಇದೇ ಹನುಮಂತಪ್ಪನನ್ನು. ಮುಂದೊಮ್ಮೆ ಈತನನ್ನೇ ಬೀಳಗಿಯ ಶಾಸಕನನ್ನಾಗಿ ತಾನು ಪಕ್ಕದ ಬಬಲೇಶ್ವರಕ್ಕೋ ಜಮಖಂಡಿಗೋ ವಲಸೆ ಬರುವ ಯೋಚನೆ ಮಂತ್ರಿ ನಿರಾಣಿಯ ತಲೆ ಹೊಕ್ಕಿದೆ. ಬಬಲೇಶ್ವರ ದಲ್ಲಿ ಹಾಲೀ ಶಾಸಕರಾಗಿರುವ ಕಾಂಗ್ರೆಸ್ ನಾಯಕ ಎಂ.ಬಿ. ಪಾಟೀಲ್ ಆರ್ಥಿಕವಾಗಿ ನಿರಾಣಿಗಿಂತಲೂ ಬಲಾಢ್ಯ, ಅಟ್ಟಹಾಸ ಮತ್ತು ದಬ್ಬಾಳಿಕೆಯಲ್ಲಿ ನಿರಾಣಿಯ ಮಟ್ಟಕ್ಕಿಳಿಯದ ಸಜ್ಜನ.



ಸಂಗಮೇಶ್ ನಿರಾಣಿ

ಹೀಗಾಗಿ ಬಬಲೇಶ್ವರದಲ್ಲಿ ಪಾಟೀಲರನ್ನು ಮಣಿಸುವುದು ಕಷ್ಟವಾದರೆ ತಾನು ಜಮಖಂಡಿಗೆ ವಲಸೆ ಬರುವುದು ನಿರಾಣಿಯ ದೂರಾಲೋಚನೆ. ಏಕೆಂದರೆ ಬೀಳಗಿಯಲ್ಲೀಗಾಗಲೇ ನಿರಾಣಿ ತಮ್ಮಂದಿರ ದರ್ಪ, ಗೂಂಡಾಗಿರಿಗೆ ಜನ ರೋಸತ್ತಿದ್ದಾರೆ. ರುಕ್ಮವ್ವ ಬಡಿಗೇರ ಎಂಬ ಅಂಗನವ... ಕಾರ್ಯಕರ್ತೆಗೆ ನಿರಾಣಿ ತಮ್ಮ ಹನುಮಂತಪ್ಪ ಕೊಟ್ಟ ಕ... ಮಾಡಿದ ದೋಖಾ ಯಾವುದನ್ನೂ ಬೀಳಗಿ ಮಂದಿ ಮರೆ... ತಾನು ಅಕ್ಕಪಕ್ಕದ ಕ್ಷೇತ್ರಕ್ಕೆ ಗುಳೇ ಹೋಗಿ ಬೀಳಗಿಯ... ತಮ್ಮನನ್ನು ನಿಲ್ಲಿಸಿ ಗೆಲ್ಲಿಸುವುದು ಕಷ್ಟವ... ಪಕ್ಷದಲ್ಲಿ ತಾನು ಮತ್ತೆ ಬೀಳಗಿಗೆ ನಿಂತಲ್ಲಿ ತ... ಹನುಮಂತಪ್ಪನನ್ನು ಜಮ ಖಂಡಿಗೇ ನಿಲ್ಲಿಸ... ಇರಾದೆಯೂ ನಿರಾಣಿಯ ತಲೆ ಹೊಕ್ಕಿದೆ. ಅ... ಜಮಖಂಡಿಯ ಹಾಲಿ ಶಾಸಕ ಶ್ರೀಕಾ... ಕುಲಕರ್ಣಿಯನ್ನು ಪಳಗಿಸು ತ್ತಿದ್ದಾನೆ.

ಶ್ರೀಕಾಂತ ಕುಲಕರ್ಣಿ ಪಕ್ಕಾ ಆರೆಸ್... ಕಾರ್ಯಕರ್ತ ನೆಂಬುದನ್ನು ಬಿಟ್ಟರೆ ಆತನ ಜಾತಿಯವರ್... ಜಮಖಂಡಿ ಯಲ್ಲಿಲ್ಲ. ಜಮಖಂಡಿ ಅಕ್ಷರಶಃ ಲಿಂಗಾ... ಬಾಹುಳ್ಯದ ಕ್ಷೇತ್ರ. ಅಲ್ಲಿಗೆ ತಾನಾಗಲಿ, ತಮ್ಮನಾ... ದಾಳಿಯಿಡಬೇಕೆಂದರೆ ಹಾಲಿ ಶಾಸಕ ಶ್ರೀಕಾ... ಕುಲಕರ್ಣಿಯನ್ನು ತೆಪ್ಪಗಾಗಿಸಬೇಕು. ಎಮ್ಮೆಲ್ಸಿ ಮಾಡಿ... ಎಂದು ನಿರಾಣಿ ಭರವಸೆ ಕೊಟ್ಟರೆ ಕುಲಕ... ತುಟಿಪಿಟಿಕ್ಕೆನ್ನದೆ ತಲೆ ಯಾಡಿಸುವಷ್ಟು ಪು...

ಇಷ್ಟೆಲ್ಲಾ ಮಹತ್ವಾಕಾಂಕ್ಷೆಯ ಹನುಮಂ... ನಿರಾಣಿಯ ಹೆಸರಲ್ಲೇ ಮಂತ್ರಿ ನಿರಾಣಿ ನಾ... ಬೋಗಸ್ ಕಂಪೆನಿಗಳನ್ನು ಹುಟ್ಟುಹಾಕಿ... ಹನುಮಂತಪ್ಪನ ದೌಲತ್ತು ಮತ್ತು ಅಟ್ಟಹಾ... ಹೋಲಿಸಿದರೆ ಮಂತ್ರಿ ನಿರಾಣಿಯ ಎರ... ತಮ್ಮ ಸಂಗಮೇಶ್ ನಿರಾಣಿ ಇ... ಅನಾಹುತಕಾರಿ. ತಾನು ಮಂತ್ರಿಯಾಗುವುದ... ಮುನ್ನ ನಿರಾಣಿ ಶುಗರ್ಸ್‌ನ ಮ್ಯಾನೇ ಜಿ... ಡೈರೆಕ್ಟರ್ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ಮ... ನಿರಾಣಿ ಆ ಜಾಗಕ್ಕೆ ಸಂಗಮೇಶ್ ನಿರಾಣಿಯನ್ನು ತಂದ... ಈತನ ಹಿಂದಿರುವ ಲಿಂಗಾಯತ ಪುಢಾರಿಗಳ ಹಿಂ... ಬಿಜೆಪಿ ಕಾರ್ಯಕರ್ತರ ವೇಷದ ಗೂಂಡಾಪಡೆಗಳ ... ಹಾಸದ್ದೇ ಭಯಾನಕ ವೃತ್ತಾಂತವಾಗುತ್ತದೆ.

ಮುಧೋಳ ನಗರಕ್ಕೆ ಹೊಂದಿಕೊಂಡಂತೆಯೇ ಇ... ನಿರಾಣಿ ಶುಗರ್ಸ್‌ನ ಹೊಗೆ ಕೊಳವೆಗಳಿಂದ ಪ್ರತಿ... ಉಗುಳುವ ಕಾರ್ಬನ್ ಸುತ್ತಮುತ್ತಲ ಅಷ್ಟೂ ಕೆರೆಕಟ್ಟೆಗ... ವಿಷಯುಕ್ತಗೊಳಿಸಿದೆ. ಇವತ್ತಿಗೂ ಮುಧೋ ಳದ ಜ... ಅಕ್ಕಪಕ್ಕದ ಕೆರೆನೀರು ಬಿಟ್ಟರೆ ಕುಡಿಯಲು ಬೇರೆ ಗತಿಯಿ... ನಿರಾಣಿ ಶುಗರ್ಸ್ ಮಾಲಿನ್ಯದ ವಿರುದ್ಧ ರೈತರು ಇಲ್ಲಿಗೆ ... ತಿಂಗಳ ಹಿಂದೆ ಹೋರಾಟಕ್ಕಿಳಿದರು. ಧ... ನಿರತ ರೈತರು ನೂರರ ಸಂಖ್ಯೆ ಯಲ್ಲಿ... ಲಾರಿ, ಬಸ್ಸುಗಳಲ್ಲಿ ಸಾವಿರ... ಗೂಂಡಾಬಂಟರನ್ನು ಜಮಾಯಿ... ಸಂಗಮೇಶ್ ಧರಣಿ ನಿರತ ರೈತರ ವಿರು... ಗೂಂಡಾಗಿರಿಗಿಳಿದ. ಧರಣಿ ನಿರತ ರೈತ...

ನಿರಾಣಿ ಶುಗರ್ಸ್



ಘೋರ್ಪಡೆ ಬದುಕಿದ ರೀತಿ


"ಸಾರ್, ದೆಹಲಿಗೆ ಬಂದಿದ್ದೀರಿ, ಇವತ್ತು ಇಂದಿರಾ ಗಾಂಧಿಯವರ ಬರ್ತ್‌ಡೇ, ನೀವೂ ವಿಷ್ ಮಾಡಿ ಬರೋಕೆ ಹೋಗ್ತಿದ್ದೀರಾ?"

"ಇಲ್ಲ, ನನಗೆ ಮಾಡಕ್ಕೆ ಅದಕ್ಕಿಂತಾ ಒಳ್ಳೇ ಕೆಲಸ ಇದೆ."


-ಇದು ಎಂ.ವೈ. ಘೋರ್ಪಡೆ ಕಾಂಗ್ರೆಸ್ ಪಾರ್ಟಿಯಿಂದ ಸಂಸತ್ ಸದಸ್ಯರಾಗಿದ್ದಾಗ ಒಮ್ಮೆ ಅವರ ಗೆಳೆಯರೊಬ್ಬರೊಂದಿಗೆ ನಡೆದ ಸಂಭಾಷಣೆಯ ತುಣುಕು.

ಅವತ್ತು ಘೋರ್ಪಡೆ ಇಂದಿರಾ ಗಾಂಧಿ ಮನೆಗೆ ಹೋಗಲಿಲ್ಲ, ಇಂದಿರಾಗೆ ಬೊಕ್ಕೆ ಕೊಟ್ಟು ಬರಲುಕ್ಕೂ ನಿಲ್ಲಲೂ ಹೋಗಲಿಲ್ಲ. ಅದರ ಬದಲಾಗಿ ದೆಹಲಿಯ ತಮ್ಮ ಇಷ್ಟರ ಪುಸ್ತಕದ ಅಂಗಡಿಗೆ ಹೋದರು.

ಗುಲಾಮಗಿರಿಯನ್ನು ಪೋಷಿಸಿ ಬೆಳೆಸುವ ರಾಜ ಕುಟುಂಬದಲ್ಲಿ ಹುಟ್ಟಿ ಬೆಳೆದರೂ ಸಹ ಮುರಾರಿರಾವ್ ಯಶವಂತ ರಾವ್ ಘೋರ್ಪಡೆ ಯಾರಿಂದಲೂ ಗುಲಾಮಗಿರಿ ವರ್ತನೆಯನ್ನು ಅಪೇಕ್ಷಿಸಲಿಲ್ಲ, ತಮಗಿಂತಾ ಬಲಿಷ್ಠರೊಂದಿಗೆ ಅವರು ಹುಸಿ ವಿನಯ ತೋರಲೂ ಇಲ್ಲ. ಎಂ.ವೈ. ಘೋರ್ಪಡೆ ಅದೆಷ್ಟು ಘನತೆ, ಗಾಂಭೀರ್ಯದಿಂದ ಬದುಕಿ ಹೋಗಿದ್ದಾರೆಂದರೆ ಬಳ್ಳಾರಿಯ ಪುಂಡ ಗಾಲಿ ಜನಾರ್ದನ ರೆಡ್ಡಿ ಈ ರಾಜ್ಯದ ಮುಖ್ಯಮಂತ್ರಿಯಿಂದ ಹಿಡಿದು ಸ್ಥಳೀಯ ತಹಶೀಲ್ದಾರನವರೆಗೂ ಆಟವಾಡಿಸುತ್ತಿದ್ದ. ಅಂತ ರೆಡ್ಡಿಯಂತ ರೆಡ್ಡಿಯೂ ಘೋರ್ಪಡೆ ಬದುಕಿರುವವರೆಗೂ ಅವರ ತಂಟೆಗೆ ಹೋಗಿರಲಿಲ್ಲ. ಬಳ್ಳಾರಿ ಜಿಲ್ಲೆಯಲ್ಲೇ 'ರೆಡ್ಡಿ ಲ್ಯಾಂಡ್'ನ ಪಕ್ಕದಲ್ಲೇ ಘೋರ್ಪಡೆಯವರ ಸಂಡೂರು ಕೂಡ ಇತ್ತು. ರೆಡ್ಡಿ ತರವೇ ಘೋರ್ಪಡೆಯವರೂ ಸಹ ಗಣಿಗಾರಿಕೆ ನಡೆಸುತ್ತಿದ್ದರು. ಆದರಿವತ್ತು ರೆಡ್ಡಿ ಜೈಲಿನಲ್ಲಿದ್ದಾನೆ. ಘೋರ್ಪಡೆ ವಿರುದ್ಧ ಗಣಿಗೆ ಸಂಬಂಧಿಸಿದಂತೆ ಒಂದು ಸಣ್ಣ ದೂರು ಇಲ್ಲ.



ಇಂಡಿಯಾದ ಕೆಲವೇ ಮ್ಯಾಂಗನೀಸ್ ಗಣಿಗಾರಿಕಾ ಕಂಪನಿಗಳಲ್ಲಿ ಘೋರ್ಪಡೆ ಮಾಲೀಕತ್ವದ ಸಂಡೂರು ಮ್ಯಾಂಗನೀಸ್ ಕಂಪನಿಯೂ ಒಂದು. 1953 ರಲ್ಲಿ ಯಶವಂತರಾವ್ ನೆಹರೂ ಮೂಲಕ ದೇಶ ಕಟ್ಟುವ ಕೆಲಸಕ್ಕೆ ಕೊಡುಗೆ ನೀಡಲು ಸಂಡೂರಿನಲ್ಲಿ ಮ್ಯಾಂಗನೀಸ್ ಗಣಿಗಾರಿಕೆಗೆ ಅನುಮತಿ ಪಡೆದರು ಎನ್ನಲಾಗಿದೆ. ಇ... ಸುಮ್ಮನೆ ನೆಲ ಬಗೆದು ಪರದೇಶಗಳಿಗೆ ಅದಿರು ಮಾರಲಿಲ್ಲ, ಬದಲಾಗಿ ದೇಶದೊಳಗೆ ಅದಿರನ್ನು ಸಂಸ್ಕರಿಸಿ ಮೌಲ್ಯವರ್ಧನೆ ಮಾಡಿ ಬೇಕಿದ್ದವರಿಗೆ ಸರಬರಾಜು ಕೊಡುತ್ತಿದ್ದರು.



ಘೋರ್ಪಡೆ ಅವರು ತೆಗೆದಿದ್ದ ವನ್ಯಜೀವಿ ಫೋಟೋಗ್ರಫಿಯ ಬಗ್ಗೆ ಜಗತ್ತಿನಾದ್ಯಂತ ಮೆಚ್ಚುಗೆಯಿದೆ. ಕಳೆದ ವಾರ ಪತ್ರಿಕಾ ಕಚೇರಿಗೆ ಬಂದಿದ್ದ ಬಳ್ಳಾರಿಯ ದೊಡ್ಡ ಉದ್ಯಮಿಯೊಬ್ಬರು ಘೋರ್ಪಡೆ ಬಗ್ಗೆ ಹೇಳುತ್ತಾ, "ಅವರು ಈಗಲೂ ತಮ್ಮ ಶಾಲೆಗೆ ಹೋಗಿ ಎರಡು ಗಂಟೆಗಳ ಕಾಲ ಮಕ್ಕಳಿಗೆ ಇಂಗ್... ಪಾಠ ಹೇಳಿಕೊಡುತ್ತಾರೆ" ಅಂದಿದ್ದರು

ಕರ್ನಾಟಕದಲ್ಲಿ ಈಗಲೂ ರಾಜಮನೆತನದವರ ಸಂಖ್ಯೆಗೆ ಕಡಿಮೆಯೇ ಇಲ್ಲ. ಫ್ಯಾಷನ್ ಪೆರೇಡ್‌ನಲ್ಲಿ ಜೋನಿಕರ್ ತರ ಕಾಣಿಸಿಕೊಳ್ಳುವವರು, ರೇ... ಕುದುರೆ ಸಾಕಿ ತಮ್ಮ ಸ್ಟೇಟಸ್ ಮೇಂಟೇನ್ ಮಾಡುವ ನಕಲಿ ಶಾಮರೆದು... ಘೋರ್ಪಡೆ ನಿಜಕ್ಕೂ ದೊಡ್ಡ ಮನುಷ್ಯನ ರೀತಿ ಕಾಣುತ್ತಾರೆ.

ಈ ಸಂಡೂರು ರಾಜಸಂಸ್ಥಾನದ ಕತೆ ಕುತೂಹಲಕಾರಿಯಾಗಿದೆ. 18 ನೇ ಶತಮಾನದಲ್ಲಿ ಮರಾಠ ಸೇನಾ ನಾಯಕನೊಬ್ಬನಿಂದ ಇವರ ವಂಶಾವಳಿ ಶುರುವಾಗುತ್ತದೆ. ಈ ಸಂಸ್ಥಾನದ ವಿಸ್ತೀರ್ಣ 161 ಚದರ ಕಿಲೋಮೀಟರ್ ಅಷ್ಟೇ ಇತ್ತು. 1901 ರ ಸೆನ್ಸಸ್ ಪ್ರಕಾರ ಜನಸಂಖ್ಯೆ ಕೇವಲ 11,200 ಆಗಿತ್ತು. ಈ ಪುಟ್ಟ ಸಂಸ್ಥಾನದ ವರ್ಷದ ಆದಾಯ ಜುಜುಬಿ ಮೂರೂವರೆ ಸಾವಿರ ರೂಪಾಯಿ ಆಗಿತ್ತು. ಬ್ರಿಟಿಷರು ಈ tiny ರಾಜರ ಬಗ್ಗೆ ಅದೆಷ್ಟು ನಿರ್ಲಕ್ಷ...


ಸುತ್ತುವರಿದ ಸಾವಿರಾರು ಗೂಂಡಾಗಳು ಅವರನ್ನು ವಾಚಾಮಗೋಚರ ಹೀಯಾಳಿಸುತ್ತಾ ಗಾಳಿಯಲ್ಲಿ ಗುಂಡು ಹಾರಿಸಿ ಕೊಲೆ ಬೆದರಿಕೆಯಿಟ್ಟರೆ ಸ್ಥಳದಲ್ಲೇ ಇದ್ದ ಪೊಲೀಸರು ಅಸಹಾಯಕರಾಗಿ ನಿಂತಿದ್ದರು.


ಅಷ್ಟಕ್ಕೂ ನಿರಾಣಿ ಶುಗರ್ಸ್ ಕೂಡ ನ್ಯಾಯವಾಗಿ ಕಟ್ಟಿದ ಕಂಪನಿಯೇನಲ್ಲ. ಪುಣೆಯಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಮುಗಿಸಿ ಟ್ರಾಕ್ಟರ್ ಗ್ಯಾರೇಜ್ ಇಟ್ಟುಕೊಂಡಿದ್ದ ನಿರಾಣಿಯನ್ನು ಜೊತೆ ಹಾಕಿಕೊಂಡು ಸಕ್ಕರೆ ಫ್ಯಾಕ್ಟರಿಗೆ ಚಾಲನೆ ಕೊಟ್ಟ ಇಚಲಕರಂಜಿಯ ಶ್ರೀಕಾಂತ್ ಬ್ಯಾಹೇಟಿಯನ್ನು ವಂಚಿಸಿ ಇಡೀ ಫ್ಯಾಕ್ಟರಿಯನ್ನು ನಿರಾಣಿ ತನ್ನ ವಶ ಮಾಡಿಕೊಂಡ. ನಂಬಿದ ಶ್ರೀಕಾಂತ್ ಬ್ಯಾಹೇಟಿ ಬೀದಿಪಾಲಾದ. ನಿರಾಣಿಯ ಇದೇ ಗೂಂಡಾಗಿರಿ ತೀರ ಇತ್ತೀಚೆಗೆ ಕಬ್ಬಿಗೆ ನ್ಯಾಯವಾದ ಬೆಲೆ ನಿಗದಿಪಡಿಸುವಂತೆ ಒತ್ತಾಯಿಸಿ ರೈತರು ಹೋರಾಟಕ್ಕಿಳಿದಾಗಲೂ ಪುನರಾವರ್ತನೆಯಾಯಿತು.

ಕಬ್ಬಿಗೆ ನ್ಯಾಯ ಬೆಲೆ ನಿರ್ಧರಿಸುವಂತೆ ಮತ್ತು ಬಾಕಿ ದುಡ್ಡನ್ನು ಪಾವತಿಸುವಂತೆ ಆಗ್ರಹಿಸಿ ರೈತರೆಲ್ಲ ನಿರಾಣಿ ಶುಗರ್ಸ್‌ಗೆ ಕಬ್ಬು ಹೊಡೆಯುವುದನ್ನೇ ನಿಲ್ಲಿಸಿಬಿಟ್ಟರು. ರೈತರ ಈ ಹೋರಾಟ ಬಗ್ಗುಬಡಿಯಲು ತಮ್ಮ ಸಂಗಮೇಶ್ ತೊಡೆತಟ್ಟಿ ನಿಂತ. ರೈತರು ವಿಧಿಸಿದ್ದ ಕಬ್ಬು ಸರಬರಾಜು ನಿಷೇಧದ ವಿರುದ್ಧ ಬಿಜೆಪಿ ಕಾರ್ಯಕರ್ತರೊಂದಿಗೆ ಗದ್ದೆಗಳಿಂದ ಕಬ್ಬು ಹೊತ್ತು ತಂದು ಫ್ಯಾಕ್ಟರಿಗೆ ಹಾಕತೊಡಗಿದ. ಎಲ್ಲಿ ರೈತರು ಅಡ್ಡಗಟ್ಟುತ್ತಾರೋ ಎಂದು ಪ್ರತಿ ಕಬ್ಬಿನ ಲಾರಿಯ ಹಿಂದೆ ಮುಂದೆ ಟ್ರಾಕ್ಟರ್, ಜೀಪುಗಳಲ್ಲಿ ಗೂಂಡಾಪಡೆಯನ್ನಿಟ್ಟಿದ್ದ. ಆದರೆ ಮುಧೋಳ ತಾಲ್ಲೂಕಿನ ಯಲರಿಯಲ್ಲಿ ಇದು ಸಂಗಮೇಶನಿಗೇ ಉಲ್ಟಾ ಹೊಡೆಯಿತು. ಗೂಂಡಾಗಳ ಬೆಂಗಾವಲಿನಲ್ಲಿ ಕಬ್ಬು ಹೊತ್ತೊಯ್ಯಲು ಬಂದ ಬಿಜೆಪಿ ಪುಂಡರನ್ನು ರೈತರು ಹಿಡಿದು ಯಕ್ಕಾಮಕ್ಕಾ ಥಳಿಸಿದರು. ರೈತರ ಒದೆ ತಾಳದೇ ಜೀಪು, ಕಾರು ಬಿಟ್ಟು ಪರಾರಿಯಾದ ಬಿಜೆಪಿ ಗೂಂಡಾಗಳು ತಂದಿದ್ದ ರಿವಾಲ್ವರ್, ತಲವಾರುಗಳನ್ನು ಅವರ ಗಾಡಿಗಳ ಸಮೇತ ರೈತರು ಪೊಲೀಸರಿಗೊಪ್ಪಿಸಿದರೆ ಎಸ್.ಪಿ. ಅಭಿಷೇಕ್ ಗೋಯಲ್ ಯಾವುದೇ ರಿವಾಲ್ವರ್ ಸಿಕ್ಕಿಲ್ಲ ಎಂದು ತಿಪ್ಪೆ ಸಾರಿಸಿಬಿಟ್ಟರು.

ಎರಡನೇ ತಮ್ಮ ಸಂಗಮೇಶನ ಹಾವಳಿ ಇಷ್ಟಾದರೆ ಮೂರನೇ ತಮ್ಮ ಲಕ್ಷ್ಮಣ ನಿರಾಣಿ ಇನ್ನೂ ಭಯಂಕರ. ತಾನೊಬ್ಬ ರೌಡಿ ಎಂದು ಬಹಿರಂಗವಾಗಿ ಗ್ಯಾಂಗ್ ಕಟ್ಟಿಕೊಂಡು ಓಡಾಡುತ್ತಾನೆ. ಇಂಥ ರಕ್ಕಸ ತಮ್ಮಂದಿರನ್ನು ಮುಂದಿಟ್ಟುಕೊಂಡೇ ನಕಲಿ ಕಂಪೆನಿಗಳನ್ನು ಹುಟ್ಟುಹಾಕಿದ ಮಂತ್ರಿ ನಿರಾಣಿ ಈಗದಕ್ಕೆ ದಂಡ ಕಟ್ಟಲೇಬೇಕಾಗಿದೆ. ಸಂಗಮೇಶ್ ನಿರಾಣಿ ಆಧಿಪತ್ಯದ ನಿರಾಣಿ ಶುಗರ್ಸ್‌ನ ಎಲ್ಲಾ ಸ್ಥಿರ-ಚರ ಆಸ್ತಿಯನ್ನು ಲೆಕ್ಕಹಾಕಿದರೆ ಅದರ ಒಟ್ಟೂ ಬಂಡವಾಳ ಒಂಭತ್ತು ಕೋಟಿಯನ್ನು ಮೀರುವುದಿಲ್ಲ. ನಿರಾಣಿ ಶುಗರ್ಸ್ ಕೇವಲ 9 ಕೋಟಿ ಬಂಡವಾಳದ ಪುಡಿ ಸಕ್ಕರೆ ಫ್ಯಾಕ್ಟರಿಯಷ್ಟೇ; ಹಾಗೊಮ್ಮೆ ಅಪೆಕ್ಸ್ ಬ್ಯಾಂಕ್ ಸಾಲ ನೀಡುವುದೇ ಆದರೆ ಯಾವುದೇ ಕಾರಣಕ್ಕೂ 30 ಕೋಟಿಗೂ ಮೀರಿ ಸಾಲ ನೀಡುವಂತಿಲ್ಲ. ಆದರೆ ಈಗಾಗಲೇ 228 ಕೋಟಿಗಳ ಸಾಲ ಎತ್ತಿರುವುದು ಗೊತ್ತಿದ್ದೂ 9 ಕೋಟಿಯ ಅದರ ಅಸಲು ಸಾಮರ್ಥ್ಯ ತಿಳಿದೂ ಅಪೆಕ್ಸ್ ಬ್ಯಾಂಕ್ 66 ಕೋಟಿ ರೂಪಾಯಿಗಳ ಸಾಲ ನೀಡುತ್ತದೆಯೆಂದರೆ ಅದು ನಿರಾಣಿಯ ಅಧಿಕಾರ ದುರುಪಯೋಗ ಮತ್ತು ರಾಜಕೀಯ ದಬ್ಬಾಳಿಕೆಯೇ ಹೊರತು ಮತ್ತೇನಲ್ಲ. ನಿರಾಣಿಯ ಜೊತೆ ಆತನ ರಕ್ಕಸ ತಮ್ಮಂದಿರೂ ಜೈಲು ಪಾಲಾಗುತ್ತಾರಾ ಅಥವಾ ತಮ್ಮಂದಿರ ಪಾಪಕ್ಕೆ ಅಣ್ಣ ನಿರಾಣಿಯೊಬ್ಬನೆ ತಲೆದಂಡ ತೆರುತ್ತಾನಾ ಎಂಬುದಷ್ಟೇ ಉಳಿದಿರುವ ಪ್ರಶ್ನೆ

• ರಾ. ಸೋಮನಾಥ್





...ಮಾಡಿದ್ದರೆಂದರೆ ಲಾರ್ಡ್ ಡೌಲ್‌ಹೌಸಿ 1848 ರಲ್ಲಿ ಜಾರಿಗೆ ತಂದಿದ್ದ 'ದತ್ತು ಮಕ್ಕಳಿಗೆ ಹಕ್ಕಿಲ್ಲ'ವೆಂಬ ಕಾಯ್ದೆಯನ್ನು ಸಂಡೂರು ರಾಜಸಂಸ್ಥಾನಕ್ಕೆ ಅನ್ವಯಿಸದೆ ವಿನಾಯಿತಿ ಕೊಟ್ಟರು. ಏಕೆಂದರೆ ಸಂಡೂರು ಅವರಿಗೆಂದೂ ಸವಾಲೊಡ್ಡುವಂತೆ ಇರಲಿಲ್ಲ. ಅದಕ್ಕೂ ಮುನ್ನ 18 ನೇ ಶತಮಾನದಲ್ಲೊಮ್ಮೆ ಸಂಡೂರಿನ ರಾಜರು ಬ್ರಿಟಿಷರ ಸೇನೆ ಜೊತೆ ಸೇರಿ ಆರ್ಕಾಟ್‌ನ ನವಾಬನ ವಿರುದ್ಧ ಹಾಗೂ ಹೈದರಾಲಿ ವಿರುದ್ಧ ಬ್ರಿಟಿಷರಿಗೆ ಸೇನಾ ನೆರವು ನೀಡಿದ್ದರು ಅಷ್ಟೆ.

ಎಂ.ವೈ. ಘೋರ್ಪಡೆ ಫೋಟೋಗ್ರಫಿಗೆ ಸಂಬಂಧಿಸಿದಂತೆ **Sunlight & Shadows** ಎನ್ನುವ ಪುಸ್ತಕ ಪ್ರಕಟಿಸಿದ್ದಾರೆ. ವನ್ಯಜೀವಿ ಛಾಯಾಗ್ರಹಣ ಹಾಗೂ ಕ್ಯಾಮೆರಾ ಖಯಾಲಿ ಇದ್ದ ಪೂರ್ಣಚಂದ್ರ ತೇಜಸ್ವಿ ಹಾಗೂ ಘೋರ್ಪಡೆ ಸಮಾನಾಸಕ್ತಿ ಇದ್ದ ಸ್ನೇಹಿತರಾಗಿದ್ದರು.

ಎಕನಾಮಿಕ್ಸ್ ಓದಿದ್ದ ಘೋರ್ಪಡೆ 'ಆರ್ಥಿಕ ಅಭಿವೃದ್ಧಿ' ಕುರಿತಂತೆಯೂ ಒಂದು ಪುಸ್ತಕ ಬರೆದಿದ್ದಾರೆ.


ಅವರ ಬಗ್ಗೆ ಕುತೂಹಲ ಅನ್ನಿಸುವುದು ಅವರ ಹೊಸ ಪುಸ್ತಕ 'ಪರಮಾಚಾರ್ಯ ಆಫ್ ಕಂಚಿ!'

ನೂರಾ ಹತ್ತು ವರ್ಷ ಕಾಲ ಬದುಕಿದ್ದ ಕಂಚಿಯ ಚಂದ್ರಶೇಖರ ಸರಸ್ವತಿ ಸ್ವಾಮಿಯ ಒಡನಾಟ ಇಟ್ಟುಕೊಂಡಿದ್ದ ಘೋರ್ಪಡೆ 'ಮನುಷ್ಯನ ಬದುಕು, ಸಾವು ಪರಮಾರ್ಥ ವಿಚಾರಗಳ ಬಗ್ಗೆ ಗುರುಗಳಿಂದ ತುಂಬಾ ತಿಳಿದೆ' ಎಂದು ಆ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ. ಆ ಜೀವ ವಿರೋಧಿ ಪುರೋಹಿತರ ಬಗ್ಗೆ ಘೋರ್ಪಡೆಯರಿಗೆ ಬಹಳ ಅಭಿಮಾನವಿತ್ತು.

ಅವರ ಜೀವನ ಒಂದು ರೀತಿ ನಿರುದ್ವಿಗ್ನವಾದ ಸಂತೃಪ್ತಿಯ ಶ್ರೀಮಂತಿಕೆಯ ಕ್ರಿಯಾಶೀಲ ಶೈಲಿಯದ್ದು. ❖



ದಡ್ಡರ ಗುರು ಜಯಶ್ರೀನಿವಾಸನ್!



ಕರ್ನಾಟಕವೆಂಬ ಪುಣ್ಯಭೂಮಿಯಲ್ಲಿ ದಡ್ಡರ ಸಂಖ್ಯೆ ಜಾಸ್ತಿಯಾಗುತ್ತಿರುವಂತೆಯೇ ಜನರನ್ನು ಯಾಮಾರಿಸುವ ಗುರೂಜಿಗಳ ಸಂಖ್ಯೆಯೂ ಅಷ್ಟೇ ಹುಲುಸಾಗಿ ಬೆಳೆಯುತ್ತಿದೆ.

ಜಯಶ್ರೀನಿವಾಸನ್ ಗುರೂಜಿ ಅಂತವರಲ್ಲೊಬ್ಬ!

ಈತನ ಶಿಷ್ಯಗಣ ಯಾರೆಂದು ತಿಳಿಯಬೇಕೆಂದರೆ ಕಬಡ್ಡಿ ಬಾಬುನ 'ಅಮೋಘ ಟಿವಿ ಚಾನೆಲ್' ಅನ್ನು ದಿನಾ ಬೆಳಗ್ಗೆ ಒಂಬತ್ತು ಗಂಟೆಗೆ ಹಾಕಿದರೆ ಕಾಣಸಿಗುತ್ತಾರೆ. ನಾನಾ ಡಿಸೈನಿನ ತಾಪತ್ರಯಗಳು, ಹಣಕಾಸಿನ ಕಷ್ಟ, ಕೆಲಸ, ದಾಂಪತ್ಯಗಳ ಸಮಸ್ಯೆಗಳನ್ನು ಜನ ಈ ಚಾನೆಲ್‌ನಲ್ಲಿ ಹೇಳಿಕೊಳ್ಳುತ್ತಿರುತ್ತಾರೆ. ಪೋನಿ ಟೈಲ್ ತರ ತಲೆಗೂದಲು ಗಂಟುಹಾಕಿಕೊಂಡು ಈ ಜಯಶ್ರೀನಿವಾಸನ್ ಇತ್ತ ಟಿವಿಯೊಳಗೆ ಕೂತಿರುತ್ತಾನೆ.

'ಜೈ ಸೋಲಬೇಶ್ವರ' ಎನ್ನುತ್ತಾ ಮಾತಿಗೆ ಶುರುಮಾಡುವ ಜಯಶ್ರೀನಿವಾಸನ್ ಗುರೂಜಿ ಸ್ಕೂಲ್ ಟೀಚರ್ ತರ ಒಂದು ಕಪ್ಪು ಸ್ಲೇಟ್ ಹಾಗೂ ಚಾಕ್‌ಪೀಸ್ ಹಿಡಿದು ಏನೇನೋ ದಿಕ್ಕಾಪಾಲಾಗಿ ಬರೆಯಲು ಶುರು ಮಾಡುತ್ತಾನೆ. ಆನ್‌ಲೈನ್ ಅರ್ಜಿದಾರರ ಅರ್ಥಾತ್ ಬಾಧಿತರ ಕಷ್ಟಗಳನ್ನು ಕೇಳಿದ ನಂತರ ಅವರ ಹೆಸರು, ಹುಟ್ಟಿದ ದಿನ, ಸಮಯ ಎಲ್ಲಾ ವಿಚಾರಿಸುತ್ತಾನೆ. ಅವೆಲ್ಲವನ್ನೂ ಬೋರ್ಡಿನ ಮೇಲೆ ಬರೆದು ಅವುಗಳ ಅಕ್ಕಪಕ್ಕ 7,6,9 ಹೀಗೆ ಏನೇನೋ ಸಂಖ್ಯೆ ಬರೆದು ಕೊನೆಗೆ 'ನೋಡಿ ಇವರೆ ನೀವು ತಪ್ಪು ದಿನಾಂಕದಲ್ಲಿ ಹುಟ್‌ಬಿಟ್ಟಿದ್ದೀರಾ... ನಿಮ್ ಪ್ರಾಬ್ಲಂಗೆ ಅದೇ ಕಾರಣ' ಅಂದುಬಿಡುತ್ತಾನೆ.

ಈ ಮಾತು ಕೇಳಿದ ಬಡಪಾಯಿಗಳು ಇನ್ನೂ ಕಂಗಾಲಾಗುತ್ತಾರೆ. 'ಈಗೇನ್ ಮಾಡೋದು ಗುರೂಜಿ' ಅಂತ ಮತ್ತೆ ಕೇಳುತ್ತಾರೆ. ತಾನು ಇಂತ ಮನೇಲಿ ಇಷ್ಟನೇ ತಾರೀಕು ಹುಟ್ಟಬೇಕು ಅಂತ ನಿರ್ಧರಿಸಿಕೊಂಡು ಹುಟ್ಟುವ ಅವಕಾಶವನ್ನು ಆ ಭಗವಂತ ನಮಗ್ಯಾರಿಗೂ ಕೊಟ್ಟಿಲ್ಲ ತಾನೇ? ಹಾಗಾಗಿ ಈ ಗುರೂಜಿ ಏನು ಪರಿಹಾರ ಹೇಳುತ್ತಾನೆ ಗೊತ್ತೇ?

ಹೆಸರು ಬದಲಾವಣೆ!

ವೆಂಕಟೇಶ್ ಅಂತ ಒಬ್ಬರ ಹೆಸರಿದ್ದರೆ 'ಅದ'ರ ಹಿಂದೆ ಅಥವಾ ಮುಂದೆ 'ರಾಜು ಅಂತ ಸೇರಿಸಿಕೋ' ಅಂದುಬಿಡುತ್ತಾನೆ. ರಮೇಶ ಅಂತಿದ್ದರೆ ರಮೇಶ್ ಕಿರಣ್ ಅಂತ ಬದಲಾಯಿಸಿ ಅನ್ನುತ್ತಾನೆ. ಸರೋಜ ಅನ್ನೋ ಹೆಂಗುಸು ಫೋನ್ ಮಾಡಿ ಕಷ್ಟ ಹೇಳಿಕೊಂಡರೆ 'ನಿಮ್ ಹೆಸರಲ್ಲೇ ಪ್ರಾಬ್ಲಂ ಇದೆ. ಒಂದ್ಕೆಲಸ ಮಾಡಿ. ಇನ್ನು ಮೇಲೆ ನಿಮ್ ನೇಮ್ ಗೀತಾ ಸ...ರೋ..ಜಾ.. ಅಂತ ಚೇಂಜ್ ಮಾಡ್ಕೊಳ್ಳಿ, ಆಮೇಲೆ ನಿಮ್ ಪ್ರಾಬ್ಲಂಸ್ ಎಲ್ಲಾ ಸಾಲ್ವ್ ಆಗುತ್ತೆ' ಅನ್ನುತ್ತಾನೆ.

ಅಂದಹಾಗೆ ಈ ಜಯಶ್ರೀನಿವಾಸನ್ ಇದುವರೆಗೂ ಇಪ್ಪತ್ತೈದು ಸಾವಿರ ಹೆಸರು ಬದಲಾಯಿಸಿದ್ದಾನಂತೆ!

ಇದಿಷ್ಟೇ ಅಲ್ಲ

ಗಂಡ-ಹೆಂಡತಿ ಮಧ್ಯೆ ಏನಾದರೂ ಸಮಸ್ಯೆ ಬಂದರೆ ಅಂತವರಿಗೆ ಈ ಗುರೂಜಿ ಹತ್ತಿರ ಬಹಳ ವಿಚಿತ್ರ ಪರಿಹಾರವಿದೆ.

ಅದು ಮರುಮದುವೆ!

ಇದೇನೆಂದು ಹೇಳುವ ಮೊದಲು ಈತನ ಅಸಲಿ ಜಾತಕ ಹುಟ್ಟಿದ ದಿನಾಂಕ-ಸ್ಥಳದ ವಿವರ ನೋಡೋಣ.

ಅಂದ ಹಾಗೆ ಈತನ ಅಸಲಿ ಹೆಸರು ಬರೀ ಶ್ರೀನಿವಾಸ್. ಅದನ್ನೀಗ ಜಯಶ್ರೀನಿವಾಸನ್ ಅಂತ ಎರಡಿಂಚು ಉದ್ದ ಮಾಡಿಕೊಂಡಿದ್ದಾನೆ!

ಅತ್ತಿಬೆಲೆಯಲ್ಲಿ ಹುಟ್ಟಿ ಬಂದ ಶೂರನು

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಕರ್ನಾಟಕ-ತಮಿಳು ನಾಡಿನ ಗಡಿಭಾಗದಲ್ಲಿದೆ. ಅಲ್ಲೇ ಚಿಕ್ಕನಹಳ್ಳಿಯ ರಾಮಸ್ವಾಮಿ-ಶಕುಂತಲಾ ದಂಪತಿಗಳ ಮಗನಾಗಿ ಈ ಶ್ರೀನಿವಾಸನ ಜನನವಾಯಿತು.

ಅದು ಅವತಾರ ಪುರುಷನೊಬ್ಬನ ಜನನವೇನಾಗಿರಲಿಲ್ಲ. ಶ್ರೀನಿವಾಸನು ಬೇರೆಲ್ಲಾ ಆರ್ಡಿನರಿ ಹುಡುಗನಂತೆ ಬೆಳೆದ. ಒಂದು ಸಾರಿ ಸ್ಕೂಲಿನಲ್ಲಿ ಕನ್ನಡದಲ್ಲಿ 150ಕ್ಕೆ 118 ಮಾರ್ಕ್ಸ್ ತೆಗೆದಿದ್ದೆ ಎಂದು ಅದೇ ದೊಡ್ಡ ಸಾಧನೆ ಎನ್ನುವಂತೆ ಈಗ ಹೇಳಿಕೊಳ್ಳುತ್ತಿದ್ದಾನೆ.

ಆಮೇಲೆ....

'ನಾ ಬೋರ್ಡು ಇರದ ಬಸ್ಸನು ಹತ್ತಿ ಬಂದ ಚೋಕರಿ' ತರಾನೇ ಈ ಶ್ರೀನಿವಾಸನೂ ಕೂಡ ಗೊತ್ತು ಗುರಿಯಿಲ್ಲದೆ ಅಲ್ಲಿಇಲ್ಲಿ ಅಂಡಲೆದ.

'ಎಲ್ಲಿದ್ದೆ?' ಅಂತ ಕೇಳಿದವರಿಗೆ 'ಯೋಗರಾಜ್ ವೇದಾಂತ್ರಿ ಮಹರ್ಷಿ, ಭಗವಾನ್ ಮಹಾವತಾರ ಬಾಬಾಜಿ, ಶ್ರೀಹರಿ ಮಹಾಶಯ, ಪರಮಹಂಸ ಯೋಗಾನಂದ ಸ್ವಾಮಿ' ಇತ್ಯಾದಿಗಳ ಹೆಸರು ಹೇಳಿ ಅವರ ಹತ್ತಿರ ಶಿಷ್ಯನಾಗಿದ್ದೆ ಅಂತಾನೆ.

ತನಗೆ 1995ರಿಂದ 97ರ ಕಾಲದಲ್ಲಿ ಜ್ಞಾನೋದಯ ಆಯಿತು ಅಂತಲೂ ಕತೆ ಕಟ್ಟಿದ್ದಾನೆ. ಪಾಪ ಅತ್ತಿಬೆಲೆಯ ಜನ ಇದು ನಿಜ ಅಂತಲೇ ನಂಬಿದರು. ಆಗ ಈ ಶ್ರೀನಿವಾಸ ತನ್ನ ಹೊಸ ಅಂಗಡಿ ಓಪನ್ ಮಾಡಲು ತಯಾರಾದ. ಆದರೆ ಫೀಲ್ಡ್‌ನಲ್ಲಿ ಜಾಗ ಖಾಲಿ ಇರಬೇಕಲ್ಲ, ಕವಡೆ ಶಾಸ್ತ್ರದಿಂದ ಹಿಡಿದು ಮೀನು ವಾಸ್ತು, ಹೋಮ, ಯಾಗ, ಎರಡು ತಲೆ ಹಾವಿನ ಶಾಸ್ತ್ರತನಕ ನೂರಾರು ತರದ ಚೀಟಿಂಗ್ ದಂಧೆಗಳು ಸಿನಿಮಾಗಳ ರೀತಿ ರಿಲೀಸ್ ಆಗಿ ಹೌಸ್‌ಫುಲ್ ಓಡುತ್ತಿದ್ದವು.

ಆಗ ಶ್ರೀನಿವಾಸ ತಲೆ ಓಡಿಸಿ ತನ್ನದು ನ್ಯೂಮರಾಲಜಿ ಅಂದ. ಮೊಬೈಲ್ ನಂಬರು, ವೆಹಿಕಲ್ ನಂಬರು, ಮನೆ ನಂಬರು ಮಾತ್ರವಲ್ಲದೆ ಜನರ ಹೆಸರಿಗೂ ಅಂಕಿಸಂಖ್ಯೆ ಜೋಡಿಸಿ ಹೆಸರು ಬದಲಾವಣೆಯ ಹೊಚ್ಚ ಹೊಸ ದಂಧೆ ಶುರು ಮಾಡಿದ. ಸ್ವತಃ ತನ್ನ ಹೆಸರನ್ನೇ ಜಯಶ್ರೀನಿವಾಸನ್ ಅಂತ ಬದಲಾಯಿಸಿಕೊಂಡ. ಸಲಹೆ ಕೇಳಲು ಬರುತ್ತಿದ್ದ ಶತದಡ್ಡರಿಗೆ 'ಮುತ್ತುರಾಜ್ ರಾಜ್‌ಕುಮಾರ್ ಆದ, ಶಿವಾಜಿರಾವ್ ರಜನೀಕಾಂತ್ ಆದ, ಕುಮಾರ್ ವಿಷ್ಣುವರ್ಧನ್ ಅಂತ ಹೆಸರು ಬದಲಾಯಿಸಿಕೊಂಡಿದ್ದಕ್ಕೆ ಸಕ್ಸಸ್ ಆಗಿದ್ದು ನೀವೂ ಹಾಗೇ ಮಾಡಿ' ಅಂತ ಕತೆ ಹೇಳಿ ನಂಬಿಸಿದ.

ಕೆಲವು ಜನ ನಂಬಿದರು. ಶ್ರೀನಿವಾಸ ಕೆಲವೇ ತಿಂಗಳುಗಳಲ್ಲಿ ಜಯಶ್ರೀನಿವಾಸನ್ ಗುರೂಜಿ ಅಂತ ಹೆಸರು ಮಾಡಿದ.

ಮರುಮದುವೆ ಎಂಬ ಹೊಸ ಟೋಪಿ

ಈ ಕರ್ನಾಟಕ ದೇಶದಲ್ಲಿ ಹಿಂದೆಮುಂದೆ ಯೋಚಿಸದೆ, ಯಾರ್ಯಾರೋ ಮುಂದೆ ನಿಂತು ಮತ್ತ್ಯಾರದ್ದೋ ಮದುವೆಗಳನ್ನು ಮಾಡಿಸುತ್ತಿರುತ್ತಾರಾದ್ದರಿಂದ ಮದುವೆಗಳಾದ ನಂತರ ಅನೇಕ ಸಮಸ್ಯೆಗಳು ಬರುತ್ತಿರುತ್ತವೆ.

ಜಯಶ್ರೀನಿವಾಸನ್ ಅಂತವರಿಗೆಂದೇ ಒಂದು ಸ್ಕೀಂ ಮಾಡಿದ್ದಾನೆ.

'ನನ್ ಗಂಡ ಸರಿಯಾಗಿಲ್ಲ, ಕುಡೀತಾನೆ, ಹೊಡಿತಾನೇ' ಅಂತಲೋ ಅಥವಾ 'ಕೆಲಸಕ್ಕೆ ಹೋಗಲ್ಲ' ಎಂದೋ ಹೆಂಡತಿ ಅಮೋಘ ಟಿವಿಗೆ ಫೋನ್ ಮಾಡುತ್ತಾಳೆ. ಅಥವಾ ಗಂಡನೇ ಫೋನ್ ಮಾಡಿ 'ಸಾರ್ ನನ್ ಹೆಂಡತಿ ಹಠಮಾರಿ, ಜಗಳಗಂಟಿ' ಅಂತ ಏನೇನೋ ದೂರು ಹೇಳಿದ ಅಂತಿಟ್ಟುಕೊಳ್ಳಿ.

ಈ ಗುರೂಜಿ ಚಾಕ್‌ಪೀಸ್ ಕೈಗೆತ್ತಿಕೊಂಡು ಅವರಿಬ್ಬರ ಡೇಟ್ ಆಫ್ ಬರ್ತ್ ಹಾಗೂ ಮದುವೆಯಾದ ಡೇಟ್ ಕೇಳಿ ಬೋರ್ಡ್‌ಮೇಲೆ ಬರೆಯುತ್ತಾನೆ. ಆಮೇಲೆ ಅವುಗಳ ಕೆಳಗೆ 1,3,5,8,4... ಹೀಗೆ ಯಾವುದೋ ನಂಬರ್‌ಗಳನ್ನು ಬರೆದು ಕೂಡಿಸಿ, ಗುಣಿಸಿ, ಭಾಗಿಸಿ, ಕಳೆದು ಕೊನೆಗೆ ಸಡನ್ನಾಗಿ 5,8... ಹೀಗೆ ಯಾವುದೋ ಒಂದು ನಂಬರ್ ಕಂಡು ಹಿಡಿಯುತ್ತಾನೆ.

ತನ್ನ ಸಂಶೋಧನೆ ಬಗ್ಗೆ ತಾನೇ ಹೆಮ್ಮೆ ಪಡುತ್ತಾ ಅತ್ತ ಕಡೆ ಇರುವ ಬಕ್ರಾಗಳಿಗೆ 'ರೀ ನಿಮಗೆ ಎಷ್ಟು ಸಾರಿ ಹೇಳ್ಬೇಕ್ರಿ ಇಂತ ಡೇಟಲ್ಲಿ ಹುಟ್ಟಿದೋರು, ಅಂತಾ ಡೇಟಲ್ಲಿ ಮದುವೆ ಆಗಬಾರದು ಗೊತ್ತಾ?' ಅಂತ ಬಾಂಬ್ ಹಾಕುತ್ತಾನೆ.

ಹಾಗಂತ ಈಗಾಗಲೇ ನಡೆದಿರುವ ಮದುವೆ ಡೇಟ್ ಬದಲಾಯಿಸಲು ಆಗಲ್ಲ ಅಲ್ವ? ಅದಕ್ಕೆ ಈ ಜೈ ಸೋಲಬೇಶ್ವರ ಇನ್ನೊಂದ್ಸಾರಿ ಮದುವೆ ಮಾಡಿಸುವ ಪರಿಹಾರ ಸೂಚಿಸುತ್ತಾನೆ.

ತನ್ನ ಲೆವೆಲ್ ಜಾಸ್ತಿ ಅಂತ ತೋರಿಸಿಕೊಳ್ಳಲು ಇಂಗ್ಲಿಷ್‌ನಲ್ಲೂ **'Retying nuptial knot'** ಅಂತ ಹೆಸರಿಟ್ಟಿದ್ದಾನೆ. ಅವನ ಮರುಮದುವೆ ಅಥವಾ ರೀಮ್ಯಾರೇಜ್ ಸ್ಕೀಂನಲ್ಲಿ ಅದೇ ಹಳೇ ದಂಪತಿಗಳೇ ಈತ ಹೇಳಿದ ದಿನ ತಿರುಪತಿಗೆ ಹೋಗಬೇಕು. ತಿಂಗಳಿಗೊಮ್ಮೆ, ಎರಡು ತಿಂಗಳಿಗೊಮ್ಮೆ ಗಿರಾಕಿ ಸಿಕ್ಕಿದಂತೆ ಈ ರೀ ಮ್ಯಾರೇಜ್ ಗಳನ್ನು ಜಯಶ್ರೀನಿವಾಸನ್ ತಿರುಪತೀಲಿ ಅರೆಂಜ್ ಮಾಡುತ್ತಾನೆ. ಜನ ಒಂದು ಮಾಂಗಲ್ಯ ತರಬೇಕು. ಅಂತವರ ಹತ್ತಿರ ಮೊದಲೇ ಹತ್ತಾರು ಸಾವಿರ ಕಿತ್ತು ಮದುವೆ ವ್ಯವಸ್ಥೆಗೆ ಅರೆಂಜ್ ಮಾಡಿರುತ್ತಾನೆ.

ಜನ ಮರುಳೋ ಜಾತ್ರೆ ಮರುಳೋ ಅನ್ನುವಂತೆ ಜನ ತಮ್ಮ ಸಾಂಸಾರಿಕ ಸಮಸ್ಯೆ ಬಗೆಹರಿಸಿಕೊಳ್ಳಲು ಮರಳಿ ಯತ್ನವ ಮಾಡುವಂತೆ ಈ ಮರುಮದುವೆಯನ್ನು ಆಗಿ ಬರುತ್ತಿರ್ತಾರೆ.

ಜಯಶ್ರೀನಿವಾಸನನ್ನು ಯಾರಾದರೂ ಭೇಟಿ ಮಾಡಬೇಕೆಂದರೆ 'ಒಂದೂವರೆ ಸಾವಿರ ರೂಪಾಯಿ ಕಟ್ಟಿ ಅಪಾಯಿಂಟ್‌ಮೆಂಟ್ ತಗೋಬೇಕು' ಅನ್ನುತ್ತಾರೆ ಅವನ ಶಿಷ್ಯರು.

ಜಯಶ್ರೀನಿವಾಸ ಗುರೂಜಿಯ ವ್ಯಾಪಾರ ಚೆನ್ನಾಗಿ ನಡೆಯುತ್ತಿದೆ.

• ಪಾರ್ವತೀಶ

ಗುರೂಜಿಯವರ ಚಿಂತನೆಯ ಗೊಂಚಲು ಅಥವಾ ಎಂಜಲು

ಇವನಿಗೆ ಜಯನಗರ ಟಿ.ಬ್ಲಾಕ್‌ನಲ್ಲಿ ಆಫೀಸಂಗಡಿ ಇದೆ.

1.ಜಪಾನ್‌ನಲ್ಲಿ ಸುನಾಮಿ ಹಾನಿ ಸಂಭವಿಸುವ ಮೊದಲೇ ಜಯಶ್ರೀನಿವಾಸನ್ ಒಂದು ಸಲಹೆ ಕೊಟ್ಟಿದ್ದನಂತೆ.

ಅದೇನಂತೀರಾ?

'Japan' ಅನ್ನುವ ಬದಲಾಗಿ **'Jeapaan'** ಅಂತ ಸ್ಪೆಲ್ಲಿಂಗ್ ಬದಲಾಯಿಸಬೇಕು. ಇಲ್ಲದಿದ್ದರೆ ಅಪಾಯ ಕಾದಿದೆ ಅಂತ ಇವರು ಮೊದಲೇ ಹೇಳಿದ್ದರಂತೆ. ಆದರೆ ಯಾರೂ ಕೇರ್ ಮಾಡಲಿಲ್ಲ. ಸುನಾಮಿ ಬಂತು. ದೇಶ ಸರ್ವನಾಶ ಆಯಿತು.

2. 2011ರಲ್ಲಿ ಜಗತ್ ಪ್ರಳಯ ಆಗುವುದಿಲ್ಲ ಅಂತ ಇವನು ಗ್ಯಾರಂಟಿ ಕೊಟ್ಟಿದ್ದನಂತೆ.


3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೆಸರನ್ನು ಮೊದಲಿದ್ದಂತೆ ಬೆಂಗಳೂರು ಮಹಾನಗರ ಪಾಲಿಕೆ (ಬಿಎಂಪಿ) ಅಂತ ಚೇಂಜ್ ಮಾಡಲೇಬೇಕು. ಇಲ್ಲದಿದ್ದರೆ ಬೆಂಗಳೂರು ಉದ್ಧಾರವಾಗಲ್ಲ ಅಂತ ಗುರೂಜಿ ಅಪ್ಪಣೆ ಕೊಡಿಸಿದ್ದಾರೆ. ಯಾಕಪ್ಪ ಬದಲಾಯಿಸಬೇಕು ಅಂದರೆ 'ಬಿಬಿಎಂಪಿಲೀ 16 ಸಂಖ್ಯೆ ಬರುತ್ತೆ ಅದು ಒಳ್ಳೆದಲ್ಲ' ಅನ್ನುತ್ತಾನೆ.

-ಇವೇನೂ ಚಿಂತನೆಯ ಗೊಂಚಲಾ ಇಲ್ಲಾ ಜಯಶ್ರೀನಿವಾಸನ ಮಾತಿನ ಎಂಜಲಾ ನೀವೇ ತೀರ್ಮಾನಿಸಿ.


ಎಲ್ಲಾ ಓಕೆ ಏರ್‌ಟೆಲ್ ಯಾಕೆ?

ಸಾಲುಸಾಲು ಬ್ಲೇಡ್ ಪ್ಲ್ಯಾನುಗಳಿಂದ ಕರೆನ್ಸಿ ಕಳೆದುಕೊಳ್ಳುತ್ತಿರುವ ಏರ್‌ಟೆಲ್ ಗ್ರಾಹಕರು ಇಂತದ್ದೊಂದು ಕನವರಿಕೆಗೆ ಬಿದ್ದಿದ್ದಾರೆ. ಕಸ್ಟಮರ್ ಕೋರ್ಟ್‌ನ ಅಧಿಕೃತ ವೆಬ್ ಸೈಟನ್ನು ಕ್ಲಿಕ್ಕಿಸಿ ನೋಡಿದರೆ ಏರ್‌ಟೆಲ್‌ನ ವಿರುದ್ಧ ಆದರದೇ ಕಸ್ಟಮರ್‌ಗಳು ಕಂಪ್ಲೇಂಟಿನ ಅಭಿಯಾನವನ್ನೇ ಪ್ರಾರಂಭಿಸಿರುವುದು ಕಂಡುಬರುತ್ತೆ. ಇನ್ನು ಕೇರ್ ಸೆಂಟರ್‌ಗಳಿಗೆ ಕಾಲಿರಿಸಿದರೆ ಒಬ್ಬೊಬ್ಬರಾದರು ಏರು ಧ್ವನಿಯಲ್ಲಿ ಜಗಳಕ್ಕೆ ನಿಂತಿರುತ್ತಾರೆ. ಆದರೆ ಇದೆಲ್ಲವನ್ನು ಕೌಂಟಿಗೇ ತೆಗೆದುಕೊಳ್ಳದ ಕಂಪನಿ ಎ.ಆರ್.ರೆಹಮಾನ್‌ನ ಸಂಗೀತದ ಸಂದಿಯಿಂದಲೇ ಹಗಲು ದರೋಡೆಗಿಳಿದಿದ್ದು, ಕೇಳಲು ಹೋದವರಿಗೆ ಕಸ್ಟಮರ್ ಕೇರ್ ಸೆಂಟರ್‌ನಿಂದ ಕೇರ್‌ಲೆಸ್ಸಾದ ಸಬೂಬುಗಳೇ ದೊರಕುತ್ತಿವೆ.

ಇತ್ತೀಚೆಗಂತು ಏರ್‌ಟೆಲ್ ಸಿಮ್‌ನ ಬ್ಯಾಲೆನ್ಸ್ ಚೆಕ್ ಮಾಡಲು ಭಾರೀ ಗುಂಡಿಗೆಯೇ ಇರಬೇಕು ಎಂಬಂತಾಗಿದೆ.



ಇತ್ತೀಚೆಗಂತು ಏರ್‌ಟೆಲ್ ಸಿಮ್‌ನ ಬ್ಯಾಲೆನ್ಸ್ ಚೆಕ್ ಮಾಡಲು ಭಾರೀ ಗುಂಡಿಗೆಯೇ ಇರಬೇಕು ಎಂಬಂತಾಗಿದೆ. ಯಾಕೆಂದರೆ ಪ್ರತಿ ಬಾರಿಯೂ ಒಂದಿಲ್ಲೊಂದು ಶಾಕ್ ಕಾದೇ ಇರುತ್ತೆ. ಈಗಷ್ಟೇ ಟಾಪ್‌ಅಪ್ ರೀಚಾರ್ಜ್ ಮಾಡಿಸಿ ಕರೆನ್ಸಿ ನೋಡಿಕೊಂಡರೆ, ಮಿನಿಮಮ್ ಹತ್ತು ರೂಪಾಯಿಯಾದರೂ ಗೋತಾ ಹೊಡೆದಿರುತ್ತೆ.




ಕರೆನ್ಸಿ ಜೊತೆ ಕಣ್ಣಾಮುಚ್ಚಾಲೆ

airtel

• ಗಿರೀಶ್ ತಾಳಿಕಟ್ಟೆ

ಯಾಕೆಂದರೆ ಪ್ರತಿ ಬಾರಿಯೂ ಒಂದಿಲ್ಲೊಂದು ಶಾಕ್ ಕಾದೇ ಇರುತ್ತೆ. ಈಗಷ್ಟೇ ಟಾಪ್‌ಅಪ್ ರೀಚಾರ್ಜ್ ಮಾಡಿಸಿ ಕರೆನ್ಸಿ ನೋಡಿಕೊಂಡರೆ, ಮಿನಿಮಮ್ ಹತ್ತು ರೂಪಾಯಿಯಾದರೂ ಗೋತಾ ಹೊಡೆದಿರುತ್ತೆ. ಎಕ್ಸಿಕ್ಯೂಟಿವ್‌ಗಳಿಗೆ ಫೋನಾಯಿಸಿದರೆ ಯಾವುದಾದರೊಂದು ಪ್ಲ್ಯಾನ್‌ನ ಹೆಸರನ್ನು ಗುನುಗಿ ಅದನ್ನು ನೀವು ಆಕ್ಟಿವೇಟ್ ಮಾಡಿಸಿಕೊಂಡಿದ್ದಿರಿ ಅದಕ್ಕೆ ಅಮೌಂಟ್ ಡಿಡಕ್ಟ್ ಆಗಿದೆ ಎಂಬ ಸಿದ್ಧ ಉತ್ತರವನ್ನು ನೀಡಿ 'ನಿಮ್ಮೊಂದಿಗೆ ಮಾತನಾಡಿದ್ದು ನಾನು, ನಿಮಗೆ ಮತ್ತೇನಾದರು ಮಾಹಿತಿ ಬೇಕಾಗಿತ್ತೆ, ಧನ್ಯವಾದಗಳು, ಶುಭರಾತ್ರಿ' ಎಂಬ ಕಂಠಪಾಠದೊಂದಿಗೆ ಇಡೀ ಅಧ್ಯಾಯವನ್ನೇ ಮಕಾಡೆ ಮಲಗಿಸಿಬಿಡುತ್ತಾರೆ. ತಲೆಯಲ್ಲಿರುವ ಮೆಮೊರಿ ಕಾರ್ಡ್‌ಗಳನ್ನೆಲ್ಲಾ ಕೊಡವಿಕೊಂಡು ಕೆದಕಿದರೂ ಅಂತಹ ಪ್ಲ್ಯಾನ್ ಆಕ್ಟಿವೇಟ್ ಮಾಡಿಸಿದ ಯಾವ ನೆನಪೂ ಬರುವುದಿಲ್ಲ, ಅಸಲಿಗೆ ಮಾಡಿಸಿದ್ದರೆ ತಾನೆ ನೆನಪಿಗೆ ಬರುವುದು! ಹಾಗೆ ಟೋಪಿ ಹಾಕಿಸಿಕೊಂಡವ ಬಾಯಿ ಮುಂದುಮಾಡುವ ಜಾಯಮಾನದ ವರೇನಾದರು ಆಗಿದ್ದಲ್ಲಿ ಒಂದಷ್ಟೊತ್ತು ವಾದ ಮಾಡಿ ನಮ್ಮ ನೋಡಲ್ ಆಫೀಸರ್ ನಂಬರ್ ಕೊಡ್ತೇವೆ ಅವರನ್ನೇ ಸಂಪರ್ಕಿಸಿ ಎನ್ನಲಾಗುತ್ತೆ. ಇನ್ನು ಅವರು ಕೊಡುವ ನಂಬರ್‌ಗೆ ರಿಂಗಣಿಸಿದರೆ ಎಂಗೇಜ್‌ನದ್ದೇ ಸ್ವಾಗತ, ಹಾಗೊಮ್ಮೆ ಕನೆಕ್ಟ್ ಆದರೂ ಮತ್ತದೇ ಗಜಲ್ ಗಾನಾ-ಬಜಾನಗಳು. ಇಷ್ಟೆಲ್ಲ ಏಗುವ ಹೊತ್ತಿಗೆ ಕಳೆದುಕೊಂಡ ಹತ್ತೋ ಇಲ್ಲ ಮೂವತ್ತೋ ರೂಪಾಯಿಯ ಬಗ್ಗೆ ಥೂ... ಎನ್ನುವಷ್ಟು ಜಿಗುಪ್ಸೆ ಬಂದು ಪ್ರತಿಯಾಗಿ ಅವರಿಗೇ ಧನ್ಯವಾದ ಹೇಳಿ ನಾವೇ ಫೋನ್ ಕಟ್ ಮಾಡಬೇಕಾಗುತ್ತೆ. ಇಂತಹ ಅನಿವಾರ್ಯತೆಯನ್ನು ಸೃಷ್ಟಿಸುವಷ್ಟು ತರಬೇತಿ ಪಡೆದವರ ಕೈಗೆ ರಿಸೀವರ್ ಕೊಟ್ಟು ಕೂರಿಸಲಾಗಿರುತ್ತೇನೋ ಎಂಬ ಅನುಮಾನವಂತು ಖಂಡಿತ ಮೂಡದೇ ಇರುವುದಿಲ್ಲ.



ಅಕೌಂಟ್‌ನಿಂದ ಹಣ ಎತ್ತಲು ಏರ್‌ಟೆಲ್‌ಗೆ ಇದೊಂದೇ ದಾರಿಯಲ್ಲ, ಕಾಲರ್ ಟ್ಯೂನ್‌ಗಳ ಕಿತಾಪತಿ, ಫುಲ್ ಟಾಕ್‌ಟೈಮ್‌ನ ಫಜೀತಿ, ಉಚಿತ ಎಸ್ಸೆಮ್ಮೆಸ್‌ಗಳ ಭೀತಿ, ಬೋಗಸ್ ಬಿಲ್‌ಗಳ ಸಂತತಿ ಹೀಗೆ ಒಂದಿಲ್ಲೊಂದು ನೆಪದಲ್ಲಿ ಜನರ ದುಡ್ಡು ಏರ್‌ಟೆಲ್ ಒಡೆಯ ಮಿತ್ತಲ್ ಸಾಹೇಬರ ಖಾತೆಯ ದಾರಿ ಹಿಡಿಯುತ್ತಿರುವುದು ಇತ್ತೀಚೆಗೆ ತೀರಾ ಸಾಮಾನ್ಯವಾಗಿದೆ. ಆದರಲ್ಲೂ ಈ ಜಿಪಿಆರ್‌ಎಸ್, 2ಜಿ ಯಂತಹ ಮಲ್ಟಿಮೀಡಿಯಾ ಸರ್ವಿಸ್‌ಗಳು ಬಂದ ಮೇಲಂತೂ ಏರ್‌ಟೆಲ್‌ನ ಪಲ್ಟಿ ಹೊಡೆಸುವ ತಂತ್ರಗಾರಿಕೆ ವಿಪರೀತವಾಗಿರುವುದರಿಂದ ಕರೆನ್ಸಿಗಾಗಿಯೇ ದುಡಿಯಬೇಕಾದ ಜರೂರತ್ತೂ ನಿರ್ಮಾಣವಾಗಿದೆ. ಪ್ರೀ ಪೇಯ್ಡ್, ಪೋಸ್ಟ್ ಪೇಯ್ಡ್ ಎಂಬ ಬೇಧವಿಲ್ಲದೆ ಗ್ರಾಹಕರ ಮೇಲೆ ಪ್ರಹಾರಕ್ಕಿಳಿಯುವ ಸಂಸ್ಥೆಯ ಬಿಲ್‌ಗಳಾದರೂ ಹೃದ್ರೋಗದ ಹೊಸ ಕಾರಣಗಳಾಗುವತ್ತ ಹೆಜ್ಜೆ ಇರಿಸಿವೆ. ಕಿರಿಕಿರಿಗೆ ಬೇಸತ್ತ ಕೆಲವರು ಏರ್‌ಟೆಲ್‌ನ ನೆಟ್‌ವರ್ಕನ್ನು ಬದಲಾಯಿಸಿದರೆ ಅವರಿಗೆ ಈಗಾಗಲೆ ಪಾವತಿಸಿದ ಬಿಲ್ಲನ್ನೇ ಮತ್ತೆ ಕಳುಹಿಸಿ ಕೋರ್ಟಿಗೆಳೆಯುವ ಕಾಯಕವನ್ನೂ ಕಂಪನಿ ಮಾಡಿಕೊಂಡು ಬಂದಿದೆ.

ಹುಟ್ಟಿದ್ದು-ಬೆಳೆದದ್ದು-ಬಲಿತದ್ದು

ಮೊನ್ನಮೊನ್ನೆಯವರೆಗೆ ಭಾರ್ತಿ ಏರ್‌ಟೆಲ್‌ನಲ್ಲಿ ಎಲ್ಲವೂ ಸರಿಯಾಗಿತ್ತು, ಹಾಗಾಗಿಯೇ ಅದು ಪ್ರಪಂಚದಾದ್ಯಂತ 20 ರಾಷ್ಟ್ರಗಳಲ್ಲಿ 200 ಮಿಲಿಯನ್‌ಗೂ ಮೀರಿದ ಗ್ರಾಹಕರನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾದದ್ದು. 1986ರಲ್ಲಿ ಸುನಿಲ್ ಮಿತ್ತಲ್ ಬಟನ್ ಫೋನ್‌ಗಳನ್ನು ಭಾರತದಲ್ಲಿ ಪರಿಚಯಿಸುವ ಸಲುವಾಗಿ ಭಾರ್ತಿ ಟೆಲಿಕಾಂ ಲಿಮಿಟೆಡ್ ಅನ್ನು ಪ್ರಾರಂಭಿಸಿದ್ದರು. ಅಲ್ಲಿಂದ ಐದಾರು ವರ್ಷಗಳವರೆಗೆ ಕಾರ್ಡ್‌ಲೆಸ್ ಫೋನ್, ಫ್ಯಾಕ್ಸ್ ಮಷಿನ್ ಇತ್ಯಾದಿ ಉದ್ಯಮದಲ್ಲೇ ಹಾದಿ ಕಂಡುಕೊಂಡಿದ್ದ ಸಂಸ್ಥೆಗೆ 1992ರಲ್ಲಿ ದೆಹಲಿ ವಲಯದ ಸೆಲ್ಯುಲಾರ್ ಆಪರೇಷನ್ ನೆಟ್‌ವರ್ಕ್‌ನ ಟೆಂಡರ್ ಸಿಕ್ಕಿದ್ದು ಬಲು ದೊಡ್ಡ ಟರ್ನಿಂಗ್ ಪಾಯಿಂಟ್. 1995ರಲ್ಲಿ ದೆಹಲಿಯಲ್ಲಿ ತನ್ನ ಸೇವೆ ಪ್ರಾರಂಭಿಸಿದ ಕಂಪನಿ 2009ರ ವೇಳೆಗಾಗಲೇ ಶ್ರೀಲಂಕಾವನ್ನೂ ತಲುಪುವ ಹಂತಕ್ಕೆ ಬೆಳೆದು ನಿಂತಿತ್ತೆಂದರೆ ಅದರ ಸ್ಪೀಡನ್ನು ಮೆಚ್ಚಲೇ ಬೇಕಾದ್ದು.

ಇವತ್ತು ತರಹೇವಾರಿ ಟೋಪಿ ಕಾರ್ಯಗಳ ಮೂಲಕ ನಿಂದನೆಗೆ ಗುರಿಯಾಗಿರುವ ಏರ್‌ಟೆಲ್ ಸಂಸ್ಥೆ 'ಸಿಸ್ಕೋ ಗೋಲ್ಡ್ ಸರ್ಟಿಫಿಕೇಶನ್' ಪಡೆದ ಭಾರತದ ಮೊದಲ ಟೆಲಿಕಾಂ ಸಂಸ್ಥೆಯಾಗಿತ್ತು ಎಂದರೆ ಅಚ್ಚರಿಯಾಗಬಹುದು. ಅಂದಹಾಗೆ ಈ ಸರ್ಟಿಫಿಕೇಟನ್ನು ಸುಖಾಸುಮ್ಮನೇ ನೀಡುವುದಿಲ್ಲ, ತನ್ನ ಪಾಲಿನ ಕಾರ್ಯವನ್ನು ಪ್ರತಿಸ್ಪರ್ಧಿಗಳಿಗಿಂತಲೂ ಅಚ್ಚುಕಟ್ಟಾಗಿ ನಿಭಾಯಿಸಿ ಗ್ರಾಹಕರಿಗೆ ತೃಪ್ತಿಕರ ಸೇವೆಯನ್ನು ನೀಡಿದ ಆಯ್ದ ಕಂಪನಿಗಳಿಗಷ್ಟೇ ನೀಡಲಾಗುತ್ತೆ. ಈ ಪರಿ ಉತ್ಸಾಹವನ್ನು ಗುಡ್ಡೆ ಹಾಕಿಕೊಂಡಿದ್ದ ಕಂಪನಿ ಕೇವಲ ಮೊಬೈಲ್ ನೆಟ್‌ವರ್ಕ್ ಮಾತ್ರವಲ್ಲದೆ ಲ್ಯಾಂಡ್‌ಲೈನ್ ಕನೆಕ್ಷನ್, ಡಿ.ಟಿ.ಎಚ್ ಟೆಲಿಸರ್ವಿಸ್, ಇಂಟರ್‌ನೆಟ್ ಕನೆಕ್ಷನ್, 2ಜಿ, 3ಜಿ, ಬ್ರಾಡ್‌ಬ್ಯಾಂಡ್ ಹೀಗೆ ಸಿಕ್ಕ ಸಿಕ್ಕ ಅವಕಾಶಗಳನ್ನೆಲ್ಲ ಬಾಚಿಕೊಳ್ಳುತ್ತಲೇ 2.920 ಬಿಲಿಯನ್ ವಹಿವಾಟು ನಡೆ ಸುವ ಸಂಸ್ಥೆಯಾಗಿ ಬೃಹತ್ತಾಗಿ ಬೆಳೆದು ನಿಂತಿದೆ. ಆದರೆ ಇದೀಗ ಇದೇ ಕಂಪೆನಿ ಕೈ ಇಟ್ಟ ಎಲ್ಲಾ ಕ್ಷೇತ್ರದಲ್ಲೂ ಅವ್ಯವಸ್ಥೆಯನ್ನೇ ಆಗರವನ್ನಾಗಿಸಿಕೊಂಡು ಗ್ರಾಹಕರ ಹಗಲು ದರೋಡೆಗಿಳಿ ದಿರುವುದು ಮಾತ್ರ ವಿಪರ್ಯಾಸ.

ಶುರುವಾಯ್ತು ರಗಳೆ

ಒಂದೇ ಉಸಿರಿಗೆ ಬೆಳೆದು ನಿಲ್ಲಬೇಕೆಂಬ ಹಂಬಲಕ್ಕೆ ಬಿದ್ದ ಕಂಪನಿ ಹೆಚ್ಚೆಚ್ಚು ಜನರನ್ನು ತಲುಪುವ ಸಲುವಾಗಿ ಕಂಡ ಕಂಡ ಕಡೆಯಲ್ಲೆಲ್ಲಾ ಟವರ್‌ಗಳನ್ನು ನಿಲ್ಲಿಸಿಕೊಂಡು ಪ್ರತಿ ಹಳ್ಳಿಯನ್ನೂ ತಲುಪಿದ್ದೇವೆಂಬ ಜಾಹಿರಾತುಗಳನ್ನು ತೇಲಿ ಬಿಟ್ಟಿತು. ಆರಂಭದಲ್ಲಿ ಇತರೆ ಕಂಪನಿಗಳು ಇಷ್ಟು ವೇಗವಾಗಿ ಪಸರಿಸಿಕೊಳ್ಳಲಿಲ್ಲವಾದ್ದರಿಂದ ಏರ್‌ಟೆಲ್‌ಗೆ ಗ್ರಾಹಕರು ಮುಗಿಬೀಳತೊಡಗಿದರು. ಇನ್ನು ಆ ಕಾಲಕ್ಕೆ ಬಿ.ಎಸ್.ಎನ್.ಎಲ್ ನಂತಹ ಸಿಮ್‌ಗಳು ಸಿಗುವುದೇ ದೊಡ್ಡ ದುಸ್ತರವಾಗಿತ್ತಾದ್ದರಿಂದ ಏರ್‌ಟೆಲ್‌ನ ಸಿಮ್‌ಗಳು ಸುಲಭದಲ್ಲಿ ಲಭಿಸುವಂತೆ ಮಾಡಿದ್ದು ಹಾಗೂ ಆಕರ್ಷಕ ರಿಯಾಯಿತಿ ಪ್ಲ್ಯಾನ್‌ಗಳನ್ನು ಅಳವಡಿಸಿಕೊಂಡಿದ್ದು ಏರ್‌ಟೆಲ್‌ನ ಜನಪ್ರಿಯತೆ ಗಾಳಿ ಮಾತಿನಷ್ಟೇ ಸಲೀಸಾಗಿ ಹರಡಲು ಕಾರಣವಾಗಿದ್ದವು.

ಮೊದಮೊದಲು ಇದೆಲ್ಲ ವರ್ಕ್‌ಔಟ್ ಆಗಿತ್ತಾದರೂ ಕ್ರಮೇಣ ಬಿ.ಎಸ್.ಎನ್.ಎಲ್, ರಿಲಯನ್ಸ್, ವೊಡಾಫೋನ್, ಐಡಿಯಾ, ಏರ್‌ಸೆಲ್, ಎಂ.ಟಿ.ಎಸ್ ನಂತಹ ದೇಶಿ-ವಿದೇಶಿ ಕಂಪನಿಗಳು ಸ್ಪರ್ಧೆಗಿಳಿದಾಗ ಗ್ರಾಹಕರನ್ನು ಉಳಿಸಿಕೊಳ್ಳಲು ಕಂಪನಿಗೆ ದುಬಾರಿಯಾಗಬಹುದಾದ ಹತ್ತಾರು ಯೋಜನೆ ಗಳನ್ನು ಹಮ್ಮಿಕೊಂಡಿತ್ತು, ಅವು ನೀಡಿದ ಆರ್ಥಿಕ ಸಂಕಷ್ಟಗಳಿಂದಲೇ ಇಂದು ಕಂಪನಿ ಗ್ರಾಹಕರಿಗೆ ಮುಂಡಾಯಿಸಿ ಅಕೌಂಟ್ ಲೆವೆಲ್ ಮಾಡಿಕೊಳ್ಳಲು ಹವಣಿಸುತ್ತಿದೆ ಎನ್ನಲಾಗುತ್ತಿದೆ. ಮತ್ತೊಂದು ಅಭಿಪ್ರಾಯದ ಪ್ರಕಾರ ಈ ಏರ್ ಟೆಲ್ ಸಂಸ್ಥೆಯು ನೆಟ್‌ವರ್ಕ್ ಮೈಂಟೇನೆನ್ಸ್‌ನಿಂದ ಹಿಡಿದು ಟವರ್ ನಿರ್ಮಾಣದವರೆಗೆ ಎಲ್ಲವನ್ನೂ ಹೊರಗುತ್ತಿಗೆ ಕೊಟ್ಟು ಕೂತಿರುವುದರಿಂದಲೇ ಇಷ್ಟೆಲ್ಲ ಅವಾಂತರಗಳಿಗೆ ಕಾರಣ ಎನ್ನಲಾಗಿದೆ. ಇದರಲ್ಲಿ ಮಾರ್ಕೆಟಿಂಗ್, ಸೇಲ್ಸ್, ಫೈನಾನ್ಸ್ ಇಷ್ಟನ್ನು ಬಿಟ್ಟು ಎಲ್ಲವೂ ಹೊರಗುತ್ತಿಗೆಯೇ ಆಗಿವೆ. ನೆಟ್‌ವರ್ಕ್‌ನ ನಿರ್ವಹಣೆಯನ್ನು ಎರಿಕ್ಸನ್ ನೋಕಿಯಾ ಸೀಮನ್ಸ್ ನೆಟ್‌ವರ್ಕ್ ಹಾಗೂ ಹುವಾಯಿ ಸಂಸ್ಥೆಗಳಿಗೆ ಔಟ್‌ಸೋರ್ಸ್ ಮಾಡಲಾಗಿದೆ. ಇಲ್ಲಿ ಉಂಟಾಗುವ ಗೊಂದಲಗಳೇ ಕರೆನ್ಸಿ ಕಣ್ಮರೆಯಾಗುವುದಕ್ಕೆ ಕಾರಣವಿರಬಹುದು ಎಂದೂ ಅಂದಾಜಿಸಲಾಗಿದೆ. ಆದೇನೆ ಇರಲಿ 'ಎಕ್ಸ್‌ಪ್ರೆಸ್ ಯುವರ್‌ಸೆಲ್ಫ್' ಎಂದೇಳಿಕೊಳ್ಳುವ ಸಂಸ್ಥೆ ತಪ್ಪುಗಳ ಮೂಲವನ್ನು ಕೆದಕಿ ಸರಿಪಡಿಸಿಕೊಳ್ಳುವ ಬದಲು ಕಣ್ಣಾಮುಚ್ಚಾಲೆ ಆಟದೋಪಾದಿಯಲ್ಲಿ ಕಾಸಿಗೆ ಕತ್ತರಿ ಹಾಕುವ ಚಿಲ್ಲರೆ ಕೆಲಸಕ್ಕಿಳಿಯ ಬಾರದಿತ್ತು. ಏರ್‌ಟೆಲ್‌ನ ರಗಳೆ ಕೇವಲ ಗ್ರಾಹಕರ ಮಟ್ಟಕ್ಕೆ ನಿಲ್ಲುವಂತದ್ದಲ್ಲ, ಅದು ನಿಲ್ಲಿಸಿರುವ ಟವರ್‌ಗಳ ಹಿಂದೆಯೂ ಕಿರಿಕಿರಿಯ ಪುರಾಣ ಮುಂದುವರೆಯುತ್ತದೆ.

ಟವರ್ ನಿರ್ಮಾಣವನ್ನು ಕೂಡಾ ಭಾರ್ತಿ ಇನ್‌ಫ್ರಾಟೆಲ್ ಲಿಮಿಟೆಡ್ ಹೊರಗುತ್ತಿಗೆ. ಮೂಲಕ ಆಯಾ ಸ್ಥಳೀಯ ಗುತ್ತಿಗೆದಾರರಿಗೆ ಟೆಂಡರ್ ನೀಡಿ ಕೈ ತೊಳೆದುಕೊಳ್ಳ ಲಾಗುತ್ತದೆ. ಅವರು ತೋರಿಸಿದ ಜಮೀನಿನ ರೈತನಿಗೆ ಇಂತಿಷ್ಟು ಲಮ್‌ಸಮ್ ದುಡ್ಡು ಹಾಗೂ ಪ್ರತಿ ತಿಂಗಳೂ ಒಂದಷ್ಟು ಕರಾರು ಹಣ

ನೀಡುವುದಾಗಿ ಭರವಸೆ ನೀಡಿ ಕೆಲಸ ಶುರುಮಾಡಲಾಗಿರುತ್ತೆ, ಪಾಯ ತೆಗೆಯುವ ಕೆಲಸ ಪೂರ್ಣಗೊಂಡರೂ ಬಿಲ್ ಪಾಸ್ ಆಗದಿದ್ದಾಗ ಗುತ್ತಿಗೆ ಹಿಡಿದವರು ಅರ್ಧಕ್ಕೇ ಕಾಮಗಾರಿ ನಿಲ್ಲಿಸಿರುವುದರಿಂದ ಬೆಳೆ ಬೆಳೆಯುವ ಭೂಮಿಯನ್ನೇ ನೀಡಿದ್ದ ರೈತ ಕೆಲಸ ಪೂರ್ತಿಯಾಗದೆ ಅತ್ತ ತಿಂಗಳ ವಂತಿಗೆಯೂ ಇಲ್ಲ, ಇತ್ತ ಬೆಳೆಯನ್ನೂ ಬೆಳೆಯುವಂತಿಲ್ಲ ಎಂಬ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾನೆ. ಇನ್ನು ನಗರ ಪ್ರದೇಶಗಳಲ್ಲಿ ಅದು ನೀಡಿರುವ ಇಂಟರ್ನೆಟ್ ಕನೆಕ್ಷನ್‌ಗಳದ್ದು ಮತ್ತೊಂದು ರಾದ್ಧಾಂತ. ಮುನಿಸಿಪಾಲಿಟಿಗಳ ಗಮನಕ್ಕೆ ಬಾರದಂತೆ ಅಂಡರ್‌ಗ್ರೌಂಡ್ ಸೀವೇಜ್ ಪೈಪುಗಳ ಮೂಲಕ ಸರ್ಕ್ಯೂಟ್ ವೈರ್‌ಗಳನ್ನು ನುಗ್ಗಿಸಿ ಹಣ ಉಳಿಸುವ ಕೃತ್ಯಕ್ಕೆ ಮುಂದಾಗಿರುವ ಪ್ರಕರಣಗಳೂ ಈಗೀಗ ಬೆಳಕಿಗೆ ಬರುತ್ತಿವೆ.

ಸದ್ಯಕ್ಕೆ ನೆಟ್‌ವರ್ಕ್ ಅಖಾಡದಲ್ಲಿ ಜೋರು ಸ್ಪರ್ಧೆ ಇರುವುದಂತೂ ನಿಜ. ಬಿ.ಎಸ್.ಎನ್.ಎಲ್. ಸೇರಿದಂತೆ ಇತರೆ ಪ್ರತಿಸ್ಪರ್ಧಿಗಳು 'ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ' ಎಂಬ ಅಪವಾದದಿಂದ ಈಗಾಗಲೇ ಹೊರಬಂದಿವೆ ಮಾತ್ರವಲ್ಲ ತೃಪ್ತಿಕರ ಗ್ರಾಹಕ ಸೇವೆಯನ್ನೂ ನೀಡುತ್ತಿವೆ. ಇಂತಹ ಸಮಯದಲ್ಲಿ ಏರ್‌ಟೆಲ್ ತನ್ನ ಪ್ರಮಾದವನ್ನು ಸರಿ ಪಡಿಸಿಕೊಳ್ಳದೆ ಮನಬಂದಂತೆ ಕರೆನ್ಸಿ ಲ್ಯಾಪ್ಸ್ ಮಾಡುವ ಕೆಲಸ ಹಾಗೂ ಕಸ್ಟಮರ್ ಸೆಂಟರ್‌ನ ಕೆಟ್ಟ ಸಬೂಬು ಗೋಷ್ಠಿಯನ್ನು ಮುಂದುವರೆಸಿದ್ದೇ ಆದರೆ ಹೆಸರಿಗೆ ತಕ್ಕಂತೆ ಕೇವಲ 'ಗಾಳಿಮಾತು' ಆಗಿ ಬಿಡಬೇಕಾಗುತ್ತೆ.


ಎಸ್ಸೆಮ್ಮೆಸ್ ಜೋಕುಗಳು

ಏರ್‌ಟೆಲ್‌ನ ದುಡ್ಡೆತ್ತುವ ದಂಧೆಗೆ ಬೇಸತ್ತ ಗ್ರಾಹಕರು ಹಲವಾರು ಗೇಲಿ ಎಸ್ಸೆಮ್ಮೆಸ್ಸುಗಳನ್ನು ತೇಲಿ ಬಿಡುತ್ತಿದ್ದಾರೆ. ಅವುಗಳ ಕೆಲ ಝಲಕ್ ಇಲ್ಲಿದೆ. ಇಂತಹ ಮೆಸೇಜುಗಳು ಏರ್‌ಟೆಲ್ ಸಿಮ್‌ಗಳಲ್ಲಿ ಹರಿದಾಡುತ್ತಿರುವುದೇ ಒಂದು ಜೋಕಾಗುತ್ತದೆ

1. ಸಂತ: ಈ ವರ್ಷದಿಂದ ಪ್ರಣವ್ ಮುಖರ್ಜಿ ಏರ್‌ಟೆಲ್ ಸಿಮ್ ಇರೋರಿಗೆ ಆದಾಯ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಘೋಷಿಸ್ತಾರಂತೆ.
   ಬಂತಾ: ಯಾಕೆ?.
   ಸಂತ: ಕಂಪನಿಯೇ ಗ್ರಾಹಕರಿಗೆ ಸಿಕ್ಕಾಪಟ್ಟೆ ಟ್ಯಾಕ್ಸ್ ಹಾಕ್ತಾ ಇದೆಯಲ್ಲಾ ಅದ್ಕೆ ಮತ್ಯಾಕೆ ಎಕ್ಸ್ಟ್ರಾ ತೆರಿಗೆ ಅಂತ.
2. ಸಂತ ಬಂತನ ಬಳಿ ತನಗೆ ತಿಳಿದಿದ್ದ ಶ್ರೀಮಂತನ ಆಸ್ತಿ ವಿವರಿಸುತ್ತಿದ್ದ.
   ಸಂತ: ಅವನ ಬಳಿ ನಾಲ್ಕು ಬೆಂಜ್ ಕಾರ್‌ಗಳಿವೆ.
   ಬಂತಾ: ಅಷ್ಟೇನಾ.......
   ಸಂತ: ಆತನ ಅಕೌಂಟ್‌ನಲ್ಲಿ ಸಾವಿರಾರು ಕೋಟಿ ದುಡ್ಡಿದೆ.
   ಬಂತಾ: ಅಷ್ಟೇನಾ.......
   ಸಂತ: ಅವನಿಗೆ ಬಳ್ಳಾರಿಯಲ್ಲಿ ಹತ್ತು ಗಣಿ ಗುಂಡಿಗಳಿವೆ.
   ಬಂತಾ: ಅಷ್ಟೇನಾ.......
   ಸಂತ: ಅವನ ಹತ್ತಿರ ಮೂರು ಏರ್‌ಟೆಲ್ ಸಿಮ್‌ಗಳಿವೆ.
   ಬಂತಾ: ಹೌದಾ!..... ಅಬ್ಬಾ!.... ಭಾರೀ ಶ್ರೀಮಂತನೇ ಇರಬೇಕು.

3) ಸಂತ: ನನ್ನ ಏರ್‌ಟೆಲ್ ಅಕೌಂಟ್‌ನಿಂದ ಹತ್ತು ರೂಪಾಯಿ ಕರೆನ್ಸಿ ಡಿಡಕ್ಟ್ ಆಗಿತ್ತು, ಕಸ್ಟಮರ್ ಕೇರ್‌ನಲ್ಲಿ ವಿಚಾರಿಸಿದ್ರೆ ನೀವು ಭಕ್ತಿಗೀತೆ ಪ್ಯಾಕೇಜ್ ಅಲರ್ಟ್ ಮಾಡಿಸಿಕೊಂಡಿದ್ದೀರಿ ಅದಕ್ಕೆ ಅನ್ನೋದಾ? ಈ ಯೌವ್ವನದಲ್ಲಿ ನನಗ್ಯಾಕೆ ಭಕ್ತಿಗೀತೆ ಉಸಾಬರಿ.
   ಬಂತಾ: ನಿನ್ನದಾದ್ರೂ ಪರವಾಗಿಲ್ಲ ಬಿಡು, ನಮ್ಮ ಪಕ್ಕದ್ಮನೆ 90 ವರ್ಷದ ಮುದುಕ ವಿಚಾರಿಸಿದ್ರೆ ನೀವು ಬಿಕಿನಿ ಅಲರ್ಟ್ ಆಕ್ಟಿವೇಟ್ ಮಾಡಿಸಿಕೊಂಡಿದೀರಿ ಅಂದಿದ್ದಾರಂತೆ!
4) ಸಂತ: ಮೊನ್ನೆ ಗಲಾಟೆಯೆಬ್ಬಿಸಿದ್ದ ಬಡತನ ರೇಖೆಯ ಮಿತಿಯನ್ನು ಪರಿಷ್ಕರಿಸಲಾಗಿದೆಯಂತೆ.
   ಬಂತಾ: ಈಗ ಎಷ್ಟು ಅಮೌಂಟ್ ಫಿಕ್ಸ್ ಮಾಡಿದಾರೆ?
   ಸಂತ: ದುಡ್ಡಾದರೆ ಮತ್ತೆ ಕಿರಿಕ್ಕಾಗಬಹುದೆಂದು, ಯಾರ್‍ಯಾರ ಬಳಿ ಏರ್‌ಟೆಲ್ ಸಿಮ್ ಇದೆಯೋ ಅವರೆಲ್ಲಾ ಶ್ರೀಮಂತರು ಇಲ್ಲದಿದ್ದವರು ಬಡವರು ಅಂತ ಡಿಕ್ಲೇರ್ ಮಾಡ್ತಾರಂತೆ.

ವಿಧವಾ ಪದ್ಧತಿ ಎಂಬ ವಿಕೃತಿ ಮತ್ತು ಪೂಜಾರಿ ಪರಾಕ್ರಮ!



ಕರಾವಳಿ ಕಾಂಗ್ರೆಸ್‌ನ ಬಾಯಿಬಡುಕ ಭೂಪ ಜನಾರ್ದನ ಪೂಜಾರಿ 'ಮನುಸಂಹಿತೆ' ವಿರುದ್ಧ ಬಹಿರಂಗವಾಗೇ ಬಂಡೆದ್ದಿದ್ದಾರೆ. ಗಂಡನನ್ನು ಕಳೆದುಕೊಂಡ ಹೆಂಗಸರನ್ನು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಡಿಸಿ ಕಾಡುವ ಅಮಾನವೀಯ 'ವಿಧವಾ ಪದ್ಧತಿ' ವಿರುದ್ಧ ಧ್ವನಿ ಎತ್ತಿರುವ ಪೂಜಾರಿ ಪ್ರತಿಗಾಮಿ ಮತ್ತು ಪ್ರಗತಿಪರರಲ್ಲಿ ಸಣ್ಣದೊಂದು ಸಂಚಲನ ಮೂಡಿಸಿದ್ದಾರೆ. ಹಿಂದೂ ಹೆಣ್ಣಿನ ಮಾನ ಪ್ರಾಣವನ್ನೇ ಬಂಡವಾಳ ಮಾಡಿಕೊಂಡು ಬುರ್ನಾಸ್ ರಾಜಕಾರಣ ಮಾಡುತ್ತಿರುವ ಕರಾವಳಿಯ ಸಂಘಪರಿವಾರ ಪೂಜಾರಿ ಪರಾಕ್ರಮಕ್ಕೆ ಬೆಚ್ಚಿಬಿದ್ದಿದೆ. ಈ 'ಕ್ರಾಂತಿ' ಅದೆಷ್ಟು ಪರಿಣಾಮಕಾರಿಯೋ ಗೊತ್ತಿಲ್ಲ. ಆದರೆ ಒಂದಂತೂ ಖರೆ. ಈ ಇಳಿವಯಸ್ಸಿನಲ್ಲಿ ಪೂಜಾರಿ ಭಜರಂಗಿ 'ಕರ್ಮಭೂಮಿ'ಯಂತಾಗಿರುವ ಮಂಗಳೂರಲ್ಲಿ 'ಮೂರ್ತಿಭಂಜಕ' ಕೆಲಸಕ್ಕೆ ಕೈಹಾಕಿರುವುದು ಮಾತ್ರ ಚಿತ್ರವಿಚಿತ್ರ ಚರ್ಚೆ ಹುಟ್ಟುಹಾಕಿದೆ.

ಪೂಜಾರಿ ಪರಿಯೇ ಹಾಗೆ; ನೊಂದವರ-ಬಡವರ ನೆರವಿಗೆ ಏಕಾಂಗಿಯಾಗಿ ನುಗ್ಗುವ ಹುಂಬ ಹೀರೋನ ಹಾಗೆ. ಟಿಪಿಕಲ್ ಹಾವಭಾವದ ಪೂಜಾರಿ ಆಗಾಗ ತಿಕ್ಕಲನಂತೆ ಕಾಣಿಸಿದರೂ ಆತನ ಶೋಷಿತರ-ದುರ್ಬಲರ-ಅಬಲೆಯರ ಬದ್ಧತೆ-ಶುದ್ಧತೆ-ತಾತ್ವಿಕ ನಿಷ್ಠೆ ಪ್ರಶ್ನಾತೀತ; ಹಿಂದುಳಿದವರ ಹಾದಿ ತಪ್ಪಿಸಿ ಬೇಳೆ ಬೇಯಿಸಿಕೊಳ್ಳುತ್ತಿರುವ ಕರಾವಳಿಯ ಸನಾತನಿಗಳನ್ನಂತೂ ಈತ ಅಲ್ಲಿಂದಿಲ್ಲಿಗೂ ಎದುರಾಕಿಕೊಂಡೇ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಇಂಥ ಸಂಪ್ರದಾಯ ವಿರೋಧಿ ಗುಣ-ಧರ್ಮದಿಂದಾಗಿಯೇ ಪೂಜಾರಿ ಮತ್ತು ಕರಾವಳಿಯ ತರಹೇವಾರಿ ದೇವದೂತರ- ಮನುವಾದಿಗಳ ಮತ್ತು ಸ್ವಪಕ್ಷದೊಳಗಿನ ಸಮಯ ಸಾಧಕರನ್ನೆಲ್ಲ ಒಟ್ಟೊಟ್ಟಿಗೆ ಎದುರು ಹಾಕಿಕೊಂಡು ಒಬ್ಬಂಟಿಯಾಗಿಬಿಟ್ಟಿದ್ದಾರೆ.

ಯಕ್ಷಗಾನ ಶೈಲಿಯಲ್ಲಿ ಹುಚ್ಚುಚ್ಚಾಗಿ ಮಾತಾಡುವ ಪೂಜಾರಿ ದಕ್ಷಿಣ ಕನ್ನಡದ ಅಪರೂಪದ ಜನಬಳಕೆಯ -ಶುದ್ಧ ಚಾರಿತ್ರ್ಯದ ರಾಜಕಾರಣಿ. ಆಗ ಕೇಂದ್ರ ಮಂತ್ರಿಯಾಗಿದ್ದಾಗೇ ಆಗಲಿ, ಎಐಸಿಸಿ-ಕೆಪಿಸಿಸಿಯ ಜಬರ್ದಸ್ತ್ ಸ್ಥಾನ-ಮಾನದಲ್ಲಿ ಇದ್ದಾಗಲಾದರೂ ಅಥವಾ ಈಗ ನಾಲ್ಕು ನಾಲ್ಕು ಬಾರಿ ಪಾರ್ಲಿಮೆಂಟಿಗೆ ನಿಂತು ಮತಾಂಧ ರಾಜಕಾರಣದ ಮೋಸಗಾರಿಕೆಯ ತಂತ್ರ-ಮಂತ್ರದಿಂದ ಸೋತು ಸುಣ್ಣವಾಗಿರುವಾಗೇ ಆಗಲಿ ಪೂಜಾರಿ ಜನಸಾಮಾನ್ಯರಿಂದ ವಿಮುಖರಾದವರಲ್ಲ. ಪಟ್ಟದರಿದ್ರರ ಗುಡಿಸಲಿಗೇ ಹೋಗಿ ಕೊಟ್ಟ ಗಂಜಿ-ಚಟ್ನಿಯೇನು ಉಣ್ಣುವ ಸರಳತೆ-ಪ್ರಾಮಾಣಿಕತೆ-ಕಳಕಳಿ ಇವತ್ತಿಗೂ ಪೂಜಾರಿ ಹಾಗೇ ಉಳಿಸಿಕೊಂಡಿದ್ದಾರೆ. ಈ ನಿರಾಡಂಬರ ನಾಟಿ ಸ್ವಭಾವವಷ್ಟೇ ಜನಾರ್ದನ ಪೂಜಾರಿಯನ್ನು ಕರಾವಳಿ ರಾಜಕಾರಣ-ಧರ್ಮಕಾರಣದ ಒಳಸುಳಿಗಳ ನಡುವೆಯೂ ಜೀವಂತವಾಗಿಟ್ಟಿದೆ!

ಬ್ಯಾಂಕಿಂಗ್ ಮಂತ್ರಿಯಾಗಿದ್ದಾಗ ಪೂಜಾರಿ ರೂಪಿಸಿದ್ದ ಬಡವರ ಪರ ನೀತಿ ಪಟ್ಟಭದ್ರ ಬ್ಯಾಂಕ್ ದಂಧೆದಾರರ ನರಳಿಸಿತ್ತು. ಪೂಜಾರಿ ದೇಶದಾದ್ಯಂತ ನಡೆಸುತ್ತಿದ್ದ 'ಸಾಲಮೇಳ' ಬ್ಯಾಂಕರ್‌ಗಳ ಸೊಕ್ಕಡಗಿಸಿಬಿಟ್ಟಿತ್ತು. ಪೂಜಾರಿಯ ಈ 'ಸಾಲ ಮೇಳ' ಪರ್ವ ಮುಗಿದು ರಜತಮಹೋತ್ಸವ ವರ್ಷಗಳೇ ಕಳೆದುಹೋಗಿದೆ. ಆದರೆ ಆ ದಿನಗಳನ್ನು ಸಾಲಮೇಳದ ಪ್ರಯೋಜನ ಪಡೆದವರು ಮತ್ತು ಅಂದಿನ 'ವಿವಾದ ಕಂಡವರು' ಇಂದಿಗೂ ಮರೆತಿಲ್ಲ. ಅದೊಂದು ಐತಿಹಾಸಿಕ ಸಾಧನೆ ಎಂಬಂತೆ ಜನ ಇವತ್ತಿಗೂ ನೆನೆಯುತ್ತಾರೆ.

1985ರಲ್ಲಿ ಈ ಪೂಜಾರಿ ಬೆಂಗಳೂರಿನ ಪರೇಡ್ ಮೈದಾನದಲ್ಲಿ ಒಂದೇ ದಿನ ಬರೋಬ್ಬರಿ ಒಂದೂವರೆ ಲಕ್ಷ ಜನರಿಗೆ 50 ಕೋಟಿ ರೂ. ಸಾಲ ವಿತರಿಸಿದ್ದರು. ಬಡವರಿಗೆ ಅಸಹಾಯಕರಿಗೆ ಒಂದೈದು ಸಾವಿರ ಸಾಲ ಕೊಡುವುದಕ್ಕೆ ಬ್ಯಾಂಕಿಗೆ ಅಲೆಸಿ ಸತಾಯಿಸುತ್ತಿದ್ದ, ಸಾಲ ಕೇಳುವವರನ್ನು ಕನಿಷ್ಠವಾಗಿ ಕಾಣುತ್ತಿದ್ದ ರಾಷ್ಟ್ರೀಕೃತ ಬ್ಯಾಂಕ್ ಸಿಬ್ಬಂದಿಯಂತೂ ಪೂಜಾರಿ ಪ್ರವರಕ್ಕೆ ಬಾಲ ಮುದುರಿಕೊಂಡು ಕುಳಿತುಕೊಳ್ಳುವಂತಾಗಿತ್ತು.

ಆಗ ಪೂಜಾರಿ ವಿರುದ್ಧ ಕೆಟ್ಟದಾಗಿ ಮಾತಾಡಿದವರೇ ಹೆಚ್ಚು. ಬ್ಯಾಂಕ್ ಸಿಬ್ಬಂದಿಯಂತೂ ಬ್ಯಾಂಕಿಂಗ್ ಮಂತ್ರಿ ವಿರುದ್ಧ ರಹಸ್ಯ ಅಪಪ್ರಚಾರ ಅಭಿಯಾನದಲ್ಲಿ ತೊಡಗಿತ್ತು. ಪೂಜಾರಿ ಸಾಲ ಮೇಳದಿಂದ ಠೇವಣಿದಾರರ ಹಣ ಕರಗುತ್ತಿದೆ ಎಂದೇ ಹುಯಿಲೆಬ್ಬಿಸಲಾಗಿತ್ತು. ಠೇವಣಿದಾರರನ್ನು ಪೂಜಾರಿ ವಿರುದ್ಧ ಛೂಬಿಡುವ ಹುನ್ನಾರ ಇದಾಗಿತ್ತು. ಆರ್ಥಿಕ ವಲಯದ ಹಿಕಮತ್ತುದಾರರ ಜತೆ ದಕ್ಷಿಣ ಕನ್ನಡದ ಕೆಲವು ದೇವದೂತರೂ ಸೇರಿಕೊಂಡಿದ್ದರು. ಇದಕ್ಕೆ ಧಾರ್ಮಿಕ ಕಾರಣವಿತ್ತು. ಧರ್ಮಸ್ಥಳದಲ್ಲಿ ಈಡಿಗ(ಬಿಲ್ಲವ)ರ ಜಾತಿ ಮಠ ಕಟ್ಟಿಸಲು ಪೂಜಾರಿ ನೆರವಾದದ್ದು 'ಧರ್ಮಾ'ಧಿಕಾರಿ ವೀರೇಂದ್ರ ಹೆಗ್ಗಡೆಯಂಥವರ 'ಡಿಸ್ಟರ್ಬ್' ಮಾಡಿತ್ತು. ಧರ್ಮಸ್ಥಳದಲ್ಲಿ ಬಿಲ್ಲವರ, ಮತ್ತಿತರ ಹಿಂದುಳಿದವರ ಆಕರ್ಷಿಸುವಂಥ ದೊಡ್ಡ ಶ್ರೀರಾಮ ದೇವಾಲಯ ತಲೆಯೆತ್ತಿದ್ದು ಹೆಗ್ಗಡೆಗೆ ಸಹಿಸಲಾಗಲಿಲ್ಲ. ಇದರಿಂದ ತನ್ನ 'ಧರ್ಮಪೀಠ' ಮಹತ್ವ ಕಳೆದುಕೊಳ್ಳುತ್ತದೆಂಬ ದೂರಾಲೋಚನೆ ಹೆಗ್ಗಡೆ ಬಳಗದ್ದಾಗಿತ್ತು!

ಇದೇ ವೇಳೆಗೆ ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲೂ ಎರಡು ಬಣವಾಗಿತ್ತು. ಪೂಜಾರಿಯನ್ನು ರಾಜಕೀಯಕ್ಕೆ ತಂದಿದ್ದ 'ಗುರು' ಮೊಯ್ಲಿಗೆ 'ಶಿಷ್ಯ'ನ ಜನಪ್ರಿಯತೆ ಹೊಟ್ಟೆಕಿಚ್ಚು ಮೂಡಿಸಿತ್ತು; ಪೂಜಾರಿ ವಿರುದ್ಧ ಅಂದು ಕಾಂಗ್ರೆಸ್‌ನಲ್ಲಿ ಪವರ್‌ಫುಲ್ ಆಗಿದ್ದ ಮೊಯ್ಲಿ ಷಡ್ಯಂತ್ರ ರೂಪಿಸಿದ್ದರು. ಹುಂಬ ಪೂಜಾರಿಯೂ ಗ್ಯಾಂಗ್ ಕಟ್ಟಿಕೊಂಡು ಗುರುಗೆ ತಿರುಮಂತ್ರ ಹಾಕತೊಡಗಿದ್ದರು. ರಾಜಕೀಯ-ಆರ್ಥಿಕ-ಧಾರ್ಮಿಕ ವಲಯದ ಪೂಜಾರಿ ವೈರಿಗಳೆಲ್ಲರ ಧ್ರುವೀಕರಣವಾಗಿತ್ತು. ಇವರೆಲ್ಲ ಸೇರಿ ಬ್ಯಾಂಕಿಂಗ್ ಮಂತ್ರಿಯನ್ನು ಅಂದು ಮಂಗಳೂರು-ಕೊಡಗು ಕ್ಷೇತ್ರದಲ್ಲಿ ಚೆಡ್ಡಿ ಚತುರನೆದುರು ಸೋಲಿಸಿದ್ದರು. ಅಂದು ಗೆದ್ದಿದ್ದು ವೀರೇಂದ್ರ ಹೆಗ್ಗಡೆಯ ಜಾತಿ (ಜೈನ) ಬಂಧು ಧನಂಜಯಕುಮಾರ್ ಎಂಬ ಅನೈತಿಕ-ಅಸಡ್ಡಾಳ ಪುಢಾರಿ. ಆಗ ಸೋತಿದ್ದ ಜನಾರ್ದನ ಪೂಜಾರಿ ಇವತ್ತಿಗೂ ಗೆದ್ದಿಲ್ಲ. ಆತ ಮತ್ತೆ ಎಂಪಿಯಾದರೆ ಹಿಂದುಳಿದವರ ಯುಗ ಆರಂಭವಾಗುತ್ತದೆ. ತಮ್ಮ ಢೋಂಗಿ ಧಾರ್ಮಿಕತೆಯ ಅಸ್ತಿತ್ವಕ್ಕೆ ಧಕ್ಕೆ ಬರುತ್ತದೆಂದು ಕಾವಿ-ಬಿಳಿ ಬಣ್ಣದ ಧರ್ಮಾಧಿಕಾರಿಗಳು ಖಾಕಿ ಚೆಡ್ಡಿ-ಲಾಠಿ ಲಫಡಾದಾರರು ಮಾಡಬಾರದ್ದೆಲ್ಲ ಮಾಡುತ್ತಿದ್ದಾರೆ. ಸಡಿಲ ನಾಲಿಗೆಯ ಪೂಜಾರಿ ವಿರುದ್ಧ ಹಿಂದುಳಿದವರನ್ನೇ (ಬಿಲ್ಲವ) ಎತ್ತಿಕಟ್ಟಿ ಆತ ಗೆಲ್ಲದಂತೆ ಕಿತಾಪತಿ ಮಾಡುತ್ತಿರುವುದು ದಕ್ಷಿಣಕನ್ನಡದ ದುರಂತವೇ ಸರಿ!

ಒಂದು ಕಾಲದಲ್ಲಿ ಪಕ್ಕಾ ಚೆಡ್ಡಿಯಾಗಿದ್ದ ಜನಾರ್ದನ ಪೂಜಾರಿ 'ಜ್ಞಾನೋದಯ'ವಾದ ನಂತರ ಬೆಳೆಸಿಕೊಂಡಿರುವ ಸಾಮಾಜಿಕ ಬದ್ಧತೆ ಎಷ್ಟು ಕಠೋರ ನಿಷ್ಠೆಯದೋ ಅಷ್ಟೇ ಅಖಂಡ ಆತನ ಪಾರ್ಟಿ (ಕಾಂಗ್ರೆಸ್) ನಿಷ್ಠೆ. ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ, ರಾಜ್ಯಸಭೆ ಸದಸ್ಯನಾಗಿದ್ದಾಗ ಮತ್ತು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ಆತ ತನ್ನ ವೈಯಕ್ತಿಕ ದ್ವೇಷಾಸೂಯೆ ಎಲ್ಲ ಮರೆತು ಪಾರ್ಟಿ ಕಟ್ಟಲು ಪ್ರಯತ್ನಿಸಿದ್ದಾರೆ. ವೈರಿ ಮೊಯ್ಲಿ ಜತೆ ಸಂಘರ್ಷ ನಡೆಸಿದರೆ ಪಾರ್ಟಿಗೆ ಡ್ಯಾಮೇಜೆಂದು 'ರಾಜಿ'ಯೂ ಆಗಿದ್ದಿದೆ. ಆದರೆ ಮೊಯ್ಲಿ ಈ ಸಾತ್ವಿಕ ಹುಂಬ ಪೂಜಾರಿಗೆ ಧೋಖಾ ನೀಡಿದ್ದೇ ಹೆಚ್ಚು! ದಗಲ್ಬಾಜಿ ದೇವಧೂತರ ಜತೆ ಸೇರಿ ಮೊಯ್ಲಿ ಇವತ್ತಿಗೂ ಪೂಜಾರಿ ಹಣಿಯಲು ಕುತಂತ್ರ ಮಾಡುತ್ತಲೇ ಇದ್ದಾರೆ.

ರಾಜಕೀಯವಾಗಿ ಹೊಡೆತದ ಮೇಲೆ ಹೊಡೆತ ತಿಂದರೂ ಪೂಜಾರಿ ಎಂದೂ ಜನರಿಗೆ ಬೆನ್ನುಹಾಕಿ ಕೂರಲಿಲ್ಲ. ಸಾಮಾಜಿಕ-ಧಾರ್ಮಿಕ ಬದಲಾವಣೆ ತಂದು ಹಿಂದುಳಿದವರಲ್ಲಿ ಪ್ರಗತಿಪರ ಶ್ರದ್ಧೆ ಮೂಡಿಸಲು, ಧಾರ್ಮಿಕ ಅಂಧಶ್ರದ್ಧೆಯಿಂದ ಹೊರತರಲು ಪೂಜಾರಿ ಪ್ರಯತ್ನಿಸುತ್ತಲೇ ಇದ್ದಾರೆ. ಮಂಗಳೂರಿನ ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಾಲಯದ ಆಡಳಿತ ಮಂಡಳಿಯ ಮುಖ್ಯಸ್ಥನಾದ ನಂತರ ಪೂಜಾರಿ ಆ ದೇವಾಲಯವನ್ನು ಮೇಲ್ವರ್ಗದ ಧರ್ಮಾಧಿಕಾರಿಗಳ -ಚೆಡ್ಡಿ ಪುರೋಹಿತಶಾಹಿಗಳ ಕಣ್ಣುಕುಕ್ಕುವಂತೆ ಅಭಿವೃದ್ಧಿ ಪಡಿಸಿದರು.! ಪ್ರತಿವರ್ಷ ಅಲ್ಲಿ ಪೂಜಾರಿ ನಡೆಸುವ 'ದಸರಾ' ಉತ್ಸವವಂತೂ ತುಂಬಾ ಪ್ರಖ್ಯಾತವಾಗಿ ಹೋಯಿತು.

ಈ ಕುದ್ರೋಳಿ ದೇವಾಲಯಕ್ಕೆ ಒಂದು ರೋಚಕವಾದ ಇತಿಹಾಸವಿದೆ. ಕೇರಳದಲ್ಲಿ ಮಲೆಯಾಳಿ ಬಿಲ್ಲವ(ತಿಯಾಸ್) ಸಮುದಾಯದಲ್ಲಿ ಜನಿಸಿದ ನಾರಾಯಣ ಗುರು 1912ರಲ್ಲಿ ನಿರ್ಮಿಸಿದ ದೇವಾಲಯವಿದು. ಹಿಂದುಳಿದ ವರ್ಗದ ಈ ನಾರಾಯಣ ಗುರು ಸಂಸ್ಕೃತ ವಿದ್ವಾಂಸ -ಉಪನಿಷತ್ ಪಂಡಿತರೂ ಆಗಿದ್ದರು. 'ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು' ಎಂಬ ತತ್ವ ಹಬ್ಬಿಸಿ ಕೇರಳದಲ್ಲಿ ಸುಧಾರಣೆಯ ಅಲೆಯನ್ನೇ ಎಬ್ಬಿಸಿದ್ದರು. ನಾರಾಯಣ ಗುರು ವಿಶೇಷವಾಗಿ ಬಿಲ್ಲವರಲ್ಲಿ ಧಾರ್ಮಿಕ-ಶೈಕ್ಷಣಿಕ-ಸಾಮಾಜಿಕ ಬದಲಾವಣೆ ತಂದಿದ್ದರು. ಹೀಗಾಗಿ ಪಕ್ಕದ ಅವಿಭಜಿತ ದಕ್ಷಿಣ ಕನ್ನಡದ ಬಿಲ್ಲವ ಸಮುದಾಯದಲ್ಲಿ ನಾರಾಯಣ ಗುರು ಪ್ರಭಾವ ಬೆಳೆಯಿತು. ಇಂದಿನ ದೇವದೂತರು-ಧರ್ಮಾಧಿಕಾರಿಗಳಂತೆ ಜನರಲ್ಲಿ ಮೌಢ್ಯ ಬೆಳೆಸಿ ಪೀಠ ಕಟ್ಟುವ ಕೆಲಸ ಮಾಡದೇ ವೈಚಾರಿಕ ಕ್ರಾಂತಿ-ಮಾನವೀಯತೆ ಬಿತ್ತಿದ್ದರು ನಾರಾಯಣ ಗುರುಗಳು.

ಮಂಗಳೂರು-ದಕ್ಷಿಣ ಕನ್ನಡದ ಇತರೆಡೆ ಶೂದ್ರ ಬಿಲ್ಲವರಿಗೆ ಮೇಲ್ವರ್ಗದವರು ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸಿದಾಗ ನಾರಾಯಣ ಗುರು ಕುದ್ರೋಳಿಯಲ್ಲಿ ಬಿಲ್ಲವರಿಗೆಂದೇ ದೇವಸ್ಥಾನ ಕಟ್ಟಿಸಿದ್ದರು. ಈ ನಾರಾಯಣ ಗುರು ಕರಾವಳಿಯ ಈಡಿಗ ಸಮುದಾಯದ ಬಿಲ್ಲವ-ದೀವರ ಪ್ರಶ್ನಾತೀತ ಧರ್ಮ ಗುರು. ಮೇಲ್ವರ್ಗದ ಫ್ಯೂಡಲ್ ಶಾಹಿಗಳ, ಪುರೋಹಿತ ಶಾಹಿಗಳ ದಬ್ಬಾಳಿಕೆಯಿಂದ ಜರ್ಝರಿತರಾಗಿದ್ದ ಬಿಲ್ಲವರಲ್ಲಿ ನೈತಿಕ ಸ್ಥೈರ್ಯ ಮೂಡಿಸಿದ್ದೇ ನಾರಾಯಣ ಗುರುಗಳ ಪ್ರಗತಿಪರ-ಜೀವ ಪರ ಬೋಧನೆ-ತತ್ವಾದರ್ಶ!!

ಈ ನಾರಾಯಣ ಗುರು ನಿರ್ಮಿತ ಕುದ್ರೋಳಿ ದೇವಸ್ಥಾನದ ಆಡಳಿತವನ್ನು ಜನಾರ್ದನ ಪೂಜಾರಿ ವಹಿಸಿಕೊಂಡ ಬಳಿಕ ಬಿಲ್ಲವರ ಸಂಘಟನೆಗೆ, ಅಭಿವೃದ್ಧಿಗೆ ವೇದಿಕೆಯಾಗಿ ಮಾಡಿಕೊಂಡರು. ಇಲ್ಲಿ ಪ್ರತಿವರ್ಷ ಪೂಜಾರಿ ಉಸ್ತುವಾರಿಯಲ್ಲಿ ನಡೆವ ನವರಾತ್ರಿ ಉತ್ಸವ ನಾಡಿನಾದ್ಯಂತ ಪ್ರಸಿದ್ಧಿಯಾಯ್ತು. ಹಿಂದುಳಿದವರ ಉತ್ಸವದಂತೆ ಕಳೆಕಟ್ಟಿಕೊಂಡಿತು. ಈ ಬಾರಿಯ ಕುದ್ರೋಳಿಯ ದಸರಾ ಹಬ್ಬವಂತೂ ಬಾಳ ಸಂಗಾತಿಯನ್ನು ಕಳೆದುಕೊಂಡು ಸಮಾಜದಿಂದ ಪರಿತ್ಯಕ್ತರಂತೆ ಅವಮಾನ, ಅವಗಣನೆಯ ಬದುಕು ಸಾಗಿಸುತ್ತಿದ್ದ ಹೆಂಗಸರ ಬಾಳಿನಲ್ಲಿ ಹೊಸ ಬಾಷ್ಯ ಬರೆಯಿತು!!

ಅಂದು 'ವಿಧವೆ'ಯರಿಗೆ ಅರಿಶಿಣ-ಕುಂಕುಮ-ಹೂವು-ಸೀರೆ ಕೊಟ್ಟು ಗೌರವಿಸುವ, ಸಾಮಾಜಿಕ ಶಾಪದಿಂದ ಅವರನ್ನು ಮುಕ್ತರಾಗಿಸುವ ಕ್ರಾಂತಿಕಾರಿ ಕಾರ್ಯಕ್ರಮ ಜನಾರ್ದನ ಪೂಜಾರಿ ಹಾಕಿಕೊಂಡಿದ್ದರು. ಗಂಡನ ಕಳಕೊಂಡು ಅಪ್ರೀತವಾಗಿ ಬದುಕುತ್ತಿದ್ದ ಹೆಂಗಸರನ್ನೆಲ್ಲ ಕುದ್ರೋಳಿ ದೇವಸ್ಥಾನ ಕಮಿಟಿ ಕರೆದಿತ್ತು. ಈ ವಿಧವೆಯರಿಂದಲೇ ದೇವರಿಗೆ ಆರತಿ ಎತ್ತಿಸಿ, ರಥ ಎಳೆಸಿ ಅವರಲ್ಲಿರುವ 'ವಿಧವೆ' ಎಂಬ ಕೀಳರಿಮೆ ತೊಡೆದುಹಾಕುವ ಪ್ರಯತ್ನ ಇದಾಗಿತ್ತು. ಅಲ್ಲದೆ ವಿಧವೆಯರ ಬಗ್ಗೆ ಸಮಾಜದಲ್ಲಿರುವ ಮೂಢನಂಬಿಕೆ-ನೀಚ ಭಾವನೆ ಹೋಗಲಾಡಿಸುವುದು ಈ 'ಮಂಗಳ ಭಾಗ್ಯ' ಉದ್ದೇಶವಾಗಿತ್ತು.

ಸಾಮಾಜಿಕ ಕಟ್ಟು-ಕಟ್ಟಳೆ ಮುರಿದು ಅದೆಷ್ಟು ಹೆಂಗಸರು ಕುದ್ರೋಳಿ ದೇವಸ್ಥಾನ ಸಂಪ್ರದಾಯ ವಿರೋಧಿ ಕಾರ್ಯಕ್ರಮಕ್ಕೆ ಬರುತ್ತಾರೋ, ಈ 'ವಿಧವೆ'ಯರಿಗೆ 'ಧರ್ಮಭ್ರಷ್ಟ' ಕೆಲಸಕ್ಕೆ ಪುರುಷನ-ವೈದಿಕ ಹಿಕಮತ್ತಿನ ಸಮಾಜ ಅವಕಾಶ ಕೊಟ್ಟೀತಾ? ಇಂಥ ಅನುಮಾನ ಪೂಜಾರಿಯಿಂದ ಹಿಡಿದು ಪ್ರಗತಿಪರ ಮನಸ್ಸಿನವರಿಗೆ, ಮಹಿಳಾವಾದಿ ಹೆಂಗಸರಿಗೆಲ್ಲ ಇತ್ತು. ಆದರೆ ಅಂದು ಸುಮಾರು 2300 'ವಿಧವೆ'ಯರು ಕುದ್ರೋಳಿ ದೇಗುಲದಲ್ಲಿ ಜಮಾಯಿಸಿದ್ದರು. ಇವರೆಲ್ಲ ಬಾಗಿನ ಪಡೆದು, ಸುಮಂಗಲೆಯರಾಗಿ ದೇವಸ್ಥಾನದ ತೇರು ಎಳೆದು ಹುಚ್ಚು ಸಂಪ್ರದಾಯವನ್ನು ಧಿಕ್ಕರಿಸಿ ಮಾದರಿಯಾದರು!!

ಬ್ರಾಹ್ಮಣಶಾಹಿ ವ್ಯಾಖ್ಯಾನದ 'ವೈಧವ್ಯ'ದ ಅನಿಷ್ಟ ಆಚರಣೆಯಿಂದ ರೋಸಿಹೋಗಿದ್ದ ಹೆಂಗಸರು ಅಂದು ದೊಡ್ಡ ಸಂಖ್ಯೆಯಲ್ಲೇ ಕುದ್ರೋಳಿ ದೇಗುಲದಲ್ಲಿ ಜಮೆಯಾಗಿದ್ದರು. ಇವರೆಲ್ಲರಿಗೆ ಪೂಜಾರಿ ಬಳಗದಿಂದಲೇ ಬಾಗಿನ ಅರ್ಪಿಸಲು ಸಾಧ್ಯವಾಗಿರಲಿಲ್ಲ. ಸೀರೆ-ಹೂ-ಅರಿಶಿಣ-ಕುಂಕುಮ ಸಿಗದವರಿಗೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಬಾಗಿನ ಕೊಡುವುದಾಗಿ ದೇವಸ್ಥಾನದ ಆಡಳಿತಗಾರರು ಹೇಳಿದ್ದರು. ಅರ್ಥಾತ್ ಜನಾರ್ದನ ಪುಜಾರಿ ದೀಪಾವಳಿಯ ಲಕ್ಷ್ಮೀಪೂಜೆಯಂದು ಈ ಹೆಂಗಸರಿಗೆ ಬರಲು ಹೇಳಿದ್ದರು. ಅಂತೆಯೇ ದೀಪಾವಳಿ ವೇಳಗೆ 500ರಷ್ಟು ಹೆಂಗಸರು ಕುದ್ರೋಳಿ ದೇವಸ್ಥಾನಕ್ಕೆ ಬಂದಿದ್ದರು.

ಅಂದು ಪೂಜಾರಿ ಒಂದು ಹೆಜ್ಜೆ ಮುಂದೆ ಹೋದರು. ಗಂಡನಿದ್ದ ಸುಮಂಗಲಿಯರಿಂದ ದೇವತೆ ಎದುರು ಪ್ರಮಾಣ ಒಂದನ್ನು ಮಾಡಿಸಿದರು. "ಅಕಾಲದಲ್ಲಿ ಪತಿ ನಮ್ಮನ್ನಗಲಿದರೂ ನಾವು ಬಳೆ ಒಡೆಯುವುದಿಲ್ಲ... ಹೂ-ಕುಂಕುಮ ತೆಗೆದು ಹಾಕುವುದಿಲ್ಲ... ಕರಿಮಣಿ ಕೀಳುವ ಅನಿಷ್ಠ ಪದ್ಧತಿ ಆಚರಿಸುವುದಿಲ್ಲ... ಮುಂದಿನ ಬದುಕಿನಲ್ಲಿ ಎಲ್ಲಾ ಧಾರ್ಮಿಕ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸ್ತ್ರೀಯರ ಶ್ರೇಷ್ಠ ಪರಂಪರೆಯ ಗೌರವ ಕಾಪಾಡುತ್ತೇನೆ..." ಎಂದು ಗಂಡನಿರುವ ಹೆಂಗಸರು ಪ್ರತಿಜ್ಞೆ ಮಾಡಿದರು. ಅಲ್ಲಿಗೆ ಗಂಡನಿಲ್ಲದ ಮತ್ತು ಗಂಡನಿರುವ ಹೆಂಗಸರು ಸನಾತನ ಸಮಾಜದ ಮೂಢ ನಂಬಿಕೆಯ ಸಂಪ್ರದಾಯವನ್ನು ದಿಟ್ಟವಾಗಿ 'ಉಲ್ಲಂಘಿಸಿ' ಇತಿಹಾಸ ನಿರ್ಮಿಸಿದಂತಾಯ್ತು!! ಈ 'ಬಂಡಾಯ'ದ ರೂವಾರಿ ಜನಾರ್ದನ ಪೂಜಾರಿ ಎಂಬ ದಾಖಲೆಯೂ ನಿರ್ಮಾಣವಾಯ್ತು!!

ಮನುವಿನ ಅನುಯಾಯಿಗಳು ಮಹಿಳೆಯನ್ನು ಮೌಢ್ಯದತ್ತ ಸೆಳೆದೊಯ್ದು ಸನಾತನ ಸಂಸ್ಕೃತಿ ಸಂರಕ್ಷಿಸುತ್ತಿರುವ ಈ 'ಕಲಿಕಾಲ'ದಲ್ಲಿ ಜನಾರ್ದನ ಪೂಜಾರಿ ಪರಿವರ್ತನೆಯ ಪ್ರಯತ್ನ ಮಾಡಿದ್ದು ನಿಜಕ್ಕೂ ಶ್ಲಾಘನೀಯ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾ' (ನಾರಿಯರಿಗೆ ಗೌರವ ತೋರಿಸುವೆಡೆಯಲ್ಲಿ ದೇವತೆಗಳು ವಿಹರಿಸುತ್ತಾರೆ) ಎನ್ನುತ್ತಲೇ ಹೆಣ್ಣನ್ನು ಹಿಂಸೆಗೀಡುಮಾಡುವ, ಅಪಮಾನಿಸುವ, ಕೀಳಾಗಿ ಬಳಸಿಕೊಳ್ಳುವ ಈ ಅನಿಷ್ಠ ಸಮಾಜದಲ್ಲಿ ಈ ಅಮಾನವೀಯ ಆಚರಣೆಗೆ ಮಂಗಳ ಹಾಡಲು ಪೂಜಾರಿ ಪ್ರಾಮಾಣಿಕವಾಗಿ ಯೋಚಿಸಿರುವುದು ಒಂದು ಸಕಾರಾತ್ಮಕ ಹೆಜ್ಜೆಯೇ ಸರಿ!!

ದುರಂತವೆಂದರೆ ಪೂಜಾರಿಯಂಥ ಸಾಮಾನ್ಯ ರಾಜಕಾರಣಿಗೆ ಕಾಣಿಸುವ ಸಾಮಾಜಿಕ-ನೈತಿಕ ಮೌಲ್ಯ-ಪ್ರಜ್ಞೆಗಳು ಧರ್ಮಾಧಿಕಾರಿಗಳು ತಾವೆಂದು ಬೋಂಗು ಬಿಡುವ ಮಠಾಧೀಶರಿಗೆ-ದೇವದೂತರಿಗೆ ಗೋಚರಿಸುತ್ತಿಲ್ಲ! ನಾಲ್ಕು ವರ್ಣಗಳಲ್ಲಿ ಶ್ರೇಷ್ಠ ಎಂದು ಹೇಳಿಕೊಳ್ಳುವ ಬ್ರಾಹ್ಮಣ ಸಮುದಾಯದಲ್ಲಂತೂ 'ವಿಧವೆ'ಯರ ಪಾಡು ಪಶುಗಿಂತ ಕೀಳಾಗಿದೆ. ಇದ್ಯಾಕೆ ಬ್ರಾಹ್ಮಣ ಮಠಾಧೀಶರಿಗೆ ಅರ್ಥವಾಗುತ್ತಿಲ್ಲ? 'ಗೋಮಾತೆಯ ಪ್ರಾಣ....' ಎಂದು ಬೊಬ್ಬೆ ಹೊಡೆದು ಪಾಲಿಟಿಕಲ್ ಮೈಲೇಜು ಪಡೆಯಲು ಹವಣಿಸುವ ಸಂಘಪರಿವಾರದ ಸೋಗಲಾಡಿಗಳಿಗೆ ತಮ್ಮ ಮನೆಯಲ್ಲೇ ಸ್ವಂತ ಮಾತೆಯ ಜೀವ ಕ್ಷಣ-ಕ್ಷಣವೂ ಅನಿಷ್ಠ ಪದ್ಧತಿ-ಆಚರಣೆಗೆ ಸಿಲುಕಿ ಹೋಗುತ್ತಿರುವುದು ಕಾಣಿಸುತ್ತಿಲ್ಲ.

ಇದಕ್ಕಿಂತ ದೊಡ್ಡ ದುರಂತ ಇನ್ನೇನಿದೆ? ಶೂದ್ರ ಜನಾರ್ದನ ಪೂಜಾರಿಯಿಂದಾದರೂ ಈ ಸನಾತನಿಗಳು ಪಾಠಕಲಿತಾರಾ?

• ನಹುಷ




'ವಿಧವೆ' ಅರಿಶಿಣ-ಕುಂಕುಮ-ಹೂವು- ಸೀರೆ ಕೊಟ್ಟು ಗೌರವಿಸುತ್ತಿರುವ ಜನಾರ್ದನ ಪೂಜಾರಿ

ಡಕಾಯಿತ ಮೈಲಾರಿ ಬೆಂಗಳೂರು ವಿವಿ ರಿಜಿಸ್ಟ್ರಾರ್!



ಬೆಂಗಳೂರು ವಿವಿ

> ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆದರದ್ದೇ ಆದ ಘನತೆಯಿದೆ. ಅಲ್ಲಿನ ಪ್ರತಿ ಹುದ್ದೆಗೂ ನಿರ್ದಿಷ್ಟ ಯೋಗ್ಯತೆಯ ಮಾನದಂಡವಿದೆ. ವಿದ್ವತಿಗೂ ಪುಢಾರಿಗಿರಿಗೂ ವ್ಯತ್ಯಾಸವಿದೆ. ಯಾರದೋ ಕೃತಿಚೌರ್ಯ ಮಾಡಿ ಸಿಕ್ಕುಬಿದ್ದವನನ್ನು, ಕೋಟಿಗಟ್ಟಲೇ ದುಡ್ಡು ದೋಚಿ ಶಿಕ್ಷೆಗೆ ಗುರಿಯಾದವನನ್ನು, ಒಂದಲ್ಲ ಹತ್ತಾರು ಕ್ರಿಮಿನಲ್ ಕೇಸುಗಳಲ್ಲಿ ಸಿಲುಕಿದವನನ್ನು ಜೈಲಿಗೆ ಹಾಕಬೇಕಾದ ಸರ್ಕಾರವೇ ಬೆಂಗಳೂರು ವಿವಿಯಂಥ ವಿದ್ಯಾಕೇಂದ್ರವೊಂದರ ರಿಜಿಸ್ಟ್ರಾರ್ ಹುದ್ದೆಗೆ ನೇಮಿಸುತ್ತದೆಯೆಂದರೆ ಬೆಂಗಳೂರು ವಿಶ್ವವಿದ್ಯಾಲಯವೆಂಬುದು ಹೇಗೆ ತಾನೇ ವಿದ್ಯಾಕೇಂದ್ರವಾಗಿ ಉಳಿಯಲು ಸಾಧ್ಯ?


ಮೈಲಾರಪ್ಪ

ಮೈಲಾರಪ್ಪನೆಂಬ ಹಲಾಲುಟೋಪಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಗೆ ನೇಮಿಸುವ ಮೂಲಕ ಅದಕ್ಕಿದ್ದ ಚೂರುಪಾರು ಗೌರವಕ್ಕೂ ಆರೆಸ್ಸೆಸ್ ಕೊಳ್ಳಿಯಿಟ್ಟಿದೆ!

ಉಪಕುಲಪತಿ ಪ್ರಭುದೇವರ ಸಮೇತ ಜ್ಞಾನಭಾರತಿಯ ಆಳಿದುಳಿದ ಮಾನವಂತರೆಲ್ಲರಿಗೂ ಇದಕ್ಕಿಂತ ದೊಡ್ಡ ಅವಮಾನ ಬೇಕಿಲ್ಲ. ಒಂದಲ್ಲಾ ಹತ್ತು ಹಗರಣಗಳಿಗೆ ಕಾರಣ ಕರ್ತನಾದ, ಕಾಲಿಟ್ಟಲ್ಲೆಲ್ಲ ಲೂಟಿಗೈದ, ಮೈಲಾರಿಯನ್ನು ಬೆಂಗಳೂರು ವಿವಿಯ ದೌರ್ಭಾಗ್ಯವೋ ಎಂಬಂತೆ ರಿಜಿಸ್ಟ್ರಾರ್ ಗಾದಿಗೆ ಪ್ರತಿಷ್ಠಾಪನೆ ಮಾಡಿಸಿದ್ದು ಆರೆಸ್ಸೆಸ್ ವರಿಷ್ಠ ರಾಮಾಜೋಯಿಸ್. ಜೊತೆಗೆ ಮತ್ತೊಬ್ಬ ಆರೆಸ್ಸೆಸ್ ನಾಯಕ ಕೃ. ನರಹರಿ ಕೂಡ ಈ ಪಾಪದಲ್ಲಿ ಪಾಲುದಾರ.


ರಾಮಾಜೋಯಿಸ್

ನಿನ್ನೆ ಮೊನ್ನೆಯ ತನಕ ಬೆಂ.ವಿವಿಗೆ ರಿಜಿಸ್ಟ್ರಾರ್ ಆಗಿದ್ದ ರಂಗನಾಥ್ ವಿದ್ವತ್ತು ಮತ್ತು ವ್ಯಕ್ತಿತ್ವದಲ್ಲಿ ಸಂಪನ್ನ. ಉಪ ಕುಲಪತಿ ಪ್ರಭುದೇವ ಕೂಡ ಅಷ್ಟೇ ತೂಕದ ವ್ಯಕ್ತಿ. ಇಂಥವರ ಅಭಿಪ್ರಾಯಗಳನ್ನೆಲ್ಲ ಬದಿಗೊತ್ತಿ ಮೈಲಾರಪ್ಪನನ್ನು ರಿಜಿಸ್ಟ್ರಾರ್ ಮಾಡಿದ ಉನ್ನತ ಶಿಕ್ಷಣ ಸಚಿವ ಆಚಾರ್ಯರಿಗೆ ಕನಿಷ್ಠ ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುವುದಕ್ಕಾದರೂ ಒಂದೇ ಒಂದು ಕಾರಣಬೇಕಲ್ಲ. ಅಂಥ ಯಾವುದಾದರೂ ಒಂದು ಯೋಗ್ಯತೆ ಮೈಲಾರಪ್ಪನಿಗಿದ್ದರೆ ಒಪ್ಪಬಹುದಿತ್ತು. ಆದರೆ ಡೀಲು ಕುದುರಿಸುವ ವ್ಯಾವಹಾರಿಕ ಚಾತುರ್ಯವಿದೆಯಲ್ಲ; ಅದೇ ಮೈಲಾರಪ್ಪನ ಅಸಲೀ ತಾಕತ್ತು.

ಈತನ ಕುಖ್ಯಾತಿಯಿಂದಾಗಿಯೇ ಬೆಂಗಳೂರು ವಿವಿ ಪದೇಪದೆ ಸುದ್ದಿಗೆ ಸಿಲುಕುತ್ತಲೇ ಇದೆ. ಶುರುವಿನಲ್ಲಿ ಈತನ ಪಿಎಚ್‌ಡಿ ಬಗ್ಗೆ ತಕರಾರೆದ್ದಿತು, ಆನಂತರ ಈತನಿಗೆ ಪ್ರೊಫೆಸರ್‌ಗಿರಿ ಕೊಟ್ಟಿದ್ದರ ವಿರುದ್ಧ ವಿವಾದ ಶುರುವಾಯಿತು. ತನ್ನ ಚಾಲಾಕಿ ಬುದ್ಧಿಯಿಂದಾಗಿಯೇ ಇವೆರಡನ್ನೂ ಜೀರ್ಣಿಸಿಕೊಂಡ ಮೈಲಾರಪ್ಪ ಸಮಾಜಶಾಸ್ತ್ರ ವಿಭಾಗಕ್ಕೆ ವಕ್ಕರಿಸಿ ಅದರ ಮುಖ್ಯಸ್ಥನಾದ. ಅಲ್ಲಿ ಹೆಣ್ಣುಮಕ್ಕಳನ್ನು ಗೋಳಾಡಿಸಿದ ಆರೋಪಕ್ಕೂ ತುತ್ತಾಗಿದ್ದೂ ಅಲ್ಲದೆ ದುಡ್ಡು ಹೊಡೆದ ಕೀರ್ತಿಗೂ ಗುರಿಯಾದ. ಇಂಥವನನ್ನು ದೂರ ಶಿಕ್ಷಣ ವಿಭಾಗಕ್ಕೆ ಅದ್ಯಾವ ಪುಣ್ಯಾತ್ಮ ಮುಖ್ಯಸ್ಥನನ್ನಾಗಿ ನೇಮಿಸಿದನೋ ಗೊತ್ತಿಲ್ಲ.

ಈ ಹೊತ್ತಿಗಾಗಲೇ ಕಾಂಗ್ರೆಸ್ ನಾಯಕ ಖರ್ಗೆಗೆ ಮನೆ ಮಗನಂತಾಗಿದ್ದ ಮೈಲಾರಿ ದೂರ ಶಿಕ್ಷಣದ ನಿಧಿಯನ್ನೂ ದೋಚಿದ. ಅದು 2.34 ಕೋಟಿ ರೂಪಾಯಿಗಳ ಭಾರೀ ಹಗರಣ. ಬೆಂವಿವಿಯ 2006-2007 ರ ಆಡಿಟ್ ವರದಿಯಲ್ಲಿ ಮೈಲಾರಪ್ಪ ಭ್ರಷ್ಟಾಚಾರವೆಸಗಿದ್ದು, ವಿವಿಯ ದುಡ್ಡು ದೋಚಿದ್ದು ಎಲ್ಲವನ್ನೂ ಸ್ಪಷ್ಟವಾಗೇ ಲೆಕ್ಕ ಪರಿಶೋಧಕರು ಪತ್ತೆಹಚ್ಚಿದ್ದರು. ಜ್ಞಾನಭಾರತಿಯ ದುರಂತವೋ ಕೇಡುಗಾಲವೋ ಗೊತ್ತಿಲ್ಲ ಈ ಹೊತ್ತಿಗೆ ಸರಿಯಾಗಿ ಬಿಜೆಪಿ ಅಧಿಕಾರಕ್ಕೆ ಬಂದು ಲಿಂಬಾವಳಿ ಉನ್ನತ ಶಿಕ್ಷಣ ಸಚಿವರಾಗಿದ್ದರು. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಮೈಲಾರಪ್ಪನ ಖರ್ಗೆ ನಿಷ್ಠೆ ಬದಲಾಗಿ ಅದು ಆರೆಸ್ಸೆಸ್ ವರಿಷ್ಠ ರಾಮಾಜೋಯಿಸ್ ಮತ್ತು ಎಮ್ಮೆಲ್ಸಿ ಕೃ. ನರಹರಿಯತ್ತ ತಿರುಗಿತು.

ಬಹುಶಃ ಬೇರೆ ಯಾರೇ ಆಗಿದ್ದರೂ ಈ ಹೊತ್ತಿಗೆ ಜೈಲು ಪಾಲಾಗಬೇಕಿತ್ತು, ಆದರೆ ಮೈಲಾರಿಯದ್ದು ಖತರ್‌ನಾಕ್ ಕ್ರಿಮಿನಲ್ ತಲೆ. ದೂರ ಶಿಕ್ಷಣ ವಿಭಾಗದಲ್ಲಿ ಆತ ದೋಚಿದ್ದ 2.34 ಕೋಟಿ ರೂಪಾಯಿಗಳ ಕರ್ಮಕಾಂಡದ ವಿರುದ್ಧ ವಿವಿ ಸಿಂಡಿಕೇಟ್ಟೇ ವಿಶೇಷ ನಿರ್ಣಯ ಕೈಗೊಂಡು ಕ್ರಿಮಿನಲ್ ಕೇಸು ದಾಖಲಿಸುವಂತೆ ಒತ್ತಾಯಿಸಿತ್ತು. ಈ ಬಗ್ಗೆ ಸಿಐಡಿ ತನಿಖೆಗೂ ಸಿಂಡಿಕೇಟ್ ಸಭೆ ಆಗ್ರಹಿಸಿತ್ತು. ಹೀಗಿದ್ದೂ ರಾಮಾಜೋಯಿಸ್-ಕೃ. ನರಹರಿ ಮೂಲಕ ಲಿಂಬಾವಳಿ ದಬಾವು ಮಾಡಿಸಿದ ಮೈಲಾರಿ ವಿವಿ ಸಿಂಡಿಕೇಟಿನ ನಿರ್ಣಯವನ್ನೇ ರದ್ದು ಮಾಡಿಸಿಬಿಟ್ಟ.


ಅಲ್ಲಿಗೆ ಮೈಲಾರಿಯ ದುರಾಚಾರಕ್ಕೆ ಆರೆಸ್ಸೆಸ್ ಸಾಥ್ ಕೊಟ್ಟಿದ್ದು ನಿಚ್ಚಳಗೊಂಡಾಗಿತ್ತು, ಸರ್ಕಾರದ ಈ ವಂಚನೆಯ ವಿರುದ್ಧ ವಿವಿ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯ ವಾಸುದೇವ ಮೂರ್ತಿ ಹೈಕೋರ್ಟ್ ಮೊರೆಹೊಕ್ಕು ಆತನ ಸಸ್ಪೆಂಡ್ ಆದೇಶವನ್ನು ಯಾವುದೇ ಕಾರಣಕ್ಕೂ ಹಿಂಪಡೆಯದಂತೆ ಮತ್ತು ದೋಚಿದ ದುಡ್ಡನ್ನು ವಸೂಲಿ ಮಾಡುವಂತೆ ರಿಟ್ ಹೋಗಿದ್ದು ಒಂದೆಡೆಯಾದರೆ ಮತ್ತೊಂದೆಡೆ ಹೈಕೋರ್ಟ್ ವಿಭಾಗೀಯ ಪೀಠವೇ ಈತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ತಾಕೀತು ಮಾಡಿ ತೀರ್ಪಿತ್ತಿತ್ತು. ಇದಕ್ಕೂ ಮುನ್ನ ರಾಜ್ಯಪಾಲರೇ ಮೈಲಾರಿ ಭಾನಗಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಕಿವಿಹಿಂಡಿದ್ದರು.

ದೋಚಿದ್ದು 2.34 ಕೋಟಿ. ಕ್ರಿಮಿನಲ್ ಕೇಸು ದಾಖಲಿಸುವಂತೆ ವಿವಿ ಸಿಂಡಿಕೇಟ್ಟೇ ನಿರ್ಣಯ ಕೈಗೊಂಡಿದೆ. ವಿವಿ ಆಡಳಿತಾಂಗವೇ ಈತನನ್ನು ಸಸ್ಪೆಂಡ್ ಮಾಡಿದೆ. ರಾಜ್ಯಪಾಲರೇ ಈತನ ವಿರುದ್ಧ ಕ್ರಮ ಜರುಗಿಸುವಂತೆ ಆದೇಶಿಸಿದ್ದಾಗ್ಯೂ ರಾಜ್ಯ ಹೈಕೋರ್ಟೇ ಈತನ ಅಕ್ರಮಗಳ ವಿರುದ್ಧ ಕ್ರಮಕ್ಕೆ ತೀರ್ಪಿತ್ತಾಗಲೂ ಮೈಲಾರಿ ಎಂಥಾ ಭಂಡನೆಂದರೆ ಹೈಕೋರ್ಟ್ ತೀರ್ಪಿಗೆ ಸುಪ್ರೀಂಕೋರ್ಟಿನಿಂದ ತಡೆ ತಂದಿದ್ದ!

ಇಷ್ಟೆಲ್ಲದರ ಹಿಂದಿದ್ದುದ್ದೇ ಸೋಕಾಲ್ಡ್ ನ್ಯಾಯವಾದಿ ರಾಮಾಜೋಯಿಸ್ ಮತ್ತು ಸ್ವಯಂಘೋಷಿತ ಶಿಕ್ಷಣ ಸೇವಕ ಕೃ. ನರಹರಿ!

ಈ ಇಬ್ಬರು ಆರೆಸ್ಸೆಸ್ ವರಿಷ್ಠರು ಮೈಲಾರಿಯ ಬೆನ್ನಿಗೆ ನಿಲ್ಲುವುದಕ್ಕೂ ಕಾರಣವಿದೆ. ಕೃ. ನರಹರಿಯನ್ನು ಒಂದಲ್ಲ ಎರಡು ಬಾರಿ ದುಬೈಗೆ ಕರೆದೊಯ್ದು ಮೈಲಾರಿ ಅಲ್ಲಿ ಏನೆಲ್ಲ ಸೇವೆ ಕಲ್ಪಿಸಿದನೋ ಗೊತ್ತಿಲ್ಲ. ಹಾಗೇ ರಾಮಾಜೋಯಿಸ್‌ಗೂ ಮೈಲಾರಿ ಅದೇನು ಸೇವೆ ಮಾಡಿದ್ದಾನೋ ಗೊತ್ತಿಲ್ಲ. ಸಾಕ್ಷಾತ್ ಶ್ರೀರಾಮಚಂದ್ರನ ಆದರ್ಶ ಪಾಲಕರಾದ ಈ ಇಬ್ಬರು ಚೆಡ್ಡಿ ವಿದ್ವಾಂಸರುಗಳಿಗೆ ತಾವು ಬೆಂಗಳೂರು ವಿವಿಗೆ ಮಾಡುತ್ತಿರುವ ಅಪಚಾರವೆಂಥದ್ದೆಂಬುದನ್ನು ತಿಳಿಹೇಳುವವರ್ಯಾರು? ಮೈಲಾರಿ ಸಲ್ಲಿಸುವ ಸೇವೆ ಮತ್ತು ಕಪ್ಪದ ಮುಂದೆ ಬೆಂವಿವಿ ಹಾಳಾದರೆಷ್ಟು ಎಕ್ಕುಟ್ಟಿ ಹೋದರೆಷ್ಟು?

ಅಸಹ್ಯದ ಪರಮಾವಧಿಯೆಂಬಂತೆ ಇದೇ ಹೊತ್ತಿಗೆ ಸಮ್ಮಿಶ್ರ ಸರ್ಕಾರ ಬಿದ್ದು ಅರೆಕಾಲಿಕ ಚುನಾವಣೆ ಬಂತಲ್ಲ, ಮೈಲಾರಿ ಎಂಥಾ ಮಾನಗೆಟ್ಟವನೆಂದರೆ ತನ್ನ ವಿವಿ ಹುದ್ದೆ ಪ್ರೊಫೆಸರ್‌ಗಿರಿಯೆಲ್ಲವನ್ನೂ ಬದಿಗೊತ್ತಿ ಬಿಜೆಪಿ ಸೇರಿಕೊಂಡ. ಏಕಾಏಕಿ ಪುಲಿಕೇಶಿನಗರದ ಅಧಿಕೃತ ಬಿಜೆಪಿ ಅಭ್ಯರ್ಥಿಯಾದ. ಅಲ್ಲಿ ಕಾಂಗ್ರೆಸ್ ನಾಯಕ ಕೆ.ಜೆ. ಜಾರ್ಜ್ ವಿರುದ್ಧ ಕೋಟಿಗಟ್ಟಲೆ ಸುರಿದ. ಮೈಲಾರಿ ಏನೇ ಲಗಾಟಿ ಹೊಡೆದರೂ 1 ಸಾವಿರಕ್ಕಿಂತ ಅಧಿಕ ಓಟು ಗಿಟ್ಟಲೇ ಇಲ್ಲ. ಸೋತು ಠೇವಣಿಯನ್ನೂ ಕಳಕೊಂಡ ಮೈಲಾರಿ ಇನ್ನು ವಿವಿಯತ್ತ ತಲೆಹಾಕಲಾರ ಎಂದೇ ಎಲ್ಲರೂ ನಿಟ್ಟುಸಿರಿಟ್ಟರು.


ಕೃ.ನರಹರಿ

ಒಂದೋ ಮೈಲಾರಿಗಾದರೂ ಮಾನವಿರಬೇಕು ಅಥವಾ ಸರ್ಕಾರಕ್ಕಾದರೂ ಮರ್ಯಾದೆಯಿರಬೇಕು. ಮೈಲಾರಪ್ಪನ ವಿಷಯದಲ್ಲಿ ಇಬ್ಬರೂ ಲಜ್ಜೆಗೆಟ್ಟರು. ಒಂದೆಡೆ ಬಿಜೆಪಿ ನಾಯಕನ ಗೆಟಪ್ಪು ಮತ್ತೊಂದೆಡೆ ವಿವಿ ಪ್ರೊಫೆಸರ್‌ಗಿರಿ ಎರಡನ್ನೂ ಒಟ್ಟೊಟ್ಟಿಗೆ ನಿಭಾಯಿಸಿದ ಮೈಲಾರಿ 2010 ರಲ್ಲಿ ಮತ್ತೆ ವಿವಿಗೆ ವಕ್ಕರಿಸಿಬಿಟ್ಟ. ಪ್ರಭುದೇವರ ಬದಲಿಗೆ ತಾನೇ ವಿವಿಯ ಉಪಕುಲಪತಿಯಾಗುವುದಕ್ಕೂ ಲಾಬಿ ಶುರುವಿಟ್ಟ. ಮೊದಲೇ ಕ್ರಿಮಿನಲ್ ಕೇಸು, ದೋಚಿದ ವಿವಿ ದುಡ್ಡಿಗೆ ಹೈಕೋರ್ಟ್ ನೀಡಿದ ತೀರ್ಪು ಎಲ್ಲಾ ಕಂಡ ರಾಜ್ಯಪಾಲ ಭಾರದ್ವಾಜ್ ಈತನನ್ನು ಉಗಿದಟ್ಟಿದ್ದಾರೆ. ಆದರೆ ಮೈಲಾರಿ ಶತಭಂಡ. ತನ್ನನ್ನು ಮೈಸೂರು ವಿವಿಗೆ ಕುಲಪ[ತಿ] ಮಾಡಿ ಎಂದು ಯಡ್ಡಿ ಮೇಲೆ ಇಲ್ಲದ ಒತ್ತಡ ತಂದ.

ಬಹುಶಃ ಆರೆಸ್ಸೆಸ್ ಒತ್ತಡಕ್ಕೆ ಮಣಿದು ಯಡ್ಡಿ ಕೂ[...] ಯಾಮಾರುತ್ತಿದ್ದರೋ ಏನೊ. ಅದೇ ಹೊತ್ತಿಗೆ ಮೈಲಾ[...] ಚಿಲ್ಲರೆ ಕೆಲಸವೊಂದಕ್ಕೆ ಕೈಯಿಟ್ಟು ಯಡವಟ್ಟು ಮಾ[...] ಕೊಂಡ. ಯಡ್ಡಿ ಮನೆಯಲ್ಲಿ ಏನೋ ಕೆಲಸಕ್ಕೆ ಬಂದವನ[...] ನಟಿಸಿ ತಾನು ಮುಖ್ಯಮಂತ್ರಿಗೆ ಪರಮಾಪ್ತನೆಂಬಂತೆ ಪೋಜ[...] ಕೊಟ್ಟು ಯಾರೋ ಮಾರ್ವಾಡಿಯೊಬ್ಬನಿಗೆ ಬಿಡಿಎ ಜಮೀನ[...] ಡೀನೋಟಿಫೈ ಮಾಡಿಸಿಕೊಡ್ತೀನಿ ಎಂದು ಲಕ್ಷಗಟ್ಟಲೇ ದುಡ್[...]ಕಿತ್ತಿದ್ದ. ಇದು ಯಡ್ಡಿಗೆ ಗೊತ್ತಾ[...] ಪೊಲೀಸ್ ಕರೆಸಿ 'ನಿನ್ನನ್ನು ಜೈಲಿ[...] ಹಾಕಿಸ್ತೀನಿ ಗೊತ್ತಾಯ್ತಾ? ಗೆ[ಟ್] ಔಟ್.....' ಎಂದು ಉಗಿದಟ್ಟಿದ್ದಾರೆ.

ಆದರೆ ಆರೆಸ್ಸೆಸ್ ಶ್ರೀರಕ್ಷೆ ಇದ[...] ಇತ್ತಲ್ಲ; ತನ್ನನ್ನು ಎಮ್ಮೆಲ್ಸಿ ಮಾಡಿ ಎಂದು ಒಂದೆಡೆ ಲಾಬಿಯಿಟ್ಟು ಮತ್ತೊಂದೆಡೆ ಕನಿಷ್ಠ ಲೋಕಸೇವಾ ಆಯೋಗದ ಸದಸ್ಯನನ್ನಾಗಿಯಾದ್ರೂ ನೇಮಿಸಿ ಎಂದು ಮತ್ತೆಮತ್ತೆ ಬಿಜೆಪಿ ವರಿಷ್ಠರನ್ನು ಪೀಡಿಸುತ್ತಲೇ ಇದ್ದ. ಸಮಾಧಾನಕರ ಸಂಗತಿಯೆಂದರೆ ಮೈಲಾರಿಯ ಇಂಥ ದುಸ್ಸಾಹಸಕ್ಕೆ ಪತ್ರಿಕೆಗಳು ಛೀಮಾರಿ ಹಾಕುತ್ತಲೇ ಬಂದದ್ದು!

ಇಷ್ಟಾಗ್ಯೂ ಬೆಂಗಳೂರು ವಿವಿಯ ರಿಜಿಸ್ಟ್ರಾರ್‌ಗಿರಿಗೆ ವಕ್ಕರಿಸಿದ್ದಾನೆಂದರೆ ಅದು ಆರೆಸ್ಸೆಸ್ ಅಧಃಪತನವಾ, ಬಿಜೆಪಿಯ ಆತ್ಮವಂಚನೆಯಾ ಅಥವಾ ಬೆಂವಿವಿಯ ದುರಂತವಾ? ಇಲ್ಲಿಗೆ ಆರು ತಿಂಗಳಿಂದಲೇ ರಿಜಿಸ್ಟ್ರಾರ್ ಗಾದಿಗೆ ಲಾಬಿ ಶುರುಹಚ್ಚಿಕೊಂಡ ಮೈಲಾರಿ ಮೊದಲು ನರಹರಿಯ ಮೂಲಕ ಮಂತ್ರಿ ಆಚಾರ್ಯರಿಗೆ ತಲೆತಿಕ್ಕಿ[...] ಆನಂತರ ರಾಮಾಜೋಯಿಸರನ್ನು ಹಿಡಿದು ಆರೆಸ್ಸೆಸ್ ಅಧಿಪತಿ ಮೈ.ಚ.ಜಯದೇವನನ್ನು ಬುಟ್ಟಿಗೆ ಹಾಕಿಕೊಂ[ಡ]. ಈಗ ಜಯದೇವ ಮಂತ್ರಿ ಆಚಾರ್ಯರಿಗೆ ಕಟ್ಟಪ್ಪಣೆ ಮಾಡಿ ಮೈಲಾರಿಯನ್ನು ರಿಜಿಸ್ಟ್ರಾರ್ ಗಾದಿಗೆ ತಂದಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆದರದ್ದೇ ಆದ ಘನತೆಯಿದೆ. ಅಲ್ಲಿನ ಪ್ರತಿ ಹುದ್ದೆಗೂ ನಿರ್ದಿಷ್ಟ ಯೋಗ್ಯತೆಯ ಮಾನದಂಡವಿದೆ. ವಿದ್ವತಿಗೂ ಪುಢಾರಿಗಿರಿಗೂ ವ್ಯತ್ಯಾಸವಿದೆ. ಯಾರದೋ ಕೃತಿಚೌ[ರ್ಯ] ಮಾಡಿ ಸಿಕ್ಕುಬಿದ್ದವನನ್ನು, ಕೋಟಿಗಟ್ಟಲೇ ದುಡ್ಡು ದೋ[ಚಿ] ಶಿಕ್ಷೆಗೆ ಗುರಿಯಾದವನನ್ನು, ಒಂದಲ್ಲ ಹತ್ತಾರು ಕ್ರಿಮಿನಲ್ ಕೇಸುಗಳಲ್ಲಿ ಸಿಲುಕಿದವನನ್ನು ಜೈಲಿಗೆ ಹಾಕಬೇಕಾದ ಸರ್ಕಾರವೇ ಬೆಂಗಳೂರು ವಿವಿಯಂಥ ವಿದ್ಯಾಕೇಂದ್ರವೊಂದರ ರಿಜಿಸ್ಟ್ರಾರ್ ಹುದ್ದೆಗೆ ನೇಮಿಸುತ್ತದೆಯೆಂದರೆ ಬೆಂಗಳೂರು ವಿಶ್ವವಿದ್ಯಾಲಯವೆಂಬುದು ಹೇಗೆ ತಾನೇ ವಿದ್ಯಾಕೇಂದ್ರವಾಗಿ ಉಳಿಯಲು ಸಾಧ್ಯ?


ದರೋಡೆಕೋರನನ್ನು ಜೈಲಿಗೆ ದಬ್ಬುವ ಬದ[ಲು] ದೇವಸ್ಥಾನದ ಕಾವಲಿಗಿಟ್ಟಂತಾಗಿದೆ. ಬೆಂಗಳೂರು ವಿವಿ[ಯ] ದುರ್ಗತಿ. ಭೋಗಸ್ ಅಂಕಪಟ್ಟಿಯ ಸೃಷ್ಟಿಕರ್ತನೇ ಅ[...] ಮುಖ್ಯಸ್ಥನಾದನೆಂದರೆ ಅಲ್ಲಿನ ಡಿಗ್ರಿ ಸರ್ಟಿಫಿಕೇಟುಗಳಿಗ[ೆ] ಏನು ಬೆಲೆಯಿದೆ? ಈ ರೀತಿ ವಿವಿಯ ಮಾನಕಳೆಯು[ವ] ಬದಲು ಅದನ್ನು ಮುಚ್ಚುವುದೇ ಲೇಸಲ್ಲವೇ?

ಆರೆಸ್ಸೆಸ್ ನಾಯಕರ ದುರಾಚಾರಕ್ಕೆ ಜ್ಞಾನಭಾರತಿಯೆಂಬುದು ಬಲಿಪಶುವಷ್ಟೆ.

• ವರದಿಗಾ[ರ]

ಆರೆಸ್ಸೆಸ್ ಕಬಳಿಸಿದ ಸ್ಲಂಬೋರ್ಡ್ ಆಸ್ತಿಗೆ ಈತನದ್ದೂ ಕಾಣಿಕೆ

ಮೈಲಾರಿಯ ಕುಖ್ಯಾತಿ, ಆತನ ಮೇಲಿರುವ ಕ್ರಿಮಿನಲ್ ಕೇಸುಗಳು, ಆತನ ವಿರುದ್ಧ ರಾಜ್ಯಪಾಲರ ಆದೇಶ, ಈತನ ಭ್ರಷ್ಟಾಚಾರದ ವಿರುದ್ಧ ಹೈಕೋರ್ಟ್ ತೀರ್ಪು ಎಲ್ಲ ಗೊತ್ತಿದ್ದೂ ಉನ್ನತ ಶಿಕ್ಷಣ ಮಂತ್ರಿ ಆಚಾರ್ಯ ಹಠಕ್ಕೆ ಬಿದ್ದು ರಿಜಿಸ್ಟ್ರಾರ್ ಹುದ್ದೆಗೆ ತರುವುದಕ್ಕೆ ಇನ್ನೂ ಒಂದು ಕಾರಣವಿದೆ.



ವಿ.ಎಸ್ ಆಚಾರ್ಯ

ಅದು ಮೈಲಾರಪ್ಪನ ಆರೆಸ್ಸೆಸ್ ಸೇವೆ. ಸದ್ಯ ರಾಜ್‌ಕುಮಾರ್ ಸಮಾಧಿ ಪಕ್ಕದ ಲಕ್ಷ್ಮಿದೇವಿ ನಗರದ ಮೂರೆಕರೆಯ ಸ್ಲಂ ಬೋರ್ಡ್ ಜಮೀನನ್ನು ಆರೆಸ್ಸೆಸ್ ಕಬಳಿಸಿದ್ದಕ್ಕೆ, ಕಾರಣಕರ್ತನೇ ಮೈಲಾರಿ. ಲಕ್ಷ್ಮಿದೇವಿನಗರ ಸ್ಲಮ್ಮಿಗೆ ಹೊಂದಿಕೊಂಡಂತೆ ಮೂರೆಕರೆ ಕೊಳಚೆ ನಿರ್ಮೂಲನ ಮಂಡಳಿಯ ಜಾಗವಿತ್ತು, ಅಲ್ಲಿ ಬಡವರಿಗೆಂದು ಮನೆಗಳನ್ನು ನಿರ್ಮಿಸಲು ಸ್ಲಂ ಬೋರ್ಡ್ ನಿರ್ಣಯಿಸಿತ್ತು. ಅದ್ಯಾವತ್ತು ಈ ಸೊತ್ತಿನ ಮೇಲೆ ಆರೆಸ್ಸೆಸ್ ಕಣ್ಣು ಬಿತ್ತೋ, ಬಹುಶಃ ಇದನ್ನು ಆರೆಸ್ಸೆಸ್ ಗಮನಕ್ಕೆ ತಂದು, ಸ್ಲಂ ಬೋರ್ಡಿನಲ್ಲಿ ನಿರ್ಣಯವನ್ನೂ ಮಾಡಿಸಿ, ಗುತ್ತಿಗೆಗೆ ಕೊಟ್ಟಂತೆ ದಾಖಲೆ ಸೃಷ್ಟಿಸಿ ಕಬಳಿಸುವುದರಲ್ಲಿ ಮೈಲಾರಿಯೇ ಮುಖ್ಯ ಪಾತ್ರ ವಹಿಸಿದ್ದಾನೆ.

ಹೀಗೆ ಆರೆಸ್ಸೆಸ್ ಕಬಳಿಸಿದ ಈ ಮೂರೆಕರೆಯಲ್ಲಿ ಪ್ರತಿನಿತ್ಯ ಆರೆಸ್ಸೆಸ್ ಬೈಠಕ್ ಶುರುವಾಗಿದೆ. ಎಲ್ಲೆಲ್ಲಿಂದಲೋ ಬಂದ ಚೆಡ್ಡಿಧಾರಿಗಳು ದಿನ ಬೆಳಗ್ಗಾದರೆ ಲಾಠಿ ಹಿಡಿದು ಕವಾಯಿತು ನಡೆಸುವ ದೃಶ್ಯ ಈ ಸುತ್ತಮುತ್ತಲ ಪರಿಸರವನ್ನೇ ಬದಲಾಯಿಸಿದೆ. ಇಂಥ ಆರೆಸ್ಸೆಸ್ ಸ್ವಯಂ ಸೇವಕರಿಗೆ ಊಟ ವಸತಿ ಸಕಲವನ್ನೂ ಪೂರೈಸಲು ಬೃಹತ್ ಕಟ್ಟಡವೊಂದು ರಾತ್ರೋರಾತ್ರಿ ತಲೆ ಎತ್ತಿದೆ. ಅದು ಒಂದೂವರೆ ಕೋಟಿ ರೂಪಾಯಿಗಳ ಭರ್ಜರಿ ಕಟ್ಟಡ. ಇಷ್ಟೆಲ್ಲಾ ದುಡ್ಡು ಹಾಕಿ ಆ ಕಟ್ಟಡವನ್ನು ಕಟ್ಟಿಸಿ ಕೊಟ್ಟಿದ್ದೇ ಮೈಲಾರಿಯಂತೆ. ಸಾಲದ್ದಕ್ಕೆ ಅಲ್ಲಿನ ಸ್ವಯಂಸೇವಕರ ಪ್ರತಿನಿತ್ಯದ ಊಟದ ವ್ಯವಸ್ಥೆಯೂ ಈತನದೇ ಅಂತೆ.

ಸ್ಲಂ ಬೋರ್ಡ್ ಸೊತ್ತನ್ನು ಲಪಟಾಯಿಸಿಕೊಟ್ಟದ್ದೂ ಅಲ್ಲದೆ, ಕಟ್ಟಡವನ್ನೂ ಕಟ್ಟಿಸಿಕೊಟ್ಟು ಪ್ರತಿನಿತ್ಯದ ರೇಷನ್ನಿಗೂ ವ್ಯವಸ್ಥೆ ಮಾಡಿದ ಮೈಲಾರಿಗೆ ಆರೆಸ್ಸೆಸ್ ತನ್ನ ಋಣ ತೀರಿಸಬೇಕಲ್ಲ, ಅದಕ್ಕೆ ಬೆಂಗಳೂರು ವಿವಿಯನ್ನು ಬಲಿಕೊಟ್ಟಿದೆ.

ಭ್ರಷ್ಟ ಇಂಜಿನಿಯರ್ ದಯಾನಂದ್ ಮಾಲಿನ್ಯ ಮಂಡಳಿಗೆ ಈತನೇ ರೋಗಾಣು



ರೋಗದ ಕುದುರೆಯನ್ನು ರೇಸಿಗೆ ಬಿಟ್ಟು ...ಯನ್ನು ಹಣೆದಂತಾಗಿದೆ ಮಾಲಿನ್ಯ ನಿಯಂತ್ರಣ ಮಂಡಳಿಯ ದುರ್ಗತಿ.

ಸದಾಶಿವಯ್ಯ ಎಂಬ ...ಷ್ಟುರಿ ಅಧ್ಯಕ್ಷರಾಗಿ ಬಂದ ಮೇಲೆ ಮೊದಲು ರಾಜ್ಯದ ಪರಿಸರ ಕಾಪಾಡಬೇಕಾ ಅಥವಾ ಮಂಡಳಿಯ ಮಾಲಿನ್ಯವನ್ನು ಮೊದಲು ನಿಯಂತ್ರಿಸಬೇಕಾ ಎಂಬುದೇ ಯಮ ಪ್ರಶ್ನೆಯಾದರೆ ಇನ್ನು ಕೆರೆ, ಕಟ್ಟೆ, ...ಡು, ಗಾಳಿ, ಜನಾರೋಗ್ಯದ ಸ್ಥಿತಿಯೇನು?

ಭ್ರಷ್ಟ ಇಂಜಿನಿಯರ್‌ಗಳು, ಸಣ್ಣಪುಟ್ಟ ಸಮಸ್ಯೆಗೂ ಲಕ್ಷದ ಲೆಕ್ಕದಲ್ಲಿ ಲಂಚಕ್ಕೆ ಕೈಚಾಚುವ ಅಧಿಕಾರಿಗಳು, ಸದಸ್ಯ ಕಾರ್ಯದರ್ಶಿಯ ಕಿತಾಪತಿ ಮುಖ್ಯ ಲೆಕ್ಕಾಧಿಕಾರಿಯ ಹಾವಳಿ ಮತ್ತು ಮುಖ್ಯಮಂತ್ರಿ ಕಚೇರಿಯ ಮರ್ಜಿಯಿಂದಾಗಿ ರಾಜ್ಯದ ಮಾಲಿನ್ಯ ನಿಯಂತ್ರಿಸಬೇಕಿದ್ದ ಮಂಡಳಿಯಲ್ಲಿ ತಮ್ಮ ಕುರ್ಚಿ ಕೆಳಗಿನ ...ಬು-ಕೀಟಗಳನ್ನು ನಿವಾರಿಸುವುದೇ ಅಧ್ಯಕ್ಷ ಸದಾಶಿವಯ್ಯನವರಿಗೆ ...ಪ್ರಯವಾಗಿಬಿಟ್ಟಿದೆ. ಅದ್ಯಾವ ಘಳಿಗೆಯಲ್ಲಿ ಎಸ್.ಆರ್.ದಯಾನಂದ್ ಎಂಬ ಸಹಾಯಕ ಕಾರ್ಯಪಾಲಕ ಅಭಿಯಂತರ ಅರ್ಥಾತ್ ...ಣಿಯನ್ನು ಯಾವುದೇ ಕಾರಣಕ್ಕೂ ಇಲ್ಲಿಂದ ಹೊರಹಾಕಬೇಡಿ ಎಂದು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರಿಗೆ ಆಪ್ತ ಕಾರ್ಯದರ್ಶಿಯಾಗಿದ್ದ ...ದಯಾಶಂಕರ್ ಸಾಹೇಬರ ...ದೇಶ ಬಂತೋ ಆವತ್ತಿನಿಂದ ಮಾಲಿನ್ಯ ನಿಯಂತ್ರಣ ಮಂಡಳಿಯೆಂಬುದು ಅಕ್ಷರಶಃ ರೋಗದ ಗೂಡಾಗಿಬಿಟ್ಟಿದೆ.


ಸದ್ಯ ಇಡೀ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಈ ದಯಾನಂದ್ ಎಂಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನೇ ನಿಯಂತ್ರಿಸುತ್ತಿದ್ದಾನಾ ಅಥವಾ ಈತನನ್ನು ಹೊರಹಾಕಲಾಗದೆ ಇಡೀ ಮಂಡಳಿಯೇ ಅಸಹಾಯಕ ಸ್ಥಿತಿಗೆ ಬಿದ್ದಿದೆಯಾ ಗೊತ್ತಾಗುತ್ತಿಲ್ಲ. ತಾನು ಮುಖ್ಯಮಂತ್ರಿ ಯಡ್ಡಿಗೆ ಆಪ್ತ ಕಾರ್ಯದರ್ಶಿಯಾಗಿದ್ದ ಹಿರಿಯ ಐಎಎಸ್ ದಯಾಶಂಕರ್‌ಗೆ ಸಮೀಪದ ಸಂಬಂಧಿಯೆಂದೂ ಇನ್ನಾರೋ ಲಿಂಗಾಯತ ಮಠಾಧಿಪತಿಗೆ ಅಗದಿ ಬೇಕಾದವನೆಂದೂ ಡಂಗುರ ಹೊಡಕೊಂಡೇ ಕಳೆದ ಏಳು ವರ್ಷಗಳಿಂದ ಮಂಡಳಿಯನ್ನು ಎಕ್ಕುಡಿಸುತ್ತಿದ್ದಾನೆ ದಯಾನಂದ್.

ಸದ್ಯ ಇಡೀ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಈ ದಯಾನಂದ್ ಎಂಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನೇ ನಿಯಂತ್ರಿಸುತ್ತಿದ್ದಾನಾ ಅಥವಾ ಈತನನ್ನು ಹೊರಹಾಕಲಾಗದೆ ಇಡೀ ಮಂಡಳಿಯೇ ಅಸಹಾಯಕ ಸ್ಥಿತಿಗೆ ಬಿದ್ದಿದೆಯಾ ಗೊತ್ತಾಗುತ್ತಿಲ್ಲ. ತಾನು ಮುಖ್ಯಮಂತ್ರಿ ಯಡ್ಡಿಗೆ ಆಪ್ತ ಕಾರ್ಯದರ್ಶಿಯಾಗಿದ್ದ ಹಿರಿಯ ಐಎಎಸ್ ದಯಾಶಂಕರ್‌ಗೆ ಸಮೀಪದ ಸಂಬಂಧಿಯೆಂದೂ, ಇನ್ನಾರೋ ಲಿಂಗಾಯತ ಮಠಾಧಿಪತಿಗೆ ಅಗದಿ ಬೇಕಾದವನೆಂದೂ ಡಂಗುರ ಹೊಡಕೊಂಡೇ ಕಳೆದ ಏಳು ವರ್ಷಗಳಿಂದ ಮಂಡಳಿಯನ್ನು ಎಕ್ಕುಡಿಸುತ್ತಿದ್ದಾನೆ ದಯಾನಂದ್.

ಈತ ಇಲ್ಲಿಗೆ ವಕ್ಕರಿಸಿದ್ದು ಅದಕ್ಕೂ ಹಿಂದಿನ ಈತನ ಚರಿತ್ರೆ ಎಲ್ಲವೂ ಭ್ರಷ್ಟ ಪುರಾಣವೊಂದಕ್ಕೆ ಸಮೃದ್ಧ ಸರಕಿನಂತಿದೆ. ಮೂಲತಃ ಲೋಕೋಪಯೋಗಿ ಇಲಾಖೆಯ ಇಂಜಿನಿಯರಾದ ದಯಾನಂದ್ ಎರವಲು ಸೇವೆಯ ಲಾಭ ಪಡೆದು ಕೆಎಸ್‌ಎಸ್‌ಐಡಿಸಿ ಅಂದರೆ ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಬಂದ. ಅಲ್ಲಿ ಜಿಗಣಿ ಇಂಡಸ್ಟ್ರಿಯಲ್ ಏರಿಯಾದ ಕಟ್ಟಡ ಕಾಮಗಾರಿಯಲ್ಲಿ ಸಿಮೆಂಟು, ಇಟ್ಟಿಗೆ, ಜಲ್ಲಿಯೆಲ್ಲವನ್ನೂ ಕದ್ದು ಸಿಕ್ಕಿಬಿದ್ದ; ಇನ್ನೇನು ಜೈಲು ಪಾಲಾಗುವುದು ಗ್ಯಾರಂಟಿ ಎನ್ನುವಾಗಲೇ ಉಪಾಯವಾಗಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮತ್ತೆ ಎರವಲು ಆಧಾರದ ಮೇಲೆ ವಕ್ಕರಿಸಿದ.

ಕಾನೂನುರೀತ್ಯ ಯಾರೇ ಐದು ವರ್ಷ ಎರವಲು ಸೇವೆ ಮುಗಿಸಿದ ಮೇಲೆ ಕನಿಷ್ಠ ಎರಡು ವರ್ಷವಾದರೂ ತನ್ನ ಮಾತೃ ಇಲಾಖೆಗೆ ಸೇವೆ ಸಲ್ಲಿಸಲೇಬೇಕು. ಎರವಲು ಸೇವೆಗೆ ಬಂದಲಿಂದಲೇ ಮತ್ತೊಂದೆಡೆಗೆ ಎರವಲು ಬರುವಂತಿಲ್ಲ, ಅದೂ ಐದು ವರ್ಷದ ಮೇಲೆ ಎಲ್ಲೂ ಎರವಲು ನಿಲ್ಲುವಂತಿಲ್ಲ, ಆದರೆ ದಯಾನಂದನ ತಾಕತ್ತಿಗೆ ಈ ಯಾವ ಕಾಯ್ದೆ ಕಾನೂನುಗಳೂ ಲೆಕ್ಕಕ್ಕಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಯ ಬಿಲ್ಡಿಂಗ್ ಸೆಕ್ಷನ್ ಅಂದರೆ ಅದು ಚಿನ್ನದ ಮೊಟ್ಟೆಯಿಡುವ ಕೋಳಿಯಿದ್ದಂತೆ. ರಾಜ್ಯಾದ್ಯಂತ ಇರುವ ಮಂಡಳಿಯ ಕಟ್ಟಡಗಳು ಅದರ ದುರಸ್ತಿ, ಬಣ್ಣ, ಎಲೆಕ್ಟ್ರಿಕಲ್ ಕಾಂಟ್ರ್ಯಾಕ್ಟ್, ಅದಕ್ಕೆ ಹೊಂದಿಕೊಂಡಂತೆ ರಸ್ತೆ, ಮೋರಿ ಎಲ್ಲವೂ ಒಳಪಡುತ್ತದೆ. ಮೊದಲೇ ನಕಲಿ ಬಿಲ್, ಕಳ್ಳಕಾಮಗಾರಿಯಲ್ಲಿ ಪಳಗಿದ ದಯಾನಂದ್‌ಗೆ ಇದು ಹೇಳಿ ಮಾಡಿಸಿದಂತಿತ್ತು.

ಸಾಣೆಗೊರವನಹಳ್ಳಿಯಲ್ಲಿ ಇತ್ತೀಚೆಗಷ್ಟೇ 'ನಿಸರ್ಗಭವನ' ವನ್ನು ನಿರ್ಮಿಸಲಾಯ್ತು, ಅದರ ಎಲೆಕ್ಟ್ರಿಕಲ್ ಕಾಂಟ್ರ್ಯಾಕ್ಟ್ ಅನ್ನು ಇ-ಟೆಂಡರಿನಲ್ಲೇ ನಡೆಸಬೇಕು. ದಯಾನಂದ್ ಚಾಳಿಯೆಂದರೆ ಬಹುತೇಕ ಕಾಂಟ್ರ್ಯಾಕ್ಟ್‌ಗಳನ್ನೆಲ್ಲ ಆತ ತಾನೇ ಬೇನಾಮಿಯಾಗಿ ನಿಭಾಯಿಸುತ್ತಾನೆ. ಅದಕ್ಕೆಂದೇ ಖದೀಮ ಕಂಟ್ರ್ಯಾಕ್ಟರುಗಳ ಶಿಷ್ಯ ವೃಂದವೂ ಇದೆ. ಈ ಪೈಕಿ ರೇಣುಕಾಪ್ರಸಾದ್, ತ್ರಿಯಾಂಬಿಕಾ ಮತ್ತು ನಟರಾಜ್ ಎಂಬುವವರು ಈತನ ಸಿವಿಲ್ ಕಾಂಟ್ರ್ಯಾಕ್ಟ್ ಬೇನಾಮಿಗಳಾದರೆ ಎಲೆಕ್ಟ್ರಿಕಲ್ಸ್‌ಗೆಂದೇ ರಾಜಶೇಖರ್, ಶಿವಕುಮಾರ್ ಮತ್ತು ಸುರೇಶ್ ಎಂಬ ಖತರ್‌ನಾಕ್ ಕಂಟ್ರ್ಯಾಕ್ಟರುಗಳಿದ್ದಾರೆ. ಇಡೀ ಮಂಡಳಿಯಲ್ಲಿ ಏನೇ ಕಾಮಗಾರಿಗಳಾದರೂ ಇವರ ಮಧ್ಯೆಯೇ ಹಂಚಿಕೆಯಾಗುತ್ತದೆ ಮತ್ತು ಕನಿಷ್ಠ ಇಪ್ಪತ್ತು ಪರ್ಸೆಂಟ್ ಕಮೀಷನ್ ಬರಲೇಬೇಕು. ಕಾನೂನು ಪ್ರಕಾರ ಇ-ಟೆಂಡರಿಂಗ್ ನಡೆದರೆ ಇವರ್‍ಯಾರಿಗೂ ಕಾಂಟ್ರ್ಯಾಕ್ಟ್ ಸಿಗುವಂತಿಲ್ಲ.



ಇಲ್ಲಿ ದಯಾನಂದ್ ಎಂಥಾ ತಲೆ ಓಡಿಸುತ್ತಾನೆಂದರೆ ಕಾಮಗಾರಿಯ ಮೊತ್ತ ಎಷ್ಟೇ ಆಗಿರಲಿ; ಅದನ್ನು ತಲಾ ಐದು ಲಕ್ಷದ ಹಲವಾರು ಪೀಸ್ ವರ್ಕ್‌ಗಳನ್ನಾಗಿ ವಿಂಗಡಿಸುತ್ತಾನೆ. ಟೆಂಡರಿಂಗ್, ಹರಾಜು, ರೂಲ್ಸು ಯಾವುದನ್ನೂ ಲೆಕ್ಕಿಸದೇ ತನಗೆ ಬೇಕು ಬೇಕಾದವರಿಗೆ ಪೀಸ್ ವರ್ಕ್ ಆಧಾರದ ಮೇಲೆ ಹಂಚಿಬಿಡುತ್ತಾನೆ. ಕೆಲವನ್ನು ತಾನು ಬೇನಾಮಿಯಾಗಿ ಮಾಡಿ ಮಿಕ್ಕದ್ದಕ್ಕೆ 20 ಪರ್ಸೆಂಟ್ ಲಂಚ ತಿಂದು ಅಷ್ಟೂ ಮೊತ್ತವನ್ನು ನೆಕ್ಕಿಬಿಡುತ್ತಾನೆ. ಸಾಣೆಗೊರವನಹಳ್ಳಿಯ ನಿಸರ್ಗ ಭವನದ ಇಡೀ ಎಲೆಕ್ಟ್ರಿಕಲ್ ಗುತ್ತಿಗೆ ತನ್ನ ಬೇನಾಮಿ ಸುರೇಶನಿಗೆ ಸಿಗಲಿಲ್ಲ ಎಂಬ ಒಂದೇ ಕಾರಣಕ್ಕೆ ಇಡೀ ಟೆಂಡರ್ ಪ್ರಕ್ರಿಯೆಯನ್ನೇ ವಜಾಗೊಳಿಸಿಬಿಟ್ಟ. ಕ್ರಮೇಣ ಅದನ್ನೇ ಪೀಸು ವರ್ಕ್‌ಗಳಾಗಿ ವಿಂಗಡಿಸಿ ಲಕ್ಷಾಂತರ ರೂ.ಗಳ ಮಂಡಳಿ ಮೊತ್ತಕ್ಕೊಂದು ಗತಿ ಕಾಣಿಸಿದ.

ಚರ್ಚ್‌ಸ್ಟ್ರೀಟ್‌ನ 'ಪರಿಸರ ಭವನ'ದ ಎಲೆಕ್ಟ್ರಿಕಲ್ಸ್ ಟೆಂಡರಿಂಗ್ ವಿಷಯದಲ್ಲೂ ತನ್ನ ಬೇನಾಮಿಗಳ ಪೈಕಿ ಸುರೇಶ್, ರಾಜಶೇಖರ್ ಮತ್ತು ಶಿವಕುಮಾರ್‌ಗೆ ಕಂಟ್ರ್ಯಾಕ್ಟ್ ಸಿಗಲಿಲ್ಲವೆಂದು ಅದನ್ನೂ ರದ್ದುಪಡಿಸಿ ಮತ್ತೆ ಪೀಸ್ ವರ್ಕ್ ಮಾಡಿಸಿ ದುಡ್ಡು ದೋಚಿಬಿಟ್ಟ.

ಪೀಣ್ಯದ 'ಏಕೋ ಪಾರ್ಕ್'ನ ಗಾರ್ಡನ್ ಟೆಂಡರ್ ತನ್ನ ಬೇನಾಮಿ ಮಲ್ಲಿಕಾರ್ಜುನನಿಗೆ ಸಿಗಲಿಲ್ಲವೆಂದು ಇಡೀ ಟೆಂಡರಿಂಗ್ ರದ್ದುಪಡಿಸಿದ. ಎಲೆಕ್ಟ್ರಿಕಲ್ ವೈರ್‌ಮನ್ ಲೈಸೆನ್ಸೇ ಇಲ್ಲದೆ ಚರ್ಚ್‌ರಸ್ತೆಯ ಪರಿಸರಭವನ ಮತ್ತು ಸಾಣೆಗೊರವನಹಳ್ಳಿ ನಿಸರ್ಗ ಭವನದ ವಿದ್ಯುತ್ ನಿರ್ವಹಣೆಯನ್ನು ಗುರುರಾಘವೇಂದ್ರ ಎಲೆಕ್ಟ್ರಿಕಲ್ ಮತ್ತು ಎಸ್.ಎಂ.ಎಲೆಕ್ಟ್ರಿಕಲ್ ಹೆಸರಲ್ಲಿ ತಾನೇ ಬಿಲ್ಲು ದೋಚಿದ. ಸಿವಿಲ್ ಕಂಟ್ರ್ಯಾಕ್ಟರ್‌ಗಳಾದ ರೇಣುಕಾಪ್ರಸಾದ್, ನಟರಾಜ್ ಮತ್ತು ತ್ರಿಯಾಂಬಿಕಾ ಹೆಸರಲ್ಲಿ ಕಳ್ಳಕಾಮಗಾರಿಗೆ ಕಳ್ಳಬಿಲ್ಲು ಹಾಕಿ, ನುಂಗಿದ ನಿಸರ್ಗ ಭವನಕ್ಕೆ ಬಣ್ಣವನ್ನು ಬಳಿಯದೇ ಬಣ್ಣದ ಬಿಲ್ಲನ್ನು ಸಿಕ್ಕಿದ. ಮೊನಾಲಿಸಾ ಕನ್ಸಲ್ಟೆಂಟ್‌ನ ದಯಾನಿಧಿ ಮೂಲಕ ಮಂಡಳಿಯ ದುಡ್ಡನನ್ನು ಮುಂಡಾಯಿಸಿದ. ಲಿಂಗಯ್ಯ ಎಂಬ ತನ್ನ ಚೇಲಾನನ್ನು ಯಾವ ಅರ್ಹತೆಯೂ ಇಲ್ಲದೆ ಡಾಟಾ ಎಂಟ್ರಿ ಆಪರೇಟರ್ ಮಾಡಿ ಸಂಬಳದ ಹೆಸರಲ್ಲೂ ಸಾಕಷ್ಟು ತಿಂದ. ತನ್ನ ಕಳ್ಳಬಿಲ್ಲು ದಂಧೆಗೆ ತಡೆಯಾಗದಿರಲೆಂದು ಮಂಡಳಿಗೆ ಯಾರೇ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಸಿಸ್ಟೆಂಟ್ ಇಂಜಿನಿಯರ್‌ಗಳು ನೇಮಕವಾಗದ ಹಾಗೆ ನೋಡಿಕೊಂಡ. ತನ್ನ ಕಳ್ಳಬಿಲ್ಲು ದಂಧೆ ವಿರುದ್ಧ ಬಂಡಿಗಟ್ಟಲೇ ದೂರುಗಳಿದ್ದರೂ ಅದ್ಯಾವುದಕ್ಕೂ ಕ್ರಮ ಕೈಗೊಳ್ಳದ ಹಾಗೆ ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಕೃಷ್ಣ ಪಾಲೇಮಾರ್‌ಗೂ ತಿನ್ನಿಸಿದ.

ವಿಚಿತ್ರವೆಂದರೆ ದಯಾನಂದ್ ಜಾಗಕ್ಕೆಂದೇ ವೀರ ರಾಘಲು ಎಂಬ ಇಂಜಿನಿಯರ್‌ನನ್ನು ಇಲ್ಲಿಗೆ ವರ್ಷದ ಹಿಂದೆ ಸರ್ಕಾರ ನೇಮಿಸಿತು. ಆ ಪ್ರಕಾರ ದಯಾನಂದ್ ತನ್ನ ಮಾತೃ ಇಲಾಖೆಗೆ ಹೋಗಬೇಕು ಮತ್ತು ವೀರ ರಾಜುಲುಗೆ ಚಾರ್ಜ್ ವಹಿಸಿಕೊಡಬೇಕು. ಆದರೆ ದಯಾನಂದ್ ತಾಕತ್ತು ಎಂಥಾದ್ದೆಂದರೆ ಬಂದ ಇಂಜಿನಿಯರ್ ವೀರರಾಜುಗೆ ಯಾವುದೇ ಕೆಲಸ ವಹಿಸದೇ ಚಾರ್ಜನ್ನು ನೀಡದೆ ವ್ಯರ್ಥ ಕೂರಿಸಿ ಮಂಡಳಿ ಬಿಟ್ಟಿ ಸಂಬಳ ನೀಡುತ್ತಿದೆ. ಇದೊಂದೇ ಬಾಬತ್ತಿಗೆಂದು ಮಂಡಳಿಯ ಲಕ್ಷಾಂತರ ರೂಪಾಯಿ ಪೋಲಾಗಿದೆ.

ತನ್ನ ಮೇಲ್ಪಟ್ಟು ಇಂಜಿನಿಯರ್ ಹುದ್ದೆಗಳಿದ್ದರೂ ಅದಕ್ಕೆ ಯಾರೊಬ್ಬರೂ ನೇಮಕಗೊಳ್ಳದ ಹಾಗೆ ತನ್ನ ಜಾಗಕ್ಕೆ ಬೇರೊಬ್ಬರು ಬಂದರೂ ತಾನು ಜಾಗ ಖಾಲಿ ಮಾಡದೆ ಅವರೇ ಬಿಟ್ಟಿ ಸಂಬಳಕ್ಕಿರುವಂತೆ, ಕೋಟಿಗಟ್ಟಲೇ ದೋಚಿಯೂ ಶಿಕ್ಷೆಯಿಲ್ಲದ ಹಾಗೆ, ಅವಧಿ ಮುಗಿದರೂ ಎತ್ತಂಗಡಿಯಾಗದಂತೆ ಕೆಲಸಕ್ಕೆ ಬರದೆಯೂ ಹಾಜರಿ ಹಾಕುವ ಹಾಗೆ, ಇಡೀ ಮಂಡಳಿಯನ್ನೇ ದಯಾನಂದ್ ನಿಯಂತ್ರಿಸುತ್ತಾನೆಂದರೆ- ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಸ್ತಿತ್ವಕ್ಕೆ ಏನು ಅರ್ಥವಿದೆ?


ಮಂತ್ರಿ ಕೃಷ್ಣಪಾಲೇಮಾರ್ ಯಾವ ಮುಖ ಹೊತ್ತು ಪರಿಸರ ಸಂರಕ್ಷಣೆಯ ಭಾಷಣ ಬಿಗಿಯುತ್ತಾರೆ? ಯಃಕಶ್ಚಿತ್ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನನ್ನು ಅಲ್ಲಾಡಿಸಲಾಗುತ್ತಿಲ್ಲ ಎಂದರೆ, ಆತನ ವಿರುದ್ಧ ಬಂಡಿಗಟ್ಟಲೇ ದೂರಿದ್ದೂ ಮಂತ್ರಿಯೇ ನಿಸ್ಸಹಾಯಕರಾಗುತ್ತಾರೆಂದರೆ ಮಾಲಿನ್ಯ ನಿಯಂತ್ರಣ ಮಂಡಳಿ ಹಾಳಾಗಲಿ ಪರಿಸರವೆಂಬ ಶಬ್ದಕ್ಕಾದರೂ ಅರ್ಥ ಬೇಡವೇ? ಬಿಜೆಪಿ ಸರ್ಕಾರದ ದುರ್ಗತಿಗೆ ಇದಕ್ಕಿಂತ ಬೇಕೆ?

•ವರದಿಗಾರ

ತಿಪ್ಪಾರೆಡ್ಡಿ ಚೇಲಾ ಕೃಷ್ಣನಿಗೆ ತರೀಕೆರೆ ಶಾಸಕನಾಗುವ ಕನಸು

ಯಾವ ಪರಿಶ್ರಮವೂ ಇಲ್ಲದೇ ಹಡಬೆ ದುಡ್ಡು ಸುಖಾ ಸುಮ್ಮನೆ ಜಮೆಯಾಗುತ್ತಿದ್ದರೆ ಕನಸುಗಳಿಗೇನು ಬರವೇ? ಇಂಥ ಕನಸುಗಳನ್ನು ಕಂಡು ನನಸಾಗಿಕೊಂಡವರು, ಅಧಿಕಾರದ ರುಚಿ ಅನುಭವಿಸಿದವರು ಸರದಿಯಲ್ಲಿ ...ಪ್ಪನ ಅಗ್ರಹಾರ ಸೇರುತ್ತಿರುವುದು ನಮ್ಮ ಕಣ್ಣ ಮುಂದಿದೆ. ತೀರಾ ಅಷ್ಟು ದೊಡ್ಡ ಮಟ್ಟದ ರೇಂಜಿನಲ್ಲಿ ಅಲ್ಲವಾದರೂ ಎಂಎಲ್‌ಸಿ ತಿಪ್ಪಾರೆಡ್ಡಿಯ ಚೇಲಾಗಿರಿ ಮಾಡಿಕೊಂಡು ಇಂತಹದ್ದೇ ವಾಮಮಾರ್ಗಗಳಲ್ಲಿ ಹಣ ಪೇರಿಸಿಟ್ಟುಕೊಂಡಿರುವ ...ಹನ ಶಿಷ್ಯ ಕೃಷ್ಣ ಅಲಿಯಾಸ್ ಗೋಪಿಗೆ ತರೀಕೆರೆ ಎಂಎಲ್‌ಎ ಆಗುವ ಕನಸು ಬಿದ್ದಿದೆ. ಇದು ನನಸಾಗುತ್ತದೋ ಇಲ್ಲವೋ ಎಂಬುದು ಬೇರೆ ವಿಷಯ. ಆದರೆ ಜಿಹೆಚ್‌ಆರ್ ಮಿಲ್‌ನ ಕೂಲಿಗಿರಿಯಿಂದ ತರೀಕೆರೆಯ ಎಂಎಲ್‌ಎಗಿರಿಯ ಕನಸಿನವರೆಗೆ ಈ ಕೃಷ್ಣ ಎಂಬಾತ ...ಸಿದ ಹಾದಿ ಕುತೂಹಲಕರವಾದದ್ದು.


ಮೂಲತಃ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ...ಣಸೆಘಟ್ಟ ಗ್ರಾಮದ ಮಡಿವಾಳ ಸಮುದಾಯದ ಕೃಷ್ಣ ಸುಮಾರು ...0 ವರ್ಷಗಳ ಹಿಂದೆ ಚಿತ್ರದುರ್ಗಕ್ಕೆ ಬಂದವನು ಜಿ. ಹೆಚ್. ತಿಪ್ಪಾರೆಡ್ಡಿ ಮಾಲೀಕತ್ವದ ಜಿಹೆಚ್‌ಆರ್ ಮಿಲ್‌ನಲ್ಲಿ ಕೂಲಿಯಾಗಿ ಸೇರಿಕೊಂಡ. ಕ್ರಮೇಣ ತಿಪ್ಪಾರೆಡ್ಡಿಯ ವಿಶ್ವಾಸ ಗಳಿಸಿಕೊಂಡು ಚುನಾವಣೆಗಳಲ್ಲಿ ಹಣ ಹಂಚುವ ಜವಾಬ್ದಾರಿ ನಿರ್ವಹಿಸುವ ...ಂತಕ್ಕೆ ಬಡ್ತಿ ಪಡೆದ. ಚೀಲು ಕೀಳುವವನು ಕೈಗೆ ಅಂಟಿಕೊಂಡಿದ್ದನ್ನು ನೆಕ್ಕುವಂತೆ ತಾನೂ ಒಂದಿಷ್ಟು ಜಮೆ ಮಾಡಿಕೊಳ್ಳುತ್ತಿದ್ದ. ...ಪುಟ್ಟ ವ್ಯವಹಾರಗಳಲ್ಲಿ ಸಹಾಯಕನಾದ.



ಚಿತ್ರದುರ್ಗ ಜಿಲ್ಲೆಯಲ್ಲಿ ಗಣಿಗಾರಿಕೆಯ ಭರಾಟೆ ಆರಂಭವಾದಾಗ ಶಾಸಕ ತಿಪ್ಪಾರೆಡ್ಡಿಯ ಪ್ರಭಾವ ಬಳಸಿಕೊಂಡು ಅದಿರು ಸಾಗಣೆ ದಂಧೆಗೆ ಕೈಹಾಕಿದ. ಚಿತ್ರದುರ್ಗದ ಸುತ್ತಲಿನ ಬಡವರ ಜಮೀನುಗಳನ್ನು ಅರೆಕಾಸಿಗೆ ಕೊಂಡು ರಿಯಲ್ ಎಸ್ಟೇಟ್ ವ್ಯವಹಾರ ಪ್ರಾರಂಭಿಸಿದ. ಜೊತೆಗೆ ಮೀಟರ್ ಬಡ್ಡಿ ದಂಧೆಗೂ ಇಳಿದ. ಗಣಿ ವ್ಯವಹಾರದಲ್ಲಿರುವ ಮೂಲಗಳ ಪ್ರಕಾರ ಈ ಕೃಷ್ಣ ತಿಪ್ಪಾರೆಡ್ಡಿಯ ಬೇನಾಮಿ ಏಜೆಂಟ್.

ಇಂಥ ವ್ಯವಹಾರಗಳನ್ನು ನಿಭಾಯಿಸಿ ಕೊಂಡಿದ್ದ ಕೃಷ್ಣನಿಗೆ ಅದ್ಯಾವಾಗ ರಾಜಕೀಯ ತೆವಲು ಆವರಿಸಿಕೊಂಡಿತೋ ಅಂತೂ ಅಖಾಡ ಕ್ಕಿಳಿಯುವ ಸೂಚನೆ ಕೊಟ್ಟಿದ್ದಾನೆ. ತಿಪ್ಪಾರೆಡ್ಡಿಯ ರಾಜಕೀಯ ಶೈಲಿಯನ್ನು ಹತ್ತಿರದಿಂದ ನೋಡಿದವರಿಗೆ ತಾವೂ ಒಂದು ಕೈ ಏಕೆ ನೋಡಬಾರದು ಅಂತ ಅನ್ನಿಸದೇ ಇರದು. ಬಹುಶಃ ಕೃಷ್ಣನಿಗೂ ಇದೇ ಪ್ರೇರಣೆಯಾಗಿರಬಹುದು.

ತರೀಕೆರೆಯಲ್ಲಿ ರಾಜಕೀಯವಾಗಿ ತನ್ನನ್ನು ಎಸ್ಟಾಬ್ಲಿಷ್ ಮಾಡಿಕೊಳ್ಳುವ ಆರಂಭಿಕ ಪ್ರಯತ್ನದ ಭಾಗವಾಗಿ ಕಳೆದ ಜುಲೈನಲ್ಲಿ ತನ್ನ ಹುಟ್ಟು ಹಬ್ಬಕ್ಕೆ ಶುಭಾಶಯ ಕೋರುವ ಫ್ಲೆಕ್ಸ್, ಬ್ಯಾನರುಗಳನ್ನು ತರೀಕೆರೆ ಕ್ಷೇತ್ರದ ತುಂಬೆಲ್ಲಾ ಹಾಕಿಸಿಕೊಂಡಿದ್ದ. ಚಿತ್ರದುರ್ಗದಲ್ಲಿ ಭಾರತೀಯ ಜನತಾ ಪಕ್ಷದಲ್ಲಿ ಗುರುತಿಸಿಕೊಂಡಿರುವ ಕೃಷ್ಣ ತರೀಕೆರೆಯಲ್ಲಿ ಗೋಪಿಕೃಷ್ಣ ಎಂಬ ಹೆಸರಿನಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸುವ ಕನಸು ಕಾಣುತ್ತಿದ್ದಾನೆ.



ತರೀಕೆರೆಯಲ್ಲಿ ತನ್ನಂತೆಯೇ ದಂಧೆಗಳಲ್ಲಿ ತೊಡಗಿಸಿಕೊಂಡಿರುವ ಅಡ್ನಾಡಿ ಯುವಕರ ಗುಂಪು ಕಟ್ಟಿಕೊಂಡು ತುಂಡು-ಗುಂಡುಗಳ ಪಾರ್ಟಿಗಳನ್ನು ನಡೆಸುತ್ತಾ ಭಾವೀ ಶಾಸಕನ ಭ್ರಮೆಯಲ್ಲಿ ತೇಲುತ್ತಿದ್ದಾನೆ. ಲಿಂಗಾಯತ, ಕುರುಬ ಜನಾಂಗದ ಪ್ರಾಬಲ್ಯವಿರುವ ತರೀಕೆರೆಯಲ್ಲಿ ಮಡಿವಾಳ ಸಮುದಾಯಕ್ಕೆ ಸೇರಿದ ಕೃಷ್ಣ ಎಂಎಲ್‌ಎ ಅಭ್ಯರ್ಥಿಯಾಗಿ ಬಿಂಬಿಸಿಕೊಳ್ಳುತ್ತಿರುವುದಕ್ಕೆ ತರೀಕೆರೆಯ ಜನ ಮುಸಿ ಮುಸಿ ನಗುತ್ತಿದ್ದಾರೆ. ಹಣಬಲವೊಂದಿದ್ದರೆ ರಾಜಕೀಯ ಹಿರಿತನವೂ ಬೇಡ, ಜಾತಿ ಬೆಂಬಲವೂ ಬೇಡ ಎಂಬುದು ಗೋಪಿಕೃಷ್ಣನ ಲೆಕ್ಕಾಚಾರ. ಇದು ಸರಿ ಹೊಂದುತ್ತದೋ ಇಲ್ಲವೋ ಅಂತೂ ಸದ್ಯಕ್ಕೆ ಪುಡಿಗಾಸು ಎಣಿಸಿಕೊಳ್ಳುವವರಿಗೆ, ತುಂಡು-ಗುಂಡುಗಳಿಗೆ ಹಪಾಹಪಿಸುವವರಿಗೆ ಈ ಗೋಪಿಕೃಷ್ಣ ಒಳ್ಳೆಯ ಮಿಕದಂತೆ ಪ್ರತ್ಯಕ್ಷವಾಗಿದ್ದಾನೆ.

ಚಿತ್ರದುರ್ಗದ ಮಟ್ಟಿಗೆ ತಿಪ್ಪಾರೆಡ್ಡಿಯವರನ್ನು ಹಿಂದುಳಿದ ವರ್ಗಗಳ ನಾಯಕ ಸಾಕ್ಷಾತ್ ದೇವರಾಜು ಅರಸು ಅವರ ಪ್ರತಿರೂಪ ಎಂದು ಭ್ರಮಿಸಿ ದೊಡ್ಡ ರಾಜಕೀಯ ಕನಸುಗಳನ್ನು ಕಂಡು ಹ್ಯಾಟ್ರಿಕ್ ಸಾಧನೆಗೆ ಹೆಗಲುಕೊಟ್ಟ ಹಿಂದುಳಿದ ನಾಯಕರೆಲ್ಲಾ ತಿಪ್ಪಾರೆಡ್ಡಿಯ ಒಳ ಹೊಡೆತ ತಾಳಲಾರದೇ ದೂರ ಸರಿದಿದ್ದಾರೆ. ಈ ಹೊತ್ತಿನಲ್ಲಿ ಕೃಷ್ಣ ಅಲಿಯಾಸ್ ಗೋಪಿಕೃಷ್ಣ ಎಂಎಲ್‌ಎ ಕನಸು ಕಾಣುತ್ತ ಅದು ಹೇಗೆ ಆರಾಮಾಗಿದ್ದಾನೆಂಬುದೇ ಸೋಜಿಗದ ಸಂಗತಿ.

• ವರದಿಗಾರ

ಗಾಯಗೊಂಡ ಹುಲಿ ಬೋನಿನಿಂದ ಹೊರಕ್ಕೆ

ರಾಜ್ಯ ಬಿಜೆಪಿಯ ಹೈಕಮಾಂಡ್ ನಿಷ್ಠರ ಮುಖದಲ್ಲೀಗ ನಗು ಅಡಗಿ ಹೋಗುತ್ತಿದೆ. ಮುಖಗಳು ಕಳಾಹೀನವಾಗಿದೆ. ಎಲ್ಲೆಡೆ ಚಿಂತೆಯ ಕಾರ್ಮೋಡಗಳು ಆವರಿಸಿಕೊಳ್ಳುತ್ತಿವೆ.



ಅವರಿಗೆ ಯೋಚನೆಯಾಗಿರುವುದು ಇನ್ನೇನು ಜೈಲಿನಿಂದ ಬಿಡುಗಡೆಯಾಗುತ್ತಾರೆ ಎನ್ನಲಾಗಿರುವ ಖೈದಿ ನಂಬರ್ **10462**ರ ಬಗ್ಗೆ.

ಆತ ಯಡಿಯೂರಪ್ಪ!

ಸಿರಾಜಿನ್ ಭಾಷ ಹಾಗೂ ಬಾಲರಾಜ್ ಸಲ್ಲಿಸಿರುವ ಖಾಸಗಿ ದೂರುಗಳ ಪೈಕಿ ಈಗಾಗಲೇ 2ರಲ್ಲಿ ಜಾಮೀನು ಪಡೆದಿರುವ ಯಡ್ಡಿಗೆ ಈ ತಕ್ಷಣದಲ್ಲಿ ಬೇಕಿರುವುದು 3ನೇ ದೂರಿನ ಬಾಬ್ತು ಒಂದು ಜಾಮೀನು ಮಾತ್ರ. ಅದು ಸಿಕ್ಕ ತಕ್ಷಣ ರಾಜ್ಯ ಬಿಜೆಪಿಯಲ್ಲಿ ಮುಂದಿನ ದಿನಗಳಲ್ಲಿ ಏನೇನು ಸಂಭವಿಸಲಿದೆಯೋ ಅವೆಲ್ಲವೂ ಯಡ್ಡಿಗೆ ಜಾಮೀನು ಸಿಗುವ ಮಾರನೇ ದಿನದಿಂದಲೇ ಶುರುವಾಗಲಿವೆ.

ಬಹುತೇಕ ಮೂರು ರೀತಿಯ ಬೆಳವಣಿಗೆಗಳಿಗೆ ಇದು ಕಾರಣವಾಗಬಹುದು. ಒಂದು ಯಡ್ಡಿ ಇಡೀ ಪಾರ್ಟಿ ಹಾಗೂ ಸದಾನಂದ ಗೌಡರನ್ನು ತಮ್ಮ ನೇರ ಕಂಟ್ರೋಲಿಗೆ ತೆಗೆದುಕೊಳ್ಳುತ್ತಾರೆ. ಎರಡನೇ ಸಾಧ್ಯತೆಯೆಂದರೆ ರಾಜ್ಯ ಬಿಜೆಪಿಯ ಈಶ್ವರಿ-ಅನಂತು ಬಣ ದೆಹಲಿ ಹೈಕಮಾಂಡ್ ಜೊತೆ ನಿಂತು ಕರ್ನಾಟಕದ ಪಾರ್ಟಿ ಹಾಗೂ ಸರ್ಕಾರ ಯಡ್ಡಿ ಕಂಟ್ರೋಲಿಗೆ ಹೋಗದಂತೆ ತಡೆಯೊಡ್ಡುತ್ತಾರೆ.

ಇವೆರಡೂ ಆಗದಿದ್ದರೆ ಅದನ್ನು ಸಾಧ್ಯಗೊಳಿಸಲು ಒಂದು ಸಂಘರ್ಷ ಸ್ಫೋಟಗೊಳ್ಳುತ್ತದೆ. ಎರಡೂ ಬಣದವರು ಕೈ ಕೈ ಮಿಲಾಯಿಸಿ ಬಡಿದಾಡುತ್ತಾರೆ. ಬಹುಶಃ ಮುಂದಿನ ಮೂರ್ನಾಲ್ಕು ತಿಂಗಳು ರಾಜ್ಯದ ಜನತೆಯ ಪಾಲಿಗೆ ಅದೇ ಮೆಗಾ ಸೀರಿಯಲ್. ಹಾಗೇ ನೋಡುತ್ತಿರಿ. ಒಂದು ಸಾರಿ ಜೈಲಿನಿಂದ ಆಚೆ ಯಡ್ಡಿ ಕಾಲಿಟ್ಟರೆ ಬಿಜೆಪಿ ರಾಜಕೀಯವೆಂಬ ನೀರಿನ ಕೊಳಕ್ಕೆ ದೊಡ್ಡ ಬಂಡೆಯೊಂದು ಒಂದು ಅಪ್ಪಳಿಸಿದಂತೆ ಪರಿಣಾಮವಾಗಲಿದೆ.

ಯಡ್ಡಿ ಈಗ ಗಾಯಗೊಂಡ ಹುಲಿಯಂತಾಗಿದ್ದಾರೆ. ಇದನ್ನೇನು ವೀರೋಚಿತ ಹೋಲಿಕೆ ಎಂದು ಭಾವಿಸುವ ಅಗತ್ಯವಿಲ್ಲ. ಆದರೆ ಯಡ್ಡಿಯ ಈಗಿನ ಮನಸ್ಥಿತಿಯ ಬಗ್ಗೆ ಹೇಳಲು ಆ ಮಾತೇ ಸರಿ.

ರಾಜ್ಯ ರಾಜಕಾರಣದಲ್ಲೀಗ ಯಡ್ಡಿ ಅಂಡ್ ಗ್ಯಾಂಗ್ strategic ಆಗಿ ಮಹತ್ತರ ಹಾಗೂ ಆಯಕಟ್ಟಿನ ಪೊಜಿಷನ್‌ನಲ್ಲಿದೆ. ಈ ಗುಂಪು ಲಿಂಗಾಯತರ ಪೈಕಿ ಮೆಜಾರಿಟಿ ಜನರ ಬೆಂಬಲವನ್ನು ಈಗಲೂ ಹೊಂದಿದೆ. ಬಲಿಷ್ಠ ಲಿಂಗಾಯತ ರಾಜಕಾರಣಿಗಳು ದೊಡ್ಡ ಮಠಾಧೀಶರು, ಶ್ರೀಮಂತ ಲಿಂಗಾಯತ ವ್ಯಾಪಾಸ್ಥರು ಉದ್ಯಮಿಗಳು ಹಾಗೂ ಲಿಂಗಾಯತ ಉನ್ನತಾಧಿಕಾರಿಗಳು ಈ ಸಿಂಡಿಕೇಟ್‌ನಲ್ಲಿದ್ದಾರೆ.

ಯಡ್ಡಿ ಈ ಗುಂಪಿನ ಪ್ರಶ್ನಾತೀತ ನಾಯಕನಾಗಿದ್ದಾನೆ ಮತ್ತು ಯಡ್ಡಿ ಹತ್ತಿರ ಈಗ ಏನಿಲ್ಲ ಹೇಳಿ? ಕೈಲಿ ನೂರಾರು ಕೋಟಿ ಹಣ, ಚುನಾವಣಾ ರಾಜಕೀಯ ನಡೆಸಲು ಬೇಕಾಗುವ ದುಡ್ಡು ಹೊಂದಿಸುವ ತಾಕತ್ತು, ಬಲಿಷ್ಠ ಜಾತಿ ಬೆಂಬಲ, ಮಠಾಧೀಶರ ಹಂಬಲ, ಈಗಾಗಲೇ ಕಂಡಿರುವ ಅಧಿಕಾರದ ರುಚಿ... ಇವೆಲ್ಲಾ ಇರುವ ಯಾವ ರಾಜಕಾರಣಿ ಸುಮ್ಮನೆ ಕುಳಿತಾನು ಹೇಳಿ?

ಯಡ್ಡಿಯ ಈ ತಹತಹ ಹಾಗೂ ಅಧಿಕಾರದ ಹಂಬಲವೆಂಬ ಬಿರುಗಾಳಿಯು ಈಗಾಗಲೇ ರಾಜ್ಯ ಬಿಜೆಪಿಯ ತಲೆಬುಡವನ್ನೆಲ್ಲಾ ಅಲುಗಾಡಿಸುತ್ತಿದೆ.

ಅಡ್ವಾಣಿಗೂ ಡೋಂಟ್ ಕೇರ್

ಬಿಜೆಪಿಯೇತರ ಪಕ್ಷಗಳ ಭ್ರಷ್ಟಾಚಾರವನ್ನು ಮಾತ್ರ ವಿರೋಧಿಸಿ ರಥಯಾತ್ರೆ ನಡೆಸುತ್ತಿರುವ ಅಡ್ವಾಣಿ ಬೆಂಗಳೂರಿಗೆ ಬಂದಾಗ ಯಡ್ಡಿ ಗುಂಪು ಅಡ್ವಾಣಿಗೆ ಮುಟ್ಟಿ ನೋಡಿಕೊಳ್ಳುವಂತೆ ಲಾತ ಕೊಟ್ಟಿದೆ. ಯಡ್ಡಿ ಬಣದ ಭ್ರಷ್ಟಾಚಾರವನ್ನು ಮಾತ್ರ ಗಮನಿಸಿ ಅನಂತೂ ಬಣದವರ ಭ್ರಷ್ಟಾಚಾರವನ್ನು ಅಡ್ವಾಣಿ ಮರೆತಂತೆ ನಟಿಸಿದ್ದು ಯಡ್ಡಿಗೆ ಕೋಪ ತರಿಸಿದೆ. ಬಿಜೆಪಿ ಹೈಕಮಾಂಡ್ ಸಹ ಹೆದರುವ ಹಿರೀಕನ ಸ್ಥಾನ ಅಡ್ವಾಣಿಗಿದೆ. ಅಂತಾ ಅಡ್ವಾಣಿಗೂ ಮುಜುಗರವಾಗುವಂತೆ ಅಥವಾ ಚಾಲೆಂಜ್ ಮಾಡುವಂತೆ ಬಸು ಬೊಮ್ಮಾಯಿ, ಸೋಮಣ್ಣ, ಶೋಭಾ, ನಿರಾಣಿ, ಕತ್ತಿ, ಉದಾಸಿ ಮುಂತಾದವರು ಸಮಾವೇಶಕ್ಕೆ ಹೋಗಲಿಲ್ಲ. ಅಷ್ಟೇ ಅಲ್ಲ ಪಾರ್ಟಿ ನಾಯಕರು ಆ ಬಗ್ಗೆ ಆಕ್ಷೇಪಿಸಿದರೂ ಯಡ್ಡಿ ಬಣ ಈಗ ಡೋಂಟ್ ಕೇರ್ ಮೂಡ್‌ನಲ್ಲಿದೆ. ವಾಸ್ತವದಲ್ಲಿ ಮುಂದೇನು ಮಾಡಬೇಕೆಂಬುದು ಯಡ್ಡಿಗೆ ಚೆನ್ನಾಗಿ ಗೊತ್ತಿದೆ.



ಆದರೆ ಮುಂದಿನ ದಾರಿ ಗೊತ್ತಿರದೆ ನಡುಬೀದಿಯಲ್ಲಿ ನಿಂತಿರುವುದು ಹೈಕಮಾಂಡ್ ಮಾತ್ರ. ಯಡ್ಡಿಯನ್ನು ಸಹಿಸಿಕೊಳ್ಳುವುದಾ ಇಲ್ಲ ದೂರ ತಳ್ಳುವುದಾ ಎಂಬುದೇ ಈಶ್ವರಿ ಗುಂಪಿನ ಪೇಚಾಟ. ಈ ನಡುವೆ ರೆಡ್ಡಿ ಗುಂಪೇನಾದರೂ ಬಿಜೆಪಿಯಿಂದ ದೂರ ನಿಂತು ಹೊಸ ರಾಜಕೀಯ ಪಕ್ಷ ಕಟ್ಟಲು ಹೊರಟರೆ ಅದೂ ಕೂಡ ಬಿಜೆಪಿಗೆ ಹೊಡೆತವೇ ಆಗಲಿದೆ. ಹೀಗೆ ಒಂದು ಕಡೆ ಯಡ್ಡಿಯ ಸವಾಲು, ಮತ್ತೊಂದೆಡೆ ರೆಡ್ಡಿಯ ಆಹವಾಲು, ಎಲ್ಲೆಡೆ ಪಾರ್ಟಿ ನಾಯಕರ ಲಂಚಾವತಾರದ ಕೇಸ್‌ಗಳಲ್ಲಿ ಸಿಲುಕಿ ನರಳುತ್ತಿರುವ ಬಿಜೆಪಿಗೆ ಈಗ ಯಾರನ್ನೂ ಎದುರು ಹಾಕಿಕೊಳ್ಳುವಷ್ಟು ಶಕ್ತಿ ಇಲ್ಲ. ಬಹುಶಃ ಯಡ್ಡಿಗೆ ಮುಂದಿನ ದಿನಗಳಲ್ಲಿ ಇದೇ ಅನುಕೂಲಕರವಾದ ಅಂಶವಾಗಿ ಬಿಜೆಪಿಯನ್ನು ಪುನಃ ತನ್ನ ಕಂಟ್ರೋಲಿಗೆ ತೆಗೆದುಕೊಳ್ಳಲು ಅವಕಾಶವಾಗಬಹುದು.

ದುಡ್ಡೆಷ್ಟಿದೆ ಗೊತ್ತೆ?

ಯಡ್ಡಿ ಕದ್ದಿರುವ ದುಡ್ಡಿನ ಬಗ್ಗೆ ಕರ್ನಾಟಕದ ಜನ ನಾನಾ ತರಹ ಅಂದಾಜು ಮಾಡುತ್ತಿದ್ದರು. ಕೆಲವರು ಒಂದು ಸಾವಿರ ಕೋಟಿ ಅಂದರೆ ಮತ್ತೊಬ್ಬರು ಐದು ಸಾವಿರ ಕೋಟಿ ಅನ್ನುತ್ತಿದ್ದರು. ಆದರೆ ಪ್ರಖ್ಯಾತ ತೆಹಲ್ಕಾ ಇಂಗ್ಲಿಷ್ ವಾರಪತ್ರಿಕೆಯು ಈ ವಾರದ ತನ್ನ ತನಿಖಾ ವರದಿಯಲ್ಲಿ ಯಡ್ಡಿ ನುಂಗಿದ ಹಣದ ಅಂದಾಜು ಲೆಕ್ಕ ಕೊಟ್ಟಿದೆ.

ಅದರ ಮೊತ್ತ 642 ಕೋಟಿ ರೂಪಾಯಿಗಳು! ಒಟ್ಟು 60 ತಿಂಗಳು ಅಧಿಕಾರದಲ್ಲಿದ್ದ ಯಡ್ಡಿ ಸಿಎಂ ಹಾಗೂ ಡಿಸಿಎಂ ಆಗಿದ್ದಾಗ ತಿಂಗಳಿಗೆ ಆವರೇಜ್ ಹತ್ತು ಕೋಟಿ ರೂಪಾಯಿ ಲಂಚದ ಹಣ ತಿಂದಿದ್ದಾನೆಂದು ತೆಹಲ್ಕಾ ಅಂದಾಜಿಸಿ[...] ಇದೆಲ್ಲವೂ ನಗದು ರೂಪದ ಹಣವಲ್ಲ, ಬದಲಾಗಿ ಹಣ[...] ಆಸ್ತಿ, ಸೈಟು, ಜಮೀನುಗಳ ರೂಪದ ಲಂಚಾವತಾರವೆಂದ[...] ಅದು ಹೇಳಿದೆ.

• ಪಾರ್ವತೀಶ

ಯಡ್ಡಿಯ ಸ್ಪೆಷಾಲಿಟಿ ಏನೆಂದರೆ ಬೇರೆ ಯಾ[...] ಮುಖ್ಯಮಂತ್ರಿಗಳು ತೆಗೆದುಕೊಂಡಿರದಿದ್ದ ರೀತಿಯಲ್ಲಿ ಚೆ[...] ಮೂಲಕವೂ ಲಂಚ, ಕಿಕ್‌ಬ್ಯಾಕ್‌ಗಳನ್ನು ತಗೊಂಡು ಹೊ[...] ಗಿನ್ನಿಸ್ ರೆಕಾರ್ಡ್ ಮಾಡಿದ್ದಾರೆ. ಕರ್ನಾಟಕದ ರಾಜಕಾರಣ[...] ಇತಿಹಾಸದಲ್ಲೇ ಒಬ್ಬ ಮುಖ್ಯಮಂತ್ರಿ ಜೈಲಿಗೆ ಹೋಗಿರಲಿ[...] ತಾನಲ್ಲದೆ ತನ್ನ ಸಮಸ್ತ ಜೊತೆಗಾರರಿಗ[...] ಜೈಲಿನ ದಾರಿ ಹಿಡಿಯುವಂ[...] ನಾಯಕತ್ವ ನೀಡಿರುವ ಏಕೈ[...] ಲೀಡರ್ ಅಂದರೆ ಅದು ಯ[...] ಒಬ್ಬನೆ.

ಬೋನಿನಿಂದ ಹೊರಕ್ಕೆ

ಯಡ್ಡಿ ಬೇಲು ಪಡೆ[...] ಜೈಲಿನಿಂದ ಹೊರಬಂದ[...] ಮೊಟ್ಟಮೊದಲನೆಯದಾ[...] ಲಿಂಗಾಯತರ ಬೆಂಬಲವನ್[...] ಇನ್ನಷ್ಟು ಗಟ್ಟಿ ಮಾಡಿಕೊಳ್ಳುವ ಪ್ರಯ[...] ಮಾಡೇ ಮಾಡುತ್ತಾರೆ. ಕೆಲ ಭ್ರಷ್ಟ ಲಿಂಗಾಯ[...] ಮಠಾಧೀಶರಿಗೆ ಯಡ್ಡಿ ಇರದೆ ತಬ್ಬಲಿಗಳಾದಂತ ಭಾವ[...] ಬಂದಿದೆ. ದಾವಣಗೆರೆಯ ದೊಡ್ಡ ಮಠಾಧೀಶರೊಬ್ಬ[...] ಏನು ಜಾಮೀನೂ ಕೂಡ ಸಿಗದಂತಹ ಅಪರಾಧ ಮಾ[...] ಬಿಟ್ಟಿದ್ದಾರಾ ಯಡ್ಡಿಯೂರಪ್ಪ? ಬೇರೆ ಸಿಎಂಗಳು ಇಂಥ ತ[...] ಮಾಡೇ ಇಲ್ವಾ?" ಎಂದು ಅಲ್ಲಲ್ಲಿ ಮಾತಾಡುತ್ತಿರುವುದ[...] ಕೇಳಿಬರುತ್ತಿದೆ. ಇವೆಲ್ಲಾ ಲಿಂಗಾಯತ ಸಮುದಾಯ[...] ನಾಯಕತ್ವದಲ್ಲಿರುವವರ ತಳಮಳ ಹಾಗೂ ಅಸಹನೆಯ[...] ತೋರಿಸುತ್ತಿದೆ.

ಇದೇ ಅಸಹನೆ ಯಡ್ಡಿಗೂ ಇದೆ. ಅದು ನಾಳೆ ಬಿಜೆ[...] ಹೈಕಮಾಂಡ್ ವಿರುದ್ಧವೂ ಸ್ಫೋಟಗೊಂಡ[...] ಆಶ್ಚರ್ಯವೇನೂ ಇಲ್ಲ.

ಪ್ರಧಾನವಾಗಿ ಇದೊಂದು ಜಾತಿ ಗುಂಪು. ತವ[...] ನಾಯಕ ಜೈಲಿನಿಂದ ಹೊರಬರಲಿ ಎಂದು ಕಾಯುತ್ತಿರು[...] ಅವಕಾಶವಾದಿ ಹಾಗೂ ಭ್ರಷ್ಟರ ಗುಂಪೂ ಹೌದು.

ಚೆಡ್ಡಿಗಳ ಬಣ್ಣ ಬಯಲು ಭೂಕೊಳ್ಳೆಯಲ್ಲಿ ಆರೆಸ್ಸೆಸ್ ಪ್ರಮುಖರು

ರಾಮನ ಭಕ್ತರ ಮೊದಲ ಕಂತಿನ ದೇಶಭಕ್ತಿಯ ಬೆಲೆ ಕೇವಲ 80 ಕೋಟಿ ಇದು ದುಡ್ಡಿಗೆ ಬದಲಾಗಿ ಬಿಡಿಎ ಸೈಟುಗಳ ರೂಪಾತಾಳಿರುವುದೇ ಯಡ್ಡಿ ಆಳ್ವಿಕೆಯ ವೈಶಿಷ್ಟ್ಯ ಮತ್ತು ಅವರ ಜೈಲು ಕಾಯಕದ ಅಸಲೀ ಮರ್ಮ. ಬಿಜೆಪಿಯ ತಾಯಿ ಆರೆಸ್ಸೆಸ್ ಮತ್ತು ಅದರ ಅನೇಕ ಸೂತ್ರಧಾರರು ಮಾಜಿ ಮುಖ್ಯಮಂತ್ರಿ ಯಡ್ಡಿ ಜೊತೆ ಭೂಕಬಳಿಕೆಯಲ್ಲಿ ಹೇಗೆ ಶಾಮೀಲಾಗಿದ್ದರು ಮತ್ತು ಯಾವ್ಯಾವ ಸಿ.ಎ. ಸೈಟು ಹೊಡೆದರು ಎಂಬ ಬಗ್ಗೆ ಕಳೆದ ಸಂಚಿಕೆಯಲ್ಲಿ ಪತ್ರಿಕೆ ಸ್ಯಾಂಪಲ್ ವರದಿಯೊಂದನ್ನು ಪ್ರಕಟಿಸಿತ್ತಲ್ಲವೆ-

ಬಸವನಗುಡಿಯ ಅನಾಥ ಶಿಶುನಿವಾಸ, ರಾಷ್ಟ್ರೋತ್ಥಾನ ಯೋಗ ಸಂಶೋಧನಾ ಕೇಂದ್ರಗಳಷ್ಟೇ ಅಲ್ಲದೆ ಆರೆಸ್ಸೆಸ್ ಹುಟ್ಟುಹಾಕಿದ ಇನ್ನೂ ಅರ್ಧ ಡಜನ್ ಸಂಘಟನೆಗಳೂ, ಅಷ್ಟೇ ಸಂಖ್ಯೆಯ ಚೆಡ್ಡಿ ನಾಯಕರೂ ಯಡ್ಡಿಯ ಜೊತೆ ಕೈಜೋಡಿಸಿ ಸರ್ಕಾರಿ ಸೊತ್ತು ದೋಚಿದ್ದಾರೆ. ಈಗ ರೆಡ್‌ಹ್ಯಾಂಡ್ ಸಿಕ್ಕಿಯೂ ಬಿದ್ದಿದ್ದಾರೆ.

ಯಡ್ಡಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಆರೆಸ್ಸೆಸ್ ದೋಚಿದ ಸರ್ಕಾರಿ ಸೊತ್ತಿನ ಕನಿಷ್ಠ ಅಂದಾಜೇ 80 ಕೋಟಿಯಾಗುತ್ತದೆ. ಮಾಗಡಿ ರಸ್ತೆ ತಾವರೆಕೆರೆಯ ಸಮೀಪದ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರವೆಂಬುದು ಈ ಸುತ್ತಮುತ್ತಲ ಬಹುತೇಕ ಚೆಡ್ಡಿಗಳ ಪಾಲಿಗೆ ಹುತ್ತವಿದ್ದಂತೆ. ಅಲ್ಲಿ ತಿಂಗಳಿಗೊಂದಾದರೂ ಆರೆಸ್ಸೆಸ್ ತರಬೇತಿ ಶಿಬಿರವಿದ್ದೆ ಇರುತ್ತದೆ. ಅದಕ್ಕೆ ಮತ್ತೆ ಹತ್ತೆಕರೆ ಭೂಮಿ ಮಂಜೂರು ಮಾಡಿದ್ದಾರೆ ಮುಖ್ಯಮಂತ್ರಿ ಯಡ್ಡಿ. ಅದು ಕಮ್ಮಿಯೆಂದರೂ 15 ಕೋಟಿಯ ಸೊತ್ತು. ಸಂಘ ಪರಿವಾರದ ಕೇಸರಿ ಸಾಹಿತ್ಯ ಪ್ರಚಾರಕ್ಕೆಂದೇ ಹುಟ್ಟಿಕೊಂಡ ರಾಷ್ಟ್ರೋತ್ಥಾನ ಪರಿಷತ್‌ಗೆ ಒಂದೂವರೆ ಕೋಟಿ ರೂಪಾಯಿ ಬೆಲೆಬಾಳುವ 900 ಚದುರ ಅಡಿಗಳಷ್ಟು ಪಾಲಿಕೆ ಆಸ್ತಿಯನ್ನು ಕೇವಲ ಹತ್ತು ಲಕ್ಷಕ್ಕೆ ನೀಡಲಾಗಿದೆ.


ಸಂಸ್ಕಾರ ಭಾರತಿಯೆಂಬ ಮತ್ತೊಂದು ಕೇಸರಿ ಸಂಸ್ಥೆಗೆ ಎರಡೂವರೆ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ 2000 ಚದುರ ಅಡಿಗಳ ಬಿಡಿಎ ಸೊತ್ತನ್ನು ಕೇವಲ 20 ಲಕ್ಷಕ್ಕೆ ಕೊಟ್ಟಿದ್ದು ಭಜರಂಗದಳಕ್ಕಿಂತಲೂ ಅಪಾಯಕಾರಿ ಹಿಂದೂ ಜಾಗರಣ ವೇದಿಕೆಯೆಂಬ ಜಗದೀಶ್ ಕಾರಂತನ ಸಂಘಟನೆಗೆ 2.5 ಕೋಟಿ ಬೆಲೆ ಬಾಳುವ 2000 ಚದುರ ಅಡಿಗಳ ಮತ್ತೊಂದು ಬಿಡಿಎ ಸೈಟನ್ನು ನೀಡಿದ್ದು, ಆರೆಸ್ಸೆಸ್‌ನ ಮಹಿಳಾ ಘಟಕವಾದ ಮಹಿಳಾ ದಕ್ಷತಾ ಸಮಿತಿಗೆ ಎರಡೂಕಾಲು ಕೋಟಿಯ 396 ಚದುರ ಅಡಿಗಳ ಪಾಲಿಕೆ ಸೊತ್ತನ್ನು ಬರೆದು ಕೊಟ್ಟಿದ್ದು ಮತ್ತು ಬಸವನಗುಡಿಯ ಅನಾಥ ಶಿಶು ನಿವಾಸಕ್ಕೆ ಉತ್ತರಹಳ್ಳಿಯಲ್ಲಿ 10 ಕೋಟಿಯ 3585 ಚದುರ ಅಡಿಗಳ ಬಿಡಿಎ ಆಸ್ತಿ ಬಿಟ್ಟು ಕೊಟ್ಟಿರುವುದು ಯಡ್ಡಿ ಮತ್ತು ಆರೆಸ್ಸೆಸ್ ಜಂಟಿ ಭೂಡಕಾಯಿತಿಗೆ ಕೆಲ ಸ್ಯಾಂಪಲ್ಲುಗಳಷ್ಟೆ.

ಈ ಎಲ್ಲ ಸಂಸ್ಥೆಗಳೂ ಸಕ್ರಿಯವಾಗಿ ಕೋಮುವಿಷ ಬಿತ್ತುತ್ತಲೇ ಬಂದಂಥವು. ಯಾವುದೇ ಕಾಯ್ದೆ, ನಿಯಮಾವಳಿಯನ್ನು ಪಾಲಿಸಿದರೂ ಇಂಥ ಸಂಸ್ಥೆಗಳಿಗೆ ಸರ್ಕಾರಿ ಭೂಮಿ ನೀಡುವಂತಿಲ್ಲ, ಇವತ್ತಿಗೂ ನಿಸ್ವಾರ್ಥದಿಂದ ಬಡಬಗ್ಗರ ಸೇವೆ ಮಾಡಿಕೊಂಡೇ ಬಂದ ನೂರಾರು ಸಂಸ್ಥೆಗಳು ನಿವೇಶನ ಕೋರಿ ಅರ್ಜಿ ಹಾಕಿ ಹತ್ತಾರು ವರ್ಷಗಳಿಂದ ಕಾಯುತ್ತಾ ಕೂತಿವೆ. ಸೀನಿಯಾರಿಟಿ ಲೆಕ್ಕ ಹಾಕಿದರೆ ಇವಕ್ಕೇ ಮೊದಲು ಸೈಟು ದಕ್ಕಬೇಕು. ಆದರೆ ಯಡ್ಡಿಗೆ ಕಂಡಿದ್ದು ಈ ಆರೆಸ್ಸೆಸ್ ಸಂಸ್ಥೆಗಳು ಮಾತ್ರ.

ಇದಲ್ಲದೆ ಆರೆಸ್ಸೆಸ್‌ನ ಅರ್ಧ ಡಜನ್ನಿಗೂ ಅಧಿಕ ನಾಯಕರು ಯಡ್ಡಿ ಮೂಲಕ ಸೈಟು ದೋಚಿದ್ದಾರೆ. ಈ ಪೈಕಿ ಭಾರತೀಯ ಮಜ್ದೂರ್ ಸಂಘದ ಉಪಾಧ್ಯಕ್ಷ ಡಿ.ಕೆ. ಸದಾಶಿವ ವಳಗೇರಹಳ್ಳಿಯಲಲಿ 2400 ಚದುರ ಅಡಿಗಳ ಒಂದು ಕೋಟಿಯ ಬಿಡಿಎ ಸೈಟನ್ನು ಗಿಟ್ಟಿಸಿದರೆ ರಾಷ್ಟ್ರೋತ್ಥನದ ಸಾಹಿತ್ಯಗಳಿಗೆಲ್ಲ ಬರಹಗಾರ್ತಿಯಾದ ಪಿ. ಮಾಲತಿಗೆ ಎಚ್‌ಎಸ್‌ಆರ್ ಲೇಔಟನಲ್ಲಿ ಒಂದೂವರೆ ಕೋಟಿ ಬೆಲೆಬಾಳುವ 30x40 ಸೈಟು ನೀಡಲಾಗಿದೆ. ಪುತ್ತೂರಿನ ಶಾಸಕಿ ಮಲ್ಲಿಕಾ ಪ್ರಸಾದ್ ಹೇಳಿಕೇಳಿ ದ.ಕ.ದ ಆರೆಸ್ಸೆಸ್ ಪ್ರಮುಖ ಡಾ. ಪ್ರಸಾದ್ ಭಂಡಾರಿ ಎಂಬಾತನ ಪತ್ನಿ. ಈಕೆಗೆ ಜೆಪಿ ನಗರದಲ್ಲಿ 4000 ಚದುರ ಅಡಿಗಳ 4 ಕೋಟಿಯ ಬಿಡಿಎ ಸೈಟು ಕೊಟ್ಟಿದ್ದಾರೆ.

ಬೆಂಗಳೂರಿನ ಮತ್ತೊಬ್ಬ ಆರೆಸ್ಸೆಸ್ ಪ್ರಮುಖ ಡಾ. ವಿಜಯ ಸಂಗಮದೇವನಿಗೆ ಎಚ್‌ಎಸ್‌ಆರ್ ಲೇಔಟನಲ್ಲಿ 3 ಕೋಟಿ ಬೆಲೆ ಬಾಳುವ 60x40 ಸೈಟು, ರಾಷ್ಟ್ರ ಸೇವಿಕಾ ಸಂಘದ ನಾಯಕಿ ಶೈಲಜಾ ಶ್ರೀನಾಥ್ ಎಂಬಾಕೆಗೆ ಓಎಂಬಿಆರ್ ಲೇಔಟನಲ್ಲಿ ಎರಡು ಕೋಟಿಯ 60x40 ಸೈಟು, ಬೆಂಗಳೂರಿನ ಮಗದೊಬ್ಬ ಆರೆಸ್ಸೆಸ್ ಪ್ರಮುಖ ಶ್ರೀಧರ್ ಪಾಟೀಲನಿಗೆ ವಿಶ್ವೇಶ್ವರಯ[...] ಲೇಔಟನಲ್ಲಿ ಒಂದೂವರೆ ಕೋಟಿಯ 400 ಚದುರ ಅಡಿಗಳ ಭಾರೀ ನಿವೇಶ[...] ಕೊಟ್ಟು ಉಪಕರಿಸಿದ್ದಾರೆ ಯಡ್ಡಿ. ವಿಶೇಷವೆಂದರೆ ಶ್ರೀಧರ್ ಪಾಟೀಲ್ ಒಂದೂವ[...] ಕೋಟಿಯ ಈ ಸೊತ್ತಿಗೆ ಬಿಡಿಎಗೆ ಪಾವತಿಸಿದ್ದು ಕೇವಲ ಹತ್ತು ಲಕ್ಷ!





ಹಾಗೇ ಮೈಸೂರಿನಲ್ಲಿ ನಡೆದ ಅನೇಕ ಕೋಮುಗಲಭೆಗಳಿಗೆ ಸೂತ್ರಧಾರನಂತಿರುವ ಎಮ್ಮೆಲ್ಸಿ ಕೆ.ಆರ್. ಮಲ್ಲಿಕಾರ್ಜುನಪ್ಪನಿಗೆ ಎಚ್.ಎಸ್.ಆರ್. ಲೇಔಟನಲ್ಲಿ 4000 ಚದುರ ಅಡಿಗಳ ಭರ್ಜರಿ ಸೈಟು ಮಂಜೂರಾಗಿದೆ. ಇದರ ಮಾರುಕಟ್ಟೆ ಬೆಲೆ 4 ಕೋಟಿ ರೂಪಾಯಿಗಳಷ್ಟಾದರೆ ಮಲ್ಲಿಕಾರ್ಜುನಪ್ಪ ಬಿಡಿಎಗೆ ಪಾವತಿಸಿದ್ದು ಕೇವಲ 30 ಲಕ್ಷ ಮಾತ್ರ!

ಕೋಟಿ ಕೋಟಿ ರೂಪಾಯಿಗಳ ಇಂಥ ಭರ್ಜರಿ ಸೈಟುಗಳನ್ನು ಹತ್ತೋ ಇಪ್ಪತ್ತೋ ಲಕ್ಷಕ್ಕೆ ಮಂಜೂರು ಮಾಡಿದ ಮುಖ್ಯಮಂತ್ರಿ ಯಡ್ಡಿ ಯಾವ ಆಧಾರದ ಮೇಲೆ ಇಷ್ಟೆಲ್ಲ ರಿಯಾಯಿತಿ ಕೊಡುತ್ತಾರೆ? ಸರ್ಕಾರಿ ಬೊಕ್ಕಸಕ್ಕಾದ ಈಪಾಟಿ ನಷ್ಟಕ್ಕೆ ಯಾರು ಹೊಣೆ? ಹೀಗೆ ಆರೆಸ್ಸೆಸ್ ಪ್ರಮುಖರಿಗೆಲ್ಲ ಪುಡಿಗಾಸಿಗೆ ಬಿಡಿಎ ಸೈಟು ಕೊಟ್ಟ ಯಡ್ಡಿ ತಾನು ನಡೆಸಿದ ಭೂಹಗರಣಗಳಿಗೆಲ್ಲ ಆರೆಸ್ಸೆಸ್ ಶ್ರೀರಕ್ಷೆ ಇರಲೆಂದು ಕೊಟ್ಟ ಲಂಚವಾ ಇದು?

ಯಡ್ಡಿಯ ಭೂಕೊಳ್ಳೆಯಲ್ಲಿ ಆರೆಸ್ಸೆಸ[...] ಕೂಡ ಸಮಾನ ಪಾಲುದಾರನಾಗಿತ್ತೆಂಬುದಕ್ಕೆ ಇದಕ್ಕಿಂತ ಬೇಕೆ? ಅಣ[...] ಹಜಾರೆಯನ್ನು ಹುಟ್ಟುಹಾಕಿ ಭ್ರಷ್ಟಾಚಾರದ ವಿರುದ್ಧ ಮಾರುವೇಷದಲ್ಲಿ ಬೊ[...] ಹಾಕಿದ ಆರೆಸ್ಸೆಸ್ ಇನ್ನಾವ ಮುಖ ಹೊತ್ತು ಭ್ರಷ್ಟಾಚಾರದ ವಿರು[...] ಮಾತಾಡುತ್ತದೆ?

ಯಡ್ಡಿಗೂ ಆರೆಸ್ಸೆಸ್ ನಾಯಕರಿಗೂ ಒಂದೇ ವ್ಯತ್ಯಾಸವೆಂದರೆ ಕೊಟ್ಟವನ[...] ಕೋಡಂಗಿಯೆಂಬಂತೆ ಯಡ್ಡಿ ಜೈಲು ಪಾಲಾಗಿದ್ದರೆ, ಇಸ್ಕಂಡೋನು ವೀರಭ[...] ಎಂಬಂತೆ ಆರೆಸ್ಸೆಸ್ ಪ್ರಮುಖರು ಜೈಲಿಂದ ಹೊರಗಿದ್ದಾರೆ.

• ರಾ. ಸೋಮನಾಥ

ಯಡ್ಡಿ ಕದ್ದ ಕಾಸು ಮತ್ತು ಆರೆಸ್ಸೆಸ್‌ನ ಪೇಕರು ಫೇಸು!
ರದ್ದಿ ಪೇಪರಿಗೆ ಕೋಟಿ ಜಾಹಿರಾತು

ರಪ್ಪನ ಅಗ್ರಹಾರದ ಆತಿಥ್ಯ ಅನುಭವಿಸುತ್ತಿರುವ
ಮುಖ್ಯಮಂತ್ರಿ ಯಡಿಯೂರಪ್ಪ ಮಾಡಿಟ್ಟ
ತರಗಳು ಒಂದೆರಡಲ್ಲ. ಈ ಆಸಾಮಿ
ರದಲ್ಲಿದ್ದಷ್ಟೂ ದಿನ ಓಲೈಕೆ, ಸ್ವಕುಟುಂಬ
ಯ ಹೊರತಾಗಿ ಬೇರೊಂದು ಕಸುಬು ಮಾಡಿದ
ಪುರಾವೆ ಸಿಗಲಿಕ್ಕಿಲ್ಲ. ಯಡಿಯೂರಪ್ಪ ಈ ರೀತಿ ಹಗಲು
ನಡೆಸಿದರೂ ಪೇಜಾವರರಂಥ ಸ್ವಾಮಿಗಳ್ಯಾಕೆ
ಪಕ್ಷಪಾತವಹಿಸಿ ಮಾತಾಡುತ್ತಾರೆಂಬುದು ಪ್ರತಿ
ಗೂ ತಿಳಿದಿರುವ ವಿಚಾರ. ಆದರೆ ಶಿಸ್ತಿನ ಪಳೆ
ಳಂತೆ ಪೋಸು ಕೊಡುವ ಆರೆಸ್ಸೆಸ್ ಲಾಠಿವೀರರೇಕೆ
ವರ್ತಿಸುತ್ತಿದ್ದಾರೆಂಬುದು ಜನರನ್ನು ಬಿಡದೇ
ಡುವ ಪ್ರಶ್ನೆ. ಅದಕ್ಕೀಗ
ಉತ್ತರ ಸಿಕ್ಕಿದೆ. ಜೊತೆಗೆ
ದಿಗಂತವೆಂಬ ರದ್ದಿ
ಯಡ್ಡಿಯ
ಂದಲೇ ಲಭಿಸಿದ
, ಕೋಟಿ ಮೊತ್ತದ
ಜಾಹೀರಾತುಗಳ
ಸರಿ ಅಂಕಿ-ಅಂಶಗಳೂ
ಸಿಗೊಂಡಿವೆ!
ಸ್ಸೆಸ್ ಅಂತರ್ಯಕ್ಕೆ ಅಕ್ಷರ
ಡುವ ಏಕಮಾತ್ರ
ಯೊಂದಿಗೆ ಅಚ್ಚಾಗುತ್ತಾ
ಪತ್ರಿಕೆ ಹೊಸ ದಿಗಂತ.
ಪತ್ರಿಕೆ ಪ್ರಾರಂಭವಾದದ್ದು
ಲ್ಲಿ, ಅಲ್ಲಿಂದೀಚೆಗೆ ಇದರ
ಅಂತದ್ದೇ ಇಲ್ಲ
ಪ್ರತಿಕೋದ್ಯಮದ
ಮುಂತೆಯೇ
ಟ್ಟಿದೆ. ಆದರೆ ಆರೆಸ್ಸೆಸ್
ದಿವ್ಯದೃಷ್ಟಿಯ ಹೊರತಾಗಿ
ಜನವರ್ಯಾರಿಗೂ ಈ ಪತ್ರಿಕೆಯ ಪ್ರತಿಗಳು
ವಾಗಿ ಸಿಕ್ಕ ಉದಾಹರಣೆಗಳಿಲ್ಲ!
ಹೊಸ ದಿಗಂತ ಮಂಗಳೂರು ಸುತ್ತಮುತ್ತಲೇ
ಸಿಕೊಳ್ಳಲು ಹೆಣಗಾಡುತ್ತಿದೆ. ಇತ್ತೀಚೆಗಂತೂ
ಶವಾಸನ ಹಾಕಿಬಿಟ್ಟಿದೆ. ಕಳೆದ 32 ವರ್ಷಗಳ
ವಧಿಯಲ್ಲಿ ಸದರಿ ಪತ್ರಿಕೆಯದ್ದು ಇದೇ ದೈನೇಸಿ
ಬಿಜೆಪಿ ಪಕ್ಷ ರಾಜ್ಯಾಧಿಕಾರ ವಹಿಸಿಕೊಳ್ಳುತ್ತಲೇ
ಂತಕ್ಕೆ ಏಕಾಏಕಿ ಆಕ್ಸಿಜನ್ನು ಸಿಕ್ಕಂತಾಯ್ತು. ಅಡ್ನಾಡಿ
ದಕ್ಕಿಸಿಕೊಳ್ಳಲೋಸ್ಕರ ಮಾಧ್ಯಮವೊಂದರ
ರಲೆಂಬ ಕಾರಣಕ್ಕೆ ಖದೀಮ ಯಡ್ಡಿಯೂರಪ್ಪ
ಔಕಸದಿಂದಲೇ ಮೊಗೆಮೊಗೆದು ಈ ಲಡ್ಡಾಸು
ಣ ಕೊಟ್ಟ. ಇದರ ಬಲದಿಂದಲೇ ಬೆಂಗಳೂರು
ಮವಾಗಿ ಅದರ ಬೆನ್ನಿಗೇ ಶಿವಮೊಗ್ಗದಲ್ಲಿ 'ದಿಗಂತ'
ಸಂಭವಾಯ್ತು.
ದಿಗಂತದ ಸಂಪಾದಕನೆನ್ನಿಸಿಕೊಂಡಿರುವ ದು.ಗು.
ಬಕೀಟು ಪತ್ರಕರ್ತ ಯಡ್ಡಿ ಎಡವಿದಾಗೆಲ್ಲಾ
ಬ್ದರಳಲ್ಲಿ ರಕ್ತ ಚಿಮ್ಮಿದಂತೆ ಪುಟ ತುಂಬಿಸಿದ.
ಡಿ ವರ್ತನೆಯಿಂದಾಗಿಯೇ ಬೆಂಗಳೂರು ಸೇರಿ
ವ ಭಾಗದಲ್ಲೂ ಹೊಸ ದಿಗಂತ ನೆಲೆಗೊಳ್ಳಲೇ
ಗಂತೂ ಕರುನಾಡಿನ ಯಾವುದೇ
ವೆಂಡರುಗಳು, ಏಜೆಂಟರುಗಳು
ಗಂತದ ಹೆಸರೆತ್ತಿದರೆ ಬೆಚ್ಚಿಬೀಳು
ಪರಿಸ್ಥಿತಿಯಿದೆ. ಇಂಥಾ ಬರಗೆಟ್ಟ
ರ್ನಾಟಕ ಕಂಡ ಕಡುಗಳ್ಳ ಮುಖ್ಯ
ಜಿ) ಯಡಿಯೂರಪ್ಪ ಆರು ತಿಂಗಳ
ಲ್ಲೇ ಕೋಟಿ ಮೊತ್ತದ ಜಾಹೀರಾತು
!
ಯ ಅಂಶವೆಂದರೆ, ಅಷ್ಟು
ಜಾಹೀರಾತು ಪಡೆಯುವ ಕನಿಷ್ಠ
ಹೊಸ ದಿಗಂತಕ್ಕಿಲ್ಲ, ಇದಕ್ಕೆ ಬೇಕಾದ ಪ್ರಸಾರ
ಗಲಿ, ಸೆಂಟ್ರಲ್ ಆಡಿಟ್ ಬ್ಯೂರೋ ಆಫ್
ದ ಅನುಮೋದನೆಯಾಗಲಿ ಇಲ್ಲ. ಹಿರಿಯ
ಮತ್ತು ಮಾಜಿ ಎಂಎಲ್‌ಸಿ ಪಿ. ರಾಮಯ್ಯ ರೂಪಿಸಿ
ನುಸಾರ ಜಿಲ್ಲಾ ಮಟ್ಟದ ದಿನಪತ್ರಿಕೆಯಾದರೆ
ರ ಪ್ರತಿ ಮಾರಾಟವಾಗಬೇಕು. ಪ್ರಾದೇಶಿಕ
ಮಾನ್ಯತೆ ಹೊಂದಲು ಎರಡು ಜಿಲ್ಲೆ
ಪ್ರಕಟಣೆ ಹೊಂದಿರುವುದು ಕಡ್ಡಾಯ. ಇನ್ನು

• ಸಂತೋಷ್ ಬಾಗಿಲಗದ್ದೆ


ರಾಜ್ಯ ಪತ್ರಿಕೆಯೆಂದಾಗಬೇಕಿದ್ದರೆ 75 ಸಾವಿರ ಪ್ರತಿ ಮಾರಾಟವಾಗಲೇಬೇಕು. ಜೊತೆಗೆ ರಾಜ್ಯದ ಕನಿಷ್ಠ ಹತ್ತೊಂಭತ್ತು ಜಿಲ್ಲೆಯಲ್ಲಾದರೂ ಆಸ್ತಿತ್ವ ಹೊಂದಿರಬೇಕು. ಇದಿಷ್ಟೇ ಅಲ್ಲದೆ 2001 ರಲ್ಲಿ ರಾಜ್ಯ ಸರ್ಕಾರವೇ ಹೊರಡಿಸಿರುವ ಆದೇಶದ ಪ್ರಕಾರ ಯಾವುದೇ ಪತ್ರಿಕೆ ಸರ್ಕಾರಿ ಜಾಹೀರಾತು ಪಡೆಯಬೇಕೆಂದರೆ ಎಬಿಸಿ ಸರ್ಟಿಫಿಕೇಟ್ ಇರಲೇಬೇಕು. ಇವಿಷ್ಟರಲ್ಲಿ ಒಂದೇ ಒಂದು ಅರ್ಹತೆಯೂ ಇಲ್ಲದ ಹೊಸ ದಿಗಂತ ನಂ.1 ಪತ್ರಿಕೆಗಳನ್ನೂ ಹಿಂದಿಕ್ಕಿ ಜಾಹೀರಾತು ಹೊಡೆದುಕೊಂಡಿದೆಯೆಂದರೆ ಇದು ಆಕ್ರಮವಲ್ಲದೆ ಮತ್ತೇನು?



ಈ ಅಖಂಡ ಅಕ್ರಮದ ವಿರುದ್ಧ ರಾಜ್ಯ ಮಾಹಿತಿ ವಿನಿಮಯ ಇಲಾಖೆಯ ನಿರ್ದೇಶಕ ಮುದ್ದು ಮೋಹನ್ ಕಳೆದ ಮಾರ್ಚ್ 17 ರಂದು ರಾಜ್ಯ ಸರ್ಕಾರಕ್ಕೊಂದು ಪತ್ರ ಬರೆದಿದ್ದರು. ಈ ಮೂಲಕ ಎಬಿಸಿ ಸರ್ಟಿಫಿಕೆಟ್ ಇಲ್ಲದ ಪತ್ರಿಕೆಗಳನ್ನೆಲ್ಲ ರಾಜ್ಯ ಪತ್ರಿಕೆಯೆಂದು ಪರಿಗಣಿಸಬಾರದೆಂದು ಆಗ್ರಹಿಸಿದ್ದರು. ಈ ಪತ್ರವನ್ನು ತಿಪ್ಪೆಗೆಸೆದ ಅಡ್ನಾಡಿ ಯಡ್ಡಿ ಏಪ್ರಿಲ್ 13 ರಂದು ಹೊಸ ದಿಗಂತ ರಾಜ್ಯಮಟ್ಟದ ಪತ್ರಿಕೆ ಎಂದು ಘೋಷಿಸಿದ.

ಇದಕ್ಕೂ ಮೊದಲು ಸಹ ಜಿಲ್ಲಾ ಮಟ್ಟದ ಜಾಹೀರಾತುಗಳೆಲ್ಲ ಹೊಸ ದಿಗಂತಕ್ಕೆ ಅಕ್ರಮವಾಗಿ ಹರಿದು ಬಂದಿದ್ದವು. ಇಂಥದ್ದೇ ಜಾಹೀರಾತಿಗೆ ಜಿಲ್ಲಾ ಪತ್ರಿಕೆಗಳನೇಕವು ನ್ಯಾಯಯುತವಾಗಿ ಅರ್ಜಿ ಸಲ್ಲಿಸಿದರೂ ಸಿಗಲಿಲ್ಲ. ಅಂದಹಾಗೆ ಇದು ಕೇವಲ ರಾಜ್ಯ ಸರ್ಕಾರದಿಂದ ನೇರವಾಗಿ ಹೊಸ ದಿಗಂತದ ಉಡಿ ಸೇರಿದ ಜಾಹೀರಾತಿನ ಲೆಕ್ಕವಷ್ಟೆ. ಇನ್ನು ಬೇರೆ ಬೇರೆ ಇಲಾಖೆಗಳಿಂದ ಅದೆಷ್ಟು ಮೊತ್ತದ ಜಾಹೀರಾತು ಈ ರದ್ದಿ ಪತ್ರಿಕೆಯ ಪಾಲಾಯಿತೋ; ಯಡ್ಡಿ ಮತ್ತವನ ಬಕೀಟು ದು.ಗು. ಲಕ್ಷ್ಮಣನಿಗೇ ಗೊತ್ತು!

ಇಷ್ಟೆಲ್ಲಾ ಅಕ್ರಮಗಳ ಮೂಲಕವೇ ಉಸಿರುಳಿಸಿಕೊಂಡಿರುವ ಈ ಪತ್ರಿಕೆಯ ಟೈಟಲ್ಲಾದರೂ ಅಸಲಿಯಾ ಅಂತ ನೋಡ ಹೋದರೆ ಅಲ್ಲೂ ಅಂದಾದುಂದಿಯೇ ಬೆಳಕಿಗೆ ಬರುತ್ತದೆ. ಯಾಕೆಂದರೆ ಇದರ ಹೆಸರೇ ಕಾನೂನುಬದ್ಧವಲ್ಲ! ಅಸಲಿಗೆ ಹೊಸ ದಿಗಂತವೆಂಬ ಟೈಟಲ್ಲು ಚಿಕ್ಕಮಗಳೂರಿನ ಸಂಸ್ಥೆಯೊಂದರ ಮಾಲೀಕತ್ವದಲ್ಲಿದೆ. ಈ ಬಗ್ಗೆ ಚೂಡಾಮಣಿ ಅಯ್ಯರ್ ಎಂಬಾತ 1980 ರಲ್ಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲೊಂದು ದೂರು ನೀಡಿದ್ದರು. ಆರೆಸ್ಸೆಸ್ ಮೂಲದವರೇ ಆಗಿರುವ ಅಯ್ಯರ್ ಕಳೆದ ಜೂನ್‌ನಲ್ಲಿ ಇದೀಗ ಹೊಸ ದಿಗಂತ ಮುನ್ನಡೆಸುತ್ತಿರುವ ಜ್ಞಾನಭಾರತಿ ಟ್ರಸ್ಟ್ ವಿರುದ್ಧ ಇನ್ನೊಂದು ಕೇಸ್ ಜಡಿದಿದ್ದರು. ಆದರೂ ಕೂಡಾ ಕದ್ದ ಟೈಟಲ್ಲಿನಲ್ಲೇ ಥರಥರದ ಆಟಗಳು ಈ ಕ್ಷಣಕ್ಕೂ ಜಾರಿಯಲ್ಲಿವೆ.



ಈಗ ಜ್ಞಾನಭಾರತಿ ಟ್ರಸ್ಟ್‌ನ ಸಿಇಓ ಆಗಿರುವಾತ ಪ್ರಕಾಶ್. ಸಂಸ್ಥೆಯ ಅನ್ನದಾತ ಯಡ್ಡಿಯೇ ಜೈಲು ಪಾಲಾಗಿರುವ ಈ ಸಂದರ್ಭದಲ್ಲಿ ಪ್ರಕಾಶ್ ತಲೆ ಉಳಿಸಿಕೊಳ್ಳಲೋಸ್ಕರ ತರಹೇವಾರಿ ಕಥೆ ಹೆಣೆಯುತ್ತಿದ್ದಾನೆ. 'ಹೌದು, ನಮ್ಮ ಪೇಪರಿಗೆ ABC ಸರ್ಟಿಫಿಕೇಟ್ ಇಲ್ಲ. ಆದರೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪತ್ರಿಕೆ ಪ್ರಸಾರ ಹೊಂದಿದೆ. ಇನ್ನು ಟೈಟಲ್ ವಿವಾದವನ್ನು ನಾವು ನಾವೇ ಬಗೆಹರಿಸಿಕೊಂಡಿದ್ದೇವೆ' ಅಂತೆಲ್ಲಾ ತಿಪ್ಪೆ ಸಾರಿಸುತ್ತಿದ್ದಾನೆ.

ವಾಸ್ತವವಾಗಿ ಹೊಸ ದಿಗಂತದ ಒಟ್ಟು ಪ್ರಸಾರ ಸಂಖ್ಯೆ ಮೂವತ್ತು ಸಾವಿರ ದಾಟುವುದೂ ಕಷ್ಟವಿದೆ. ಇನ್ನು ದಕ್ಷಿಣ ಕನ್ನಡದಲ್ಲಿ ಹೊಸ ದಿಗಂತವೇ ನಂ. 1 ಅನ್ನುವುದೂ ಕೂಡಾ



ಶುದ್ಧ ಮೂರ್ಖತನ. ನಿಖರವಾಗಿ ಹೇಳಬೇಕೆಂದರೆ, ಹೊಸ ದಿಗಂತವೆಂಬುದು ಪತ್ರಿಕೆ ಅಂತ ದು.ಗು. ಲಕ್ಷ್ಮಣ ಮತ್ತು ಒಂದಷ್ಟು ಕಟ್ಟರ್ ಆರೆಸ್ಸಿಸ್ಸಿಗರನ್ನು ಹೊರತುಪಡಿಸಿ ಮತ್ತ್ಯಾರೂ ಅಂದುಕೊಂಡಿಲ್ಲ!

ಹೊಸ ದಿಗಂತವೆಂಬ ರದ್ದಿ ಪತ್ರಿಕೆಯನ್ನು ಸರ್ಕಾರದ ದುಡ್ಡಲ್ಲೇ ಪೊರೆದ ಯಡಿಯೂರಪ್ಪ ಆರೆಸ್ಸೆಸ್‌ಗಾಗಿ ಮಿನಿ ಭೂದಾನ ಚಳವಳಿಯನ್ನೇ ಮಾಡಿ ಮುಗಿಸಿದ್ದಾನೆ. ಮಾತೆತ್ತಿದರೆ ಶಿಸ್ತು ಬೋಧಿಸುವ ಆರೆಸ್ಸೆಸ್ ಖದೀಮರು ಯಡ್ಡಿ ಹಾದಿ ಬಿಟ್ಟರೂ ಅದರ ವಿರುದ್ಧ ಮಾತಾಡದಿದ್ದುದು ಏಕೆಂಬುದೂ ಇದೀಗ ಬಟಾಬಯಲಾಗಿದೆ. ಯಡಿಯೂರಪ್ಪ ತನ್ನ ಅಡ್ನಾಡಿ ಕೆಲಸದ ಬಗ್ಗೆ ಉಸಿರೆತ್ತದಿರಲೆಂಬ ಕಾರಣಕ್ಕೆ ಕೆಲ ಆರೆಸ್ಸೆಸ್ ಮುಖ್ಯಸ್ಥರುಗಳಿಗೆ ಭೂಮಿ ಹಂಚಿದ್ದೀಗ ಮಾಧ್ಯಮಗಳಲ್ಲಿ ಜಾಹೀರಾಗಿದೆ.


ಇದನ್ನು ಹೊರತುಪಡಿಸಿಯೂ ಆರೆಸ್ಸೆಸ್ ಸಂಸ್ಥೆ ಮತ್ತದರ ಬಾಲ-ಬಳ್ಳಿಗಳಿಗೆಲ್ಲ ಯಡ್ಡಿ ಕೋಟಿ ಕೋಟಿಯ ಬೆಲೆ ಬಾಳುವ ಭೂಮಿಯನ್ನು ಧಾರೆಯೆರೆದಿದ್ದಾನೆ. ದೊಡ್ಡಬಳ್ಳಾಪುರದ ಸ.ನಂ. 38 ರ ತೂಬಗೆರೆಹಳ್ಳಿಯಲ್ಲಿ 7.20 ಎಕರೆ, ಅಲ್ಲೇ ಸ.ನಂ. 47 ರಲ್ಲಿ ಕೆಳಗಿನ ಜುಗಣಹಳ್ಳಿಯಲ್ಲಿ 36 ಎಕರೆಯನ್ನು 8.07.2000 ರ ಒಂದೇ ದಿನ ಆರೆಸ್ಸೆಸ್‌ಗೆ ಮಂಜೂರು ಮಾಡಲಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಕೆಳಗಿನ ನಾಯಕನಹಳ್ಳಿಯ ಸ.ನಂ. 5 ರಲ್ಲಿ 6.20 ಎಕರೆ, ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕು ಮಳ್ಳಿಗಾರಹಳ್ಳಿಯಲ್ಲಿ 5.18 ಎಕರೆ ಹಾಗೂ 1.09.10 ರಲ್ಲಿ ದೊಡ್ಡಬಳ್ಳಾಪುರದಲ್ಲಿ ಅಖಂಡ 50 ಎಕರೆ ಶಿಸ್ತಿನ ಸಿಪಾಯಿಗಳ ಆರೆಸ್ಸೆಸ್ ಉಡಿಸೇರಿದೆ.

ಇದು ಯಡಿಯೂರಪ್ಪನ ದುಷ್ಟತನಗಳ ಅನಾವರಣ. ಮಹಾನ್ ದೇಶಭಕ್ತರಂತೆ ಪೋಸು ಕೊಡುವ ಆರೆಸ್ಸೆಸ್ ಖದೀಮರ ಅಸಲೀ ಮುಖವೂ ಹೌದು. ಇನ್ನು ಹೊಸ ದಿಗಂತವೆಂಬ ಯಡಿಯೂರಪ್ಪನ ಕರವಸ್ತ್ರದ ಕಥೆಯಂತೂ ತೀರಾ ಭೀಕರ. ಯಾಕೆಂದರೆ ಆರೆಸ್ಸೆಸ್ ಹಾಗೂ ಬಿಜೆಪಿ ಮರ್ಜಿಗೆ ಬಿದ್ದು ಈ ಪತ್ರಿಕೆ ಅಖಂಡ 37 ವರ್ಷಗಳಿಂದ ನಡೆಸಿದ್ದಂತೂ ಅಕ್ಷರಶಃ ಅಕ್ಷರ ಹಾದರ. ಇಂಥಾ ಹೊಸ ದಿಗಂತಕ್ಕೆ ರಾಜಾಜಿನಗರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಬೃಹತ್ ಮೊತ್ತದ ಶೆಡ್ಡುಗಳನ್ನು ಯಡ್ಡಿ ಕಡೇ ಕ್ಷಣದಲ್ಲಿ ಕರುಣಿಸಿದ್ದಾನೆ.

ಆದರೆ, ಇಂಥಾ ಅಡ್ನಾಡಿ ಕೆಲಸಗಳ್ಯಾವುವೂ ಯಡ್ಡಿ ಪರಪ್ಪನ ಅಗ್ರಹಾರ ಸೇರುವುದನ್ನು ತಪ್ಪಿಸಲು ನೆರವಾಗಿಲ್ಲ. ಆರೆಸ್ಸೆಸ್ ಮಂದಿ ಏನೇ ಬೊಗಳಿದರೂ ಯಡ್ಡಿ ಜೈಲಿಂದ ಪಾರಾಗಲು ಸಾಧ್ಯವಿಲ್ಲ. ಆತನದ್ದೇ ಹೊಸ ದಿಗಂತದಲ್ಲಿ ಏನೇ ಕೆರೆದರೂ ಪ್ರಯೋಜನವಿಲ್ಲ.

ಇದು ಕರ್ನಾಟಕದ ಸೌಭಾಗ್ಯ!

ದು.ಗು. ಲಕ್ಷ್ಮಣನೆಂಬ ಮಹಾನ್ ಪ್ರತಿಭೆ!


ದು.ಗು.ಲಕ್ಷ್ಮಣ

ಯಾರ ಮುಂದೆ ಯಾವ ಆ್ಯಂಗಲ್ಲಿನಲ್ಲಿ ಬಕೀಟು ಒಡ್ಡಿದರೆ ಯಾವ್ಯಾವ ಬಾಬತ್ತು ದಕ್ಕುತ್ತದೆ, ಅಕ್ಷರಗಳನ್ನು ಅಲ್ಯೂಮಿನಿಯಂ ತಟ್ಟೆಯಂತೆ ಆಳುವವರ ಮುಂದೆ ಒಡ್ಡುವುದು ಹೇಗೆ- ಇಂಥಾ ವಿಚಾರಗಳಲ್ಲಿ ಪಿಎಚ್‌ಡಿ ಮುಗಿಸಿ ಮಿಕ್ಕುವಷ್ಟು ಪ್ರತಿಭೆಯಿರುವವರು ಶ್ರೀಮಾನ್ ದು.ಗು. ಲಕ್ಷ್ಮಣ. ಪಕ್ಕಾ ಮಲೆನಾಡಿನ ಮೂಲೆಯಲ್ಲಿ ಹುಟ್ಟಿ ಲಾಠಿ ಹಿಡಿದು ದೇಶ ಸಂಚಾರ ಶುರುವಿಟ್ಟ ಲಕ್ಷ್ಮಣರು ಅಕ್ಷರ ಜಗತ್ತಿಗೆ ಕಾಲಿರಿಸಿದ್ದೇ ಮಹಾನ್ ದುರಂತ ಗಾಥೆ! ಎಂಟ್ಹತ್ತು ವರ್ಷಗಳ ಕಾಲ ಲಾಠಿ ತಿರುವಿ ಅಖಂಡ ಬ್ರಹ್ಮಚರ್ಯ(?) ಪರಿಪಾಲಿಸಿದ ಲಕ್ಷ್ಮಣ ತದನಂತರ ಇನ್‌ಕಂಟ್ಯಾಕ್ಸ್ ಅಧಿಕಾರಿಣಿಯೊಬ್ಬರನ್ನು ಮದುವೆಯಾಗಿ ದೇಶ ಸೇವೆಗೊಂದು ತಾತ್ಕಾಲಿಕ ಬ್ರೇಕು ಹಾಕಿದ. ಇದೆಲ್ಲ ಹಾಳು ಬಿದ್ದೋಗಲಿ. ಆತ ಅಕ್ಷರ ಜಗತ್ತನ್ನು ಗಬ್ಬೆಬ್ಬಿಸಿದ ರೀತಿ ಮಾತ್ರ ತೀರಾ ಅಸಹ್ಯಕರವಾಗಿದೆ.

ಆರೆಸ್ಸೆಸ್ ಲಾಠಿ ಹಿಡಿದು ಲೋಕ ಸಂಚಾರದಲ್ಲಿರುತ್ತಲೇ ವಿಕ್ರಮ ಪತ್ರಿಕೆಗೆ ಹವ್ಯಾಸಿ ಬರಹಗಾರನಾಗಿದ್ದ ಲಕ್ಷ್ಮಣ ಮದುವೆಯ ತರುವಾಯ ಹೊಸ ದಿಗಂತದ ಮಂಗಳೂರು ಆಫೀಸಿಗೆ ಸಂಪಾದಕನಾಗಿ ವಕ್ಕರಿಸಿದ. ತದನಂತರ ತಳ ಹಿಡಿದ ಪುಳಿಯೋಗರೆಯಂಥ ಬರಹಗಳಿಂದಲೇ ಪುಟ ತುಂಬಿಸಲಾರಂಭಿಸಿದ. ಸುದ್ದಿಗೋಷ್ಠಿಗಳಿಗೆ ಹಾಜರಾದ ಸಂದರ್ಭದಲ್ಲೆಲ್ಲಾ ಕೊನೇ ಸಾಲಿನಲ್ಲಿ ಕೂತು ತೂಕಡಿಸುತ್ತಾ 'ತೂಗು' ಲಕ್ಷ್ಮಣ ಅಂತಲೇ ಫೇಮಸ್ ಆದ!

ಇದಾದ ಬಳಿಕ ಬೆಂಗಳೂರಲ್ಲೊಂದು ಆವೃತ್ತಿ ತೆರೆಯಬೇಕೆಂಬ ಬಯಕೆ ಶುರುವಿಟ್ಟುಕೊಂಡ ಲಕ್ಷ್ಮಣ ಯಡ್ಡಿ ಅಧಿಕಾರ ವಹಿಸಿಕೊಳ್ಳುತ್ತಲೇ ಅದನ್ನ ಈಡೇರಿಸಿಕೊಂಡ. ಯಡ್ಡಿ ಕಡೆಯಿಂದ ಕೋಟಿ ಕೋಟಿ ಸೇಫ್ಟಿ ಫಂಡು, ಆನಂತರ ಸಿಕ್ಕ ದಂಡಿ ದಂಡಿ ಜಾಹೀರಾತುಗಳಲ್ಲೆಲ್ಲಾ ಲಕ್ಷ್ಮಣನ ಶ್ರಮ ವಿಪರೀತವಿದೆ. ಈ 'ಸೇವೆ'ಗೆಂದೇ ಕಳೆದ ಬಾರಿ ರಾಜ್ಯೋತ್ಸವ ಪ್ರಶಸ್ತಿಯನ್ನೂ ಹೊಡೆದುಕೊಂಡಿದ್ದಾನೆ.

ಇದೆಲ್ಲ ಒತ್ತಟ್ಟಿಗಿರಲಿ, ತೀರಾ ಪತ್ರಿಕೆಯನ್ನಾದರೂ ನೆಟ್ಟಗೆ ರೂಪಿಸಿದನಾ ಅಂತ ನೋಡ ಹೋದರೆ ಅಲ್ಲೂ ಕೂಡಾ ನಿರಾಸೆಯೇ ಎದುರಾಗುತ್ತದೆ. ಪ್ರತಿ ಸುದ್ದಿಯಲ್ಲೂ ಯಡ್ಡಿ ಮತ್ತು ಆರೆಸ್ಸೆಸ್ ನಡುವೆ ಬ್ಯಾಲೆನ್ಸ್ ಮಾಡಿ ಬಕೀಟು ಹಿಡಿಯವುದರಲ್ಲೇ ಈತನ ಪ್ರತಿಭೆಯೆಲ್ಲಾ ಬಸಿದು ಹೋಗುತ್ತಿದೆ. ಇನ್ನು ಯದ್ವಾತದ್ವಾ ಏನೇನೋ ಬರೆಯುವ ಈತ ತನ್ನ ಬರವಣಿಗೆಯ ಬಗ್ಗೆ ಭಲೇ ಕಾನ್ಫಿಡೆನ್ಸ್ ಇರುವ ಆಸಾಮಿ. ಈತನ ಬರಹಗಳನ್ನು ಕೊಂಡಾಡುವವರು, ಎಲ್ಲವನ್ನೂ ಸಹಿಸಿಕೊಂಡು ತೆಪ್ಪಗಿರುವವರು ಮಾತ್ರ ಹೊಸ ದಿಗಂತದಲ್ಲಿರಲು ಸಾಧ್ಯ. ನೈಜ ಪ್ರತಿಭೆಗಳನ್ನು ಏನಾದರೊಂದು ನೆಪದಲ್ಲಿ ತುಳಿದು ಅಯೋಗ್ಯರನ್ನು ಮಾತ್ರ ಸಾಕಿಕೊಳ್ಳುವುದು ಲಕ್ಷ್ಮಣನ ಖಯಾಲಿ. ಯಡ್ಡಿ ಜೈಲು ಸೇರಿದ ಸುದ್ದಿ ಎಲ್ಲಾ ದಿನಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿದರೆ, ಹೊಸ ದಿಗಂತದಲ್ಲದು ಕಂಡೂಕಾಣದಂಥ ಕಾಲಂ ಸುದ್ದಿಯಾಗಿ ಪ್ರಕಟವಾಗಿತ್ತು. ಅಲ್ಲಿಗೆ ಎಲ್ಲ ಓದುಗರಿಗೂ ಸಂಪಾದಕನ ಆಸಲಿಯತ್ತು ಅರ್ಥವಾಗಿತ್ತು. ಪತ್ರಿಕೆಯೊಂದು ರದ್ದಿಯಂತಾಗಲು ಇನ್ನೇನು ಬೇಕು ಹೇಳಿ?


ಇದೆಲ್ಲದರಿಂದಾಗಿ ಮಾರುಕಟ್ಟೆಯಲ್ಲಿ ಎಲ್ಲಾ ಪತ್ರಿಕೆಗಳು ಮುಗಿದ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಹೊಸ ದಿಗಂತ ಬಿಕರಿಯಾಗುವ ಹಂತ ತಲುಪಿದೆ. ತನಿಖೆಯೆಂಬುದು ಸರಿಯಾಗಿ ನಡೆದರೆ ಬಿಜೆಪಿ ಸಚಿವರೆಲ್ಲ ಪರಪ್ಪನ ಅಗ್ರಹಾರ ಸೇರಿದ ಮೇಲೆ ದು.ಗು. ಲಕ್ಷ್ಮಣನ ಸರದಿ ಬಂದರೂ ಆಶ್ಚರ್ಯವಿಲ್ಲ.

ಬೊಮ್ಮಾಯಿ ಬಗಲಲ್ಲಿ ರೇಪಿಸ್ಟರು, ರೌಡಿಗಳು!

ಇಬ್ಬರು ಹೆಂಡಿರ ಮುದ್ದಿನ ವಕೀಲನಾದ ಎಸ್.ಕೆ.ಅಕ್ಕಿಯ ಮೂಗಬೊಟ್ಟು ಚಟಕ್ಕೆ ಬಲಿಯಾದ ಮುಗ್ಧ ಹೆಣ್ಣು ಮಕ್ಕಳ ದೊಡ್ಡ ಲೀಸ್ಟೇ ಇದೆ. ಆದರೆ ಇವನಿಗೆ ಶನಿ ಹೆಗಲೇರಿ ದಂತಾಗಿದ್ದು ಕಳೆದ ತಿಂಗಳು. ಶಿಗ್ಗಾವಿ ತಾಲೂಕಿನ ಅಂದಲಗಿ ಗ್ರಾಮಪಂಚಾಯ್ತಿಯ ಅಧ್ಯಕ್ಷೆ ಸುನಂದಾ ನೆಗಳೂರು ಎಂಬ ದಲಿತ ಹೆಣ್ಣುಮಗಳನ್ನು ಅಕ್ಕಿ ತನ್ನ ತೀಟೆಗೆ ಬಲೆ ಬೀಸಲು ಹೋಗಿ ಒದೆ ತಿಂದು, ನಂತರ ಬಲಾತ್ಕಾರಕ್ಕೆ ಯತ್ನಿಸಿ ಅವಳಿಂದ ಕೇಸು ಜಡಿಸಿಕೊಂಡು ಅಂಡು ಸುಟ್ಟ ಬೆಕ್ಕಿನಂತೆ ಮನೆ ಸೇರಿದ್ದಾನೆ.

ನಾಡಿನ ಭೂಮಿಗೆಲ್ಲಾ ನೀರುಣಿಸಿ ಹಸಿರು ಸೀರೆ ಉಡಿಸುವ ಕನಸಿನ ಮಾತಿನಲ್ಲಿ ಜನರನ್ನು ತೇಲಾಡಿಸುತ್ತಿರುವಾತ ರಾಜ್ಯದ ಜಲಮಂತ್ರಿ ಬಸವರಾಜ ಬೊಮ್ಮಾಯಿ. ಈತನ ಬಾಯಿಂದ ಬಸವ ತತ್ವ, ಶರೀಫರ ಪದಗಳು ಧಾರಾಕಾರವಾಗಿ ಬಂದರೂ ಈತನ ಬಗಲಲ್ಲಿ ರೇಪಿಸ್ಟರು, ರೌಡಿಗಳು ರಾರಾಜಿಸುತ್ತಿದ್ದಾರೆ.

ಬೊಮ್ಮಾಯಿ ಭಂಟರಲ್ಲಿ ಶಿಗ್ಗಾವಿ ತಾಲೂಕು ಬಿ.ಜೆ.ಪಿ ಅಧ್ಯಕ್ಷ ಎಸ್.ಕೆ.ಅಕ್ಕಿ ಪ್ರಮುಖ. ವೃತ್ತಿಯಿಂದ ವಕೀಲನಾದ ಅಕ್ಕಿ ಕಳೆದ ಆರು ವರ್ಷಗಳಿಂದ ಪಕ್ಷದ ಅಧ್ಯಕ್ಷಗಿರಿಯನ್ನು ಜಾತಿ ಆಧಾರದ ಮೇಲೆ ಉಳಿಸಿಕೊಂಡಿದ್ದಾನೆ. ರಾಜ್ಯದಲ್ಲಿ ಬಿ.ಜೆ.ಪಿ ಅಧಿಕಾರಕ್ಕೆ ಬಂದಾಗಿನಿಂದ ಮಂತ್ರಿಯ ಬಲಗೈ ಭಂಟ ಎಂಬ ಖದರಿನ ಮೇಲೆ ಸರ್ಕಾರಿ ನೌಕರರಿಗೆ ಹೆದರಿಸಿ ಸುಲಿಯುತ್ತಿದ್ದಾನೆ. ನಾಲ್ಕಾರು ಕಡೆ ಈತ ಒದೆ ಕೂಡ ತಿಂದಿದ್ದಾನೆ.


ಎಸ್.ಕೆ.ಅಕ್ಕಿ

ಮುಗ್ಧೆಯ ಮಾನಕ್ಕೆ ಕೈ ಹಾಕಿದ

ಇಬ್ಬರು ಹೆಂಡಿರ ಮುದ್ದಿನ ವಕೀಲನಾದ ಎಸ್.ಕೆ.ಅಕ್ಕಿಯ ಮೂಗಬೊಟ್ಟು ಚಟಕ್ಕೆ ಬಲಿಯಾದ ಮುಗ್ಧ ಹೆಣ್ಣು ಮಕ್ಕಳ ದೊಡ್ಡ ಲೀಸ್ಟೇ ಇದೆ. ಆದರೆ ಇವನಿಗೆ ಶನಿ ಹೆಗಲೇರಿ ದಂತಾಗಿದ್ದು ಕಳೆದ ತಿಂಗಳು. ಶಿಗ್ಗಾವಿ ತಾಲೂಕಿನ ಅಂದಲಗಿ ಗ್ರಾಮಪಂಚಾಯ್ತಿಯ ಅಧ್ಯಕ್ಷೆ ಸುನಂದಾ ನೆಗಳೂರು ಎಂಬ ದಲಿತ ಹೆಣ್ಣುಮಗಳನ್ನು ಅಕ್ಕಿ ತನ್ನ ತೀಟೆಗೆ ಬಲೆ ಬೀಸಲು ಹೋಗಿ ಒದೆ ತಿಂದು, ನಂತರ ಬಲಾತ್ಕಾರಕ್ಕೆ ಯತ್ನಿಸಿ ಅವಳಿಂದ ಕೇಸು ಜಡಿಸಿಕೊಂಡು ಅಂಡು ಸುಟ್ಟ ಬೆಕ್ಕಿನಂತೆ ಮನೆ ಸೇರಿದ್ದಾನೆ.


ಮೂಲತಃ ಅಂದಲಗಿ ಗ್ರಾಮದವನೇ ಆದ ಎಸ್.ಕೆ. ಅಕ್ಕಿ ವಕೀಲಿ ವೃತ್ತಿ ಆರಂಭಿಸಿದ್ದು ಅದೇ ಗ್ರಾಮದಿಂದ. ಮದುವೆ ಮಾಡಿಕೊಂಡು ಶಿಗ್ಗಾವಿಗೆ ಸ್ಥಳಾಂತರಗೊಂಡ ಈತ ಮುಂದೆ ಸ್ವಲ್ಪೇ ದಿನದಲ್ಲಿ ಅಂದಲಗಿ ಗ್ರಾಮದಲ್ಲಿ ನಡೆದ ಶರಣಬಸಪ್ಪನ ಪುರಾಣ ಹಾಗೂ ಅದರ ಅಂಗವಾಗಿ ಆಯೋಜಿಸಲಾಗಿದ್ದ ಪ್ರವಾಸದಲ್ಲಿ ಪಾಲ್ಗೊಂಡಿದ್ದ. ಆ ಸಂದರ್ಭದಲ್ಲಿ ಜೊತೆಗೆ ಬಂದಿದ್ದ ಹೆಣ್ಣುಮಗಳೊಬ್ಬಳನ್ನ ಪ್ರವಾಸ ಮುಗಿಸಿ ಗ್ರಾಮಕ್ಕೆ ಹಿಂತಿರುಗುವಷ್ಟರಲ್ಲೇ ತಾಳಿ ಕಟ್ಟಿ ಎರಡನೆ ಹೆಂಡತಿಯಾಗಿ ಕರೆದುಕೊಂಡು ಬಂದಿದ್ದ.

ಇದಾದ ನಂತರವೂ ಹಲವಾರು ಬಾರಿ ಅದೇ ಗ್ರಾಮದಲ್ಲಿ ಗಂಡ ಹೆಂಡಿರ ನಡುವೆ ಜಗಳ ಹಚ್ಚಿ ಅದರಿಂದ ತನ್ನ ಕಾಮದ ಕಾಯಕವನ್ನು ನಡೆಸಲು ಯತ್ನಿಸಿದ್ದ ಈತನಿಗೆ ಧರ್ಮದೇಟುಗಳು ಸುಮಾರುಸಲ ಬಿದ್ದಿವೆ. ಇಂತಹ ಹೀನ ಸುಳಿಯ ಅಕ್ಕಿ ಗ್ರಾ.ಪಂ. ಅಧ್ಯಕ್ಷೆ ಸುನಂದಾ ಚಂದ್ರಪ್ಪ ನೆಗಳೂರು ಎಂಬ ಮಾನವಂತ ದಲಿತ ಮಹಿಳೆಯ ಮೇಲಿನ ಬಲಾತ್ಕಾರದ ಕೇಸಿನಲ್ಲಿ ಬೆತ್ತಲಾಗಿ ನಿಂತಿದ್ದಾನೆ.

ಅಸಲಿಗೆ ಸುನಂದಾಳನ್ನು ಗ್ರಾ.ಪಂ. ಅಧ್ಯಕ್ಷಳನ್ನಾಗಿ ಕೂರಿಸಿದ್ದೇ ಅಕ್ಕಿ. ಶಡಗರವಳ್ಳಿ ಗ್ರಾಮದಿಂದ ಹಿಂದುಳಿದ ವರ್ಗದ ಮೀಸಲಾತಿ ಆಧಾರದ ಮೇಲೆ ಚುನಾವಣೆಗೆ ಸ್ಪರ್ಧಿಸಿದ್ದ ಸುನಂದಾ ಅವಿರೋಧವಾಗಿ ಆಯ್ಕೆಯಾಗಿದ್ದಳು. ಅಧ್ಯಕ್ಷ ಸ್ಥಾನ ಹಿಂದುಳಿದ 'ಅ' ವರ್ಗದ ಪುರುಷನಿಗೆ ಮೀಸಲಿತ್ತು. ಆದರೂ ಅಕ್ಕಿ ತನ್ನ ರಾಜಕೀಯ ಕರಾಮತ್ತು ನಡೆಸಿ ಒಟ್ಟು 13 ಜನ ಸದಸ್ಯರಲ್ಲಿ 8 ಜನರ ಬೆಂಬಲದೊಂದಿಗೆ ಸುನಂದಾಳನ್ನು ಮಹಿಳಾ ಕೋಟಾದಡಿ ಅಧ್ಯಕ್ಷ ಗಾದಿಗೆ ಕೂರಿಸಿದ್ದ. ಅದಾದ ಬಳಿಕ ಅವಳ ಮೇಲೆ ತನ್ನ ಹಳದಿ ಕಣ್ಣಿನ ಪ್ರಭಾವ ಬೀರಲು ಶುರುಹಚ್ಚಿಕೊಂಡ. ಮಾತಿನಲ್ಲೇ ಬಲೆಗೆ ಹಾಕಿಕೊಳ್ಳುವ ಅಕ್ಕಿಯ ಪ್ರಯತ್ನಕ್ಕೆ ಸುನಂದಾ ಸೊಪ್ಪು ಹಾಕಲಿಲ್ಲ.



ಸುನಂದಾ

ಬಡತನದಲ್ಲೇ ಜೀವನ ಸಾಗಿಸುತ್ತಾ ಬೇರೆಯವರ ಬಳಿ ಕೂಲಿ ಮಾಡಿ ಬದುಕು ನಡೆಸುತ್ತಿದ್ದ ಸುನಂದಾಳಿಗೆ ಅಷ್ಟೊಂದು ರಾಜಕೀಯದ ಅರಿವಿಲ್ಲದ ಕಾರಣ ಹೆಣ್ಣುಪೀಡಕ ಅಕ್ಕಿಯ ವರಸೆಯನ್ನು ಅರ್ಥ ಮಾಡಿಕೊಳ್ಳಲು ಆಗದೇ ಸುಮಾರು ಒಂದೂವರೆ ವರ್ಷ ಅವನಿಂದ ಕಷ್ಟ ಅನುಭವಿಸಿದ್ದಾಳೆ. ಪ್ರತಿದಿನ ಈತ ಫೋನು ಮಾಡಿ ಅಶ್ಲೀಲವಾಗಿ ಮಾತನಾಡಿ ಅಲ್ಲಿಗೆ ಬಾ ಇಲ್ಲಿಗೆ ಬಾ ಎಂದು ಕರೆದಾಗ ಈಕೆ ಯಾರಿಗೂ ಹೇಳದೆ ಅಕ್ಕಿಯೊಂದಿಗೆ ಕದ್ದು ಹೋಗಿದ್ದಲ್ಲದೆ, ಗಂಡನಿಂದ ಸಂಶಯಕ್ಕೀಡಾಗಿ ಹಲವು ಬಾರಿ ಏಟು ಕೂಡ ತಿಂದಿದ್ದಾಳೆ. ಯಾವಾಗ ಅಕ್ಕಿ ಆಕೆಯ ಮೇಲೆ ದೈಹಿಕವಾಗಿ ತನ್ನ ಪಿಶಾಚಿ ಪ್ರವೃತ್ತಿಯನ್ನು ಪ್ರಯೋಗಿಸಲು ಮುಂದಾದನೋ ಆವಾಗ ಸುನಂದ ಠಾಣೆಯ ಮೆಟ್ಟಲು ಹತ್ತಿದ್ದಾಳೆ.


ಬಸುಬೊಮ್ಮಾಯಿ

ಸಾಹಾನಂತೆ ಬಚಾವ್ ಆದ

ಸುನಂದಾ ಅಧ್ಯಕ್ಷಳಾಗಿ ಕುರ್ಚಿಯ ಮೇಲೆ ಕೂತ ದಿನದಿಂದ ಅವಳನ್ನು ಪೀಡಿಸಲು ಶುರುಹಚ್ಚಿದ ಅಕ್ಕಿ ಕಾರಣವಿಲ್ಲದೆ ಅವಳನ್ನು ಪಕ್ಷದ ಕಾರ್ಯಕ್ರಮ, ಸಭೆ ಎಂತೆಲ್ಲಾ ಹೇಳಿ ಶಿಗ್ಗಾವಿಗೆ ಬರುವಂತೆ ಒತ್ತಾಯಿಸುತ್ತಿದ್ದ. ಜೊತೆಗೆ ಗಂಡ, ಮಾವನನ್ನು ಕರೆತರದಂತೆ ಸೂಚಿಸುತ್ತಿದ್ದ. ಇಷ್ಟೆಲ್ಲಾ ಆದರೂ ಸಭ್ಯಸ್ಥ ಕುಟುಂಬದಿಂದ ಬಂದ ಸುನಂದ ತನ್ನೊಡನೆ ಯಾರನ್ನಾದರೂ ಕರೆದುಕೊಂಡೇ ಇವನ ಬಳಿಗೆ ಬರುತ್ತಿದ್ದಳು. ಒಂದು ಬಾರಿ ತನ್ನ ತಮ್ಮನ ಉದ್ಯೋಗದ ಸಮಸ್ಯೆಯನ್ನು ಅಕ್ಕಿ ಮುಂದೆ ಹೇಳಿ ಆತನ ಸಹಾಯ ಕೋರಿದಾಗ ಆ ಕೆಲಸಕ್ಕೆ 10 ಸಾವಿರ ರೂಪಾಯಿ ಜೊತೆಗೆ ಬೆಂಗಳೂರಿಗೆ ತನ್ನೊಂದಿಗೆ ಒಬ್ಬಳೇ ಬರುವಂತೆ ಸೂಚಿಸಿದ. ಇದಕ್ಕೆ ಸುನಂದಾ ಒಪ್ಪದಿದ್ದಾಗ ಅಕ್ಕಿ "ಸಂಸದ ಪ್ರಹ್ಲಾದ್ ಜೋಶಿ ಬಳಿ ನಿನ್ನ ಕೆಲಸಕ್ಕೆ ತೆರಳಬೇಕಿದೆ. ದೆಹಲಿಗೆ ಹೋಗ... ಬಾ" ಎಂದು ಕರೆದಿದ್ದಾನೆ. ಆದರೆ ... ಹಾಕಿದ ಪ್ಲಾನ್ ಎಲ್ಲಾ ಠುಸ್ ಎಂ...


[illegible]ವಿನಮರದ



ರಾತ್ರಿ ಹೊತ್ತು ಕುಡಿದ ಅಮಲಿನಲ್ಲಿ ಸುನಂದಾಳ ಮೊಬೈ... ಫೋನ್ ಮಾಡಿ ಅಶ್ಲೀಲವಾಗಿ ಅವಳನ್ನು ಪೀಡಿಸುತ್ತಿದ್ದುದ್ದನ್ನು ಗಮನಿಸಿದ ಆಕೆಯ ಗಂಡ ಚಂದ್ರ... ಸಂಶಯ ಪಟ್ಟನಲ್ಲದೇ ಅವಳನ್ನು ಹಿಗ್ಗಾಮುಗ್ಗಾ ಥಳಿಸಿದ. ಇದರಿಂದ ಜೀವನದಲ್ಲಿ ಜಿಗುಪ್ಸೆಗೊಂಡ ಸು... ಕೆರೆಗೆ ಹಾರಿ ಆತ್ಮಹತ್ಯೆಗೂ ಪ್ರಯತ್ನಿಸಿದಳು. ಆಗ ಗಂ... ಚಂದ್ರಪ್ಪನೇ ಆಕೆಯನ್ನು ಬಚಾವ್ ಮಾಡಿದ. ಇದು ಸಂಬಂಧಿಕರಿಗೆಲ್ಲಾ ಗೊತ್ತಾಗಿ ಮನೆಯಲ್ಲೇ ಸಭೆ ಸೇರಿ... ವಿಚಾರಿಸಿದಾಗ, ಅಧ್ಯಕ್ಷ ಅಕ್ಕಿಯ ಲೀಲೆಗಳನ್ನು ಬಿಚ್ಚಿಟ್ಟಿದ್ದಾಳೆ. ಮನೆಯವರೆಲ್ಲಾ ಸೇರಿ ನಡೆದ ವಿಷಯ... ಸಚಿವ ಬೊಮ್ಮಾಯಿಯ ಗಮನಕ್ಕೆ ತರಲು ತಿಳಿಸಿದಾ... ಅದರಂತೆ ಅಕ್ಕಿಯ ಪೀಡನೆಯ ಚಿತ್ರಣವನ್ನೇ ಬರೆದು... ಮಂತ್ರಿಯ ಕೈಗಿಟ್ಟಿದ್ದಾಳೆ. ಇವಳ ಪತ್ರ ಕಂಡು ಗಾಬರಿಗೊಂಡ ಬೊಮ್ಮಾಯಿ ತಾಲೂಕು ಅಧ್ಯಕ್ಷ ಎಸ್.ಕೆ.ಅಕ್ಕಿಯನ್ನು ತನ್ನ ಹುಬ್ಬಳ್ಳಿಯ ಆದರ್ಶ ನಗರ... ನಿವಾಸಕ್ಕೆ ಕರೆಸಿ ಸಮಾ ಉಗಿದು ವಾರ್ನ್ ಮಾಡಿದ್ದಾ...


ಬೊಮ್ಮಾಯಿ ಬೈಗುಳದಿಂದ ಅಕ್ಕಿ ಸುಧಾರಿಸಿಕೊಳ್ಳಬೇಕಿತ್ತು. ಆದರೆ ಅದಕ್ಕೆ ಬದಲಾಗಿ ... ಜನ ಹಿಂಬಾಲಕರೊಂದಿಗೆ ಸುನಂದಾಳ ಮನೆಗೆ ಹೋ... ಅಕ್ಕಿ ಅಲ್ಲಿ ಗಲಾಟೆ ಮಾಡಿದ್ದಾನೆ. ಅಷ್ಟೇ ಅಲ್ಲದೆ, ಆತ... ಶಿಗ್ಗಾವಿ ಪಟ್ಟಣದ ಹಳೆಯ ಬಸ್ ನಿಲ್ದಾಣದ ರಸ್ತೆಯ... ಒಂಟಿಯಾಗಿ ಸಿಕ್ಕ ಸುನಂದಾಳನ್ನು ಎಳೆದಾಡಿದ್ದಾನೆ. ಇದರಿಂದ ಗಾಬರಿಗೊಂಡ ಈಕೆ ಗಂಡ ಚಂದ್ರಪ್ಪನನ್ನು ಕರೆಸಿಕೊಂಡು ಗ್ರಾಮಕ್ಕೆ ತೆರಳುತ್ತಿದ್ದಾಗ ದಾರಿ ಮಧ್ಯೆ ಇವರನ್ನು ತಡೆದು ಅಲ್ಲಿಯೂ ಅಸಭ್ಯವಾಗಿ ವರ್ತಿಸಿ... 'ಏನೇ ಆದರೂ ನಿನ್ನನ್ನು ಬಿಡಲ್ಲ' ಎಂದು ಧಮಕಿ ಹಾಕಿದ್ದಾನೆ.

ದಿನದಿನಕ್ಕೆ ಈತನ ಕಾಟ ಹೆಚ್ಚಾಗುತ್ತಿದ್ದುದ್ದನ್ನು ಗಮನಿಸಿದ ಸುನಂದಾಳ ಕುಟುಂಬ ತಮ... ವಾಲ್ಮೀಕಿ ಸಮಾಜದ ಮೊರೆ ಹೋಗಿದೆ. ಅವರೊಂದಿಗೆ ಸೇರಿಕೊಂಡು ಬಂಕಾಪು... ಪೊಲೀಸ್ ಠಾಣೆಯಲ್ಲಿ ಅಕ್ಕಿ ವಿರುದ್ಧ ಬಲಾತ್ಕಾರಕ್ಕೆ ಯತ್ನಿಸಿದ (ಐ.ಪಿ.ಸಿ 186... 509/354) ಪ್ರಕರಣ ದಾಖಲಿಸಿ ತಹಶಿ... ಕಚೇರಿ ಎದುರು ಪ್ರತಿಭಟನೆ ನಡೆಸಿ ಅಕ್ಕಿಯನ್ನು ಬಂಧಿಸುವಂತೆ ಒತ್ತಾಯಿಸಿ... ಇಷ್ಟೆಲ್ಲಾ ಆಗಿ ಒಂದು ವಾರ ಕಳೆದ ನಂತ... ಶಿಗ್ಗಾವಿಯ ಬಾರ್ ಅಂಡ್ ರೆಸ್ಟೋರೆಂಟ್... ಅಕ್ಕಿ ಎಣ್ಣೆ ಹಾಕುತ್ತಿದ್ದಾಗ ಆತನನ್ನು ಅರೆ... ಮಾಡುವ ನೆಪದಲ್ಲಿ ಕರೆದೊಯ್ದ ಬಂಕಾ... ಎಸ್‌ಐ ರಂಗನಾಥ ನೀಲಮ್ಮನವರ, ಅ... ಗಂಟೆಯಲ್ಲಿ ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆಗೊಳಿ... ಇಲ್ಲಿಯೂ ಕೂಡ ಸ್ಥಳೀಯ ಚಡ್ಡಿಗಳ ರಾ... ಪವರ್ ಈ ಕಚ್ಚೆಹರುಕನ ಪರ ವಾಗಿ... ಮಾಡಿದೆ.

ಚರಿತ್ರೆಯ ಖಳರನ್ನೇ ಹುಡುಕುವ ಕೋಮುವಾದಿಗಳು

ತೀರಾ ಈಚೆಗೆ ಕೊಲ್ಲಬೇಡಿ ಎಂದು ಅಂಗಲಾಚುತ್ತಿದ್ದ ಲಿಬಿಯಾದ ಸರ್ವಾಧಿಕಾರಿ ಮುಅಮ್ಮರ್ ಗಡಾಫಿಯನ್ನು ಆತನ ಜನಗಳೇ ಕೊಚ್ಚಿ ಕೊಂದು ಶವವನ್ನು ನಡೆಸಿಕೊಂಡ ರೀತಿಯನ್ನು ಕಂಡು ನನಗೆ ತಕ್ಷಣ ನೆನಪಾದದ್ದು ಲಂಕೇಶರ ಗುಣಮುಖ ನಾಟಕದ ಹಕೀಮ ಅಲಾವಿ ಖಾನ್. 'ಮಹಾ ಕವಿ ಸಾದಿ ಹೇಳಿದ, ಶರಣಾಗತನಾದವನು ಕುತಂತ್ರಿಯೆಂದು ಗೊತ್ತಿದ್ದರೂ ಆತನನ್ನು ಕ್ಷಮಿಸು, ಅವನ ಸೇವೆ ಸ್ವೀಕರಿಸು. ಸಾದತ್ ಖಾನ್ ಮತ್ತು ನಿಜಾಂ-ಉಲ್-ಮುಲ್ಕ್ ನೆಲಕ್ಕೆ ಬಿದ್ದ ಮೇಲೆ ಕೊಂದದ್ದು ವೀರನಾದವನ ಕೆಲಸವಲ್ಲ, ಅವರ ದಿವಾನ ಮರ್ಯಾದೆಗೂ ತಮ್ಮ ಮನುಷ್ಯತ್ವಕ್ಕೂ ಸಲ್ಲುವ ಕೃತ್ಯವಲ್ಲ' ಎಂದು ಬಡ ಹಕೀಮ ಅಲಾವಿ ಖಾನ್ ಚಕ್ರವರ್ತಿ ನಾದಿರ್‌ಗೆ ಹೇಳುತ್ತಾನೆ. ಅಮೆರಿಕಾದ ತೊಡೆಯ ಮೇಲೆ ಕೂತು ಸರ್ವಾಧಿಕಾರಿಗಳನ್ನು ಕೊನೆಗಾಣಿಸುವ ಉತ್ಸಾಹದಲ್ಲಿರುವ ಮುಸ್ಲಿಂ ರಾಷ್ಟ್ರಗಳು ಅದೇ ತೈಲದಾಹಿ ಅಮೆರಿಕಾದ ಬಿಗಿಮುಷ್ಟಿಯಲ್ಲಿ ಸಿಕ್ಕಿಬಿದ್ದು ಗುಲಾಮಗಿರಿಯೆಡೆಗೆ ತೆರಳುತ್ತಿರುವ ದುರಂತದ ಬಗ್ಗೆ ಯಾವ ಮುಸ್ಲಿಂ ರಾಷ್ಟ್ರವೂ ಅಷ್ಟಾಗಿ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಬರಲಿರುವ ನಾಳೆಗಳು ತೈಲ ಸಂಪತ್ತನ್ನು ಹೊಂದಿರುವ ಪುಟ್ಟ ಮುಸ್ಲಿಂ ರಾಷ್ಟ್ರಗಳ ಪಾಲಿಗೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಂದೊಡ್ಡಲಿರುವ ಅಪಾಯಗಳು ಎಷ್ಟು ಭೀಕರವಾಗಿರಲಿದೆ ಎಂಬುದನ್ನು ಸುಲಭವಾಗಿ ಅಂದಾಜಿಸಲು ಸಾಧ್ಯವಿಲ್ಲ.

ಈ ಸಂದರ್ಭದಲ್ಲಿ ನಮ್ಮ ಕಾಲದ ಯುವ ಪೀಳಿಗೆಯಲ್ಲಿ ವೈಚಾರಿಕ ಜಾಗೃತಿ ಮೂಡಿಸುವ ಸಲುವಾಗಿ ಕನ್ನಡ ವಿಶ್ವವಿದ್ಯಾಲಯವು 'ಕುವೆಂಪು ವೈಚಾರಿಕ ಪ್ರಬಂಧ ಸ್ಪರ್ಧೆ'ಯನ್ನು ಏರ್ಪಡಿಸಿತ್ತು. ಮತೀಯ ಭಯೋತ್ಪಾದನೆ, ಜಾತ್ಯತೀತ ಸಂವೇದನೆ ಮತ್ತು ಅನಿಕೇತನ ತತ್ವ -ಸ್ಪರ್ಧೆಗೆಂದು ಕೊಟ್ಟಿದ್ದ ವಿಷಯಗಳು. ಅಂತಿಮವಾಗಿ ಸ್ಪರ್ಧೆಯಲ್ಲಿ ಆಯ್ಕೆಯಾದ ಒಟ್ಟು 14 ಪ್ರಬಂಧಗಳನ್ನು ಲೇಖಕರಾದ ಡಾ.ಮೊಗಳ್ಳಿ ಗಣೇಶರು ಸಂಪಾದಿಸಿದ್ದಾರೆ. 'ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಮರೆಮೋಸದ ಧಾರ್ಮಿಕ ರಾಜ ಕಾರಣದ ಮಾರುಕಟ್ಟೆಯ ಜಾಲವು ಬಹುರೂಪಗಳಲ್ಲಿ ವ್ಯಾಪಿಸಿದ್ದರಿಂದಲೇ ಭಯೋತ್ಪಾದನೆಯು ಇಂದು ವಿಶ್ವವ್ಯಾಪಿ ಆಯಾಮವನ್ನು ಪಡೆಯುತ್ತಿರುವುದು. ನಾವು ಬದುಕುತ್ತಿರುವ ಪರಿಸರದಲ್ಲಿ ನಿಗೂಢವಾಗಿ ಬಂದು ಸೇರಿಕೊಳ್ಳುತ್ತಿರುವ ಮತೀಯ ಭಯೋತ್ಪಾದನೆಯಿಂದ ಮುಂದಿನ ಕಾಲವು ಮೂರನೇ ಮಹಾಯುದ್ಧವನ್ನು ಕಂಡರೂ ಆಶ್ಚರ್ಯ ಪಡಬೇಕಾಗಿಲ್ಲ' ಎಂಬ ಎಚ್ಚರದ ಮಾತುಗಳ ಮೂಲಕ ಸಂಪಾದಕರು ಇಂದಿನ ಯುವ ತಲೆಮಾರಿಗೆ ವೈಚಾರಿಕ ಆವರಣವನ್ನು ರೂಪಿಸಲು ಎಲ್ಲ ವಿಶ್ವವಿದ್ಯಾಲಯಗಳು ಸಜ್ಜುಗೊಳ್ಳಬೇಕಾದ ತುರ್ತಿದೆ ಎನ್ನುತ್ತಾರೆ. ಆಯ್ಕೆಯಾಗಿರುವ 14 ಪ್ರಬಂಧಗಳಲ್ಲಿ 10 ಪ್ರಬಂಧಗಳು ಹೆಣ್ಣುಮಕ್ಕಳವು ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕಿದೆ.



'ಅಮೆರಿಕ, ಭಾರತದಂತಹ ದೇಶದಲ್ಲಿ ಕೋಮುವಾದವು ಮುಸ್ಲಿಮರನ್ನು ರಾಕ್ಷಸೀಕರಿಸುವ ವಿಧಾನ ವಿಶಿಷ್ಟವಾಗಿದೆ. ಚರಿತ್ರೆಯಿಂದ ಘಜನಿ, ಘೋರಿ ಮುಂತಾದ ಲೂಟಿಕೋರ ದೊರೆಗಳ ಕೃತ್ಯಗಳನ್ನು, ವರ್ತಮಾನದಿಂದ ದಾವೂದ್ ಇಬ್ರಾಹಿಂ, ಕರೀಂಲಾಲ್‌ರಂತಹ ಕ್ರಿಮಿನಲ್ಲುಗಳ ಕೆಲಸಗಳನ್ನೇ ಅದು ಆಯ್ದುಕೊಳ್ಳುತ್ತದೆ. ಆದರೆ, ಚರಿತ್ರೆಯಿಂದ ಅಕ್ಬರ್‌ನನ್ನೋ, ಎರಡನೇ ಇಬ್ರಾಹಿಂ ತರಹದವರನ್ನೋ, ವರ್ತಮಾನದಿಂದ ಅಬ್ದುಲ್ ಕಲಾಂರಂತಹವರನ್ನೋ ಏಕೆ ಆಯ್ದುಕೊಳ್ಳುವುದಿಲ್ಲ?' ಎಂಬ ಅತಿ ಗಂಭೀರ ಪ್ರಶ್ನೆಯೊಂದನ್ನು ಸೌಮ್ಯಶ್ರೀ ಕೇಳುತ್ತಾರೆ. ಹೇಮಂತ್, ಮಹ್ಮದ್ ಅಕ್ಬರ್, ಇಸ್ಮಾಯಿಲ್ ಜಬೀರ್ ಬಾವಾಜಿ, ಮೊಹಮ್ಮದ್ ಇಕ್ಬಾಲ್, ಟಿ.ಸುಮ, ಜಯಲಕ್ಷ್ಮಿ, ಬಿ.ಜೆ.ಕಲಾವತಿಯವರ ಪ್ರಬಂಧಗಳು ಕೂಡ ಸೌಮ್ಯಶ್ರೀಯವರ ದನಿಯನ್ನು ಹೆಚ್ಚು ಪುಷ್ಟೀಕರಿಸುತ್ತಾ ತಮ್ಮ ಮೊನಚಾದ ನಿರೂಪಣೆ ಮತ್ತು ತೀಕ್ಷ್ಣನೋಟಗಳಿಂದಾಗಿ ಮತೀಯವಾದದ ... ಈ ತಲೆಮಾರು ಕಂಡು ಕೊಂಡಿರುವ ವಿವೇಚನೆಯ... ಗೌರವ ಮೂಡುವಂತೆ ಮಾಡುತ್ತವೆ.

ಪುಸ್ತಕ ಪರಿಚಯ




• ಚಂದ್ರಶೇಖರ್ ಐಜ...

ಬಿಸ್ಮಿಲ್ಲಾ ಖಾನ್, ಎ.ಆರ್.ರೆಹಮಾನ್‌ಗಳಿಂದ ... ಪ್ರಯೋಜನವನ್ನೂ ಪಡೆಯದ ಕೋಮುವಾದಿಗಳ... ನಂಜುಕಾರುವ ವಿಚಾರ ಮತ್ತು ಅಸ್ತಿತ್ವದ ಉಳಿವಿಗಾ... ಪದೇ ಹುಡುಕಿಕೊಂಡು ಹೊರಡ... ಎಮ್.ಎಫ್.ಹುಸೇನ್‌ರಂಥವರನ್ನು. ಕೋಮುವಾ... ಮತೀಯ ವಿಚಾರಗಳ ಬಗ್ಗೆ ಇಲ್ಲಿ ಪ್ರಕಟಗೊಂ... ವಿದ್ಯಾರ್ಥಿಗಳ ಪ್ರಬಂಧಗಳಲ್ಲಿ ಭಾವೋದ್ರೇಕವಾಗಲಿ ... ಆವೇಶವಾಗಲಿ ಕಾಣುವುದಿಲ್ಲ.

ಮತೀಯ ಭಯಾವತಾರ

ಸಂಪಾದಕ: ಡಾ. ಮೊಗಳ್ಳಿ ಗಣೇಶ್
ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ...
ವಿದ್ಯಾರಣ್ಯ -583 276
ಪುಟಗಳು: 112, ಬೆಲೆ: ರೂ.80, ಪ್ರಕಟಣೆ: 2...



ಈಗಲೂ ಇವನೇ ಅಧ್ಯಕ್ಷ

...ಳಿಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಆರೋಪ ...ವ ಅಕ್ಕಿಯನ್ನು ಇನ್ನೂ ಬಿ.ಜೆ.ಪಿ ತಾಲೂಕು ಅಧ್ಯಕ್ಷ ...ಲ್ಲೇ ಮುಂದುವರೆಸಿದೆ. ಬಿಜೆಪಿಯ ಜಿಲ್ಲಾಧ್ಯಕ್ಷ ...ಣ್ಣಾ ಬೇವಿನಮರದ, ಇವನ ವಿರುದ್ಧ ದೂರು ದಾಖ...ನವೇ ಕ್ರಮಕ್ಕೆ ಮುಂದಾದಾಗ ಅವರ ಮೇಲೆ ಜಾತಿ ...ಬೀಲಾಗಿದೆ. ಶಿಗ್ಗಾವಿ ಕ್ಷೇತ್ರದಲ್ಲಿ ಪ್ರಬಲರೆನಿಸಿಕೊಂಡಿ...ಚಮಸಾಲಿ ಸಮುದಾಯ ಸ್ವಜಾತಿಯ ಅಕ್ಕಿಯ ...ಗೆ ಧಕ್ಕೆ ಬರಬಾರದೆಂದು ಅದೇ ಕೋಮಿನ ...ಮರದನ ಮೇಲೆ ಒತ್ತಡ ಹೇರಿದೆ. ಇದಕ್ಕೆ ಸಂಬಂಧಿಸಿ ...ಗ್ಗಾವಿಯ ಪ್ರಭಾವಿ ಗೌಡರೊಬ್ಬರ ಮನೆಯಲ್ಲಿ ...ಖ್ಯ ಸಭೆ ಕೂಡ ನಡೆಸಲಾಯಿತು. ರೇಪಿಸ್ಟ್‌ನ ...ರೇಪಿಸಲಿಲ್ಲದವರಂತೆ ಮುಂದೆ ನಿಂತು ಅಬ್ಬರಿಸಿದ ...ಲೀಡರ್‌ಗಳು ಬೇವಿನಮರದನ ಮೇಲೆ ಎಲ್ಲಿಲ್ಲದ ...ಹೇರಿದ್ದಾರೆ. ಒಂದು ದೊಡ್ಡ ಸಮುದಾಯ ತನ್ನಿಂದ ...ಗುವ ಭಯಕ್ಕೆ ಒಳಗಾದ ಮಂತ್ರಿ ಬೊಮ್ಮಾಯಿ ...ಲ್ಲಾ ಗೊತ್ತಿದ್ದರೂ, ತೆಪ್ಪಗಾಗಿದ್ದಾರೆ.

ಲೂಟಿಗಾಗಿ ರೌಡಿಗಳಾದರು

...ಮ್ಮಾಯಿ ಶಿಗ್ಗಾವಿ ಕ್ಷೇತ್ರದ ಶಾಸಕನಾಗಿ ರಾಜ್ಯದ ...ನಾಗುತ್ತಲೇ ಎರಡ್ಮೂರು ದಶಕಗಳಿಂದ ಜ್ವಲಂತವಾಗಿ ...ಕುಡಿಯುವ ನೀರಿನ ಸಮಸ್ಯೆಯ ಜೊತೆಗೆ ನೀರಾವರಿ ...ಗಳು ಅನುಷ್ಠಾನಕ್ಕೆ ಬಂದಿದ್ದು ನಿಜ. ಸುಮಾರು 800 ...ಅನುದಾನವನ್ನು ಬೊಮ್ಮಾಯಿ ಇಲ್ಲಿಗೆ ತಂದು... ಆದರೆ ಈ ಹಣದಲ್ಲಿ ಬಹುಪಾಲು ಕಮೀಷನ್ ...ಮುಂದಾಗಿರುವ ಮಂತ್ರಿಯ ಚೇಲಾಗಳು ರೌಡಿ ...ಳಿದ್ದಾರೆ. ಅಂಥವರಲ್ಲೊಬ್ಬ ಮೊನ್ನೆ ನಡು ರಸ್ತೆಯಲ್ಲೇ ...ಪ್ರವೃತ್ತಿಯನ್ನು ಅನಾವರಣಗೊಳಿಸಿ ಬೊಮ್ಮಾಯಿ ...ಮಸಿ ಬಳಿಯುವ ಕೆಲಸವನ್ನೂ ಮಾಡಿದ್ದಾನೆ.

...ವಿ ಪುರಸಭೆಯ ಸುಪ್ರೀಂ ತಾನೆಂಬಂತೆ ವರ್ತಿಸುವ ...ಬುಳ್ಳಕ್ಕನವರ ಎಂಬ ಪುರಸಭೆ ಸದಸ್ಯ ಅನುದಾನದ ...ವಿರುದ್ಧ ಪ್ರಶ್ನಿಸಿದ ಇನ್ನೊಬ್ಬ ಸದಸ್ಯ ಆನಂದ ದಾನಿ ...ನ ಮೇಲೆ ಹಾಡಹಗಲೇ ಪುರಸಭೆ ಆವರಣದಲ್ಲಿ ...ಣಿಕ ಹಲ್ಲೆ ಮಾಡಿದ್ದಾನೆ. ಇವನ ಫರ್ಮಾನಿಗೆ ತಲೆ ...ವ ಪುರಸಭೆ ಮುಖ್ಯಾಧಿಕಾರಿ ಎಸ್.ಪಿ. ಪಾಟೀಲ ...ಸೆಯೊಂದನ್ನು ಮಾಡಿಕೊಟ್ಟು ಅಲ್ಲಿ ಖೊಟ್ಟಿ ...ಸ್ಸಿದ್ಧಪಡಿಸಿ ಹಣವನ್ನು ಲೂಟಿ ಮಾಡಲಾಗುತ್ತಿದೆ. ...ಂತಹ ಕ್ರಿಯೆಯಲ್ಲಿ ತೊಡಗಿದ್ದಾಗ ಆನಂದ ದಾನಿ ...ಡದವರಿಗೆ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದರು. ಆಗ ...ರು ಆನಂದ ದಾನಿಯ ಮೇಲೆ ಸಾವಿರಾರು ಜನರ ...ಮೇ ಹಲ್ಲೆ ಮಾಡಿದ. ಈ ದೃಶ್ಯವನ್ನು ಸೆರೆಹಿಡಿಯಲು ...ಸ್ಥಳೀಯ ಪತ್ರಕರ್ತರಿಗೂ ಒಪ್ಪಾಗಿ ಬೆದರಿಕೆ ಹಾಕಿ ...ದಾತನನ್ನು ಬೆತ್ತಲಾಗಿಸಿದ. ಹಲ್ಲೆಗೊಳಗಾದ ಸದಸ್ಯ ...ದಾನಿ ಹುಬ್ಬಳ್ಳಿ ಕಿಮ್ಸ್‌ನಲ್ಲಿ ಅಡ್ಮಿಟ್ ಆಗಿ ಈಗ ...ಸಿಕೊಂಡಿದ್ದಾರೆ. ಇಷ್ಟೆಲ್ಲಾ ಘಟನೆ ನಡೆದರೂ, ...ನ ವಿರುದ್ಧ ದಾನಿ ನೀಡಿದ ದೂರನ್ನು ದಾಖಲಿಸಿ ...ಶಿಗ್ಗಾವಿ ಪಿ.ಎಸ್.ಐ ಆರ್.ವೈ.ಭಜಮ್ಮನವರ ...ಮು ಸಾಹೇಬರು ಸುಮ್ಮನಿರು ಎಂದಿದ್ದಾರೆ. ...ಂಪ್ಲೆಂಟ್ ದಾಖಲಿಸಿಲ್ಲ" ಎಂದು ಅಮಾಯಕನಂತೆ ...ಹೊಳುತ್ತಿದ್ದಾನೆ.

...ಮ್ಮಾಯಿ ಬಗಲಲ್ಲಿ ಕುಳಿತು ಕೋಟಿ ಲೆಕ್ಕದಲ್ಲಿ ...ವ ಬುಳ್ಳಕ್ಕನವರನಂತಹ ಸದಸ್ಯರುಗಳು ಲೂಟಿ ...ಬಿ ಬದುಕುತ್ತಿದ್ದಾರೆ. ಪುರಸಭೆಗೆ ಬಂದಿರುವ ಅನು...ಕ್ಕ ಹಾಕಿದರೆ, ಶಿಗ್ಗಾವಿ ಎಂಡೋ ಸಿಮೆಂಟ್ ರಸ್ತೆ ...ಂದಿ ಕೊಳಚೆಯಿಂದ ಮುಕ್ತವಾಗಿ ಸುಂದರ ನಗರ ...ಬೇಕಿತ್ತು. ಆದರೆ ಅದ್ಯಾವುದೂ ಇಲ್ಲಿ ನಡೆದೇಯಿಲ್ಲ. ...ಮೂರು ವರ್ಷಗಳಲ್ಲಿ ನಾಲ್ಕು ಜನ ಮುಖ್ಯಾಧಿಕಾರಿ ...ಬಾಯಿಂದ ಎತ್ತಂಗಡಿಯಾಗಿದ್ದಾರೆ. ಇವರ ರೌಡಿ ...ಲೂಟಿ ದಂಧೆಯ ವಿವರಗಳನ್ನು ಶಿಗ್ಗಾವಿ ಜನ ...ಬವಿ ಬಸವರಾಜ ಬೊಮ್ಮಾಯಿ ಮುಂದೆ ಹೇಳಿ ...ವರೆ ಬೊಮ್ಮಾಯಿ ಸಾಹೇಬರು ಮಾತ್ರ ಕ್ಯಾರೆ ...ನಾಲ್ಕು ಒಳ್ಳೆ ಕೆಲಸ, ಸ್ವಲ್ಪ ಹೆಸರು ಗಳಿಸಿರುವ ಮಂತ್ರಿ ...ಮುಂದಿನ ಚುನಾವಣೆಯಲ್ಲಿ ಗೆಲ್ಲುವ ನಂಬಿಕೆ ...ದ್ದರೂ, ಅದಕ್ಕೆ ಅಡ್ಡಿಯಾಗುವುದು ಅವರೇ ಸಾಕಿ ...ಸಿಕೊಂಡಿರುವ ರೌಡಿ, ರೇಪಿಸ್ಟರು ಎಂಬುದು ...ಗಬೇಕಿದೆ.

• ಹುವಿ

ಸವದತ್ತಿ: ಎತ್ತಿನ ಗುಡ್ಡ ಫ್ಯಾಮಿಲಿಯ ಕೊಲೆಗಡುಕರು!

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಾಟೊಳ್ಳಿಯೆಂಬ ಪುಟ್ಟ ಗ್ರಾಮ ಅಕ್ಷರಶಃ ಸ್ಮಶಾನವಾಗಿದೆ. ಎರಡು ತಿಂಗಳ ಹಿಂದೆ ನಡೆದ ಭಯಾನಕ ಘಟನೆಯಿಂದ ಇಲ್ಲಿನ ಯಾರೊಬ್ಬರೂ ಚೇತರಿಸಿಕೊಂಡಿಲ್ಲ. ಇಲ್ಲಿ ನಡೆದಿರುವುದು ದಲಿತರ ಕಗ್ಗೊಲೆ. ಆದರೆ ನೊಂದ ಮಂದಿಗೆ ಒತ್ತಾಸೆಯಾಗಿ ಊರಿಗೂರೇ ನಿಂತಿದೆ; ಮೇಲ್ವರ್ಗದ ಹಂತಕ ಕುಟುಂಬದ ಹೊರತಾಗಿ.


ಮಾಟೊಳ್ಳಿಯ ಮಾದಿಗ ಸಮುದಾಯದ ಶಿಡ್ಲೆಪ್ಪ ತಳವಾರ ಮತ್ತಾತನ ಹೆಂಡತಿ ರುಕ್ಮವ್ವ ಹಾಗೂ ಲಿಂಗಾಯತ ಸಮುದಾಯದ ಮಲ್ಲಪ್ಪ ಅಂಗಡಿ ಜುಲೈ ತಿಂಗಳಲ್ಲಿ ಹತರಾಗಿದ್ದರು. ಈ ಬೀಭತ್ಸ ಘಟನೆಗೆ ಕಾರಣರಾದವರು ಇದೇ ಗ್ರಾಮದ ಲಿಂಗಾಯತ ಸಮುದಾಯದ ಎತ್ತಿನಗುಡ್ಡ ಮನೆತನದ ಕೆಂಚಪ್ಪ ಎತ್ತಿನಗುಡ್ಡವರ ಮತ್ತವನ ಪಾಪಿಷ್ಠ ಪಡೆ.



ಮಲ್ಲಪ್ಪ ಅಂಗಡಿ



ರುಕ್ಮವ್ವ




ಶಿಡ್ಲೆಪ್ಪ ತಳವಾರ

ಮಾಟೊಳ್ಳಿಯ ಸಾಮಾಜಿಕ ವಾತಾವರಣದ ವಿಚಾರಕ್ಕೆ ಬಂದರೆ ಅದೊಂದು ಆದರ್ಶ ಗ್ರಾಮ. ದೇಶಾದ್ಯಂತ ದಲಿತರನ್ನು ಊರ ಹೊರ ವಲಯದಲ್ಲಿಡುವ ಕೆಟ್ಟ ಸ್ಥಿತಿ ಜಾರಿಯಲ್ಲಿದ್ದರೆ, ಈ ಊರಿನಲ್ಲಿ ದಲಿತರ ಮತ್ತು ಲಿಂಗಾಯತರ ಮನೆಗಳು ಒತ್ತೊತ್ತಾಗಿವೆ. ಇಲ್ಲಿನ ಜನರ ಮನಸ್ಸುಗಳೂ ಕೂಡಾ ಕೋಮು ವಿಷದಿಂದ ಮುಕ್ತ ಮುಕ್ತ. ಇಂಥಾ ಊರಿಗೆ ಅಕ್ಷರಶಃ ಕಪ್ಪು ಚುಕ್ಕೆಯಂತಿರುವುದು ಲಿಂಗಾಯತ ಸಮುದಾಯಕ್ಕೆ ಸೇರಿದ ಎತ್ತಿನಗುಡ್ಡ ಮನೆ. ಇದರ ಯಜಮಾನ ಕೆಂಚಪ್ಪ ಎತ್ತಿನಗುಡ್ಡವರ ಪಕ್ಕಾ ಜಾತಿವಾದಿ ಮತ್ತು ಅಪ್ಪಟ ಕ್ರಿಮಿನಲ್. ಇಂಥವನ ಕುಡಿಮೀಸೆಯ ಮಗ ಶಿವರಾಯನಂತೂ ಅಪ್ಪನಂತೆಯೇ ಹಲಾಲುಕೋರ.

ಹೊರ ಜಗತ್ತಿಗೆ ಭಯಂಕರ ಮಡಿವಂತನಂತೆಯೂ ಮಾನವಂತನಂತೆಯೂ ಕಾಣಿಸಿಕೊಳ್ಳುತ್ತಿದ್ದ ಕೆಂಚಪ್ಪ ಹಗ್ಗ ಕಡಿದ ಹೋರಿಯಂಥವನು. ಹೆಂಗಸರ ಖಯಾಲಿಯನ್ನು ಹೇರಳವಾಗಿ ಅಂಟಿಸಿಕೊಂಡಿದ್ದ ಈತ ಆ ವಿಚಾರದಲ್ಲಿ ಮಾತ್ರ ಜಾತ್ಯತೀತ. ಯಾವ ಜಾತಿಯಾದರೂ ಸರಿ, ಯಾರ ಹೆಂಡಿರಾದರೂ ಸರಿಯೆಂಬುದು ಆತನ ಸಿದ್ಧಾಂತ. ಇಂಥಾ ಕೆಂಚಪ್ಪ ಇದೇ ಊರಿನ ದಲಿತ ಮಹಿಳೆಯೊಬ್ಬಳೊಂದಿಗೆ ಸಂಬಂಧವಿರಿಸಿಕೊಂಡಿದ್ದ. ಈ ವಿಚಾರ ಶಿಡ್ಲೆಪ್ಪ ತಳವಾರನ ಹೆಂಡತಿ ರುಕ್ಮವ್ವ ತಳವಾರಳಿಗೆ ತಿಳಿದು ಹೋಯ್ತು. ಮುಂದೊಂದು ದಿನ ಇದೇ ವಿಚಾರ ಊರ ನೆಮ್ಮದಿಗೆ ಕುತ್ತು ತರಬಾರದೆಂಬ ಕಕ್ಕುಲಾತಿಯಿಂದ ಆಕೆ ಕೆಂಚಪ್ಪನ ಸಖಿಗೆ ಬುದ್ಧಿ ಹೇಳಿದಳು.

ಆ ಮಹಿಳೆ ಕೆಂಚಪ್ಪನ ಸಹವಾಸದಿಂದ ಆರ್ಥಿಕವಾಗಿ ಒಂದಷ್ಟು ನೆಮ್ಮದಿ ಕಂಡಿದ್ದಳು. ಆದುದರಿಂದಲೇ ರುಕ್ಮವ್ವಳ ಬುದ್ಧಿಮಾತಿಗೆ ಮಸಾಲೆ ಸೇರಿಸಿ ಆತನ ಕಿವಿಯೂದಿದಳು. ತನ್ನ ಹಾದರದ ವಿರುದ್ಧ ದಲಿತ ಮಹಿಳೆಯೊಬ್ಬಳು ಮಾತಾಡಿದ್ದನ್ನು ಕೇಳಿ ಕೆಂಡಾಮಂಡಲನಾದ ಕೆಂಚಪ್ಪ ತರಹೇವಾರಿ ರೀತಿಯಲ್ಲಿ ಕಿರುಕುಳ ಕೊಡಲು ಹವಣಿಸಿದ್ದ. ಆದರೆ ಖುದ್ದು ಆತನ ಸಮುದಾಯದವರೇ ಈ ಹಾದರದ ಬಗ್ಗೆ ಅಸಹ್ಯಗೊಂಡಿದ್ದು ಗೊತ್ತಾಗಿ ಥಂಡಾ ಹೊಡೆದಿದ್ದ.



ತಬ್ಬಲಿಗಳಾದ ಪವಿತ್ರಾ, ನೇತ್ರಾವತಿ

ಇಷ್ಟೇ ಆಗಿದ್ದರೆ ಸದರಿ ದುರಂತ ನಡೆಯುತ್ತಿರಲಿಲ್ಲವೇನೋ. ಆದರೆ ಅಪ್ಪ ಕೆಂಚಪ್ಪ ತೆಪ್ಪಗಾಗುತ್ತಲೇ ಮಗ ಶಿವರಾಯ ಫೀಲ್ಡಿಗಿಳಿದಿದ್ದ. ಇಪ್ಪತ್ತೆರಡು ವರ್ಷದ ಶಿವರಾಯ ಅಪ್ಪನ ತೆವಲುಗಳೇ ತೀಡಿ ರೂಪಿಸಿದಂತಿರುವವನು. ಸುಖಾಸುಮ್ಮನೆ ದಾಂಧಲೆಯೆಬ್ಬಿಸುವುದು, ಪಾಪದ ಹುಡುಗೀರಿಗೆ ಕಾಟ ಕೊಡುವುದು ಐನಾತಿ ಶಿವರಾಯನ ಖಾಯಂ ಕಸುಬು. ಇಂಥವನ ಕಣ್ಣು ಶಿಡ್ಲೆಪ್ಪ ತಳವಾರ ಮತ್ತು ರುಕ್ಮವ್ವ ದಂಪತಿಯ ಎರಡನೇ ಮಗಳು ನೇತ್ರಾವತಿಯ ಮೇಲೆ ಬಿದ್ದದ್ದೇ ಅನಾಹುತಕ್ಕೆ ಮೂಲ ಕಾರಣ.

ನೇತ್ರಾವತಿ ಹೈಸ್ಕೂಲು ವಿದ್ಯಾರ್ಥಿನಿ. ಬಡತನದ ನಡುವೆಯೂ ಭವಿಷ್ಯತ್ತಿನ ಬಗ್ಗೆ ನಾನಾ ಕನಸುಗಳನ್ನು ಸಾಕಿಕೊಂಡಿರುವ ಸಭ್ಯ ಹುಡುಗಿ. ಇಂಥವಳ ಬೆನ್ನು ಬಿದ್ದ ಶಿವರಾಯ ಪರಿಪರಿಯಾಗಿ ಕಾಡಲಾರಂಭಿಸಿದ. ಬಹಿರಂಗವಾಗಿಯೇ ಚುಡಾಯಿಸಲಾರಂಭಿಸಿದ. ಮತ್ತೂ ಮುಂದುವರೆದು ಮದುವೆಯಾಗುವಂತೆ ಕಿರುಕುಳವನ್ನು ಕೊಡಲಾರಂಭಿಸಿದ. ಏನೋ ಹುಡುಗುಬುದ್ಧಿಯಿಂದ ಇದೆಲ್ಲ ನಡೆಯುತ್ತಿದೆಯೆಂದುಕೊಂಡು ಸಾವಧಾನದಿಂದಲೇ ವರ್ತಿಸಿದ ಶಿಡ್ಲೆಪ್ಪ ಶಿವರಾಯನ ಅಪ್ಪ ಕೆಂಚಪ್ಪನಿಗೂ ವಿಚಾರ ತಿಳಿಸಿ ಪರಿಸ್ಥಿತಿ ತಿಳಿಗೊಳಿಸಲೆತ್ನಿಸಿದ. ಆದರೆ ದುಷ್ಟ ಕೆಂಚಪ್ಪ ಮಗನ ಹಲಾಲುಕೋರತನಕ್ಕೆ ಸಪೋರ್ಟು ಮಾಡಲಾರಂಭಿಸಿದ.

ಪರಿಸ್ಥಿತಿ ಹದ್ದು ಮೀರುವುದನ್ನು ಮುನಗಂಡ ಶಿಡ್ಲೆಪ್ಪ ಅನಿವಾರ್ಯವಾಗಿ ಕೆಂಚಪ್ಪನ ಮಗನ ವಿರುದ್ಧ ಪಂಚಾಯ್ತಿ ಸೇರಿಸಿದ. ಈ ಸಂದರ್ಭದಲ್ಲಿ ಊರಿನ ಬಹುತೇಕ ಲಿಂಗಾಯತರು ದಲಿತ ಶಿಡ್ಲೆಪ್ಪನ ಪರ ನಿಂತು ಕೆಂಚಪ್ಪನಿಗೆ ಛೀಮಾರಿ ಹಾಕಿದರು. ಶಿವರಾಯನನ್ನು ಹದ್ದುಬಸ್ತಿನಲ್ಲಿಡುವಂತೆಯೂ ತಾಕೀತು ಮಾಡಿದರು. ಇದರಿಂದ ರೊಚ್ಚಿಗೆದ್ದ ಕೆಂಚಪ್ಪ ಮತ್ತವನ ಪಾಪಿ ಸಹೋದರರು ಇಡೀ ಊರಿಗೇ ಧಮಕಿ ಹಾಕಿ ಅಬ್ಬರಿಸಿದರು!

ಹೀಗೆ ಸಾರ್ವಜನಿಕವಾಗಿ ಆದ ಅವಮಾನದಿಂದ ಕುದ್ದು ಹೋದ ಕೆಂಚಪ್ಪ ತನ್ನ ಪುತ್ರರತ್ನರಾದ ಶಿವರಾಯ ಹಾಗೂ ಸೋಮಪ್ಪರೊಂದಿಗೆ ಸೇರಿ ಶಿಡ್ಲೆಪ್ಪ ತಳವಾರನ ವಿರುದ್ಧ ಸೆಟೆದು ನಿಂತವರು ಕೆಟ್ಟಾ ಕೊಳಕು ಬೈಗುಳ ಉದುರಿಸಿದ್ದಲ್ಲದೆ, ಈ ಅಪ್ಪಮಕ್ಕಳು ಶಿಡ್ಲೆಪ್ಪನ ಮಗಳು ನೇತ್ರಾವತಿಯನ್ನು ನಡುಬೀದಿಯಲ್ಲೇ ಎಳೆದಾಡಿದರು. ಈ ಸಂದರ್ಭದಲ್ಲಿ ತಡೆಯಲು ಬಂದ ಬಂಧುಗಳಿಗೇ ಬೈದು, ಹಿರಿಯರ ಮಾತನ್ನು ಧಿಕ್ಕರಿಸಿ ದುಷ್ಟತನ ಪ್ರದರ್ಶಿಸಿದರು. ಇದೆಲ್ಲದರಿಂದ ರೋಸತ್ತ ಶಿಡ್ಲೆಪ್ಪ ಮೇ 23, 2010 ರಂದು ಸವದತ್ತಿ ಪೊಲೀಸ್ ಠಾಣೆಗೊಂದು ದೂರು ನೀಡಿದ. ಸದರಿ ದೂರಿನ ಬಗ್ಗೆ ಕೋರ್ಟ್ ವಿಚಾರಣೆ ನಡೆದಾಗ ಲಿಂಗಾಯತ ಸಮುದಾಯದ ಮಲ್ಲಪ್ಪ ಅಡಕೆ ಮತ್ತು ಈರಪ್ಪ ಅಂಗಡಿ ಶಿಡ್ಲೆಪ್ಪನ ಪರ ಸಾಕ್ಷಿ ಹೇಳಿದರು. ಆದರೆ ಡಿವೈಎಸ್‌ಪಿ ಶಿವಕುಮಾರ ರೆಡ್ಡಿ ಪಾಟೀಲ ಕೆಂಚಪ್ಪನಿಗೆ ಅನುಕೂಲವಾಗುವ ರೀತಿಯಲ್ಲಿ ವರದಿ ತಯಾರು ಮಾಡಿ ಅನ್ಯಾಯ ಮುಚ್ಚಿ ಹಾಕಿದ. ಇದೇ ಮಹಾ ದುರಂತವೊಂದಕ್ಕೆ ನಾಂದಿಯಾಗುತ್ತದೆಂಬ ಖಬರು ಆ ಖಾಕಿವೀರನಿಗೆ ಕಿಂಚಿತ್ತೂ ಇರಲಿಲ್ಲ.

ಹೀಗೆ ಪೊಲೀಸು ಮಸಲತ್ತಿನಿಂದ ಬಿಡುಗಡೆಯಾಗಿ ಹೊರಬಂದ ಕೆಂಚಪ್ಪನ ಪಾಪಿ ಪಡೆ ಹಿಂದಿಗಿಂತಲೂ ಹೆಚ್ಚಾಗಿ ಅಬ್ಬರಾಟ ಶುರುವಿಟ್ಟಿತು. ಇಡೀ ಊರಿನ ನೆಮ್ಮದಿ ಕೆಡಿಸುವ ಕೇಡಿ ಕೆಲಸಕ್ಕೆ ಕೈಹಾಕಿತು. ಶಿಡ್ಲೆಪ್ಪ ದಂಪತಿ ಎದುರು ಸಿಕ್ಕಾಗಲೆಲ್ಲಾ 'ನಮ್ಮ ವಿರುದ್ಧ ಕೇಸ್ ಹಾಕಿ ಏನ್ ಹರಕೊಂಡ್ರಿ' ಅಂತ ಹೀಯಾಳಿಸತೊಡಗಿತು. ಇವರ ಉಪಟಳ ಅತಿರೇಕಕ್ಕೆ ಹೋದಾಗ ಶಿಡ್ಲೆಪ್ಪ ಜಿಲ್ಲಾ ಕೋರ್ಟಿಗೆ ಅಪೀಲು ಹಾಕಲು ನಿರ್ಧರಿಸಿದ.

ಈ ಸಂಬಂಧ ಜುಲೈ 19, 2011 ರಂದು ಶಿಡ್ಲೆಪ್ಪ ಹೆಂಡತಿ ರುಕ್ಮವ್ವ, ಮಗ ಮಂಜುನಾಥ ಮತ್ತು ಸದರಿ ದೂರಿಗೆ ಸಾಕ್ಷಿ ಹೇಳಿದ್ದ ಲಿಂಗಾಯತ ಮಲ್ಲಪ್ಪ ಅಂಗಡಿಯೊಂದಿಗೆ ಬೆಳಗಾವಿಯ ಕಡೆ ಹೊರಟಿದ್ದ. ಇಲ್ಲಿಂದ್ದ 2 ಕಿಮಿ ದೂರದಲ್ಲಿ ಬಸ್‌ಸ್ಟಾಪ್ ಇದೆ. ಆದರೆ ಶಿಡ್ಲೆಪ್ಪ ಹೀಗೊಂದು ತಂತ್ರ ಅನುಸರಿಸುವ ವಿಚಾರ ತಿಳಿದ ಕೆಂಚಪ್ಪ, ಮಕ್ಕಳು ಮರಿ, ಅಣ್ಣ ತಮ್ಮಂದಿರಿದ್ದ 17 ಮಂದಿಯ ತಂಡ ರೆಡಿ ಮಾಡಿ ನಡುಬೀದಿಯಲ್ಲೇ ಶಿಡ್ಲೆಪ್ಪ, ರುಕ್ಮವ್ವ ಹಾಗೂ ಮಲ್ಲಪ್ಪ ಅಂಗಡಿಯನ್ನು ಭೀಕರವಾಗಿ ಕೊಂದು ಮುಗಿಸಿದ. ಶಿಡ್ಲೆಪ್ಪನ ಮಗ ಮಂಜುನಾಥ ಅದು ಹೇಗೋ ತಪ್ಪಿಸಿಕೊಂಡು ಪಾರಾದ. ಇದಾದ ಬಳಿಕ ಉನ್ಮತ್ತ ಧಾವಿಸಿದ ಕೊಲೆಗಡುಕರು ಶಿಡ್ಲೆಪ್ಪನ ಮನೆಗೆ ನುಗ್ಗಿ ಆತನ ಮಕ್ಕಳಾದ ಪವಿತ್ರ ಮತ್ತು ನೇತ್ರಾವತಿಯನ್ನು ಮುಗಿಸಲೆತ್ನಿಸಿತು. ಆದರೆ ಲಿಂಗಾಯತ ಸಮುದಾಯದ ಈರಪ್ಪ ಅಡಕೆ ಆ ಅಮಾಯಕ ಹೆಣ್ಮಕ್ಕಳನ್ನು ರಕ್ಷಿಸಿದರು.

ದುರಂತವೆಂದರೆ, ಸೆನ್ಸೇಷನಲ್ ಸುದ್ದಿಯ ಸನ್ನಿಗೆ ಸಿಲುಕಿರುವ ದೃಶ್ಯ ಮಾಧ್ಯಮಗಳು ಇದನ್ನೊಂದು ಸುದ್ದಿ ಅಂತಲೂ ಪರಿಗಣಿಸಿಲ್ಲ. ಇದ್ದಕ್ಕಿದ್ದಂತೆ ಲಂಗೋಟಿ ಕೊಡವಿ ಸಾಮರಸ್ಯದ ಹೆಸರಲ್ಲಿ ಪಾದಯಾತ್ರೆ ನಡೆಸುವ ಯಾವೊಬ್ಬ ಸ್ವಾಮೀಜಿಯೂ ಇತ್ತಕಡೆ ತಲೆ ಹಾಕಿಲ್ಲ. ಆದರೆ ಬಿಎಸ್‌ಪಿಯ ಯಮುನಪ್ಪ, ಸ್ನೇಹಾ ಸೀತಾರಾಂ, ಅರುಣಾ ಎನ್ ಮತ್ತು ಪ್ರಜ್ಞಾ ತಳಕೇರಿ ಮುಂತಾದವರಿದ್ದ ತಂಡ ಮಾಟೊಳ್ಳಿಗೆ ಭೇಟಿ ನೀಡಿ ನೊಂದವರಿಗೆ ಸಾಂತ್ವನ ಹೇಳಿದೆ.

ಆದರೆ ಈ ಘಟನೆಯ ಹೊರತಾಗಿಯೂ ಆ ಹಳ್ಳಿ ನಿಜಕ್ಕೂ ಆದರ್ಶಗ್ರಾಮ. ಇಲ್ಲಿ 100 ರಷ್ಟು ಲಿಂಗಾಯತ ಕುಟುಂಬಗಳಿವೆ. ಇದರ ನಡುವಲ್ಲೇ ದಲಿತರ ಮನೆಗಳೂ ಇವೆ. ಈ ಲಿಂಗಾಯತರ್ಯಾರಿಗೂ ಎತ್ತಿನಗುಡ್ಡ ಮನೆತನದ ಕೆಂಚಪ್ಪ ಮತ್ತವನ ಪಾಪಿಪಡೆಯ ಬಗ್ಗೆ ಕಿಂಚಿತ್ತೂ ಮರುಕವಿಲ್ಲ. ಬದಲಾಗಿ ಕಣ್ಣೆದುರೇ ತಬ್ಬಲಿಗಳಾದ ಮೂವರು ಎಳೇ ಮಕ್ಕಳ ಬಗ್ಗೆ ಮರುಕವಿದೆ. ಇನ್ನೂ ವಿಶೇಷವೆಂದರೆ ಲಿಂಗಾಯತ ಸಮುದಾಯದ ಮಲ್ಲಪ್ಪ ಅಂಗಡಿ-ದಲಿತರಿಗಾಗಿ ತಮ್ಮ ಜೀವನವನ್ನು ಬಲಿ ನೀಡಿದ್ದಾರೆ. ಈ ಬಗ್ಗೆ ಆತನ ಮನೆಯವರಿಗೆ ಹೆಮ್ಮೆಯಿದೆ. ಊರ ಮಂದಿಗೂ....


ಶಿಡ್ಲೆಪ್ಪನ ಮನೆಯ ವಾತಾವರಣ ಅತ್ಯಂತ ದಾರುಣ ಸ್ಥಿತಿ ತಲುಪಿದೆ. ತಂದೆ ತಾಯಿಯ ಕೊಲೆಯ ರೌರವವನ್ನ ಕಣ್ಣಾರೆ ಕಂಡ ಮಗ ಮಂಜುನಾಥ ಈ ಕ್ಷಣಕ್ಕೂ ಚೇತರಿಸಿಕೊಂಡಿಲ್ಲ. ಪುಟ್ಟ ಹುಡುಗಿ ನೇತ್ರಾವತಿಯಂತೂ ತನ್ನಿಂದಲೇ ತಂದೆತಾಯಿ ಬಲಿಯಾದರೆಂದು ಮಾನಸಿಕವಾಗಿ ಕುಗ್ಗಿ ಹೋಗಿದ್ದಾಳೆ. ಇದರಲ್ಲಿ ಕೆಂಚಪ್ಪನ ಹಲಾಲುಕೋರತೆಯ ಹೊರತಾಗಿ ಮತ್ತ್ಯಾವದ್ದೂ ತಪ್ಪಿಲ್ಲ ಎಂಬುದು ವಾಸ್ತವ.

ಇದೆಲ್ಲದರ ನಡುವೆ ಜೈಲು ಸೇರಿದ ಕೆಂಚಪ್ಪ ಬಿಡುಗಡೆಯಾಗಿ ಬಂದರೆ ಏನು ಅನಾಹುತ ನಡೆಯಬಹುದೆಂಬ ಆತಂಕ ಇಡೀ ಊರನ್ನು ಆವರಿಸಿದೆ. ಅಂತಹುದ್ಯಾವ ಅನಾಹುತವೂ ನಡೆಯದಂತೆ ತಡೆದು, ಈ ಊರಲ್ಲಿರುವ ಸಾಮರಸ್ಯವನ್ನು ಕಾಪಾಡೋ ಜವಾಬ್ದಾರಿ ಪೊಲೀಸರ ಮೇಲಿದೆ.

ಪ್ರಚಾರ ಪದ್ಯಕ್ಕೊಂದು ಪ್ರಚಾರ ವಿಮರ್ಶೆ

ಎಂ.ಡಿ.ಒಕ್ಕುಂದ ಅವರು ಅಡಿಗರ 'ಮತ್ತೆ ಮೊಳಗಲಿ ಪಾಂಚಜನ್ಯ' ಕವನದ ಬಗ್ಗೆ ಮೂರು ಕಂತುಗಳಲ್ಲಿ ಬರೆದಿರುವ 'ಅಡಿಗರ ಕೋಮುವಾದಿ ಕವನ' ಲೇಖನದ ಸ್ವರೂಪದಲ್ಲಿಯೇ ಒಂದು ವಿಪರ್ಯಾಸವಿದೆ. 'ಮತ್ತೆ ಮೊಳಗಲಿ ಪಾಂಚಜನ್ಯ' ಖಂಡಿತಕ್ಕೂ ಒಂದು 'ಪ್ರಚಾರಪದ್ಯ'. ಎಲ್ಲ ಪ್ರಚಾರ ಪದ್ಯಗಳ ಹಾಗೆ ಈ ಪದ್ಯವು ಒಂದು ಗಟ್ಟಿಗೊಂಡ ಮತೀಯ (ಐಡಿಯಲಾಜಿಕಲ್) ತೀರ್ಮಾನದಿಂದ ಶುರುವಾಗಿ, ಪದ್ಯಮೂರ್ತಿ ತನ್ನ ಮತೀಯ ನೆಲೆಯನ್ನು ವಾಸ್ತವವೆಂದು ನಂಬಿಸುವ, ವೈರಿಗಳ ಮೂರ್ತಿಯನ್ನು ಸ್ಪಷ್ಟವಾಗಿಸುವ ಹಾಗು ವೈರಿ ನಿರ್ನಾಮ 'ನಮ್ಮ' ಉಳಿವಿಗೆ ಅನಿವಾರ್ಯ ಮತ್ತು ಅಂಥ ಹೋರಾಟ ನೈತಿಕ ಹಾಗು ಧೀರೋದ್ಧಾತ ಎಂದು ಸಾರುವ ಮೂಲಕ ತನ್ನ ತೀರ್ಮಾನವನ್ನು ಬೆಂಬಲಿಸುವಂತೆ ಓದುಗ/ಕೇಳುಗರನ್ನು ಹುರಿದುಂಬಿಸುವ ರಚನೆ. ಇಲ್ಲಿ ಯಾವುದೂ ಸಮಸ್ಯೆಯಲ್ಲ ಮತ್ತು ಸಂದೇಹಕ್ಕೆ ಆಸ್ಪದವಿಲ್ಲ: ವಾಸ್ತವ-ವೈರಿ, ಸಮರ ಎಲ್ಲವೂ ಪೂರ್ವ ನಿರ್ಧಾರಿತ. ಅಡಿಗರ ಕಾವ್ಯಭಂಡಾರವನ್ನು ಓದಿ ಬಲ್ಲವರಿಗೆ ಇದು ಅಡಿಗರ ಕಾವ್ಯಕಸುಬಿನ ಜಾಯಮಾನವೇ ಅಲ್ಲ ಎಂಬುದು ತಕ್ಷಣಕ್ಕೆ ಗೊತ್ತಾಗಿ ಹೋಗುತ್ತದೆ. ಲಂಕೇಶ್ ಅಡಿಗರ ಕಾವ್ಯಶಕ್ತಿಯನ್ನು ಹೀಗೆ ವಿವರಿಸುತ್ತಾರೆ: "ಪ್ರತಿಭಟನೆಯನ್ನೂ, ಭೌದ್ಧಿಕತೆಯನ್ನೂ ಒಳಗೊಂಡ ಜೀವನಾಸಕ್ತಿ, ರಾಷ್ಟ್ರದ ಅಥವಾ ಸಮಾಜದ ದುರಂತವನ್ನು ಸಾರ್ವತ್ರಿಕ ದೃಷ್ಟಿಕೋನದಿಂದ ನೋಡಿ ಹುಂಬತನದಿಂದ ಸ್ವೀಕರಿಸದೆ ಸ್ವಂತ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡುವ, ಸ್ವಂತಿಕೆಯನ್ನೂ ಮೀರಿದ ಪರಿಕರಗಳ ಮೂಲಕ ಸಂಬಂಧಗಳನ್ನೂ, ವೈಷಮ್ಯಗಳನ್ನೂ ಕವನದಲ್ಲಿ ಸಮತೂಗಿಸುವ ಕವಿತ್ವಶಕ್ತಿ" ('ಅಕ್ಷರ ಹೊಸಕಾವ್ಯ', ಪತ್ರಿಕೆ ಪ್ರಕಾಶನ, 1993, ಪುಟ-21). ಒಕ್ಕುಂದ ಅವರ ವಿಮರ್ಶೆಗೆ ಅಡಿಗರ ಒಂದು ಪ್ರಚಾರ ಪದ್ಯಕ್ಕೂ ಅವರ ಕವಿತ್ವ ಶಕ್ತಿಗೂ ನಡುವೆ ಇರುವ ಬಿರುಕು ಒಂದು ಸಮಸ್ಯೆಯೇ ಅಲ್ಲ. ಪ್ರಸ್ತುತ ಪದ್ಯ ಕೋಮುವಾದಿ ಪ್ರಚಾರ ಪದ್ಯವಾಗಿರುವುದರಿಂದ ಅಡಿಗರ ಕಾವ್ಯಕಸುಬು ಪೂರ 'ಹಿಂದೂತ್ವ ಕೋಮುವಾದ'ದ ಮತೀಯತೆಯ ಪೋಷಣೆಗೆ ಮೀಸಲಾಗಿದೆ ಎಂಬ ತೀರ್ಮಾನದಿಂದ ಶುರುವಾಗಿ, ಪ್ರಚಾರ ಪದ್ಯದ ಮಾದರಿಯಲ್ಲಿಯೇ ಅಡಿಗರ ಕಾವ್ಯ ಭಂಡಾರವೇ ಹಿಂದೂತ್ವ ಕೋಮುವಾದದ ಮತೀಯ ಸಲಕರಣೆ ಎಂದು ಬಗೆ ಬಗೆಯಲ್ಲಿ ಓದುಗರಿಗೆ ಮನದಟ್ಟು ಮಾಡಿಕೊಡುವುದು ಒಕ್ಕುಂದ ಅವರ ವಿಮರ್ಶೆಯ ವರಸೆ; ಒಕ್ಕುಂದರ ಮೂರು ಕಂತಿನ ಬರಹದಲ್ಲಿ ಎರಡು ಕಂತುಗಳು 'ಮತ್ತೆ ಮೊಳಗಲಿ ಪಾಂಚಜನ್ಯ'ದ ಮತೀಯ ಸ್ವರೂಪವನ್ನು ಅಕ್ಷರಕ್ಷರ ವರ್ಣಿಸುವ ಉತ್ಸಾಹ, ಪ್ರಚಾರ ಸಾಹಿತ್ಯದಲ್ಲಿ 'ವೈರಿ'ಯ ಚಹರೆಯನ್ನು ಓದುಗರ ಮನಸ್ಸಿನಲ್ಲಿ ಭದ್ರವಾಗಿ ಅಚ್ಚು ಹಾಕುವ ಪರಿಯದು. ಕನ್ನಡದ ವಿಮರ್ಶಕರು ಹೊಸಗನ್ನಡ ಸಾಹಿತ್ಯ ಪ್ರಜ್ಞೆಗೆ ಅಡಿಗರು ತಂದ ಪರಿವರ್ತನಾಶೀಲತೆಯ ಬಗ್ಗೆ ವಿಧವಿಧವಾಗಿ ಬರೆದಿದ್ದಾರೆ; ಪ್ರಸ್ತುತ ಪದ್ಯ ಪ್ರಕಟವಾಗಿರುವ ಸಂಕಲನದಲ್ಲಿರುವ 'ಚಿಂತಾಮಣಿಯಲ್ಲಿ ಕಂಡ ಮುಖ' ಪದ್ಯದ ಮಹತ್ವದ ಕುರಿತಾಗಿಯೇ ಲಂಕೇಶರು ಸೇರಿದ ಹಾಗೆ ಹಲವು ವಿಮರ್ಶಕರು ಮೆಚ್ಚುಗೆಯಿಂದ ಬರೆದಿದ್ದಾರೆ. ತಾವು ಗೌರವಿಸುತ್ತಿರುವುದು 'ಚಿಂತಾಮಣಿಯಲ್ಲಿ ಕಂಡ ಮುಖ'ದ ಕವಿಯನ್ನೇ ಹೊರತು ಅದರ ಬೈಂಡಿನೊಳಗೇ ಇರುವ 'ಮತ್ತೆ ಮೊಳಗಲಿ ಪಾಂಚಜನ್ಯ'ದ ಪ್ರಚಾರಕ ಕವಿಯನ್ನಲ್ಲ ಎಂದು ಇವರು ಹೇಳುತ್ತಿರಬಹುದೇ? 'ಒಂದು ಜನಾಂಗದ ಕಣ್ಣು ತೆರೆಸಿದ ಕವಿಯ' ನೈಜ ಕಾವ್ಯ ಶಕ್ತಿಯನ್ನು, ಪ್ರಚಾರಕ ಕವಿ ಕುಂದಿಸಲು ಸಾಧ್ಯವಿಲ್ಲ ಎಂಬುದು ವಿಮರ್ಶಕರ ಅಭಿಪ್ರಾಯವಾಗಿರಬಹುದೇ? ಎಂಬ ಅನುಮಾನಕ್ಕೆ ಒಕ್ಕುಂದರ ವಿಮರ್ಶೆಯಲ್ಲಿ ಸ್ಥಾನವೇ ಇಲ್ಲ. ಪ್ರಚಾರ ಪದ್ಯ ಬರೆದ ಅಡಿಗರ ಸಮಗ್ರ ಕಾವ್ಯವೇ 'ಹಿಂದೂತ್ವ ಕೋಮುವಾದಿ' ಮತೀಯತೆಯನ್ನು ಪ್ರತಿಪಾದಿಸುತ್ತದೆ ಎಂಬ ಪೂರ್ವ ನಿರ್ಧಾರಿತ ತೀರ್ಮಾನಕ್ಕೆ ಬಂದ ಮೇಲೆ, ಸದರಿ ಪದ್ಯದ ಕುರಿತ 'ವಿಮರ್ಶಕರ ಮೌನ ಪ್ರಶ್ನಾರ್ಹ' ಎಂಬ ಅಪರಾಧ ಹೊರಗೆಳೆಯುವ ಉತ್ಸಾಹದ ಪಾಟಿಸವಾಲಿನ ಧಾಟಿಯೂ, ತನ್ನ ವಾದಸರಣಿಗೆ ಭಿನ್ನವಾಗಿರುವವರನ್ನು ನೈತಿಕ ಮೇಲ್ಮೆಯ ಗತ್ತಿನಲ್ಲಿ ವಿಚಾರಿಸುವುದೂ ಪ್ರಚಾರ ಸಾಹಿತ್ಯದ ವ್ಯಾಕರಣವೇ ಆಗಿದೆ. ಹಾಗಾದರೆ ಅಡಿಗರ ಕಾವ್ಯದ ಬಗ್ಗೆ ಯಾರು ದೂಸ್ರಾ ಮಾತಾಡುವ ಹಾಗಿಲ್ಲವೋ? ಕಾಲ ಕಾಲಕ್ಕೆ ಸಾಹಿತ್ಯದ ಮರುಮೌಲ್ಯಮಾಪನ ಮಾಡಿ ಹೊಸ ನೋಟಗಳನ್ನು ಪ್ರತಿಪಾದಿಸುವುದು ಅಪರಾಧವೋ? ಖಂಡಿತ ಅಲ್ಲ- ಇಂತಹ ಪ್ರಯತ್ನಗಳು ಕನ್ನಡ ಸಾಹಿತ್ಯದಲ್ಲಿ ನಡೆದಿವೆ, ನಡೆಯುತ್ತಿರಬೇಕು. ಒಕ್ಕುಂದರದ್ದೂ ಈ ಬಗೆಯ ಮರುಮೌಲ್ಯಮಾಪನ ಪ್ರಯತ್ನ ಎಂದಿಟ್ಟುಕೊಂಡೇ, ಅವರು ಅನುಸರಿಸುವ ಮರುಮೌಲ್ಯಮಾಪನ ವಿಧಾನದಲ್ಲಿರುವ ಸಮಸ್ಯೆಗಳನ್ನು ವಿವರಿಸುತ್ತೇನೆ:


ಪ್ರಚಾರ ಪದ್ಯ ಬರೆದ ಅಡಿಗರ ಸಮಗ್ರ ಕಾವ್ಯವೇ 'ಹಿಂದೂತ್ವ ಕೋಮುವಾದಿ' ಮತೀಯತೆಯನ್ನು ಪ್ರತಿಪಾದಿಸುತ್ತದೆ ಎಂಬ ಪೂರ್ವ ನಿರ್ಧಾರಿತ ತೀರ್ಮಾನಕ್ಕೆ ಬಂದ ಮೇಲೆ, ಸದರಿ ಪದ್ಯದ ಕುರಿತ 'ವಿಮರ್ಶಕರ ಮೌನ ಪ್ರಶ್ನಾರ್ಹ' ಎಂಬ ಅಪರಾಧ ಹೊರಗೆಳೆಯುವ ಉತ್ಸಾಹದ ಪಾಟಿಸವಾಲಿನ ಧಾಟಿಯೂ, ತನ್ನ ವಾದಸರಣಿಗೆ ಭಿನ್ನವಾಗಿರುವವರನ್ನು ನೈತಿಕ ಮೇಲ್ಮೆಯ ಗತ್ತಿನಲ್ಲಿ ವಿಚಾರಿಸುವುದೂ ಪ್ರಚಾರ ಸಾಹಿತ್ಯದ ವ್ಯಾಕರಣವೇ ಆಗಿದೆ.





• ಕೆ.ಫಣಿರಾಜ್

(1) ಸಾಹಿತಿಗಳ ಘೋಷಿತ ಸಾಮಾಜಿಕ/ರಾಜಕೀಯ ನಿಲುವು ಹಾಗು ಅವರ ಸಾಹಿತ್ಯ ಕೃತಿಗಳ ನಡುವೆ ನಿಸಂದಿಗ್ಧವೂ, ನೇರವೂ ಆದ ಸಂಬಂಧ ಇರುತ್ತದೋ? ಒಕ್ಕುಂದ ಅವರು 'ಪ್ರಗತಿಪರ' ಎಂದು ಭಾವಿಸುವ 'ಮಾರ್ಕ್ಸ್‌ವಾದ'ದಲ್ಲಿ ಈ ಕುರಿತು ನಡೆದ ಚರ್ಚೆಯ ದೊಡ್ಡ ವರ್ಣಪಟ್ಟಿಕೆಯೇ ಇದೆ. ಸ್ವತಃ ಮಾರ್ಕ್ಸ್ ಮತ್ತು ಏಂಗೆಲ್ಸ್ ಸಾಹಿತಿ-ಕಲಾವಿದರ ಘೋಷಿತ ರಾಜಕೀಯ ಒಲವುಗಳ ಆಧಾರದ ಮೇಲೆ, ಅವರ ಕೃತಿಗಳ ಮಹತ್ವವನ್ನು ಅಳೆಯುವ ಕ್ರಮವನ್ನು ನಿರಾಕರಿಸಿದ್ದರು. ಈ ಕಾರಣವಾಗಿಯೇ, ಫ್ರೆಂಚ್ ಸಾಹಿತಿಗಳಲ್ಲಿ ಸಮಾಜವಾದದ ಘೋಷಿತ ಪ್ರತಿಪಾದಕ ಎಮಿಲಿ ಜೋಲನ ಕೃತಿಗಳಿಗಿಂತ, ಊಳಿಗಮಾನ್ಯ ಪದ್ಧತಿ-ರಾಜಸ್ವವಾದದ ಬಹಿರಂಗ ಬೆಂಬಲಿಗನಾಗಿದ್ದ ಬಾಲ್ಜಾಕ್ ಅವರಿಗೆ 19ನೇ ಶತಮಾನದ ಆದಿಯ ಫ್ರೆಂಚ್ ಸಮಾಜದ ವಾಸ್ತವವನ್ನು ದರ್ಶನ ಮಾಡಿಸುವ ಮಹಾನ್ ಸಾಹಿತಿಯಾಗಿದ್ದ. ತನ್ನ ಮಹತ್ವದ ಕೃತಿಯಾದ 'ಕ್ಯಾಪಿಟಲ್'ನಲ್ಲಿ ಮಾರ್ಕ್ಸ್ ತನ್ನ ಸೈದ್ಧಾಂತಿಕ ನಿರೂಪಣೆಯನ್ನು ಪುಷ್ಟೀಕರಿಸಲು ಷೇಕ್ಸ್‌ಪಿಯರನ ಹಾಗು ಪ್ರಾಚೀನ ಗ್ರೀಕ್ ಸಾಹಿತ್ಯದ ಸಾಲುಗಳನ್ನು ಪುಂಖಾನುಪುಂಖವಾಗಿ ಉದ್ಧರಿಸುತ್ತಾನೆಯೇ ಹೊರತು ತನ್ನ ಸಮಕಾಲೀನ ಯುರೋಪಿಯನ್ ಸಾಹಿತ್ಯವನ್ನಲ್ಲ - ಇದರ ಬಗ್ಗೆ ಸ್ವತಃ ಮಾರ್ಕ್ಸನೇ ಸೋಜಿಗಪಟ್ಟುಕೊಂಡಿದ್ದ. ಮನುಷ್ಯರ ಸಾಮಾಜಿಕ ಅಸ್ತಿತ್ವವನ್ನೂ, ಚರಿತ್ರೆಯ ಗತಿಯನ್ನು ಬದಲಿಸುವ ಮನುಷ್ಯ ಸಂಕಲ್ಪವನ್ನೂ 'ಭೂತ ಕಾಲದ ಮುಂದುವರೆಯಾದ ಸಾಮಾಜಿಕ ಸನ್ನಿವೇಶದಲ್ಲಿ' 'ಪರಂಪರೆಯ ಹೆಣಭಾರ ಮನುಷ್ಯರ ಮತಿಯ ಮೇಲೆ ಹೇರಿಕೊಂಡಿರುವ ಸನ್ನಿವೇಶದಲ್ಲಿ' ಗ್ರಹಿಸಿದವರಿಗೆ ಮಾತ್ರ ಕಾಲದ ವಾಸ್ತವಿಕತೆಯ ಒಳನೋಟಗಳು ಕಾಣುತ್ತವೆ ಎಂಬುದು ಮಾರ್ಕ್ಸನ ನಿಲುವು ('ಯಟೀನ್ಸ್ ಲ್ಯುಮಿ ಯೆರ್ ಆಫ್ ಲೂಯಿಸ್ ಬೋನಪಾರ್ಟೆ' ಎಂಬ ಮಾರ್ಕ್ಸ್‌ನ ಬರಹ ನೋಡಿ). ಮಾರ್ಕ್ಸನ ಗ್ರಹಿಕೆಯ ಅರ್ಥಸೂಕ್ಷ್ಮಗಳನ್ನು ಅರಗಿಸಿಕೊಂಡ ಮಾರ್ಕ್ಸ್‌ವಾದಿಗಳು ಸಮಾಜ-ಕಲೆ-ಸಾಹಿತ್ಯಗಳ ಕುರಿತಾಗಿ ಬೋಧಕವಾದ ವ್ಯಾಖ್ಯಾನಗಳನ್ನು ನೀಡಿದರು (ಇಂಥ ಮಹನೀಯರ ಪಟ್ಟಿಯನ್ನು ಜಿ.ರಾಜಶೇಖರ್ ನೀಡಿದ್ದಾರೆ). ಈ ಅರ್ಥಸೂಕ್ಷ್ಮಗಳನ್ನೆಲ್ಲ ಗಾಳಿಗೆ ತೂರಿ 'ಪಾರ್ಟಿಯ ಪ್ರಣಾಳಿಕೆ'ಗೆ ತಕ್ಕುದಾದ ಕಲೆ ಸಾಹಿತ್ಯದ ಮೂರುಮೊಳ ನೇಯುವವರು ಮಾತ್ರ 'ಪ್ರಗತಿಪರ ಕಲಾವಿದರು' ಎನ್ನುವವರು- ರಕ್ತಮಾಂಸಗಳಿಂದ ಕೂಡಿದ ಮನುಷ್ಯರ ಪಾಡಿನ ಬಗ್ಗೆ ಕಥಿಸಿದ ಕಲಾವಿದರನ್ನು ಮನೋಸೇಚ್ಛೆ ದಂಡಿಸಿ, 'ಪ್ರಚಾರ ಸಾಹಿತ್ಯ'ವನ್ನು ರಚಿಸುವ ಅಸ್ಥಿಪಂಜರಗಳ ಸೇನೆಗೆ ಮಾನ್ಯತೆ ನೀಡಿದರು (ಇದರಿಂದಾದ ಅನಾಹುತಗಳ ಬಗ್ಗೆಯೂ ರಾಜಶೇಖರ್ ತಮ್ಮ ಪ್ರತಿಕ್ರಿಯೆಯಲ್ಲಿ ಬರೆದಿದ್ದಾರೆ). ಒಕ್ಕುಂದ ಈ ಎರಡನೇ ನಮೂನೆಯನ್ನೇ ತಮ್ಮ ವಿಮರ್ಶೆಯ ಮಾನದಂಡ ಮಾಡಿಕೊಂಡಿದ್ದಾರೆ. ಹಾಗಾಗಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಗ್ರಹಿಸಬೇಕಾದ ಹಲವಾರು ವೈರುಧ್ಯಮಯ ಅರ್ಥಸೂಕ್ಷ್ಮಗಳು ಒಕ್ಕುಂದ ಅವರಿಗೆ ಎದುರಿಸಬೇಕಾದ ಸಮಸ್ಯೆಗಳು ಅನ್ನಿಸುವುದಿಲ್ಲ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡುವುದು ಸೂಕ್ತ.


(2) (ಅ) ಒಕ್ಕುಂದ ತಮ್ಮ ವಾದಕ್ಕೆ ಪೂರಕವಾಗಿ, ಅಡಿಗರನ್ನು ಕುರಿತಾಗಿ ಲಂಕೇಶ್ ಆಡಿದ ಮಾತುಗಳನ್ನು ಉದ್ಧರಿಸಿದ್ದಾರೆ. ಆ ಮಾತುಗಳ ಹಿನ್ನೆಯಲ್ಲಿ ನೋಡಿದರೆ, ಅಡಿಗರ ಕುರಿತಾಗಿ ಲಂಕೇಶ್ ಒಕ್ಕುಂದರ ವಾದಕ್ಕೆ ರುಚಿಸದ ಕೆಲವು ಮಾತುಗಳನ್ನೂ ಆಡಿದ್ದಾರೆ. ಈ ಮಾತುಗಳು, ಅಡಿಗರ 'ಮತ್ತೆ ಮೊಳಗಲಿ ಪಾಂಚಜನ್ಯ' ಪ್ರಕಟವಾದ ಮೂರು ವರ್ಷಗಳ ನಂತರ ಆಡಿದವು ಎನ್ನುವುದನ್ನೂ ನಾವು ಗಮನಿಸಬೇಕು. 1990ರಲ್ಲಿ ಲಂಕೇಶರು ಸಮಾನ ಮನಸ್ಕ ಸಾಹಿತಿಗಳ ಜೊತೆಗೂಡಿ 'ಜಾಗೃತ ಸಾಹಿತ್ಯ ಸಮ್ಮೇಳನ' ಆಯೋಜಿಸಿದ್ದರು (ಈ ಸಮ್ಮೇಳನವನ್ನು ಆಗ ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 'ಸಾಹಿತ್ಯ ಸಮ್ಮೇಳನ'ಕ್ಕೆ ಪರ್ಯಾಯವಾಗಿ ಆಯೋಜಿಸಲಾಗಿತ್ತು). ಈ ಸಮ್ಮೇಳನದ ಅಧ್ಯಕ್ಷತೆಗೆ ಅಡಿಗರ ಹೆಸರನ್ನು ಸೂಚಿಸಿದ್ದು ಲಂಕೇಶರೇ-ಹಾಗೆ ಅಡಿಗರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಕುರಿತು ಪತ್ರಿಕೆಯ 'ಟೀಕೆ-ಟಿಪ್ಪಣಿ'ಯಲ್ಲಿ ಲಂಕೇಶ್ ಹೀಗೆ ಬರೆದಿದ್ದಾರೆ: "ಬ್ರಾಹ್ಮಣ್ಯದ ಮೂಲಕವೇ ಶೋಧಿಸುವ ಅಡಿಗರು ಕಂದಾಚಾರಿ ಅನ್ನಿಸಲಾರದಷ್ಟು ನಿಷ್ಠೂರ ಕವಿ" ('ಜೀವನ್ಮರಣದ ಪ್ರಶ್ನೆ', ಟೀಕೆ-ಟಿಪ್ಪಣಿ-1, ಪತ್ರಿಕೆ ಪ್ರಕಾಶನ, ಪು.432). ಅಡಿಗರ ಅಧ್ಯಕ್ಷ ಭಾಷಣದ ಬಗ್ಗೆ ಲಂಕೇಶ್ ಹೇಳುವುದು: "'ಯಾವುದು ಉತ್ತಮ ಸಾಹಿತ್ಯ ಯಾವುದು ಅಷ್ಟು ಉತ್ತಮವಲ್ಲ ಎಂಬುದು ನನಗಂತೂ ಜೀವನ್ಮರಣದ ಪ್ರಶ್ನೆ' ಅಂದರು ಅಡಿಗರು. ನಾನು ಬೆಚ್ಚಿ ಕೂತೆ. ಯಾವುದೇ ಒಬ್ಬ ವಿಚಾರವಂತನಾದ ಕವಿ, ವಿಮರ್ಶಕ ಹಾಗೆ ಹೇಳಿದ್ದರೆ ನನಗೆ ಅಚ್ಚರಿಯಾಗುತ್ತಿರಲಿಲ್ಲ. ಸಾವಿನ ಅಂಚಿನಲ್ಲಿರುವ ಅಡಿಗರು ಹೇಳಿದ್ದು, ಇಡೀ ಜೀವನದುದ್ದಕ್ಕೂ ಉತ್ತಮ ಸಾಹಿತ್ಯವನ್ನೇ ಧ್ಯಾನಿಸಿದ ಅಡಿಗರು ಹೇಳಿದ್ದು ಮರ್ಮ ತಟ್ಟುವಂತಿತ್ತು. ಅವರು ಈ ದೈಹಿಕ ಸ್ಥಿತಿಯಲ್ಲಿ ತೋರಿದ ಕೆಚ್ಚು ನಮ್ಮಲ್ಲಿ ಧೈರ್ಯ ತುಂಬಿತ್ತು" (ಅದೇ, ಪು.430). ಲಂಕೇಶರಿಗೆ ಅಡಿಗರ ಜೊತೆ ಹಲವಾರು ಜಗಳಗಳಿದ್ದವು, ಹತ್ತು ವರ್ಷಗಳಿಂದ ಅವರನ್ನು ಮಾತನಾಡಿಸಲು ಹೋಗಿರಲಿಲ್ಲ ಎಂಬ ವಿವರಗಳನ್ನೂ ಈ ಬರಹದಲ್ಲಿ ಲಂಕೇಶ್ ನಮೂದಿಸಿದ್ದಾರೆ. ಇದರ ಅರ್ಥ ಏನು ಎಂದು ಒಕ್ಕುಂದ ಯೋಚಿಸಿದಂತಿಲ್ಲ.







(ಆ) ಶಿವರಾಮ ಕಾರಂತರಿಗೆ ಕರ್ನಾಟಕದಲ್ಲಿರುವ ಸ್ಥಾನಮಾನವನ್ನು ವಿವರಿಸಬೇಕಾಗಿಲ್ಲ. ಕಾರಂತರು 1990ರ ನಂತರ 'ರಾಮಜನ್ಮಭೂಮಿ ಚಳವಳಿ'ಯ ಬಹಿರಂಗ ಬೆಂಬಲಿಗರಾಗಿದ್ದರು ಮತ್ತು ಬಾಬ್ರಿಮಸೀದಿ ನಾಶವನ್ನು ನೇರಾನೇರ ಸಮರ್ಥಿಸಿದರು. ತಮ್ಮ ಕಡೆಯ ದಿನಗಳಲ್ಲಿ ಅವರು 'ವಿಪ್ರ ಸಮಾವೇಶ'ದಲ್ಲಿ ಭಾಗವಹಿಸಿ, ಬ್ರಾಹ್ಮಣರು ಸಂಘಟಿತರಾಗುವುದಕ್ಕೆ ಕಾರಣಗಳಿವೆ ಎಂದು ಕೂಡ ಹೇಳಿದರು. ಅಂತೆಯೇ, ಮೊದಲಿನಿಂದಲೂ ಕಾರಂತರು 'ಮುಕ್ತಬಂಡವಾಳ'ದ ಕಟ್ಟಾ ಪ್ರತಿಪಾದಕರಾಗಿದ್ದರು; ಅಮೆರಿಕ ಅವರಿಗೆ 'ಆದರ್ಶ ರಾಷ್ಟ್ರವಾಗಿತ್ತು'. ತಮ್ಮ ಈ ನಿಲುವಿಗೆ ಭಿನ್ನಮತ ತೋರುವವರ ಬಗ್ಗೆ ಸಿಡಿಮಿಡಿಗೊಳ್ಳುವ ಕಾರಂತರ ಪರಿಯೂ ಪ್ರಖ್ಯಾತ. ಕಾರಂತರಿಗೆ ಮುಂಬಯಿ ಅತ್ಯಂತ ಪ್ರಿಯವಾದ ನಗರವಾಗಿತ್ತು, ಆದರೆ 1992-93ರಲ್ಲಿ ಅಲ್ಲಿ ವ್ಯಾಪಕವಾಗಿ ಅಲ್ಪಸಂಖ್ಯಾತರ ಮೇಲೆ ಹಿಂಸೆ ನಡೆದಾಗ ಕಾರಂತರು ಪ್ರತಿಕ್ರಿಯಿಸಲಿಲ್ಲ. ಹೀಗಿದ್ದ ಮೇಲೆ ಕಾರಂತರ ಕೃತಿಗಳನ್ನು ಕನ್ನಡಿಗರು ಹೇಗೆ 'ಓದಬೇಕು'? ಕಾರಂತರ ಸ್ಪಷ್ಟ 'ಹಿಂದೂತ್ವಪರ' ನಿಲುವು ಪ್ರಕ[...] ನಂತರವೂ ಗಿರೀಶ್ ಕಾರ್ನಾಡರಿಗೆ ಕರ್ನಾಟಕದ ಕರಾವಳಿಯಲ್ಲಿ ನಡೆ[...] ಕೋಮು ಹಿಂಸಾಚಾರದ ಹಿನ್ನೆಲೆಯಲ್ಲಿ 'ಅಳಿದ ಮೇಲೆ' ಕಾದಂ[...] 'ಸೆಕ್ಯುಲಾರ್' ಸ್ವರೂಪವನ್ನು ತೋರಬೇಕು ಅನ್ನಿಸಿತು. ಕಾರ್ನಾಡ್, ಕರಾ[...] ಕೋಮುಗಲಭೆಯ ಸಂದರ್ಭದಲ್ಲಿ ಕಾರಂತರ 'ಅಳಿದ ಮೇಲೆ'ಯ [...]ನ್ನಿಟ್ಟು, ಅದಕ್ಕೆ ಕಾರಂತರಿಗೆ ಮುಂಬಯಿಯ ಜೊತೆ ಇದ್ದ ನಂಟು ಬೆಸೆದು, [...] ಮೇಲೆ' ಎಂಬ ಕತೆ ಬರೆದರು. 1990ರ ದಶಕದ ಕೊನೆಯಲ್ಲೂ ಆ ಕಾದಂ[...] 'ಸೆಕ್ಯುಲಾರ್ ಮರು ಓದು' ಸಾಧ್ಯ ಎಂದು ತೋರಿಸಿದರು. ಕಾರಂತರ ಬಂ[...] ಶಾಹಿ-ಸಾಮ್ರಾಜ್ಯಶಾಹಿ ಪರವಾದ ದೃಷ್ಟಿಕೋನ ಗೊತ್ತಿಲ್ಲದೆ ತೇಜಸ್ವಿ '[...] ಲೋಕದೃಷ್ಟಿ'ಯನ್ನು ತಮ್ಮ 'ಹೊಸದಿಗಂತದೆಡೆಗೆ' ಪ್ರಣಾಳಿಕೆಯಲ್ಲಿ [...] ಕೊಂಡರೆ? ತೇಜಸ್ವಿ ಹೇಳುವ 'ಕಾರಂತರ ಲೋಕದೃಷ್ಟಿ'ಗೂ ಅವರ ಘೋ[...] ರಾಜಕೀಯ ನಿಲುವುಗಳಿಗೂ ಇರುವ ವ್ಯತ್ಯಾಸದಲ್ಲಿ ಕಾರಂತರ [...] ಪಾತ್ರವೇನು?



ಅಡಿಗರ ಕೋಮುವಾ[ದಿ] ಕವನ

ಪ್ರತಿ[...]

(ಇ) 1948ರಲ್ಲಿ ಭಾರತದ ಸೈನ್ಯ ಹೈದರಾಬಾದ್ ನಿಜಾಮನ ಆಳ್ವಿ[...] ಕೊನೆಗೊಳಿಸಿದ ಮೇಲೆ ರಜಾಕರರ (ನಿಜಾಮನ ಹಿಂಸಾತ್ಮಕ ಸೇನೆ) ಪ್ರತಿಕಾರದ ನೆಪದಲ್ಲಿ, ನಿಜಾಮನ ಆಳ್ವಿಕೆಯಲ್ಲಿದ್ದ ಪ್ರದೇಶದ ಎಂಟು ಜಿ[...] ಸಾಮಾನ್ಯ ಹಿಂದೂ ಸಂಸಾರಸ್ಥರು ಈ ಜಿಲ್ಲೆಗಳ ಮುಸಲ್ಮಾನ ಸಂಸಾರಗಳ[...] ಅಗಾಧ ಪ್ರಮಾಣದ ಹಿಂಸೆ ನಡೆಸಿದರು. ಒಂದು ಅಂದಾಜಿನ ಪ್ರಕಾರ ಕೊ[...] ಮುಸಲ್ಮಾನ್ ಸಂಸಾರಸ್ಥರ ಸಂಖ್ಯೆ 30,000! ಇದೆಲ್ಲ ಭಾರತದ ಸಿನಿಕರ ಉ[...] ಮತ್ತು ಸಕ್ರಿಯ ಬೆಂಬಲದಲ್ಲಿ ನಡೆಯಿತು. ಈ ಎಂಟು ಜಿಲ್ಲೆಗಳಲ್ಲಿ ಹೈದ್[...] ಕರ್ನಾಟಕದ ಮೂರು ಜಿಲ್ಲೆಗಳೂ ಸೇರಿವೆ. ಭಾರತದ ಸ್ವಾತಂತ್[...] ಇತಿಹಾಸದಿಂದ ಪ್ರಭುತ್ವವು ಹಿಂಸೆಯ ಈ ಸ್ಮೃತಿಯನ್ನು ಒರೆಸಿ ಹಾಕಿದ[...] ಕರ್ನಾಟಕದ ಈ ಭಾಗದ ಜನರಿಗೂ, ಸಾಹಿತಿ-ಕಲಾವಿದರಿಗೂ ಈ ಘಟ[...] ಗೊತ್ತಿತ್ತು, ಕರ್ನಾಟಕದ ಇತರ ಭಾಗದ ಸಾಹಿತಿ-ಕಲಾವಿದರಿಗೆ ಇದು ಕಾಲ[...] ಸನ್ನಿವೇಶದಲ್ಲಿ 'ದೂರ'ದ ವಿಷಯವೇನೂ ಆಗಿರಲಿಲ್ಲ, ಅಡಿಗರನ್ನು ಬಿಡಿ, [...] 'ದಾಳಿ' ಕತೆಯನ್ನೊಂದು ಬಿಟ್ಟರೆ, ಕರ್ನಾಟಕದ ಯಾವ ಸಾಹಿತಿಗಳೂ [...] ಸಂವೇದನೆಯೊಳಗೆ ಈ ಹಿಂಸೆಯನ್ನು ಬಿಟ್ಟುಕೊಂಡಿಲ್ಲ. ಅದೇ 1936ರ[...] ಸಾಹಿತ್ಯದ ದಿಗ್ಗಜರೆಲ್ಲ ಸೇರಿ 'ಹಿಂದೂ ವಿಜಯನಗರ ಸಾಮ್ರಾಜ್ಯ'ದ ನ[...] ಹಂಪಿಯಲ್ಲಿ ಸಮ್ಮೇಳನ ನಡೆಸಿದರು (ಕುವೆಂಪು ಮಾತ್ರ ಅದರಲ್ಲಿ ಭಾಗ[...]ಲಿಲ್ಲ). ಇವೆಲ್ಲ ಚಾರಿತ್ರಿಕ ವಾಸ್ತವಗಳು. ಸಾಹಿತಿಗಳ ಈ ಬಗೆಯ ಆಯ[...] ವಿಸ್ಮೃತಿಗಳನ್ನು ಮರುಪರಿಶೀಲಿಸುವ ಅಗತ್ಯವಿದೆ. ಸರಿ. ಹಾಗಂತ ಈ ಕಾಲಾ[...] ನಂತರದ ಕನ್ನಡ ಸಾಹಿತ್ಯವನ್ನು 'ಕೋಮುವಾದಿ' [...] ಸಾರಸಗಟು ತಿರಸ್ಕರಿಸಬಹುದೋ? ಸಾಹಿತ್ಯ ವಿಮರ್ಶೆ[...] ಮೌಲ್ಯಮಾಪನಗಳು ಅರ್ಥಸೂಕ್ಷ್ಮವನ್ನು ಬಿಟ್ಟು[...] ಎದುರಿಸಬೇಕಾದ ಸಮಸ್ಯೆಗಳಿವು. ಒಕ್ಕುಂದ, ಇಂಥ ಸಮ[...] ಕೈದು ಮಾಡಿ ಅಡಿಗರ ಕಾವ್ಯದ ಬಗ್ಗೆ ಮೌಲ್ಯಮಾಪನಕ್ಕೆ[...] ದ್ದಾರೆ. ವಸಾಹತುಶಾಹಿಯನ್ನು ವಿರೋಧಿಸಿಯೂ, [...] ಸಮಾಜ-ಸಂಸ್ಕೃತಿಯಲ್ಲಿ ಪಶ್ಚಿಮದಿಂದ ಎಷ್ಟು ವಿಧದ [...] ಕೊಳ್ಳುವಿಕೆಗಳು ನಡೆದಿಲ್ಲವೆ? ನಮ್ಮ ಸಮಾಜ-ಸಂಸ[...] ತಕ್ಕುದಾಗಿ ವಸಾಹತುಶಾಹಿ ಪ್ರಭಾವದ ಜ್ಞಾನಗಳನ್ನು ಬಗ್ಗಿಸಿಕೊಂಡಿಲ್ಲವೆ? ಆದರೆ, ಒಕ್ಕುಂದ ಬಳಸುವ ಭಾಷೆ: '[...] 'ಪಾಂಚಜನ್ಯ' ಕವಿತೆಯನ್ನು ವಸಾಹತುಶಾಹಿ ರಕ್ಕಸರ ನ[...]ಕ್ಕಾಗಿ ಬರೆದರು'. ಮಹಾಕವಿಯ 'ರಸಸೃಷ್ಟಿ'ಯನ್ನು [...] ನೋಡಬಹುದೇ!

(3) ಒಕ್ಕುಂದ, ಅಡಿಗರ ಸಮಗ್ರ ಕಾವ್ಯವೇ 'ಹಿಂದೂ[...] ಗಟ್ಟಿಗೊಳಿಸಲು ಬರೆದದ್ದು ಎಂದು ಸಾಬೀತು ಮ[...] ಕಟ್ಟಿಕೊಂಡಿರುವ 'ಹಿಂದೂತ್ವ ರಾಷ್ಟ್ರೀಯವಾದ'ದ ಪರಿಕ[...] ಸಮಸ್ಯಾರಹಿತವಾದದ್ದು. ನಮ್ಮ ಕಾರ್ಮಿಕ-ದಲಿತ-ಹಿ[...] ವರ್ಗ-ವೈಜ್ಞಾನಿಕ ವಿಚಾರವಾದ-ಮಹಿಳಾ ಚಳ[...] ಬಿಡಿಯಾಗಿ ಕಟ್ಟಿಕೊಂಡಿರುವ 'ಹಿಂದೂತ್ವ'ದ ಸ್ವರೂ[...] ಕೆಲವು ಸಮಸ್ಯೆಗಳಿವೆ. ತಮ್ಮ ಸಂಘಟನೆಯ ಉದ್ದೇಶಿತ ಸ[...] ಕಣ್ಣೋಟಕ್ಕೆ ವ್ಯತಿರಿಕ್ತವಾಗದ ರೀತಿಯಲ್ಲಿ, ತಮ್ಮ ಚಳ[...] ಭಾಗವಹಿಸುವ ಜನವರ್ಗದ ಹಿತಾಸಕ್ತಿಯನ್ನು ಕಾದು[...] ರೂಢಿಸಿರುವ ವೈಚಾರಿಕತೆಯ ಮೇಲೆ ಕೇಂದ್ರಿತವಾಗಿರು[...] (ಫೋಕಸ್) ವಿಸ್ತಾರದಲ್ಲಿ ಹರಡಿ ಮಂಕಾಗದ ಹಾಗೆ[...] ಕೊಳ್ಳುವ ಪ್ರಾಯೋಗಿಕ ಒತ್ತಡದಲ್ಲಿ ಸಂಘಟನೆಗಳು ಕಾರ್ಯಾಚರಿಸು[...] ಪರಿಸ್ಥಿತಿಯಲ್ಲಿ ನಮ್ಮ ಚಳವಳಿಗಳು 'ಹಿಂದೂತ್ವ ರಾಷ್ಟ್ರೀಯವಾದ[...] ರೂಪಗಳನ್ನು ರಚಿಸಿಕೊಂಡಿವೆ. ಈ ಎಲ್ಲ ಬಿಡಿ ಅರೆ ರೂಪಗಳನ್ನು ಒಟ್ಟು [...] 'ಹಿಂದೂತ್ವ ರಾಷ್ಟ್ರೀಯವಾದ'ದ ಪೂರ್ಣರೂಪ ದೊರಕುವ [...] ಅರೆರೂಪಗಳನ್ನು ಒಂದಾಗಿ ಹೊಂದಿಸಲು ಆಗದಂತಹ ವೈರುಧ್ಯಗಳು ತ[...] ಸಂಗತಿ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯಲ್ಲಿ ಸಕ್ರಿಯರಾಗಿರ[...] ಸಂಗಾತಿಗಳಿಗೂ ತಿಳಿದಿದೆ. ಇದೊಂದು ವಿರುದ್ಧ ಗತಿತರ್ಕಗಳ (ಡೈ[...] ಸಮಸ್ಯೆಯಾಗಿದ್ದು, ಗತಿತರ್ಕಗಳ ಚಲನಶೀಲತೆಯಲ್ಲಿ ಮಾತ್ರ ವೈರು[...] ಶಕ್ತಿಸಂಚಲನ ಸಾಧ್ಯ- ಇದಕ್ಕಾಗಿ ಹೆಣಗಾಟ ಮಾಡುವುದು ಅನಿವಾರ[...] ಮಾತನ್ನು ಹೇಳಲು ಕಾರಣವಿಷ್ಟೇ- 'ಹಿಂದೂತ್ವ ರಾಷ್ಟ್ರೀಯವಾದ'ದ [...]

...ಕಲನವೇ ಅದರ ಪೂರ್ಣರೂಪವೆಂಬುದು ...ರ ನಿಲುವು. ಅವರ ಸರಳ ರೇಖಾತ್ಮಕ ಸೂತ್ರವಿದು: ...ತ್ವ ರಾಷ್ಟ್ರೀಯವಾದ = {'ಜಾಗತೀಕರಣ' ...ಪೂದ 'ಜಾತಿವಾದ' ವೈದಿಕ ತತ್ವಾಚರಣೆ-ಸಂಸ್ಕೃತ ...ಸಲಾತಿ ವಿರೋಧ 'ಪುರುಷ ಪ್ರಧಾನ್ಯ' (ಧಾರ್ಮಿಕ ...ಸ್ತಿಕತೆ) 'ಅಲ್ಪಸಂಖ್ಯಾತರ ಬಗ್ಗೆ ಪೂರ್ವಾಗ್ರಹ, ದ್ವೇಷ ...ಹಿಂದುಳಿದ ವರ್ಗಗಳ ಸಬಲೀಕರಣ)-ವೈಜ್ಞಾನಿಕ ...ವಾದ- (ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ...ಮ್, ಮಾರ್ಕ್ಸ್‌ವಾದಿ ವಿಚಾರ ಧಾರೆ)}. ಈ ಬಗೆಯ ...ಖಾತ್ಮಕ ಸೂತ್ರೀಕರಣದಲ್ಲಿರುವ ಸಮಸ್ಯೆಗೆ ಒಂದು ...ಸರಣೆ ಕೊಡುತ್ತೇನೆ. 'ಅಂಬೇಡ್ಕರ್ ಅವರು ...ಭಜನೆಯ ಚಾರಿತ್ರಿಕ ಸಂದರ್ಭ ದಲ್ಲಿ ತನ್ನದೇ ಕಾರಣಕ್ಕೆ ...ಮರು ಪಾಕಿಸ್ತಾನಕ್ಕೆ ಹೋಗ ಬೇಕೆಂಬ ವಿಚಾರ ...ದ್ದನ್ನು' ನೆಪ ಮಾಡಿಕೊಂಡು ಅಡಿಗರು ತಮ್ಮ ...ಲ್ಲಿ ಅಂಬೇಡ್ಕರರನ್ನು ಗಾಂಧಿ ವಿರುದ್ಧ ಎತ್ತಿಕಟ್ಟುತ್ತಾರೆ ...ಮ ಒಕ್ಕೂದ ಅವರ ಆರೋಪ. ಇಂದಿಗೂ ದಲಿತ ...ಟಗಳ ಸಭೆಯಲ್ಲಿ ಗಾಂಧಿಯ ವಿಚಾರಗಳ ಬಗೆಗಿನ ...ು ಬೈಗುಳದ ಅಂಚಿಗೆ ಬಂದು ತಲುಪುತ್ತವೆ; ...ಷ್ಟಿಯ ವಿಚಾರದಲ್ಲಿ ಗಾಂಧಿ- ಅಂಬೇಡ್ಕರರ ನಡುವೆ ...ತ್ರ ಭಿನ್ನಾಭಿಪ್ರಾಯಗಳು ಗುಪ್ತವಾದುವೇನೂ ಅಲ್ಲ; ...ಕರರ ಬರಹಗಳಲ್ಲಿ ಈ ವಿಚಾರವಾಗಿ ಗಾಂಧೀಜಿಯ ...ಮುಟ್ಟಿನೋಡಿಕೊಳ್ಳು ವಂಥ ಕಟು ಟೀಕೆಗಳಿವೆ. ಈ ...ಕ ಭಿನ್ನತೆಗಳನ್ನು ನಮ್ಮ ಕಾಲದಲ್ಲಿ ನಾವು ಜಗಿದು ...ೊಳ್ಳಬೇಕೇ ವಿನಃ 'ಬುದ್ಧ ಬಸವ, ಗಾಂಧಿ...' ಎಂಬ ...ವಳಿಯು ಉಚ್ಚಾರಣೆ ಶಾಸ್ತ್ರದಿಂದ ಏನೂ ...ಆಗವಿಲ್ಲ. ಹಾಗೆಯೇ, ಮುಸಲ್ಮಾನರು ಮತ್ತು ...ತ ಬಗೆಗಿನ ಅಂಬೇಡ್ಕರರ ನಿಲುವುಗಳು ಅತ್ತ-ಇತ್ತ ...ಡುವಂತಹವು (ಯಾಂಬಿವಲೆಂಟ್). ಹಿಂದೂಗಳು ...ಡಲಾಗದ ಜಾತಿಯ ಕಟ್ಟುಗಳಲ್ಲಿ ಸಿಕ್ಕಿಕೊಂಡು ಐಕ್ಯತೆ ...ಾಗದ ಕಾರಣಕ್ಕೆ 'ಧಾರ್ಮಿಕ ಐಕ್ಯತೆ'ಯಿಂದಾಗಿ ...ರುವ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರ ಧಾರ್ಮಿಕ ...ಕ್ಕೆ ತುತ್ತಾಗಬೇಕಾಗಿದೆ ಎಂಬ ಸಾವರ್ಕರರ ವಿಚಾರದ ...ಂಬೇಡ್ಕರರಿಗೆ ಸಹಮತವಿತ್ತು. ಹಿಂದೂಗಳು ...ಗಳನ್ನು ತಮ್ಮವರೆಂದು ಒಪ್ಪಿ ನಾಗರಿಕರನ್ನಾಗಿ ...ಿ ಕಾರ್ಯ ಕೈಗೊಳ್ಳದೇ ಇದ್ದುದರಿಂದ ಕ್ರಿಶ್ಚಿಯನ್ನರು ... ತಮ್ಮ ತೆಕ್ಕೆಗೆ ತೆಗೆದುಕೊಂಡು ಮತಾಂತರ ...ದ್ದಾರೆ; ಇದರಿಂದ 'ಹಿಂದೂಗಳ ಶತ್ರುಗಳ' ಶಕ್ತಿ ...ಾಗುತ್ತದೆ ಎಂದು ಹಿಂದೂಗಳು ...ಮಾಡಿಕೊಳ್ಳುತ್ತಿಲ್ಲ ಎನ್ನುವುದು ಅಂಬೇಡ್ಕರರ ವಾದ ...("ಜಾತಿವಿನಾಶ"). ಭಾರತದ ವಿಭಜನೆಯ ಪ್ರಶ್ನೆಯ ...ಂಬೇಡ್ಕರ್, ತಮ್ಮ ಜ್ಞಾನವನ್ನು ಪೂರ್ಣವಾಗಿ ...ಗಿಸಿ ತರ್ಕಪೂರ್ಣವಾದ ಕೃತಿ ಬರೆದಿದ್ದಾರೆ ...ದ್ ಆರ್ ಪಾರ್ಟಿಶನ್ ಆಫ್ ಇಂಡಿಯಾ). ಈ ... ಯಾಕೆ ಆಗಕೂಡದು ಎಂಬ ತಮ್ಮ ನಿಲುವಿಗೆ ...ಕರ್ ಆಧುನಿಕ ರಾಜ್ಯಶಾಸ್ತ್ರ, ಪ್ರಜಾಪ್ರಭುತ್ವ ...ಮ ಸಾಧ್ಯತೆಗಳ ಗಟ್ಟಿ ಆಧಾರಗಳನ್ನು ಕೊಡುತ್ತಾರೆ. ...ಹದಲ್ಲಿ 'ಹಿಂದೂತ್ವ'ವನ್ನು ಎದುರಿಸಲು ಇರುವ ...ಮುತ್ವ ರಾಜಕೀಯದ ಮಾರ್ಗಗಳ ರೂಪುರೇಷೆ ಕೂಡ ...ನ್ನಾಗಿಯೂ ಮುಸಲ್ಮಾನರು ಪಾಕಿಸ್ತಾನ ಬೇಕೇ ಬೇಕು ...ವಿಭಜನೆಯನ್ನು ತಡೆಯಕೂಡದು ಎಂಬ ಸ್ಪಷ್ಟವಾದ ...ನ್ನು ಅಂಬೇಡ್ಕರ್ ಪ್ರಕಟಿಸುತ್ತಾರೆ. ಇಷ್ಟು ತರ್ಕಬದ್ಧ ...ೆಯ ನಂತರ, ಅಂಬೇಡ್ಕರ್ ಒಂದು ಕಸಿವಿಸಿ ...ಮಾಡುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: ...ಯಾಗಿ ಎರಡು ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದಲ್ಲಿ ...ದ ಸೇನೆಯಲ್ಲಿ ಮುಸಲ್ಮಾನರ ಪ್ರಾಬಲ್ಯವಿರುತ್ತದೆ. ... ಭಾರತದ ಸೇನೆಯಲ್ಲಿ ಮುಸಲ್ಮಾನರನ್ನು ...ಳ್ಳುವುದು ಸಮಸ್ಯೆಯಾಗುತ್ತದೆ; ಯಾಕೆಂದರೆ ...ನ ಸೈನಿಕರು ತಮ್ಮದೇ ಧರ್ಮದವರ ವಿರುದ್ಧ ...ಮಾಡುತ್ತಾರೆ ಎಂಬ ಖಾತ್ರಿ ಇರುವುದಿಲ್ಲ; ಅವರು ...ುವೇಳಬಹುದು. ರಾಷ್ಟ್ರರಕ್ಷಣೆಯಾಗದೆ ರಾಷ್ಟ್ರ ... ಅಸಾಧ್ಯವಾದ ಕಾರಣ, ಭಾರತದ ಸೇನೆಯಲ್ಲಿ ...ಮೇತರರು ಇರುವುದು ತರವಲ್ಲ, ಇದು ವಾಸ್ತವಿಕ ...ಲ್ಲದಿರಬಹುದು; ಬರೀ ನನ್ನ ಕಲ್ಪನೆ ಆಗಿರಲೂ ... ಆದರೂ ಇದು ನನ್ನ ಸ್ಪಷ್ಟ ನಿಲುವು' (ಮೇಲಿ ...ತಿಯ ಭಾಗ-5, ಅಧ್ಯಾಯ 13ರಲ್ಲಿರುವ ವಿಷಯ ...ಾಗದ ಸಾರರೂಪದ ಟಿಪ್ಪಣಿ). ಅಂಬೇಡ್ಕರ್ ...ಚಾರದಲ್ಲಿ ಇಂಥ ಕೆಲವು ಸಮಸ್ಯೆಗಳಿವೆ. ಇಷ್ಟು ... ಯಾವ ಪ್ರಾಮಾಣಿಕ ಅಧ್ಯಯನಶೀಲನಿಗೂ, ...ರವಿಗೂ ಅಂಬೇಡ್ಕರರ ಬದುಕು-ಬರಹಗಳ ಬಗ್ಗೆ ...ಗೌರವ ಕಮ್ಮಿಯಾಗುವುದಿಲ್ಲ; ಇದರ ಹೊರತಾ ...ಅವರ ವಾಙ್ಮಯ ಯಾವ ಪರಿವರ್ತನಾಶೀಲ ...ಮು ಕಡೆಗಾಣಿಸಲಾರದಷ್ಟು ದೊಡ್ಡದು. ಈ ...ಕ್ಕಗಳ ವಿವೇಚನೆ ಇಲ್ಲದೆ 'ಹಿಂದೂತ್ವ ರಾಷ್ಟ್ರೀಯ ...ರ ರೇಖಾತ್ಮಕ ರೂಪಕಟ್ಟಿಕೊಂಡು ಮಾಡುವ ...ಂಸ್ಕೃತಿಕ ಪರಾಮರ್ಶೆ ಯಾರಿಗೆ ಉಪಯುಕ್ತ ...? ಎಂಬುದು ಒಕ್ಕೂದ ಅವರ ವಿವೇಕಕ್ಕೆ ಬಿಟ್ಟದ್ದು ...ದ ಪರಾಮರ್ಶೆ ಸಮ್ಮತವಲ್ಲ. ❖

ಈದು ಎನ್‌ಕೌಂಟರ್
ಶಂಕಿತ ನಕ್ಸಲ್ ಯಶೋಧ ಈಗ ಆರೋಪ ಮುಕ್ತ

ಸದಾ ಕೆಟ್ಟಸುದ್ದಿಗಳ ಸುತ್ತ ಗಿರಕಿ ಹೊಡೆಯುವ ಈ ಪತ್ರಿಕೆಯಲ್ಲಿ ಒಂದು ಸಂತೋಷದ ಸುದ್ದಿ ಬರೆಯುವ ಅಪರೂಪದ ಅವಕಾಶ ಒದಗಿ ಬಂದಿದೆ. ಉಡುಪಿಯ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟು ಶಂಕಿತ ನಕ್ಸಲ್ ಯುವತಿ ಯಶೋಧಾಳ ಮೇಲಿದ್ದ ಆರೋಪಗಳಿಂದಲೂ ಆಕೆಯನ್ನು ಮುಕ್ತಗೊಳಿಸಿ ಸರ್ಕಾರದ ಮೊಕದ್ದಮೆಯನ್ನು ವಜಾ ಗೊಳಿಸಿದೆ.

ಯಶೋಧರದ್ದು ಮಲೆನಾಡಿನ ಮೂಲನಿವಾಸಿಗಳಾದ ಗೌಡ್ಲು ಸಮುದಾಯದ ಬಡ ರೈತ ಕುಟುಂಬ; ತೀರ ಸಣ್ಣ ಹಿಡುವಳಿದಾರರಾದ ಆ ಕುಟುಂಬದವರು ಜೀವನ ನಿರ್ವಹಣೆಗಾಗಿ ಬೇರೆಯವರ ಗದ್ದೆ, ಕಾಫಿ ತೋಟಗಳಲ್ಲಿಯೂ ದುಡಿಯುತ್ತಾರೆ. 7ನೆಯ ಕ್ಲಾಸಿನವರೆಗೆ ಓದಿದ್ದು, ಈಗ ಖಾಸಗಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕಟ್ಟಿರುವ ಯಶೋಧಾ ಕೂಡಾ ಅವಕಾಶ ಸಿಕ್ಕಾಗ ಕೃಷಿ ಕೂಲಿ ಮಾಡುತ್ತಾರೆ. ಹೀಗಿರುತ್ತ, ಕಳೆದ 7 ವರ್ಷಗಳಿಂದ ಅವರು ತನ್ನ ಮೇಲಿನ ಕ್ರಿಮಿನಲ್ ಕೇಸಿನ ವಿಚಾರಣೆ ಸಲುವಾಗಿ ಕನಿಷ್ಠ ತಿಂಗಳಿಗೊಮ್ಮೆ, ಕೆಲವು ತಿಂಗಳುಗಳಲ್ಲಿ ಎರಡು ಭಾರಿ, ಚಿಕ್ಕಮಗಳೂರು ಜಿಲ್ಲೆ ಕಳಸ ತಾಲೂಕು ಹಳುವಳ್ಳಿ ಗ್ರಾಮದ ತಮ್ಮ ಮನೆಯಿಂದ ಉಡುಪಿಗೆ ಬಂದು ಹೋಗುತ್ತಿದ್ದರು. ನಸುಕಿಗೆ ಮೊದಲೇ ಎದ್ದು, ತನ್ನ ಮನೆಯಿಂದ 6 ಕಿ.ಮೀ. ದೂರದಲ್ಲಿರುವ ಹಳುವಳ್ಳಿಗೆ ನಡೆದುಕೊಂಡೋ ಆಟೋ ಹಿಡಿದೋ ಹೋಗಿ, ಅಲ್ಲಿಂದ ಕಳಸಕ್ಕೆ ಹೋಗಿ, ಕಾರ್ಕಳದ ಫಸ್ಟ್ ಬಸ್ ಹಿಡಿದು, ಕಾರ್ಕಳದಿಂದ ಮತ್ತೊಂದು ಬಸ್‌ನಲ್ಲಿ ಹೋದರೆ, ಬೆಳಗ್ಗೆ 11 ಗಂಟೆಯ ಸುಮಾರಿಗೆ




ಅಂದರೆ ಕೋರ್ಟು ಕಲಾಪ ಪ್ರಾರಂಭವಾಗುವ ಹೊತ್ತಿಗೆ ಉಡುಪಿ ತಲುಪಬಹುದು. ಸಂಜೆ ಮೂರು ಅಥವಾ ಮೂರೂವರೆ ಗಂಟೆಗಳ ಒಳಗೆ ಆಕೆಯ ಕೇಸು ಮುಗಿಯದಿದ್ದರೆ ಯಶೋಧಾ ತನ್ನ ಮನೆಗೆ ಮರಳಿ ಹೋಗಲು ಸಾಧ್ಯವಾಗುತ್ತಿರಲಿಲ್ಲ, ಕೋರ್ಟು ಒಮ್ಮೊಮ್ಮೆ ಹಾಗೆ ಅವರನ್ನು ಕಾಯಿಸುವುದಿತ್ತು. ಈ ಏಳು ವರ್ಷಗಳಲ್ಲಿ ಯಶೋಧಾ ಈ ಅಲೆದಾಟದ ಬಾಬ್ತು ಏನಿಲ್ಲವೆಂದರೂ ಒಂದೂವರೆ ಲಕ್ಷ ರೂಪಾಯಿಗಳಷ್ಟನ್ನು ವ್ಯಯಿಸಿದ್ದಾರೆ. ಪ್ರಾಯಶಃ ಇಷ್ಟು ಶಿಕ್ಷೆಯೇ ಸಾಕು ಎಂದು ಭಾವಿಸಿ ಕೋರ್ಟು ಅವರನ್ನು ಆರೋಪ ಮುಕ್ತಗೊಳಿಸಿದೆ.

ನಕ್ಸಲ್ ಸಂಘಟನೆಯ ಸದಸ್ಯೆಯಾಗಿದ್ದುದು, ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದುದು, ಅಕ್ರಮಕೂಟ, ಕೊಲೆಯತ್ನ -ಇವು ಕೇಸಿನಲ್ಲಿ ಯಶೋಧಾರ ಮೇಲೆ ಹೊರಿಸಲಾಗಿದ್ದ ಆರೋಪಗಳು. 2003 ನವೆಂಬರ್ 17 ರ ರಾತ್ರಿ ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ನಾರಾವಿ ಸಮೀಪದ ಈದು ಗ್ರಾಮದ ಕೃಷಿಕ ರಾಮಪ್ಪ ಪೂಜಾರಿಯವರ ಮನೆಯಲ್ಲಿ ನಡೆದ ಪೊಲೀಸ್ ಎನ್‌ಕೌಂಟರ್‌ನಲ್ಲಿ ನಕ್ಸಲ್ ಎನ್ನಲಾದ ಹಾಜಿಮಾ ಮತ್ತು ಪಾರ್ವತಿಯವರ ಹತ್ಯೆಯಾದಾಗ ಅವರೊಟ್ಟಿಗೆ ಯಶೋಧಾ ಕೂಡ ಇದ್ದರು. ಪೊಲೀಸರ ಗುಂಡಿನಿಂದ ಅವರ ಕಾಲಿನಲ್ಲಿ ಗಾಯವಾಗಿತ್ತು. ಪೊಲೀಸರು ಯಶೋಧಾರನ್ನು ವಶಕ್ಕೆ ತೆಗೆದುಕೊಂಡು ಅವರನ್ನು ಸುಮಾರು 4 ತಿಂಗಳ ಕಾಲ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇರಿಸಿದ್ದೇ ಅಲ್ಲದೆ ಅವರ ವಿರುದ್ಧ ಕ್ರಿಮಿನಲ್ ಕೇಸನ್ನೂ ದಾಖಲಿಸಿದರು. ಈದು ಎನ್‌ಕೌಂಟರ್‌ನ ನೇತೃತ್ವ ವಹಿಸಿದ್ದು ಆಗ ಉಡುಪಿಯ ಎಸ್.ಪಿ. ಆಗಿದ್ದ ಮುರುಗನ್. ಆದರೆ ಆಗ ಅವರ ಹೆಸರು ಈಗಿನಷ್ಟು ಕೆಟ್ಟಿರಲಿಲ್ಲ, ಕಟ್ಟುನಿಟ್ಟಿನ ಆಫೀಸರ್ ಎಂಬ ಅವರ ಮೇಕ್ ಅಪ್ ಪೂರ್ತಿ ಕಳಚಿಬಿದ್ದದ್ದು ಶಿವಮೊಗ್ಗದಲ್ಲಿ.


ಯಶೋಧಾ ಮೇಲಿದ್ದ ಕ್ರಿಮಿನಲ್‌ಕೇಸಿನಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಕೋರ್ಟು ಮುಂದೆ ಹಾಜರಾಗಿದ್ದ 40 ಸಾಕ್ಷಿಗಳಲ್ಲಿ ಮುರುಗನ್ ಅವರೇ ಪ್ರಮುಖರು. ಯಶೋಧಾರ ವಿರುದ್ಧ ತಾವು ಮಾಡಿದ ಆರೋಪಗಳನ್ನು ನ್ಯಾಯಾಲಯದ ಎದುರು ಸಮರ್ಥಿಸಿಕೊಳ್ಳಲು ಮುರುಗನ್ ಮತ್ತು ಅವರ ಪೊಲೀಸು ಪಡೆ ವಿಫಲವಾಗಿದೆ ಎಂದ ಮೇಲೆ ಹಾಜಿಮಾ ಪಾರ್ವತಿಯವರ ಎನ್‌ಕೌಂಟರ್ ಬಗ್ಗೆ ಅವರು ಕೊಡುವ ವಿವರಣೆಯನ್ನು ಹೇಗೆ ನಂಬುವುದು? ಅದು ಪೊಲೀಸರು ನಡೆಸಿರುವ ಕಗ್ಗೊಲೆಯ ಹಾಗೆಯೇ ಭಾಸವಾಗುತ್ತದೆ. 'ಪೊಲೀಸ್ ಎನ್‌ಕೌಂಟರ್' ಎಂಬ ಪದಪ್ರಯೋಗ ಈಗ ಪಡೆದುಕೊಂಡಿರುವ ಅರ್ಥವೂ ಅದೇ ತಾನೆ?

ಯಶೋಧ ಹೇಳುವ ಪ್ರಕಾರ ಆಕೆ ಎಂದೂ ಯಾವ ನಕ್ಸಲ್ ಸಂಘಟನೆಯ ಸದಸ್ಯೆ ಆಗಿರಲಿಲ್ಲ. ಈದು ಎನ್‌ಕೌಂಟರ್ ಬಿಟ್ಟರೆ, ಅವರ ಮೇಲೆ ಯಾವ ಕೇಸು ಕೂಡ ಇರಲಿಲ್ಲ. 2002 ರ ಪಂಚಾಯತ್ ಚುನಾವಣೆಯಲ್ಲಿ ಯಶೋಧಾ ಬಿಜೆಪಿ/ಜನತಾದಳ ಒಕ್ಕೂಟದ ವತಿಯಿಂದ ಕಳಸ ತಾಲ್ಲೂಕು ಮಾವಿನಕೆರೆ ಗ್ರಾಮ ಪಂಚಾಯತಿ ಸದಸ್ಯತ್ವಕ್ಕೆ ಅಭ್ಯರ್ಥಿಯಾಗಿದ್ದರು. ಅವರು ಶಂಕಿತ ನಕ್ಸಲ್‌ರಾದದ್ದು ಹೇಗೆ?


1992 ರಿಂದ ಅವರು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಆಗ ಇನ್ನೂ ಹದಿಹರೆಯದವರಾಗಿದ್ದ ಯಶೋಧಾ ಮತ್ತು ಅವರ ಓರಗೆಯ ಹಲವಾರು ತರುಣ ತರುಣಿಯರಿಗೆ ಈ ಸಮಿತಿಯ ಜೊತೆ ತಮ್ಮನ್ನು ಗುರುತಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ರಾಷ್ಟ್ರೀಯ ಉದ್ಯಾನವನ ಯೋಜನೆ, ಅರಣ್ಯಗಳಲ್ಲಿ ತಲತಲಾಂತರದಿಂದ ನೆಲೆಸಿದ್ದ ಆದಿವಾಸಿಗಳನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸುವ ಉದ್ದೇಶದಿಂದಲೇ ರೂಪಿತವಾದದ್ದು ಇದಕ್ಕೆ ಕೆಲವು ಪರಾನ್ನಪುಷ್ಟ ಪರಿಸರವಾದಿಗಳ ಬೆಂಬಲವೂ ಇದೆ. ಅರಣ್ಯ ಸಂರಕ್ಷಣೆ ಹಾಗೂ ವನ್ಯಮೃಗಗಳ ಸಂತತಿ ರಕ್ಷಣೆಗಾಗಿ ಕೇಂದ್ರ ಸರ್ಕಾರ ದೇಶದ ಹಲವು ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನ ವನ ಎಂದು ಘೋಷಿಸಿದ್ದು ಅವುಗಳಲ್ಲಿ ಕರ್ನಾಟಕದ ಕುದುರೆಮುಖ ರಾಷ್ಟ್ರೀಯ



ಉದ್ಯಾನವನವೂ ಒಂದಾಗಿದೆ. ಇದರ ವ್ಯಾಪ್ತಿಯಲ್ಲಿ ಪಶ್ಚಿಮಘಟ್ಟದ ಉಡುಪಿ, ಕುಂದಾಪುರ, ಕಾರ್ಕಳ, ಬೆಳ್ತಂಗಡಿ ಹಾಗೂ ಶೃಂಗೇರಿ ತಾಲ್ಲೂಕುಗಳ ವ್ಯಾಪ್ತಿಗೆ ಬರುವ ಅರಣ್ಯ ಪ್ರದೇಶ ಒಳಪಟ್ಟಿದೆ. ರಾಷ್ಟ್ರೀಯ ಉದ್ಯಾನವನಗಳಲ್ಲಿ ಮನುಷ್ಯ ವಸತಿಗೆ ಅವಕಾಶವೇ ಇಲ್ಲ; ಮನುಷ್ಯರಿಗೆ ಮತ್ತು ಸಾಕುಪ್ರಾಣಿಗಳಿಗೆ ಅದರೊಳಗೆ ಪ್ರವೇಶವೂ ನಿಷಿದ್ಧ. ಈ ಕಟ್ಟುಪಾಡಿನಿಂದಾಗಿ 1987 ರಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಧಿಕೃತ ಘೋಷಣೆ ಹೊರಬಿದ್ದಾಗ ಅದರ ವ್ಯಾಪ್ತಿಯೊಳಗೆ ವಾಸಿಸುತ್ತಿದ್ದ ಜನ ಒಮ್ಮಿಂದೊಮ್ಮೆಗೆ ಅಕ್ರಮ ವಾಸಿಗಳಾಗಿ ಬಿಟ್ಟರು. ಸರ್ಕಾರ ಕೊಟ್ಟ ಪರಿಹಾರಧನವನ್ನು ತೆಗೆದುಕೊಂಡು ಸರ್ಕಾರ ವಿಧಿಸಿದ ಗಡುವಿನೊಳಗೆ, ತಮ್ಮ ವಾಸಸ್ಥಳಗಳನ್ನು ತೆರವು ಮಾಡದವರು ಈಗ ಕಾನೂನಿನ ಕಣ್ಣಿನಲ್ಲಿ ಅಪರಾಧಿಗಳಾದರು. ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯೊಳಗೆ ಬರುವ ಸುಮಾರು 1500 ಆದಿವಾಸಿ ಕುಟುಂಬಗಳು ತಲತಲಾಂತರ ದಿಂದಲೂ ಅರಣ್ಯ ವಾಸಿಗಳಾಗಿದ್ದವರು; ಕಡುಬಡುವರು ಮತ್ತು ಬೇಸಾಯ ಬಿಟ್ಟು ಜೀವನ ನಿರ್ವಹಣೆಗೆ ಬೇರೆ ಯಾವ ಕಾಯಕವೂ ಇಲ್ಲದವರು. ಇಂತಹ ಅಸಹಾಯಕ ಸ್ಥಿತಿಯಲ್ಲಿ ಸರ್ಕಾರ ಪರಿಹಾರ ಧನವೆಂದು ಕೊಡುವ ಚಿಕ್ಕಾಸು ತೆಗೆದು ಕೊಂಡು ಈ ಆದಿವಾಸಿಗಳು ಹೋಗುವುದಾದರೂ ಎಲ್ಲಿಗೆ? ಕುದುರೆಮುಖ ರಾಷ್ಟ್ರೀಯ ಉದ್ಯಾನ ವನದ ಘೋಷಣೆ ಈ ಆದಿವಾಸಿ ಕುಟುಂಬಗಳಿಗೆ ಒಂದು ಸಾಮೂಹಿಕ ಮರಣ ದಂಡನೆಯೇ ಆಗಿ ಪರಿಣಮಿಸಿತು. ಈ ಸನ್ನಿವೇಶದಲ್ಲಿ ಹುಟ್ಟಿಕೊಂಡದ್ದು



ಈದು ಎನ್‌ಕೌಂಟರ್ ನಂತರ ಪೊಲೀಸ್ ಅಧಿಕಾರಿಗಳೊಂದಿಗೆ ಮುರುಗನ್ (ಬಲತುದಿ)



ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಹೋರಾಟ ಸಮಿತಿ.

ಈ ಯೋಜನೆಯ ಸಂತ್ರಸ್ಥರಲ್ಲಿ ಯಶೋಧಾ ಕುಟುಂಬ ಕೂಡ ಸೇರಿದ್ದುದರಿಂದ ಯೋಜನೆಯ ವಿರುದ್ಧ ಹೋರಾಟ ನಡೆಸುವುದು ಯಶೋಧಾ ಮತ್ತು ಅವರಂತಹ ಹಲವರಿಗೆ ವಸ್ತುಶಃ ಜೀವನ-ಮರಣದ ಪ್ರಶ್ನೆಯೇ ಆಗಿತ್ತು. ಕರ್ನಾಟಕದ ಹಲವು "ಶಂಕಿತ ನಕ್ಸಲರು" ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗೆ ಬರುವ ಹಳ್ಳಿಗಳ ಆದಿವಾಸಿ ಯುವಕರು. ಅವರೆಲ್ಲರೂ ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದವರು. ಅನೇಕ ವರ್ಷಗಳ ಕಾಲ ಈ ಸಮಿತಿ ರಾಷ್ಟ್ರೀಯ ಉದ್ಯಾನವನ ಯೋಜನೆಯನ್ನು ಪ್ರಜಾಸತ್ತಾತ್ಮಕವೂ ಶಾಂತಿಯುತವೂ ಆದ ವಿಧಾನಗಳಿಂದಲೇ ಪ್ರತಿಭಟಿಸಿತು. ಸರ್ಕಾರ ಈ ಪ್ರತಿಭಟನೆಯನ್ನು ಮೊದಮೊದಲು ಅಲಕ್ಷಿಸಿತು; ನಂತರ ಪೊಲೀಸು ದಬ್ಬಾಳಿಕೆಯ ಮೂಲಕ ದಮನಿಸಲು ಪ್ರಾರಂಭಿಸಿತು. ಆ ಹಂತದಲ್ಲಿ ಪ್ರತಿಭಟನೆಯಲ್ಲಿ ತೊಡಗಿದ್ದ ಹಲವು ಆದಿವಾಸಿ ಯುವಕರು ಭೂಗತರಾದರು.

ಈಗಲೂ ಪೊಲೀಸರು ಬೆನ್ನಟ್ಟಿರುವ ವಿಕ್ರಮ್ ಗೌಡ, ಕಳೆದ ವರ್ಷ ಮಾರ್ಚ್ ತಿಂಗಳ ಮೊದಲ ದಿನ ಕಾರ್ಕಳ ಸಮೀಪ ಮುಟ್ಲುಪಾಡಿಯಲ್ಲಿ 'ಪೊಲೀಸ್ ಎನ್‌ಕೌಂಟರ್' ಮೂಲಕ ಕೊಲೆಯಾದ ವಸಂತ, ಪೊಲೀಸರ ಕಣ್ಣುತಪ್ಪಿಸಿ ತಲೆಮರೆಸಿ ಕೊಂಡಿರುವ ವಸಂತನ ತಂಗಿ ಸುಂದರಿ, 2008 ರಲ್ಲಿ ಶೃಂಗೇರಿ ಸಮೀಪ ಕಿಗ್ಗದ 'ಎನ್‌ಕೌಂಟರ್'ನಲ್ಲಿ ಕೊಲೆಯಾದ ದಿನಕರ ಗೌಡ, ಈದು ಎನ್‌ಕೌಂಟರಿನಲ್ಲಿ ಕೊಲೆಯಾದ ಹಾಜಿಮಾ ಮತ್ತು ಪಾರ್ವತಿ-ಎಲ್ಲರೂ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದವರು. ಪೊಲೀಸರು ಇವರ ಮೇಲೆ ಒಮ್ಮೆಗೇ ಹಲವು ಕ್ರಿಮಿನಲ್ ಕೇಸುಗಳನ್ನು ದಾಖಲಿಸಿಕೊಂಡು, ಇವರನ್ನು ಪತ್ತೆಹಚ್ಚಿ ಸೆರೆ ಹಿಡಿಯಲು ತಮ್ಮ ಮಾಮೂಲಿ ಥರ್ಡ್ ಡಿಗ್ರಿ ವಿಧಾನಗಳನ್ನು ಪ್ರಯೋಗಿಸಲು ಆರಂಭಿಸಿದಾಗ ಈ ಆದಿವಾಸಿ ತರುಣರು ತಲೆಮರೆಸಿಕೊಳ್ಳುವುದು ಅನಿವಾರ್ಯವಾಯಿತು. ಆದರೆ ಆ ನಂತರವೂ ಇವರು ನಮ್ಮ ಮಾಧ್ಯಮಗಳು ಚಿತ್ರಿಸಿದಷ್ಟು ದೊಡ್ಡ ಪ್ರಮಾಣದ ಹಿಂಸೆಯನ್ನು ಎಲ್ಲಿಯೂ ನಡೆಸಲಿಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯನ್ನು ದಮನಿಸಿ, ಅದರ ಹಲವು ಸಕ್ರಿಯ ಸದಸ್ಯರನ್ನು ಭೂಗತಗೊಳಿಸಿ, ಕೆಲವರನ್ನು ಎನ್‌ಕೌಂಟರ್ ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾದರೂ ಈ ಸಮಿತಿಯ ಪ್ರತಿಭಟನೆ ವ್ಯರ್ಥವಾಗಲಿಲ್ಲ. ಈದು ಎನ್‌ಕೌಂಟರಿನಲ್ಲಿ ಹಾಜಿಮಾ ಪಾರ್ವತಿ ಯವರ ಬಲಿದಾನದ ನಂತರ ಸರ್ಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಿಂದ ಯಾರನ್ನೂ ಬಲಾತ್ಕಾರದಲ್ಲಿ ಒಕ್ಕಲೆಬ್ಬಿಸುವುದಿಲ್ಲ ಎಂಬ ಆಶ್ವಾಸನೆ ನೀಡಿತು. ಈ ಯೋಜನೆಯ ವ್ಯಾಪ್ತಿಯೊಳಗೆ ಬರುವ ಹಳ್ಳಿಗಳ ಜನ ಈಗಲೂ ಅದಕ್ಕಾಗಿ ಹಾಜಿಮಾ ಪಾರ್ವತಿಯರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಈದು ಎನ್‌ಕೌಂಟರ್ ನಡೆದ ಆ ರಾತ್ರಿ ಸ್ಥಳದಲ್ಲಿದ್ದರು ಎಂಬ ಒಂದೇ ಒಂದು ಕಾರಣಕ್ಕೆ ಪೊಲೀಸರು ಯಶೋಧಾ ನಕ್ಸಲ್‌ಳಾಗಿದ್ದು ಆಕೆ ಬಂದೂಕು ಹಿಡಿದಿದ್ದರು ಎಂದು ಕತೆ ಕಟ್ಟಿದ್ದರು. ಆದರೆ ನ್ಯಾಯಾಲಯ ಪೊಲೀಸರ ಈ ಕಟ್ಟುಕತೆಯನ್ನು ಸಾಕ್ಷಿ ಎಂದು ಪರಿಗಣಿಸಲು ನಿರಾಕರಿಸಿದೆ. (ವಿವರವಾದ ತೀರ್ಪು ಇನ್ನೂ ಪ್ರಕಟವಾಗಿಲ್ಲ). ತಾನು ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಈದುವಿಗೆ ಆ ದಿನ ಹೋಗಿದ್ದು ರಾತ್ರಿ ರಾಮಪ್ಪ ಗೌಡರ ಮನೆಯಲ್ಲಿ ಉಳಿದುಕೊಂಡಿದ್ದಾಗಿಯೂ, ತನ್ನ ಬಳಿ ಯಾವುದೇ ಆಯುಧ ಯಾವತ್ತೂ ಇರಲಿಲ್ಲವೆಂದೂ ಯಶೋಧಾ ಹೇಳುತ್ತಾರೆ. ನ್ಯಾಯಾಲಯ ಸಹ ಈಗ ಅವರ ಮಾತನ್ನು ಎತ್ತಿ ಹಿಡಿದಿದೆ.

ಉಡುಪಿಯ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟಿನಲ್ಲಿ ಯಶೋಧಾರ ಮೇಲೆ ಏಳು ವರ್ಷಗಳಿಂದ ನಡೆಯುತ್ತಿದ್ದ ಕೇಸು ಈಗ ಸುಖಾಂತ್ಯ ಕಂಡಿದ್ದರೂ ಅವರು ಮೂಡಿಗೆರೆ ಕೋರ್ಟಿನಲ್ಲಿ ಇತರ 40 ಆರೋಪಿಗಳ ಜೊತೆ ಸರ್ಕಾರಿ ಭೂಮಿಯಲ್ಲಿ "ಅತಿಕ್ರಮಣ, ಅಕ್ರಮವಾಸ"ಗಳ ಇನ್ನೊಂದು ಕೇಸು ಎದುರಿಸುತ್ತಿದ್ದಾರೆ. ಈ ಕೇಸು ಕೂಡ ಬಡ ಆದಿವಾಸಿಗಳನ್ನು ತಮ್ಮ ಊರು, ಮನೆ ಮತ್ತು ಜಮೀನುಗಳಿಂದ ಓಡಿಸುವ ಸರ್ಕಾರದ ಹುನ್ನಾರದ ಭಾಗವಾಗಿದ್ದು ಯಶೋಧಾ ಮತ್ತು ಇತರ ಆರೋಪಿಗಳಿಗೆ ನ್ಯಾಯ ಸಿಗಲಿ ಎಂದು ಆಶಿಸೋಣ.

• ಜಿ. ರಾಜಶೇಖರ

ಲಂಕೇಶರ ಕುದು
ಜೂಜು ಶುರು


ನಮ್ಮ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿರುವಾಗಲೇ ಲಂಕೇಶರು ಕುದುರೆ ರೇಸ್‌ಗೆ ಹ
ಶುರು ಮಾಡಿದರು. ಇದರ ಬಗ್ಗೆ ನಮ್ಮಿಬ್ಬರ ನಡುವೆ ಜಗಳಗಳು ಶುರು ಆದವು
ದಿನ "ನೀವು ಇನ್ನು ಮುಂದೆ ರೇಸ್‌ಗೆ ಹೋಗುವುದಿಲ್ಲ ಎಂದು ಪ್ರಾಮಿಸ್ ಮಾಡಿ"
ಹಠ ಹಿಡಿದೆ. ಆಗ ಅವರು "ಹೋಗಲ್ಲ ಬಿಡೆ" ಎಂದರೇ ಹೊರತು ಪ್ರಾಮಿಸ್ ಮ



ನಾವು ಬಾಡಿಗೆ ಇದ್ದ ಮನೆ ಮೊದಲನೆ ಮಹಡಿಯಲ್ಲಿದ್ದರೆ ಸಿದ್ಧೋಜಿ ರಾವ್ ಅವರ ಕುಟುಂಬ ಕೆಳಗಿನ ಮಹಡಿಯಲ್ಲಿ ವಾಸಿಸುತ್ತಿತ್ತು. ನಮ್ಮ ಮನೆ ಅವರ ಮನೆಯಷ್ಟು ದೊಡ್ಡದಾಗಿರಲಿಲ್ಲ. ಆದ್ದರಿಂದ ಅವರ ಮನೆಯ ಹಿಂದಿನ ಭಾಗದ ತಾರಸಿ ನಮ್ಮ ಪಾಲಿಗೆ ಮನೆ ಹಿಂದಿರುವ ವಿಸ್ತಾರವಾದ ಬಾಲ್ಕನಿಯಂತಿತ್ತು. ಆ ತಾರಸಿಯಲ್ಲೇ ನಾವೆಲ್ಲ ಬಹಳಷ್ಟು ಬೆಳದಿಂಗಳನ್ನ ಆನಂದಿಸುತ್ತಿದ್ದೆವು. ಲಂಕೇಶರು ಮನೆಯಲ್ಲಿದ್ದಾಗ ರಾತ್ರಿ ರೊಟ್ಟಿ, ಎಣ್ಣೆಗಾಯಿ ಊಟವನ್ನು ಆ ತಾರಸಿಯ ಮೇಲೆ ಮಾಡುತ್ತಿದ್ದೆವು. ಅಂತಹ ರಾತ್ರಿಗಳನ್ನು ನಮ್ಮ ಕುಟುಂಬದೊಂದಿಗೆ ಕಿ.ರಂ. ಕಳೆದದ್ದಿದೆ.

ನಮ್ಮ ಮನೆ ಓನರ್ ಸಿದ್ಧೋಜಿ ರಾವ್ ಅವರ ಎರಡನೇ ಮಗ ನಾರಾಯಣ್ ರಾವ್ ಅವರಿಗೆ ಮದುವೆ ಆಯಿತು. ಅವರ ಹೆಂಡತಿ ಕೊಯಮತ್ತೂರಿನವರು. ದೇವಕಿ ಅಂತ ಹೆಸರು. ದೇವಕಿಗೆ ಕನ್ನಡ ಬರುತ್ತಿರಲಿಲ್ಲ, ಆದರೆ ಇಂಗ್ಲಿಷ್‌ನಲ್ಲಿ ಚೆನ್ನಾಗಿ ಮಾತಾಡುತ್ತಿದ್ದರು. ಅವರು ಬೆಂಗಳೂರಿಗೆ ಹೊಸಬರಾಗಿದ್ದು ಅವರಿಗೆ ಯಾರೂ ಸ್ನೇಹಿತರಿರಲಿಲ್ಲವಾದ್ದರಿಂದ ನನ್ನ ಜೊತೆ ಮಾತಾಡುತ್ತಿದ್ದರು. ನಾನು ಅವರೊಂದಿಗೆ ನನ್ನ ಹುರುಕುಮುರುಕು ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದೆ. ನಾವಿಬ್ಬರು ತುಂಬಾ ಸ್ನೇಹದಿಂದ ಇದ್ದೆವು.

ಒಮ್ಮೆ ನನ್ನ ಸ್ನೇಹಿತೆ ಸೀತಾಳ ಮಗ ಆನಂದ ನಮ್ಮ ಮನೆಗೆ ಬಂದಿದ್ದ. ನಮ್ಮ ಮಗ ಅಜಿತು (ಇಂದ್ರಜಿತ್‌ನನ್ನು ಮನೆಯಲ್ಲಿ ಅಜಿತು ಎಂದೇ ಕರೆಯುವುದು) ಮತ್ತು ಆನಂದ ಮನೆಯ ಹಿಂದಿದ್ದ ತಾರಸಿಯ ಮೇಲೆ ಆಟವಾಡುತ್ತಿದ್ದರು. ಕೆಳಗಿನ ಮನೆಯ ಅಡುಗೆ ಮನೆಗೆ ಬೆಳಕು ಬರಲೆಂದು ನಾಲ್ಕು ಇಟ್ಟಿಗೆಗಳ ನಡುವೆ ಪುಟ್ಟ ಗಾಜನ್ನು ತಾರಸಿಗೆ ಅಳವಡಿಸಿದ್ದರು. ಆಟವಾಡುವಾಗ ಆನಂದ ಆ ಗಾಜಿನ ಮೇಲೆ ಕಾಲಿಟ್ಟಿದ್ದರಿಂದ ಅದು ಒಡೆದು ಹೋಯಿತು. ಅಷ್ಟೇ ಅಲ್ಲ, ಆನಂದನ ಕಾಲಿಗೆ ಗಾಯವಾಗಿ ರಕ್ತ ಸುರಿಯುತ್ತಿತ್ತು. ನಾನು ಕೂಡಲೆ ಆನಂದನನ್ನು ಎತ್ತಿಕೊಂಡು ಮೇಲಿನ ಮನೆಯಿಂದ ಇಳಿದು ಬಂದು ಕೆಳಗಿನ ಮನೆಯವರಿಗೆ "ನಿಮ್ಮ ಅಡುಗೆ ಮನೆಯ ಗಾಜು ಒಡೆದು ಮನೆಯೊಳಗೆ ಗಾಜಿನ ಚೂರುಗಳು ಬಿದ್ದಿವೆ. ನಾನು ಮಗುವನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗುತ್ತಿದ್ದೇನೆ" ಎಂದು ಡಾಕ್ಟರ್ ಹತ್ತಿರ ಓಡಿದೆ.



• ಇಂದಿರಾ ಲಂಕೇಶ್

ನಾನು ವಾಪಸ್ ಬಂದಾಗ ದೇವಕಿ ನಮ್ಮ ಮನೆಗೆ ಬಂದು "ನಾವು ಈ ಮನೆಯ ಓನರ್, ನೀವು ಬಾಡಿಗೆದಾರರು. ನಾವು ನಿಮಗೆ ತೊಂದರೆ ಕೊಡಬೇಕು. ಆದರೆ ನೀವೇ ನಮಗೆ ತೊಂದರೆ ಕೊಡುತ್ತಿದ್ದೀರಿ" ಅಂತ ಗಲಾಟೆ ಮಾಡಿದರು. ನನಗೆ ಆನಂದನ ಬಗ್ಗೆಯೇ ಚಿಂತೆ. ಅಂತಹ ಪರಿಸ್ಥಿತಿಯಲ್ಲಿ ನಾನಿದ್ದಾಗ ದೇವಕಿ ಬಂದು ಗಲಾಟೆ ಶುರುಮಾಡಿದ್ದರಿಂದ ನನಗೂ ಸಿಟ್ಟು ಬಂತು. "ಮುರಿದ ಗಾಜನ್ನು ನಾವೇ ರಿಪೇರಿ ಮಾಡಿಸಿ ಕೊಡುತ್ತೇವೆ. ನಾವು ನಿಮಗೆ ಬಾಡಿಗೆ ಕೊಡುತ್ತೇವೆ. ಈ ಕ್ಷಣದವರೆಗೆ ನೀವು ನಿಂತಿರುವ ಈ ಜಾಗಕ್ಕೂ ಬಾಡಿಗೆ ವಸೂಲು ಮಾಡಿದ್ದೀರಿ. ಆದ್ದರಿಂದ ನೀವು ಮನೆಯ ಆಚೆ ನಿಂತು ಮಾತಾಡಿ" ಎಂದು ರೇಗಿದೆ. ನನ್ನ ಮಾತು ಕೇಳಿ ದೇವಕಿಗೆ ಶಾಕ್ ಆಯಿತು. ಆ ಕ್ಷಣದಿಂದ ನಾನು ಅವರೊಂದಿಗೆ ಮಾತಾಡುವುದನ್ನು ನಿಲ್ಲಿಸಿದೆ.



ಸ್ವಲ್ಪ ದಿನಗಳ ನಂತರ ದೇವಕಿ ಅವರು ಲಂಕೇಶರ ಹತ್ತಿರ "ನನ್ನೊಂದಿಗೆ ಇಂದಿರಾ ಹೀಗೆ ಮಾತಾಡಬಹುದಾ? ನೋಡಿ ಅವರು ಮಾತು ಬಿಟ್ಟಿದ್ದಾರೆ" ಎಂದು ಕೇಳಿಕೊಂಡರು. ಆಗ ಲಂಕೇಶರು "ಪಾಪ, ಒಳ್ಳೆಯ ಹೆಣ್ಣುಮಗಳು. ಯಾಕೆ ಆಕೆಯೊಂದಿಗೆ ಮಾತು ಬಿಟ್ಟಿದ್ದೀಯ? ಮಾತಾಡ್ಸೆ" ಎಂದರು. ನಾನು ದೇವಕಿಯೊಂದಿಗೆ ಮತ್ತೆ ಮಾತಾಡಲು ಶುರು ಮಾಡಿದೆ. ಆಕೆ ಒಳ್ಳೆಯ ಹುಡುಗಿ. ಆಮೇಲೆ ನಾವು ಸ್ವಂತ ಮನೆ ಮಾಡಿಕೊಂಡು ಹೋಗುವವರೆವಿಗೂ ನಾವಿಬ್ಬರು ಸ್ನೇಹಿತೆಯರಾಗಿದ್ದೆವು.

ನಮ್ಮ ಮಕ್ಕಳು ಸ್ವಲ್ಪ ದೊಡ್ಡವರಾಗಿದ್ದರಿಂದ ನನಗೆ ಮನೆ ಕೆಲಸ ಮುಗಿಸಿ ಸ್ವಲ್ಪ ಬಿಡುವು ಸಿಗುತ್ತಿತ್ತು. ಲಂಕೇಶರು ನನಗೆ ಕಾಲೇಜು ಲೈಬ್ರರಿಯಿಂದ ಪುಸ್ತಕಗಳನ್ನು ತಂದು ಕೊಡುತ್ತಿದ್ದರು. ಕುವೆಂಪು, ತೇಜಸ್ವಿ, ತ.ರಾ.ಸು, ಅನಕೃ, ಆಲನಹಳ್ಳಿ ಕೃಷ್ಣ ಅನುಪಮಾ, ತ್ರಿವೇಣಿ... ಎಲ್ಲರ ಪುಸ್ತಕಗಳನ್ನು ತರುತ್ತಿದ್ದರು. ನಾನು ಒಂದು ಪುಸ್ತಕ ಹಿಡಿದು ಕುಳಿತರೆ ಅದು ಮುಗಿಯುವವರೆಗೂ ಬಿಡುತ್ತಿರಲಿಲ್ಲ. ನಾನು ಪುಸ್ತಕಗಳನ್ನು ವೇಗವಾಗಿ ಓದಿ ಮುಗಿಸುತ್ತಿದ್ದ ರೀತಿಯನ್ನುನೋಡಿ ಲಂಕೇಶರು "ನಿನಗೆ ಎಷ್ಟು ಪುಸ್ತಕ ಅಂತ ತಂದುಕೊಡಲಿ. ಇನ್ನು ಮೇಲೆ ನೀನೆ ಬರೆದು ನೀನೇ ಓದಿಕೋ" ಎನ್ನಲು ಶುರು ಮಾಡಿದರು.

****

ಲಂಕೇಶರು ಪ್ರಾರಂಭಿಸಿದ್ದ ಪ್ರತಿಮಾ ನಾಟಕರಂಗದ ಮೂಲಕ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳನ್ನಾಡಿಸಲು ಮುಂದಾದರು. ಆಗ ಅವರೊಂದಿಗೆ ಬಿ.ವಿ.ಕಾರಂತ್ ಮತ್ತು ಗಿರೀಶ್ ಕಾರ್ನಾಡ್ ಕೈಜೋಡಿಸಿದರು. ಆದರೆ ಆಗ ಕಲಾಕ್ಷೇತ್ರವನ್ನು ರಿಪೇರಿ ಮಾಡುತ್ತಿದ್ದರಿಂದ ಅದರ ಪಕ್ಕ ಮತ್ತು ಹಿಂಬದಿಯಲ್ಲಿದ್ದ ಜಾಗಗಳನ್ನೇ ಬಯಲು ರಂಗಮಂದಿರದಂತೆ ಉಪಯೋಗಿಸಿಕೊಂಡು ಅಲ್ಲೇ ನಾಟಕಗಳನ್ನು ಮಾಡಲು ನಿರ್ಧರಿಸಿದರು.

ಆ ನಾಟಕ ಉತ್ಸವಕ್ಕೆ ಆಯ್ಕೆ ಮಾಡಿಕೊಂಡದ್ದು ಲಂಕೇಶರು ಬರೆದಿದ್ದ 'ಸಂಕ್ರಾಂತಿ', ಲಂಕೇಶರು ಅನುವಾದಿಸಿದ್ದ 'ಈಡಿಪಸ್' ಮತ್ತು ಚಂದ್ರಶೇಖರ್ ಕಂಬಾರರು ಬರೆದಿದ್ದ 'ಜೋಕುಮಾರಸ್ವಾಮಿ' ನಾಟಕಗಳನ್ನು. ಕಾರಂತ್ ಮೂರೂ ನಾಟಕಗಳನ್ನು ನಿರ್ದೇಶಿಸಿದರೆ, ಕಾರ್ನಾಡ್ 'ಈಡಿಪಸ್' ಮತ್ತು 'ಜೋಕುಮಾರಸ್ವಾಮಿ' ನಾಟಕಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 'ಸಂಕ್ರಾಂತಿ' ನಾಟಕದಲ್ಲಿ ಕಾರಂತರು ಉಜ್ಜನ ಪಾತ್ರ ವಹಿಸಿದರೆ ಇತರೆ ಪಾತ್ರಗಳಲ್ಲಿ ಬಿ.ಸೋಮಶೇಖರ ರಾವ್, ಕಾಂತರಾಜ್ ಇದ್ದರು. ಚಿತ್ರನಟ ಮುಸುರಿ ಕೃಷ್ಣಮೂರ್ತಿ ಅವರೂ ಒಂದು ಪಾತ್ರವನ್ನು ಅದ್ಭುತವಾಗಿ ಮಾಡಿದ್ದರು.

ಲಂಕೇಶರೇ ಇಡೀ ನಾಟಕೋತ್ಸವದ ಖರ್ಚು ವೆಚ್ಚಗಳನ್ನು ಭರಿಸಿದ್ದರು. ಒಮ್ಮೆ ಯಾರೋ ಒಬ್ಬರು ಬಂದು "ಸಾರ್, ಈಡಿಪಸ್ ಪಾತ್ರಕ್ಕೆ ಶೂ ಲೇಸ್ ಕೊಂಡುಕೊಳ್ಳಬೇಕು" ಅಂದ. ಆಗ ಲಂಕೇಶರು ಒಂದು ಕೈಯಲ್ಲಿ ಸಿಗರೇಟ್ ಸೇದುತ್ತಾ ಇನ್ನೊಂದು ಕೈಯನ್ನು ಜೇಬಿಗೆ ಹಾಕಿ ಸಾವಿರ ರೂಪಾಯಿ ಕೊಟ್ಟರು. ಹೀಗೆ ಲಂಗುಲಗಾಮಿಲ್ಲದೆ ಹಣವನ್ನು ಲಂಕೇಶ್ ಈ ನಾಟಕಗಳಿಗೆ ಚೆಲ್ಲಿದ್ದರು.

ಮೂರೂ ನಾಟಕಗಳು ತುಂಬಾ ಚೆನ್ನಾಗಿ ಮೂಡಿ ಬಂದು ಎಲ್ಲರೂ ಹೊಗಳಿದರು. ಕೆಲವರಂತೂ ಲಂಕೇಶರ ಅನುವಾದವನ್ನು ಕೊಂಡಾಡಿದರು. ಕಾರಂತರಂತೂ ತುಂಬಾ ಖುಷಿಯಾಗಿದ್ದರು. ಕಾರ್ನಾಡರು ಚೆನ್ನಾಗಿ ಅಭಿನಯಿಸಿದ್ದರು. ಮೂರೂ ದಿನ ಟಿಕೆಟ್‌ಗಳು ಚೆನ್ನಾಗಿ ಖರ್ಚು ಆಗಿ ನೂರಾರು ಜನ ಅಕ್ಕಪಕ್ಕ ನಿಂತು ನಾಟಕಗಳನ್ನು ನೋಡಿದ್ದರು.

ನಾಟಕೋತ್ಸವ ಯಶಸ್ವಿಯಾಗಿದ್ದರೂ ಕೊನೆಗೂ ಮನೆಗೆ ಬಂದದ್ದು ಸೆಟ್‌ಗೆ ಹಾಕಿದ್ದ ಕಿತ್ತುಹೋದ ಕಂಬಗಳು ಮಾತ್ರ. ಲಂಕೇಶರು ಹಣಕಾಸಿನ ವಿಚಾರದಲ್ಲಿ ಎಷ್ಟು ಬೇಜವಾಬ್ದಾರಿಯಾಗಿರುತ್ತಿದ್ದರು ಎಂಬುದಕ್ಕೆ ಇದು ಒಂದು ಸಣ್ಣ ಉದಾಹರಣೆ.

ಸಾಮಾನ್ಯವಾಗಿ ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದ ಎಲ್ಲ ನಾಟಕ ಪ್ರದರ್ಶನಗಳಿಗೆ ಲಂಕೇಶರು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಲಂಕೇಶರು ಬರೆದಿದ್ದ 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕದ ಪ್ರದರ್ಶನವಿತ್ತು. ಟಿಕೆಟ್‌ನಲ್ಲಿಯೇ ತಡವಾಗಿ ಬಂದವರಿಗೆ ಪ್ರವೇಶವಿಲ್ಲ ಎಂದು ಪ್ರಿಂಟ್ ಮಾಡಿಸಲಾಗಿತ್ತು. ಆದರೆ ಮಕ್ಕಳನ್ನು ತಯಾರು ಮಾಡಿ ನಾನೂ ರೆಡಿ ಆಗಿ ಪರಿಷತ್ತಿಗೆ ಹೋಗುವುದು ಐದು ನಿಮಿಷ ತಡವಾಯಿತು. ನಾನು ಲೇಟಾಗಿ ಬಂದಿದ್ದನ್ನು ನೋಡಿ ಲಂಕೇಶರು "ಮನೆಗೆ ವಾಪಸ್ ಹೋಗು" ಅಂತ ರೇಗಿದರು. ಆಗ ರಾಜಶೇಖರ್ (ಕೊಂಡಜ್ಜಿ ಬಸಪ್ಪ ಅವರ ಮಗ) ನನ್ನನ್ನು ಹಿಂಬದಿಯ ಬಾಗಿಲಿನಿಂದ ಒಳಗೆ ಬಿಟ್ಟರು.



ರಾಜಶೇಖರ್ ಲಂಕೇಶರ ವಿದ್ಯಾರ್ಥಿ ಆಗಿದ್ದರು. ಅವರು ಮಿನುಗು ತಾರೆ ಕಲ್ಪನಾ ಜೊತೆ ಒಂದು ಸಿನಿಮಾಕ್ಕೆ ಹೀರೋ ಆಗಿ ಸೆಲೆಕ್ಟ್ ಆಗಿದ್ದರು. ರಾಜಶೇಖರ್ ತುಂಬಾ ನಾಚಿಕೆ ಸ್ವಭಾವದ ಹುಡುಗ. ಆದ್ದರಿಂದ ಆತನಿಗೆ ಕಲ್ಪನಾ ಅವರ ಜೊತೆ ಸ್ವಲ್ಪ ಸಲಿಗೆ ಬೆಳೆಯಲಿ ಎಂದು ಆ ಚಿತ್ರದ ನಿರ್ದೇಶಕ ಅವರನ್ನು ಕಲ್ಪನಾ ಜೊತೆ ಪಿಕ್ಚರ್, ನಾಟಕ ಎಂದೆಲ್ಲ ಕಳುಹಿಸುತ್ತಿದ್ದರು. ಒಮ್ಮೆ ನಾವು ಸಿನಿಮಾ ನೋಡಿಕೊಂಡು ಆಚೆ ಬಂದಾಗ ಅವರಿಬ್ಬರು ನಮಗೆ ಸಿಕ್ಕಿದ್ದರು. ರಾಜಶೇಖರ್ ದೇವರೆದುರಿಗೆ ಭಕ್ತ ನಿಲ್ಲುವಂತೆ ಕಲ್ಪನಾ ಎದುರು ನಿಂತಿದ್ದರು.

****


ಲಂಕೇಶರ ಓಡಾಟಗಳು, ಖರ್ಚುಗಳು ಜಾಸ್ತಿ
ಯಾಗಿದ್ದವು. ನಮ್ಮ ಮನೆ ಎದುರಿಗಿದ್ದ ಮಣಿ
ಸ್ಟೋರ್‌ನಿಂದ ಮನೆಗೆ ಬೇಕಾದ ಸಾಮಾನುಗಳನ್ನು



ಬರೆಸಿ ತರುತ್ತಿದ್ದೆ. ಅದನ್ನು ತಿಂಗಳು ಕೊನೆಯಲ್ಲಿ
ತುಂಬಬೇಕಿತ್ತು. ಆದರೆ ಲಂಕೇಶರು ಆ ದುಡ್ಡನ್ನು
ಸರಿಯಾಗಿ ಕೊಡುತ್ತಿರಲಿಲ್ಲ. ಒಮ್ಮೆ ಅಂಗಡಿಯವ
"ಹಳೆಯ ಬಾಕಿ ತುಂಬಲೇಬೇಕು" ಎಂದು ಹೇ
ಕಳುಹಿಸಿದರು. ನಾನು ಅದಿಗೆ ಮಾಡುವುದನ್ನು ಬಿ
ಸುಮ್ಮನೆ ಕುಳಿತೆ. ಹೀಗೇ ಎರಡು ದಿನ ಕಳೆಯಿತು
ಕೊನೆಗೆ ಲಂಕೇಶರು ಅದೆಲ್ಲಿಂದಲೋ ದುಡ್ಡು ತಂ
ಚುಕ್ತಮಾಡಿದರು.

ನಮ್ಮ ಆರ್ಥಿಕ ಪರಿಸ್ಥಿತಿ ಸಂಕಷ್ಟದಲ್ಲಿರುವಾಗ
ಲಂಕೇಶರು ಕುದುರೆ ರೇಸ್‌ಗೆ ಹೋಗಲು ಶುರು
ಮಾಡಿದರು. ಇದರ ಬಗ್ಗೆ ನಮ್ಮಿಬ್ಬರ ನಡುವೆ ಜ
ಶುರು ಆದವು. ಒಂದು ದಿನ "ನೀವು ಇನ್ನು ಮ
ರೇಸ್‌ಗೆ ಹೋಗುವುದಿಲ್ಲ ಎಂದು ಪ್ರಾಮಿಸ್ ಮ
ಎಂದು ಹಠ ಹಿಡಿದೆ. ಆಗ ಅವರು "ಹೋಗಲ್ಲ
ಎಂದರೇ ಹೊರತು ಪ್ರಾಮಿಸ್ ಮಾಡಲಿಲ್ಲ.

ಇದಾದ ಕೆಲ ದಿನಗಳ ನಂತರ ಅವರ
ಬಟ್ಟೆಗಳನ್ನು ಒಗೆಯಲು ಹಾಕುವಾಗ ಅವರ
ಜೇಬಿನಲ್ಲಿ ಕುದುರೆ ರೇಸ್‌ನ ಟಿಕೆಟ್ ಸಿಕ್ಕವು.



ನೋಡಿ ಕೆಂಡಾಮಂಡಲವಾದೆ. ಆಗ ಲಂಕೇಶರ
ಸ್ನೇಹಿತರೊಂದಿಗೆ ಗಾಂಧಿ ಬಜಾರಿನಲ್ಲಿರುವ ವಿ
ಭವನ್‌ನಲ್ಲಿ ಕುಳಿತಿದ್ದರು. ಸೀದಾ ಅಲ್ಲಿಗೆ ಹೋ
ನಾನು ಅವರನ್ನು ಮನೆಗೆ ಕರೆದುಕೊಂಡು ಬಂ
ಅವರ ಜೇಬಿನಲ್ಲಿ ಸಿಕ್ಕಿದ್ದ ರೇಸ್ ಟಿಕೆಟ್ ತೋ
"ಏನಿದು?" ಎಂದೆ. ಅವರು ನನ್ನ ಪ್ರಶ್ನೆಗೆ ಉ
ಕೊಡದೆ ಸುಮ್ಮನೆ ನಿಂತಿದ್ದರು. "ಇನ್ನು ಮುಂ
ಕುದುರೆ ರೇಸ್‌ಗೆ ಹೋಗಲ್ಲ ಎಂದು ನಿಮ್ಮ ವ
ಮೇಲೆ ಆಣೆ ಮಾಡಿ" ಎಂದು ಒತ್ತಾಯ ಮಾ
ಲಂಕೇಶರು ಮಗನ ಮೇಲೆ ಆಣೆ ಮಾಡಿ ಕುದ
ರೇಸ್‌ಗೆ ಇನ್ನು ಮುಂದೆ ಹೋಗುವುದಿಲ್ಲ ಎಂ


ನನಗೆ ನೆಮ್ಮದಿ ಆಯಿತು. ಅವರು ಇನ್ನು ವ
ಖಂಡಿತವಾಗಿಯೂ ಕುದುರೆ ರೇಸ್‌ಗೆ ಹೋಗು
ಎಂದು ನಂಬಿದೆ. ಆದರೆ ಅಷ್ಟು ಹೊತ್ತಿಗೆ ನನಗೆ
ತಿಳಿದಿರಬೇಕಿತ್ತು: ಈ ಆಣೆ ಪ್ರಮಾಣಗಳೆಲ್ಲ ಲಂ
ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲವೆಂ
ಲಂಕೇಶರ ಜೂಜು ಮೋಜು ಮುಂದುವರೆಯಿ

(ಮುಂದುವರೆ

ಅಯ್ಯೋ ಪಾಪ, ಯಡಿಯೂರಪ್ಪ!

ನೀ ನಾಡನಾಳಿದ ದೊರೆಯಪ್ಪ
ಯಡಿಯೂರಪ್ಪ ಯಡಿಯೂರಪ್ಪ,
ಇದೆಲ್ಲಾ ಏನೋ ಯಪ್ಪಾ,
ನಿನ್ನ ನೋಡಿದ್ರ ಅನಸತ್ತ ಅಯ್ಯೋ ಪಾಪ,
ಹಿಂಗ್ಯಾಕಾತೋ ಯಪ್ಪಾ,
ನೀನಾದಿ ಈಗ ಥೇಟ್ ಬೆಪ್ಪ,
ನೀ ಅಧಿಕಾರಕ್ಕ ಬಂದ ಕೂಡ್ಲೆ,
ಹಾವೇರಿಯಲ್ಲಿ ಗೋಲಿಬಾರ್,
ಚರ್ಚ್ ಮ್ಯಾಲ ದಾಳಿ,
ರೈತರ ಆತ್ಮಹತ್ಯೆ ಬೆಲೆ ಏರಿ,
ಹೀಂಗ, ಇನ್ನೂ ಏನೆಲ್ಲಾ ಹರಸಂಗ ನಡದ್ವು,
ಶಾಂತವಾಗಿದ್ದ ನಾಡು, ಅಶಾಂತ ಆತು
ನೋಡು,
ಇದೆಲ್ಲಾ ನಿನ್ನಿಂದ್ಲೆ ಆಯ್ತು ಯಡಿಯೂರಪ್ಪ,
"ಭೂ ಹಗರಣ" ವಿವಾದಕ್ಕ ಸಿಕ್ಕು ಸುಸ್ತಾದೆಲ್ಲಪ್ಪಾ,
ನೀನೀಗ ಪರಪ್ಪನ ಜೈಲು ಪಾಲಾದೆಲ್ಲಪ್ಪಾ,
ಎದಿ ನೋವು, ಬೆನ್ನೋವು ಅಂತ ಆಸ್ಪತ್ರೆ ಪಾಲಾದೆಲ್ಲಪ್ಪ!
ಕೊನೆಗೂ ನಿನಗ ಜೈಲು ತಪ್ಪಲಿಲ್ಲಪ್ಪ,
ಉಪ್ಪು ತಿಂದ ಮ್ಯಾಲ ನೀರು ಕುಡಿಲೇಬೇಕಪ್ಪ,
ಹಿಂಗಾಗಬಾರದಿತ್ತು ಯಡಿಯೂರಪ್ಪ
ನಿನ್ನ ನೋಡಿದ್ರ ಅನಸತ್ತ, ಅಯ್ಯೋ ಪಾಪ,
ಎಲ್ಲಾರು ಅನ್ನು ಹಂಗ ಆತು,
ಅಯ್ಯೋ ಪಾಪ! ಅಯ್ಯೋ ಪಾಪ!!


-ಶಿವಪ್ರಸಾದ ಹಾದಿಮನಿ, ಆಳವಂಡಿ



...ಡೂರಪ್ಪನಂತ ತ್ಯಾಗಮೂರ್ತಿಯ ಎಲ್ಲೂ ನೋಡಲಿಲ್ಲ!

...ಳಮಾವ ಬೇಕಿಲ್ಲದ ನಂತರ ವಿಷಯು ಮಾತನಾಡಿ

...ದ್ವಾನಿ ಬಂದಿದ್ನಲ್ಲ ಹೋದನೇನ್ನ?" ಎಂದ.
...ಣ ಕಣ ಮಾವ ಹೋದ ಅತ್ತಗೆ" ಎಂದ ಉಗ್ರಿ.
...ನಂದುಬುಟ್ಟು ಹೋದ?"
...ನಾರ ಅನ್ನಿ, ಆದ್ರೆ ಯಾಕಾದ್ರು ಬಂದೆ ಇಲ್ಲಿ ...ಯ್ತು."



...ದ್ಯಾಕಂಗಾಯ್ತು?"
...ಡೂರಪ್ಪ ಜೈಲಲ್ಲವುನೆ. ಅಂಥಾ ಟೇಮಲ್ಲಿ ಅವುನಿಲ್ಲಿ ... ಮಾತಾಡೆದ್ದೇ ಅಲ್ಲ. ಯಾಕಂದ್ರೆ, ಅವುನು ...ಮಾರನ ಲೀಡ್ರು. ಮದ್ಲಿಂದ ಎಡೂರಪ್ಪನ್ನ ...ಕು ಅಂತ ಮಸಲತ್ತು ಮಾಡುತ್ಲೇ ಇದ್ರು. ಈಗ ...ಪ್ಪ ಜೈಲಲ್ಲಿರುವಾಗ ಇವುನು ಜನ ಜಾತ್ರೆ ಅಂತ ...ಡೂರಪ್ಪನ ಕಡಿಯೋರು ಸುಮ್ಮನಿದ್ದರೆ?"
...ವ್ರುರೇನು ಮಾಡಿದ್ರೂ?"
...ೂ ಮಾಡಲಿಲ್ಲ. ಅದ್ವಾನಿ ಸಭೆ ನ್ಯಡಿಯೋ ಜಾಗದ ...ರುಗ್ಯೂ ನೋಡಲಿಲ್ಲ. ಅದ ನೋಡಿ ಅದ್ವಾನಿಗೆ ...ಪ್ರು ಬಂದೆ ಇಲ್ಲಿ ಅನ್ನಂಗಾಯ್ತು. ಪುಸಲಾಯಿಸಿ ... ಬಂದೋರ ಮಕುಜ್ಯೋಯ್ತು."
...ಗರೆ ಎಡೂರಪ್ಪ ಜೈಲಲ್ಲಿದ್ರು ಜೋರಾಗ್ಯವುನೆ ...ಯ್ತು?"
... ಕಣ ಮಾವ. ಅವುನು ಜೋರಾಗೇ ಅವುನೆ. ...ರ ಅವುನ್ನ ಬುಟ್ರೆ ಬೋನಿಂದ ಹುಲಿ ಬುಟ್ಟಂಗಾ ...ತ್ರೇನು ಮಾಡ್ತಿ, ಅಧಿಕಾರ ಅನ್ನೊ ಹಲ್ಲು ಉಗುರಿಲ್ಲ. ...ಜೆಪಿಗಳ ಹಿಡಕಂಡು ಜಬ್ಬುತನೆ."
...ವುನು ಜೈಲಿಗೋಗಿ ಇಪ್ಪತ್ತು ದಿನಾಯ್ತಲವೆ?" ...ಜುಮ್ಮಿ.
...ಬೇನೆ ಇಷ್ಟು ಕರಟ್ಟಾಗಿ ಹೇಳ್ತಿಯಲ್ಲ ನೀನು?"
...ಮ್ಮ ಮಾದೇವಿ ಹುಡುಗನಿಗೆ ಅವತ್ತೇ ಅಲವೇನ್ನ ...ದ್ದು. ಲಗ್ನ ಕಟ್ಟಸಕ್ಕೆ ಅಂಥ ಧೋಸುರು ಮನಿಗೋ ...ಗ ಧೋಸರು ಲಗ್ನ ಕಟ್ಟದ ಬುಟ್ಟು ಎಡೂರಪ್ಪನ್ನ ...ದ್ರು ಅನ್ನದ್ನೆ ಇಪ್ಪತು ಸತಿ ಹೇಳಿದ. ಜ್ವತಿಗೆ ಪಾಪ ...ಅಂತಿದ್ದ" ಎಂದಳು ಜುಮ್ಮಿ.
...ಪ ಅಂತ ಯಾಕಂದವುನೆ ಗೊತ್ತೇನೇ? ಇಡೀ ... ಪರಿವಾರಕ್ಕೆ ಎಡೂರಪ್ಪ ಸೈಟು ಜಮೀನು ...ಂತೆ."
...ತ್ತದಕೆ ಅಂಗಂತಿದ್ದ ಅವುನು."
...ಟ್ಟವುನೆ ಅಂದ್ರೆ ಅಂಗಿಂಗಲ್ಲ ಕಣೆ. ಕೋಟ್ಯಂತ್ಯಪಾಯಿ ಜಮೀನ ದಾನ ಕೊಟ್ಟಂಗೆ ಕೊಟ್ಟು ಹೋಗ್ಯವುನೆ. ಆದ್ರೂ ಸಂಘ ಪರಿವಾರದ ಜನ ಎಡೂರಪ್ಪನ ಜ್ವತೆ ಇರದೆ ಅನಂತಕುಮಾರನ ಜ್ವತೆ ಇರದ ನೋಡಿ ಅವುನ ಮಾಡಿರೊ ದಾನ ಹೇಳಿಬುಟ್ಟವುನೆ."

"ಇಸಿಸಿ ಹೇಳಿದ್ರೇನಾದತ್ಲ. ಈಸಗಂಡ ಭೂಮಿಯು ಯಾವನಾರ ತಿರುಗಿ ಕೊಟ್ಟನೆ. ಅದೋದಂಗೆಯ ಬುಡು" ಎಂದ ಕಾಳಮಾವ.

"ಈ ಮುಂಡೆ ಮಗ ಇನ್ನೊಸಿ ದಿನ ಇದ್ರೆ ಇಡೀ ಕರ್ನಾಟಗನೆ ಕೊಟ್ಟು ಹೋಯ್ತಿದ್ದ ಕಂಡ್ಯ ಉಗ್ರಿ. ಸಂತೋಸ್ಯಗಡೆನೆ ಕರ್ನಾಟ್ಕ ಉಳಿಸ್ಥ" ಎಂದ ಸೀರ.

"ಉಳಿಸಿದ್ರು ಸರಿ. ಆದ್ರೆ ಅಂಥ ಸಂತೋಷ್ಯಗಡೆ ಕಣ್ಣಲ್ಲೂ ನೀರಾಕಿಸಿದ ಈ ಎಡೂರಪ್ಪ, ಸಜ್ಜನನ ಕಣ್ಣೀರು ಸುಮ್ಮನೆ ಬುಟ್ಟತೇ?"

"ಅದ್ಯಾಕ್ಲ ಕಣ್ಣೀರಾಕ್ಸಿದ್ದ?" ಎಂದಳು ಜುಮ್ಮಿ.

"ಸಂತೋಷ್ಯಗಡೆ ಗಣಿ ಬಗದೋರು, ಬಗಿಸಿದೋರು ಮ್ಯಾಲೆ ವರದಿ ತಯಾರಿಸಿ ಕೊಡುವಾಗ ಅವುರ ಫೋನ ಕದ್ದು ಕೇಳಿಕೊಂಡು ವರದಿನೇ ಕೊಡದಂಗೆ ತೊಂದ್ರೆ ಕೊಟ್ಟಿದ್ರು. ಆಗ ಯಗಡೇರು ಕಣ್ಣೀರಾಕಿದ್ರು. ಆ ಕಣ್ಣೀರು ಎಡೂರಪ್ಪನ್ನ ಜೈಲಿಗಾಕ್ತು ಕಣೆ."

"ಆ ರೆಡ್ಡಿ ಕತೆ ಏನಾಯ್ತು?"

"ಅವುನು ಜೈಲಿಗೆ ಚನ್ನಾಗೆ ಒಗ್ಗಿಕೊಂಡನಂತೆ. ಏನಾದ್ರು ಬಿಡುಗಡೆಯಾದ್ರೆ ಹೋಗದಿಲ್ಲ ಇಲ್ಲೆ ಇರತಿನಿ ಅನ್ನಂಗಾಗ್ಯವುನೆ ಗೊತ್ತೆ."

"ಲೈ, ಯಾವ ಮನುಸುನಿಗೂ ಅಂಗನ್ನಸದಿಲ್ಲ ಕಂಡ್ಯ. ಅದ್ಕೆ ಅಲವೆ ಅದ ಜೈಲು ಅನ್ನದು. ಪಂಜರ ಪಂಜರ ಇದ್ದಂಗೆ ಕಂಡ್ಯ ಅದೂ" ಎಂದ ಕಾಳಮಾವ.

"ಹಾಕ್ಲಾಸುಕ್ಯಂದೆ ಕಣ ಮಾವ, ಜೈಲಲ್ಲಿರೋರಿಗೆ ಮಾಡಿರೋ ತಪ್ಪಿನ ಅರಿವಾಗಬೇಕು. ಬಿಡುಗಡೆ ಆದವ್ಯಾಲೆ ವಸ ಮನಸಾಯ್ತಿನಿ ಅನ್ನೊ ಮಸಸಾಗಬೇಕು. ಆದ್ರೆ ಎಡೂರಪ್ಪನಿಗೆ ಏನೂ ಅನ್ನಿಸಿದಂಗೆ ಕಾಣದಿಲ್ಲ ಕಣಮಾವ. ಈಚಿಗೆ ಬರ್ಲಿ ಸ್ವಾತಂತ್ರಕ್ಕೆ ಹೋರಾಟ ಮಾಡಿ ಜೈಲಿಗೋಗಿ ಬಂದೋನಂಗೆ ಮಾಡ್ತನೆ.. ಸುತ್ತೂರು ಸಿದ್ದಗಂಗೆ ಇವುರ್ಯಲ್ಲ ಕರದು ಸನ್ಮಾನ ಮಾಡ್ತ ಕೆಲವು ಕ್ಯಲಸಿಲ್ಲದ ಸ್ವಾಮಿಗಳು ಬೇಕಾದ್ರೆ ಅವುನಿಂದೇ ಸುತ್ತತ್ತವೆ. ಅಂತ ಅಭಿಮಾನ ಮಡಿಗ್ಯವುರೆ ಎಡೂರಪ್ಪನ ಮ್ಯಾಲೆ."

"ಕೆಲವು ಪಿಂಜರಾಪೋಲು ಸ್ವಾಮಿಗಳು ಎಡೂರಪ್ಪ ಟಿಕೆಟ್ ಕೊಟ್ರೆ ಯಲಕ್ಷನ್ನಿಗೆ ನಿಂತೇಬುಡ್ತರೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಅಂಥೋರ್ಯಾರಿದ್ದರೊ?"


"ಅವೆ ಕಣೊ ಉಗ್ರಿ. ಚಿಕ್ಕಮಗಳೂರು ಜಿಲ್ಲೆಲೆ ಯರಡಿದ್ದವಂತೆ. ಇನ್ನದ್ಯಾವೊ ಕೊಳಕು ಮಠ, ತಿರುಬೋಕಿ ಮಠ, ಬಿಟ್ಟಿ ಕೂಳು ಮಠ ಅಂತ ಹಾಳೂರು ಮಠಗಳ ಸ್ವಾಮಿಗಳು ಎಮ್ಮೆಲ್ಲೆಗಳು ಮಾಡ್ತಾಯಿರೊ ಆಸ್ತಿ ಹಣ ನೋಡಿ ಬೀದಿಗೆ ಬಂದುಬುಟ್ಟವೆ. ಅವುಕೇನಾರ ಎಡೂರಪ್ಪ ಟಿಕೆಟ ಕೊಟ್ಟಾ ಅಂದ್ರೆ ಗ್ಯಾರಂಟಿ ನಿಂತಗತ್ತವೆ."

"ನಿಂತಗಂಡ್ರೆ ಅವುರಿಗ್ಯಾರು ಓಟಾಕ್ತರಂತ್ಲ?" ಎಂದ ಕಾಳಮಾವ.

"ಅವು ಸೋತ್ರು ಬೇಜಾರಾಗದಿಲ್ಲ ದ್ವಡಪ್ಪ, ಧರ್ಮಪೀಠದ ಕ್ಯಲಸ ಬುಟ್ಟು ಬಿಜೆಪಿ ರಾಜಕಾರಣ ಮಾಡಕ್ಕೆ ಬಂದವೆ ಅಂದ್ರೇ ಅವುಕೆ ಠೇವಣಿ ಹೋದ್ರೊ ಬೇಜಾರಾಗದಿಲ್ಲ, ಅಷ್ಟು ಮಟ್ಟಿಗೆ ಕೆಟ್ಟು ಕ್ಯರ ಹಿಡದವೆ."

"ಅಲ್ಲಾ ಈ ಎಡೂರಪ್ಪನ ದ್ಯಸಿಂದ ಯಾರ್ಯಾರು ಕೆಟ್ಟೊದ್ರು ನೋಡು."

"ಕೆಟ್ರು ಅನ್ನಬ್ಯಾಡ. ಬದುಕಿದ್ರು ಅನ್ನೊ ಉಗ್ರಿ. ಮಠದೋರು ಬದುಕಿದ್ರು. ಪೇಪರ್‌ನೋರು ಬದುಕಿದ್ರು. ಸಂಘ ಪರಿವಾರದೋರು ದಿಮ್ಮಗಾದ್ರು. ಮಕ್ಕಳು ಮರಿ ಬೀಗರು ಬಿಜ್ಜರು ಅಳಿಯಂದಿರು ಯಲ್ಲಾರಿಗೂ ಬೇಕಾದಂಗೆ ಮಾಡಿ



ಜೈಲಿಗೋದ ಅಂದ್ರೆ ಅವುನಿನ್ಯಂಥಾ ತ್ಯಾಗಮೂರ್ತಿ ಲ್ಯಕ್ಕ ಹಾಕು" ಎಂದು ವಾಟಿಸ್ಸೆ ನಕ್ಕ.

"ಅವುನು ಇನ್ನೊಂಥರಕೆ ದ್ಯಾವೇಗೌಡನೆಯಾ" ಎಂದ ಉಗ್ರಿ.

"ಯಾಕ್ ದ್ಯಾವೇಗೌಡೇನು ಮಾಡಿದ್ದನ್ಲ?" ಎಂದ ಕಾಳಮಾವ.

"ತುಂಡು ಗುತ್ತಿಗೆ ಗೂಟ ರಡಿಯಾಯ್ತಯಿದ್ದತಂತೆ."

"ರಡಿಯಾದ್ರೂ ದ್ಯಾವೇಗೌಡ್ರು ಎಡೂರಪ್ಪನಂಗೆ ದಡ್ಡಲ್ಲ ಕಣೊ ಉಗ್ರಿ. ಇವತ್ತಿನವರಿಗೂ ದ್ಯಾವೇಗೌಡ ತಿಂದಿರೊ ವೋಟು ಹೋಗಿರೊ ಅಜ್ಜೆ ಗುರುತ ಯಾವನೂ ಕಂಡಿಡಿಯಕ್ಯಾಗಿಲವಂತೆ. ಇನ್ನ ತುಂಡು ಗುತ್ತಿಗೆ ತುಂಡು ಸಿಕ್ಯತೇನೊ ಉಗ್ರಿ?"

"ತುಂಡುಗುತ್ತಿಗೆ ಅಂದ್ರೇನ್ನ?"

"ಅದೊಂದು ದೇವೇಗೌಡ್ರು ಫಾರ್ಮುಲ ಕಣಕ್ಕ. ಅದರಿಂದ್ಲೇ ದೇವೇಗೌಡ್ರು ಇಂಪ್ರೂ ಆದುದ್ದು. ವೆಂಕಟಗಿರಿ ಗೌಡ ಅಂತ ಯಕನಾಮಿಕ್ಸ್ ಪ್ರೊಫೆಸರಿದ್ದ, ಭಾರಿ ಶ್ಯಾಣಾದ ಮನ್ಸ ಅವುನು. ಈ ದೇವೇಗೌಡ್ರು ಕಾಸ್ಗಡದು ಜುಬ್ಬದ ಜೇಬೊಳಿಕೆ ತುಂಬಿಕಳದ ನೋಡಿ 'ಕಿಂಗ್ ಆಫ್ ಕರಪ್ಷನ್' ಅಂತ ಪುಸ್ತಕ ಬರದಿದ್ದ. ಅದೀಗ್ಲು ನಿಮ್ಮ ಕಾಂಗ್ರೆಸ್ಸಿನೋರತ್ರ ಅದೆ ಈಸಗಂಡೋದು. ಸಾರಿ ಈಸಗಂಡೋದದ್ರಿಂದ ಏನೂ ಪ್ರಯೋಜನ ಇಲ್ಲ ಬುಡಕ್ಕ ಅತ್ತಗೆ."

"ಯಾಕ್ಲ ಅಂಗಂತೀ?"

"ದೇವೇಗೌಡ್ರ ಮೀರಿಸಿದೋರು ಕಾಂಗ್ರೆಸ್ನಲ್ಲೇ ಅವುರೆ ಕಣಕ್ಕ. ಪರೆಗ್ ಜಾಂಪಲ್ ನಂಬರ್ ಒನ್ ಡಿ.ಕೆ. ಶಿವಕುಮಾರ, ಯಸ್ಸಂ ಕೃಷ್ಣ ಧರ್ಮಸಿಂಗ, ದೇಶಪಾಂಡೆ, ಖರ್ಗೆ, ಪರಮೇಶ ಇವುರೆಲ್ಲ ಇರುವಾಗ ದೇವೇಗೌಡ್ರ ಮೇಲೆ ಬಂದಿರೊ ಪುಸ್ತಕ ಓಲ್ಡ ಪ್ರಿಂಟು ಕಣಕ್ಯ. ಆದ್ರುವೆ ಪಾಪ ಈ ವಯಸಿನಲ್ಲಿ ಕೃಷ್ಣ ಮೇಲ್ದಂಡೆ ತುಂಡುಗುತ್ತಿಗೆ ಕಾಮಗಾರಿ ಹಗರಣ ದ್ಯಾವೇಗೌಡ್ರ ಸುತ್ತಿಗಳದು ರಿಯಲಿ ಸೇಮು."

"ದ್ಯಾವೇಗೌಡ್ರು ಇಂತವ ಬೇಕಾದೋಟ ಎದುರಿಸ್ಯವುರೆ ಕಣೊ. ಅವುನದಿರ್ಲಿ ಈ ಬಿಜೆಪಿ ಬಡ್ಡೆತ್ತವು ಯಾಕೊ ಯಲ್ಲಾ ಜೈಲಿಗೋಗಂಗೆ ಕಾಣ್ತ ಅವುರಲ್ಲ ಹೇಳು."

"ನಿಜ ಕಣೊ ಉಗ್ರಿ. ದೇಶದ ಜನಕೆ ಭಾರಿ ನ್ಯಾಯ, ನೀತಿ, ಧರ್ಮಹೇಳ್ಯಕೊಂಡು ಬಂದೋರು. ಹೇಳಿದ್ದಷ್ಟೇ ಅಲ್ಲ ಕಣೊ ಬರದೂ ಹಂಚಿದ್ರು. ಹಿಂದೂ ಆದೋನು ಯಂಗಿರಬೇಕು, ದೇಶ ರಕ್ಷಣೆ ಯಂಗೆ ಮಾಡಬೇಕು, ಮಹಿಳೆಯರ್ನ ಯಂಗೆ ನೋಡಬೇಕು, ಬ್ರಹ್ಮಚರ್ಯ ಯಂಗೆ ಪಾಲನೆ ಮಾಡಬೇಕು, ದಲಿತ ಜನಾಂಗನ ಯಂಗೆ ಕಾಣಬೇಕು, ಸಾಬರನ ಎಲ್ಲಿ ಮಡಗಿರಬೇಕು, ಪ್ರಾಮಾಣಿಕತೆ ಅಂದ್ರೇನು, ಪ್ರಾಮಾಣಿಕ ಜೀವನ ಅಂದ್ರೇನು ಅಂತ ಪುಸ್ತಕ ಬರದು ಹಂಚಿದ್ರು. ಅಂಥೋರು ಕಣ್ಣು ಮುಚಗಂಡು ಎಡೂರಪ್ಪನತ್ರ ಸೈಟೀಸಗಂಡು ಸುಮ್ಮನಾಗಿಬುಟ್ಟವುರೆ, ನೋಡಿದ್ಯಂಗದೆ."

"ಲ್ಯಕ್ಕ ಹಾಕಪ್ಪ, ನೀತಿ ಹೇಳೊ ಜನವೇ ನೀತಿಗೆಟ್ರೆ ಏನೇಳನಾ."

"ಅಷ್ಟೆ ಅಲ್ಲ ದ್ವಡಪ್ಪ, ಲೋಕಾಯುಕ್ತ ಸಂತೋಷ್ ಹೆಗಡೇರ ಜಾಗಕ್ಕೆ ಎಡೂರಪ್ಪ ವಬ್ಬ ಶರಣನ್ನ ಹಿಡುದು ಕೂರಿಸ್ಥ. ಅಮ್ಯಾಲ್ ನೋಡಿದ್ರೆ ಅವುರು ಹೆಡತಿ ಹೆಸರಲ್ಲಿ ಸೈಟು ಮಾಡಿದ್ರು. ಅದು ಪತ್ತೆಯಾದೇಟಿಗೆ ಪಾಪ ನಾನು ಲೋಕಾಯುಕ್ತನ ಕ್ಯಲಸಕ್ಕೆ ಲಾಯಕ್ಕಲ್ಲ ಅಂತ ರಿಜೈನ್ ಮಾಡಿ ಹೋದ್ರು. ಸರಿ ಇನ್ನೊಬ್ರನ್ನ ಹಿಡದು ಕೂರಿಸಿದ್ರು. ಅವುರುದೂ ಅದೇ ಕತೆಯಾಯ್ತು. ಅದಕೆ ಸದಾನಂದ ಗೌಡ ಏನಂದ ಗೊತ್ತೆ ದ್ವಡಪ್ಪ?"

"ಅವುನಿನ್ನೆನಂದನೂ. ನಗಾಡಿರತನೆ."

"ನಗಾಡಿಕಂಡೆ ಹೇಳಿದ ದೊಡಪ್ಪ. ಸದ್ಯಕೆ ನಮ್ಮ ದೇಶದಲ್ಲಿ ಎಲ್ಲರೂ ಒಂದಲ್ಲಾ ಒಂದು ವಿಧದಲ್ಲಿ ತಪ್ಪು ಮಾಡಿರುವವರೆ. ಯಾರೂ ಪ್ರಾಮಾಣಿಕರಿಲ್ಲ ಅಂದ ಗೊತ್ತೆ?"

"ಅದವುನ ಪಾರ್ಟಿ ಜನಕೆ ಹೇಳಿಕಳಕ್ಕೇಳು!"

"!?"

...ಮುವುದು ಮತ್ತು ಬರೆಯುವುದು

... ಸಲ ಈ ಪುಟ್ಟ ಅಂಕಣವನ್ನು ಅರ್ಧ ಪುಸ್ತಕಾವಲೋಕನ, ಅರ್ಧ ತಲೆಹರಟೆ ಮಾಡಿಬಿಟ್ಟರೆ ...ನ್ನಿಸುತ್ತದೆ. ಮೊನ್ನೆ ಉಡುಪಿಯ ಪಂಡಿತರೊಬ್ಬರು ಬೆಂಗಳೂರಿಗೆ ಬಂದಿದ್ದಾಗ ನನ್ನನ್ನು ನೋಡಲು ಇಷ್ಟಪಟ್ಟು ...ಗ ಬರಲಿ?' ಅಂದರು. ನಾನು ಕಾತರದಿಂದ, ನಿಮ್ಮನ್ನು ನೋಡಿ ತುಂಬ ದಿನವಾಯಿತು. ನಾನೇನೂ ಸರ್ಕಾರಿ ...ಲ್ಲ, ಯಾವಾಗಲಾದರೂ ಬನ್ನಿ. ನಾಳೆ ಭಾನುವಾರ ಹನ್ನೊಂದಕ್ಕೆ ಬಂದರೆ ಒಳ್ಳೆಯದು ಅಂದೆ. ...ಸರಿಯಾಗಿ ಬಂದರು. ಉಡುಪಿಯ ವಿದ್ವಾಂಸರೆಂದರೆ ಅಷ್ಟು ಸರಿ ಇಲ್ಲ; ಉಡುಪಿಯ ...ುವರು ಪ್ರಸಿದ್ಧರು. ಮಹಾರಾಜಾ ಕಾಲೇಜಿನ ಹಾಸ್ಟೆಲಿನಲ್ಲಿ ದಕ್ಷಿಣ ಕನ್ನಡದ ಸಾಹಿತಿಯೊಬ್ಬ ...ನ ರೂಮಿನೆದುರು ನಾವೆಲ್ಲ ಬೋರ್ಡ್ ತಗುಲಿಸಿದ್ದೆವು: "ಇಲ್ಲಿ ಉಡುಪಿಯ ವಿಮರ್ಶಕರು ...ುತ್ತಾರೆ!" ಅದು ತುಂಬ ಪ್ರಸಿದ್ಧ ಜೋಕ್ ಆಗಿತ್ತು.

...ಡಿತರಿಗಿಂತ ನಾನು ತೀರಾ ಭಿನ್ನ. ಅವರ ಆಸಕ್ತಿಗಳು ಹೇಗೋ ಏನೋ– ತೀರಾ ಬೋರ್ ಆದಾಗ ...ಾತ್ರ ಅನೇಕ ಪುಸ್ತಕಗಳ ನಡುವೆ ಆರಿಸಿಕೊಂಡು ಓದುವುದು ಪುಟ್ಟ ಪುಸ್ತಕ–ಭಗವದ್ಗೀತೆಯ ... ಕುದುರೆ ರೇಸಿನ ಮೋಹಕ ಪುಸ್ತಕ. ಈಗ ನಡೆಯುತ್ತಿರುವ ರೇಸ್‌ನ ಹನ್ನೆರಡು ದಿನಗಳ ...ಐದು ದಿನ ಮಾತ್ರ ನಾನು ಹೋಗಿದ್ದರೂ ಮುಂಬೈನಲ್ಲಿ **Winning Pretty** ಗೆಲ್ಲಬಹುದೇ ...ತೂಹಲ. ಈ ವಿಚಿತ್ರ 'ಭಗವದ್ಗೀತೆ' ನಮ್ಮಲ್ಲಿ ಬರುವ ಅನೇಕ ಪುಸ್ತಕಗಳಿಗಿಂತ ವಾಸಿ. ಲೆಕ್ಕಾಚಾರ, ...ನಿರೀಕ್ಷೆ ಮತ್ತು ಭ್ರಮೆಗಳ ಮೋಹಕ ಪುಸ್ತಕ ಇದು; ಜೀವಂತವಾಗಿಡಬಲ್ಲ, ಹಾಗೆಯೇ ಜೀವ ...ಲ್ಲ ಪುಸ್ತಕ. ಇಂಥ ಪುಸ್ತಕಗಳನ್ನು ಇಣುಕಿ ನೋಡುವ ನನಗೂ ಸಂಸ್ಕೃತದ ಪ್ರಕಾಂಡ ವಿದ್ವಾಂಸರಿಗೂ ...ತ್ಯಾಸ.

...ಸ ಬಲ್ಲ ಶಾಸ್ತ್ರಿಯೊಬ್ಬರು ಈ ಪಂಡಿತರಿಗೆ ಪರಿಚಿತರು. ಈ ಶಾಸ್ತ್ರಿ ಆಧ್ಯಾತ್ಮಜೀವಿಗಳು; ಚಿಕ್ಕವಯಸ್ಸಿನಲ್ಲೇ ...ಕೈಮುಗಿದು, "ನಾನು ನಿನ್ನ ವಯಸ್ಸಿನ ಹೆಣ್ಣುಗಳೆಲ್ಲ ನಿರೀಕ್ಷಿಸುವುದನ್ನು ಪೂರೈಸಲಾರೆ. ದಯವಿಟ್ಟು ಕ್ಷಮಿಸು" ...ಹೇಳಿದರಂತೆ. ಈಗ ಅವರಿಗೆ ಮುಪ್ಪು, ಆದರೆ ವಿಚಿತ್ರ ವಿನೋದ ಮತ್ತು ಜಾಣತನವುಳ್ಳವರು. ನಮ್ಮ ...ಸಾಹಿತಿಯೊಬ್ಬರು ಅವರಿಗೆ ಗುಟ್ಟಾಗಿ, "ಶಾಸ್ತ್ರಿಗಳೆ, ನಾವು ಪುಸ್ತಕ ಓದಿದಂತೆಲ್ಲ ಎಲ್ಲವೂ ನಿರರ್ಥಕ ಅನ್ನಿಸುತ್ತಲ್ಲ, ...ಪ್ಪು ಅಧ್ಯಯನ ಮಾಡುವುದು ತಪ್ಪಲ್ಲವೆ?" ಅಂದರಂತೆ. ಆಗ ಶಾಸ್ತ್ರಿಗಳು ತಣ್ಣಗೆ ಕೇಳಿದರು, "ಪುಸ್ತಕ ಓದಿದ್ದರಿಂದ ...ತೊಂದರೆಯಾಗಿದೆಯೆ?"


..."ದು."

...ಸ್ತಕಗಳನ್ನು ಓದುವುದರಲ್ಲಿ ತಪ್ಪಿಲ್ಲ. ಆದರೆ ಮಹಾ ಓದಿದ್ದೇನೆ ಎಂದು ನಿಮ್ಮಂತೆ ಭ್ರಮಿಸುವುದು ತಪ್ಪು" ...ಣ್ಣಗೆ ಹೇಳಿದರಂತೆ.

ಮನಸ್ಸು ಮತ್ತು ದೇಹದ ಶಕ್ತಿಗಳ ಬಗ್ಗೆ ಬಹಳ ಹೊತ್ತು ಮಾತಾಡಿದೆವು. ಸುಂದರರಾವ್ ಎನ್ನುವವರು ಹೋಮಿಯೋಪತಿಯಿಂದ ಕ್ಯಾನ್ಸರ್ ಗುಣಪಡಿಸುತ್ತಿದ್ದಾರೆ. ಆದರೆ ಅವರ ಸಹೋದ್ಯೋಗಿಗಳು ಹೇಳುವುದು, ಹೋಮಿಯೋಪತಿಯಿಂದ ಕ್ಯಾನ್ಸರ್ ಗುಣಪಡಿಸುವುದು ಸಾಧ್ಯವೇ ಇಲ್ಲ!

"ಅದೇನಾದರಾಗಲಿ, ಈ ಡಾ. ಸುಂದರರಾವ್ ಅಯ್ಯರ್ ಮತ್ತು ಈಶ್ವರನ್ ಅವರ ಕ್ಯಾನ್ಸರ್ ಗುಣಪಡಿಸಿದ್ದಾರೆ. ಯಾವನೇ ಒಬ್ಬ ವೈದ್ಯ ಸಾಯುತ್ತಿರುವ ಒಬ್ಬನಿಗೆ ಒಂದೇ ಒಂದು ದಿನದ ಅಥವಾ ಒಂದೇ ಒಂದು ವಾರದ ಹೆಚ್ಚುವರಿ ಬದುಕು ಕೊಡಬಲ್ಲನಾದರೆ ಅವನು ಮಹಾ ವೈದ್ಯ, ಆದ್ದರಿಂದ ಈ ಸುಂದರರಾವ್ ತಮ್ಮ ವೈದ್ಯಕೀಯವನ್ನು ಬೇರೆಯವರಿಗೆ ಕಲಿಸುವಂತಾಗಲಿ" ಅಂದೆ.

* * * * * * *




ನನ್ನೆದುರು ಎರಡು ಪುಸ್ತಕಗಳಿದ್ದವು. ಅವುಗಳಲ್ಲಿ ಒಂದು ನಾಗತಿಹಳ್ಳಿ ಚಂದ್ರಶೇಖರನ 'ವಲಸೆ ಹಕ್ಕಿಯ ಹಾಡು' ಎಂಬ ಪುಸ್ತಕ. ಇನ್ನೊಂದು 'ಬಲ್ಲವರ ಕಣ್ಣಲ್ಲಿ ಬದುಕು' ಎಂಬ ಚಿಕ್ಕ ಪುಸ್ತಕ. ಈ ಪುಸ್ತಕ ಬರೆದವರು ಟಿ.ವಿ. ವೆಂಕಟರಮಣಯ್ಯ.

ಈ ಚಂದ್ರಶೇಖರ ನಾನು ಚೆನ್ನಾಗಿ ಬಲ್ಲ ಹುಡುಗ. ಈತ ಕೆಲವು ಸಲ ಚೆನ್ನಾಗಿ ಬರೆಯುತ್ತಾನೆ; ಕೆಲವು ಸಲ ವಕ್ರವಾಗಿ, ಜಡವಾಗಿ ಬರೆಯುತ್ತಾನೆ. ನನಗೆ ನಿಜಕ್ಕೂ ವಿಸ್ಮಯ ಹುಟ್ಟಿಸುವುದು ಈತನ ಈ ಏರಿಳಿತ; ಈತನ ಜಾಣತನ ಮತ್ತು ಅಪ್ರಾಮಾಣಿಕತೆ. ಈತ ಬರೆದಿರುವ ಕನಿಷ್ಠ ನಾಲ್ಕು ಕತೆಗಳನ್ನು 'ಚೆನ್ನಾಗಿವೆ' ಎಂದು ಉದಾಹರಣೆಯೊಂದಿಗೆ ವಾದಿಸಬಲ್ಲೆ; ಕೆಟ್ಟದಾಗಿರುವ ಕತೆಗಳು ಎಷ್ಟು ಕೆಟ್ಟದಾಗಿವೆ ಎಂದರೆ ನಾನು ಈತನ ಬಗ್ಗೆ ದುಗುಡಗೊಂಡಿದ್ದೇನೆ. 'ವಲಸೆ ಹಕ್ಕಿಯ ಹಾಡು' ಎಂಬ ಈತನ ಕಾದಂಬರಿ ಈ ಒಳ್ಳೆಯ, ಕೆಟ್ಟ ಗುಂಪಿನ ನಡುವೆ ಬೀಳುವ ಪುಸ್ತಕ. ಸಂಗೀತದಲ್ಲಿರುವಂತೆಯೇ ಸಾಹಿತ್ಯದಲ್ಲಿ ಕೂಡ ಅಪಸ್ವರವಿರುತ್ತದೆ ಎಂದು ನನಗೆ ಹೊಳೆದದ್ದೇ ಈ ಕಾದಂಬರಿ ಓದಿ. ಕೆಂಚೇಗೌಡ ಎಂಬ 'ವಲಸೆ' ಅಭ್ಯಾಸದ ಕುಟುಂಬಕ್ಕೆ ಸೇರಿದ ಒಬ್ಬ ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದವು, ಸ್ವತಂತ್ರ ಎಂಬ ಹೆಸರಿನ ಮಗನಿಂದ ಪಟ್ಟ ತೊಂದರೆ, ವಿದೇಶಿ ಹೆಂಗಸೊಬ್ಬಳ ಜೊತೆಗೆ ಈ ಕೆಂಚೇಗೌಡನ ಅನುಭವ, ಈತನ ಮೂಲಭೂತ ಒಳ್ಳೆಯತನ–ಎಲ್ಲ ಓದಿದ ಮೇಲೆ ಈ ನಾಗತಿಹಳ್ಳಿಗೆ ಕೆಂಚೇಗೌಡರ ವ್ಯಕ್ತಿತ್ವ ಹಿಡಿತಕ್ಕೆ ಸಿಕ್ಕಿಲ್ಲ ಎಂಬುದು ಗೊತ್ತಾಗುತ್ತದೆ; ಈತನ ಬಗ್ಗೆ ನಾಗತಿಹಳ್ಳಿಗೆ ನಿಜಕ್ಕೂ ಪ್ರೀತಿ, ವಿಶ್ವಾಸವಿಲ್ಲ ಎಂಬುದು ತಿಳಿಯುತ್ತದೆ. ಹೀಗಾಗಿ ಈ ಪುಸ್ತಕ ನಮ್ಮಲ್ಲಿ ಅತೃಪ್ತಿ ಮೂಡಿಸುತ್ತದೆ. ಈತನ ಬರವಣಿಗೆಯ ಕಲೆಯ ಬಗ್ಗೆಯೇ ಅನುಮಾನ ಹುಟ್ಟಿಸುತ್ತದೆ.

ವೆಂಕಟರಮಣಾಯ್ಯನವರ 'ಬಲ್ಲವರ ಕಣ್ಣಲ್ಲಿ ಬದುಕು' ಎಂಬುದು ಎಷ್ಟು ಪೆದ್ದಾಗಿದೆ ಎಂದರೆ, ಚರ್ಚಿಸುವುದಕ್ಕೂ ಅಸಹ್ಯವಾಗುತ್ತದೆ. ಅನೇಕ ವರ್ಷ ಲೈಬ್ರರಿಯಲ್ಲಿ ನೌಕರರಾಗಿದ್ದ ಮಾತ್ರಕ್ಕೆ ಅಭಿರುಚಿ ಬರುವುದಿಲ್ಲ ಎಂಬುದನ್ನು ಇದು ತೋರುತ್ತದೆ. ಒಳ್ಳೆಯ ಪುಸ್ತಕ ನೀಡಬೇಕೆಂಬ ಆಕಾಂಕ್ಷೆಯಾಗಲಿ, ಉತ್ತಮ 'ಉವಾಚ'ಗಳ ಕಲ್ಪನೆಯಾಗಲಿ ಇಲ್ಲದ ಇವರಿಗೆ ಬೀಚಿಯೇ ಶ್ರೇಷ್ಠ ಸಾಹಿತಿ. ಬೀಚಿಯವರ ಬಹುಪಾಲು ಮಾತುಗಳನ್ನು ಇಲ್ಲಿ ಸೇರಿಸಿಕೊಂಡಿದ್ದಾರೆ. ಮಿಕ್ಕದ್ದು ಹೇಳುವ ಅಗತ್ಯವೇ ಇಲ್ಲ. ನನ್ನ ಮಾತುಗಳಿಗೆ ಪುಷ್ಟಿ ಕೊಡುವಂತೆ ಕಮಲಾ ಹಂಪನಾ, ಹಾಮಾನಾ, ದೊಡ್ಡರಂಗೇಗೌಡ ಇಲ್ಲಿ ಮಿಂಚಿದ್ದಾರೆ. ಬೂದಿಹಾಳಮಠ, ವಿರಜಾನಂದಸ್ವಾಮಿ, ಬಿ.ಡಿ. ಗಣಪತಿ ಮುಂತಾದವರೆಲ್ಲ ಇದ್ದಾರೆ.

–ಡಿಸೆಂಬರ್ 27, 1995

ಮರಿ ಟೈಗರ್ ವಿನೋದಾವಳಿ



ಅದ್ದಾರೋ ಹಣವಂತರ ಗಂಡ-ಹೆಂಡತಿಯ ಜಗಳದಲ್ಲಿ ಮರಿ ಟೈಗರ್ ಸಿಕ್ಕಿಕೊಂಡುಬಿಟ್ಟಿದೆ.

ಚಿತ್ರರಂಗವನ್ನು ಟಾರ್ಚು ಹಿಡಿದು ಹುಡುಕಿದರೂ ವಿನೋದ್ ಪ್ರಭಾಕರ್ ಎಂಬ ಯಂಗ್ ಹೀರೋ ವಿರುದ್ಧ ಲವಲೇಶದ ಕಂಪ್ಲೇಂಟಿಲ್ಲ. ಇತ್ತೀಚೆಗೆ ಚಿತ್ರರಂಗವನ್ನು ಪ್ರವೇಶಿಸಿರುವ ಹಾವು, ಚಟಾಕಿನಂಥ ನಟರು ಹುಡುಗಿಯರ ಹಿಂದೆ ಬಿದ್ದು ತಮ್ಮ ಹೆಸರು ಕೆಡಿಸಿಕೊಂಡಿದ್ದಾರೆ. ಆದರೆ ವಿನೋದ್ ಚಿತ್ರರಂಗಕ್ಕೆ ಎಂಟ್ರಿ ನೀಡಿ ಈಗ ಒಂದು ದಶಕವಾಗುತ್ತಾ ಬರುತ್ತಿದೆ. ಆದರೂ ಈತನ ವಿರುದ್ಧ ಯಾವುದೇ ದೂರಿಲ್ಲ ಎಂದರೆ ಅಚ್ಚರಿ ಆಗುತ್ತದೆ.

ಹೇಳಿಕೇಳಿ ವಿನೋದ್ ಪ್ರಭಾಕರನ ತಂದೆ ಟೈಗರ್ ಪ್ರಭಾಕರ್ ಬರೋಬ್ಬರಿ ಮೂವರು ಹೆಂಡಿರನ್ನು ಕಟ್ಟಿಕೊಂಡಿದ್ದವರು. ಮೈತುಂಬಾ ಶೋಕಿ ತೆವಲುಗಳನ್ನೇ ಮೆತ್ತಿಕೊಂಡಿದ್ದ ಪ್ರಭಾಕರ್ ಅವರ ಮಗ ಆತನಿಗಿಂತ ಇನ್ನೆಷ್ಟು ಭಿನ್ನವಾಗಿರಲು ಸಾಧ್ಯ ಎಂಬ ಅನುಮಾನ ಮೊದಲಿತ್ತು, ಆದರೆ ವಿನೋದ್ ಈವರೆಗೆ ಯಾವ ನಟಿಯ ಬೆನ್ನುಬಿದ್ದವನಲ್ಲ, ಹೆಸರು ಕೆಡಿಸಿಕೊಂಡವನಲ್ಲ, ಬದಲಾಗಿ ತಾನಾಯಿತು, ತನ್ನ ಬದುಕಾಯಿತು ಎಂದು ನಡೆದುಕೊಂಡು ಬಂದಿರುವವನು ವಿನೋದ್.

ತನ್ನಪ್ಪ ಅರ್ದಂಬರ್ಧ ಮುಗಿಸಿ ಹೋದ 'ಮೇಜರ್' ಚಿತ್ರದ ನಂತರ ವಿನೋದ್ 'ಸೃಷ್ಟಿ', 'ಘಟಿಂಗ', 'ದಿಲ್', 'ಹೀರೋ', 'ಮಹಾನಗರ', 'ವಿಐಪಿ-5' ಮತ್ತು 'ನವಗ್ರಹ' ಎಂಬ ಮಲ್ಟಿ ಸ್ಟಾರ್ ಚಿತ್ರದಲ್ಲಿ ನಟಿಸಿದ್ದಾನೆ. ಇತ್ತೀಚೆಗೆ ಬಿಗ್‌ಬಜೆಟ್‌ನಲ್ಲಿ ನಿರ್ಮಾಣವಾದ ವಿನೋದ್ ನಟಿಸಿದ್ದ 'ಹೋರಿ' ಎಂಬ ಚಿತ್ರ ತೆರೆಗೆ ಬಂದಿತ್ತು, ಆದರೆ ವಿನೋದ್ ನಟಿಸಿರುವ ಒಂದೇಒಂದು ಸಿನಿಮಾವೂ ಗೆದ್ದಿಲ್ಲ.

ಒಂದು ವೇಳೆ ವಿನೋದ್ ಯಶಸ್ವೀ ಹೀರೋ ಆಗಿದ್ದರೆ ಹೇಗಿರುತ್ತಿದ್ದನೋ ಗೊತ್ತಿಲ್ಲ. ಆದರೆ ಆತ ನಟಿಸಿದ ಎಲ್ಲ ಚಿತ್ರಗಳ ಸೋಲು ಆತನನ್ನು ಖಿನ್ನತೆಗೆ ದೂಡಿರುವುದಂತೂ ನಿಜ. ಈ ಕಾರಣಕ್ಕೋ ಏನೋ ವಿನೋದ್ ಯಾರೊಂದಿಗೂ ಬೆರೆಯುವುದೇ ಇಲ್ಲ, ಇಡೀ ಚಿತ್ರರಂಗ ನಡೆಸಿದ ಅಮೃತ ಮಹೋತ್ಸವದ ಸಂದರ್ಭದಲ್ಲಾಗಲಿ, ಕ್ರಿಕೆಟ್ ಟೂರ್ನಮೆಂಟುಗಳನ್ನು ಆಯೋಜಿಸಿದಾಗಾಗಲೀ ವಿನೋದ್ ಇತರರಂತೆ ಅವುಗಳಲ್ಲಿ ಭಾಗವಹಿಸಲಿಲ್ಲ, ಇವತ್ತಿಗೂ ಆತನಿಗೆ ಚಿತ್ರರಂಗದಲ್ಲಿ ಮಿತ್ರರು ಎಂಬುದಿದ್ದರೆ ಅದು ದರ್ಶನ್ ಸಹೋದರ ದಿನಕರ್, ದುನಿಯಾ ವಿಜಿ, ತರುಣ್ ಸುಧೀರ್, ನಾಗೇಂದ್ರ ಅರಸ್ ಮತ್ತು ಪ್ರಭಾಕರ್ ಜೊತೆ ಎಂಟು ವರ್ಷಗಳ ಕಾಲ ಅಸೋಸಿಯೇಟ್ ಆಗಿ ದುಡಿದು ಈಗ ಒಂದಿಷ್ಟು ಚಿತ್ರಗಳನ್ನು ನಿರ್ದೇಶಿಸಿರುವ ಮಾಗಡಿ ಪಾಂಡು ಮಾತ್ರ. ಇನ್ನು ಮಹಿಳೆಯರ ವಿಷಯಕ್ಕೆ ಬಂದರೆ ಸೀರಿಯಲ್ ನಟಿ ಗಾನಶ್ರೀ ಮತ್ತು ನ್ಯೂಸ್‌ರೀಡರ್ ಸೌಮ್ಯರಂಥ ಕೆಲವೇ ಹೆಣ್ಣುಮಕ್ಕಳನ್ನು ಬಿಟ್ಟರೆ ಆತನಿಗೆ ಹೇಳಿಕೊಳ್ಳುವಂಥ ಗೆಳತಿಯರೂ ಇಲ್ಲ, ತನ್ನೊಟ್ಟಿಗೆ ನಟಿಸಿರುವ ಕಲಾವಿದೆಯರೊಂದಿಗೆ ಗೌರವಯುತವಾಗಿ ನಡೆದುಕೊಳ್ಳುವುದು ವಿನೋದ್‌ನ ಸ್ವಭಾವ.

ತನ್ನಪ್ಪ ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿ ಕಟ್ಟಿಸಿದ್ದ ಬಂಗಲೆಯಲ್ಲೇ ವಾಸವಿರುವ ವಿನೋದ್‌ಗೆ ಫ್ರೇಜರ್ ಟೌನ್‌ನಲ್ಲಿರುವ ಮನೆಯಿಂದ ಬರುವ ಸಣ್ಣ ಪ್ರಮಾಣದ ಬಾಡಿಗೆ ಪ್ರತಿ ತಿಂಗಳು ಕೈಸೇರುತ್ತದೆ. ಸಿನಿಮಾ ಲೋಕವನ್ನು ನಂಬಿ ಬದುಕುವುದು ಸಾಧ್ಯವಿಲ್ಲ ಎನ್ನುವುದನ್ನು ಅರಿತ ವಿನೋದ್ ಕೆಲ ವರ್ಷಗಳ ಹಿಂದೆ ಥವೇರಾ ಕಾರೊಂದನ್ನು ಖರೀದಿಸಿ ಅದನ್ನು ಟ್ರಾವಲ್ಸ್‌ಗೆ ಬಿಟ್ಟಿದ್ದ, ತನ್ನ ಮಾವ ಕುಮಾರ್ ಎಂಬಾತನೊಂದಿಗೆ ಸೇರಿ ಸಣ್ಣಾಪುಟ್ಟ ಬ್ಯುಸಿನೆಸ್ಸು ಆರಂಭಿಸಿದ್ದ. ಆದರೆ ಅವನ ದುರಾದೃಷ್ಟಕ್ಕೆ ಅದ್ಯಾವುದೂ ಬರಕತ್ತಾಗಲಿಲ್ಲ.

ವಿನೋದನ ಹಿರಿಯಕ್ಕ ಭಾರತಿಗೆ ಮದುವೆಯಾಗಿದೆ. ಮತ್ತೊಬ್ಬ ಸಹೋದರಿ ವಿನುತಾಗಿನ್ನೂ ಮದುವೆಯಾಗಿಲ್ಲ, ಆ ಕಾರಣಕ್ಕೆ ವಿನೋದ್ ಸಹಾ ಮದುವೆಯಾಗದೆ ಉಳಿದಿದ್ದಾನೆ. ಚಿತ್ರರಂಗದಲ್ಲಿ ಸುಮಾರು ಹತ್ತು ವರ್ಷಗಳನ್ನು ಕಳೆದಿದ್ದರೂ ಮೂರಕ್ಕೂ ಏರದೆ ವಿನೋದ್ ಯಾರ ತಂಟೆಗೂ ಹೋಗದೆ ಸುಮ್ಮನಿದ್ದ. ಆದರೀಗ ಇದ್ದಕ್ಕಿದ್ದಂತೆ ವಿನೋದ್ ಅದ್ಯಾರೋ ಶ್ರೀಮಂತರ ಮನೆ ಜಗಳದಲ್ಲಿ ತಗಲಾಕ್ಕೊಂಡಿದ್ದಾನೆ.




ಫೇಸ್‌ಬುಕ್ ಫ್ರೆಂಡು!

ಎಂದೂ ಮುಖ ಕೊಟ್ಟು ಯಾರೊಟ್ಟಿಗೂ ನೆಟ್ಟಗೆ ಮಾತನಾಡದ ಅಂತರ್ಮುಖಿ ವಿನೋದ್ ಪ್ರಭಾಕರ್‌ಗೆ ವಿಪರೀತ ಎನ್ನುವಷ್ಟು ಫೇಸ್‌ಬುಕ್ ಹುಚ್ಚು. ದಿನದ ಬಹುಪಾಲು ಸಮಯ ಕಂಪ್ಯೂಟರ್ ಮುಂದೆ ಕೂತು ಇಂಟರ್‌ನೆಟ್‌ನಲ್ಲಿ ಸಿಗುವವರೊಂದಿಗೆ ಚಾಟ್ ಮಾಡುತ್ತಿರುತ್ತಾನೆ. ಹಾಗೆ ವಿನೋದ್‌ಗೆ ಅಂತರ್ಜಾಲದಲ್ಲಿ ಅಟಕಾಯಿಸಿಕೊಂಡವಳು ಶ್ವೇತಾ ಎಂಬ ಹೆಣ್ಣುಮಗಳು.

ಈ ಶ್ವೇತಾ ನಿವೃತ್ತ ಡಿವೈಎಸ್ಪಿ ಮುನಿರೆಡ್ಡಿ ಎಂಬುವವರ ಸೊಸೆ. ಕೃಷ್ಣಮೂರ್ತಿ ಮತ್ತು ರಾಧಾ ದಂಪತಿಗಳ ಮಗಳಾದ ಶ್ವೇತಾ ಕಂಪ್ಯೂಟರ್ ಸೈನ್ಸ್‌ನಲ್ಲಿ ಇಂಜಿನಿಯರಿಂಗ್ ಮಾಡಿದ್ದಾಳೆ. ಸುಮಾರು ಐದೂವರೆ ವರ್ಷಗಳ ಹಿಂದೆ ಮುನಿರೆಡ್ಡಿಯ ಮಗ ಶರತ್ ಕುಮಾರ್ ಮದುವೆಯೊಂದರಲ್ಲಿ ಶ್ವೇತಾಳನ್ನು ನೋಡಿದ್ದೇ ಆಕೆಯನ್ನು ಇಷ್ಟಪಟ್ಟು ಬ್ರೋಕರ್ ಮೂಲಕ ಸಂಬಂಧ ಕುದುರಿಸಿದ್ದ, ಆತುರಾತುರದಲ್ಲಿ ಮದುವೆಯೂ ಆಗಿತ್ತು, ಆದರೆ ಮದುವೆಯಾದ ಕೆಲವೇ ದಿನಗಳಲ್ಲಿ ಸಂಸಾರದಲ್ಲಿ ಕಿರಿಕಿರಿ ಶುರುವಾಗಿತ್ತು.

ಈ ನಡುವೆ ದಂಪತಿಗಳಿಗೆ ಸಾನಿಕಾ ಎಂಬ ಮುದ್ದಾದ ಹೆಣ್ಣುಮಗುವೂ ಜನಿಸಿತು. ಪೊಲೀಸ್ ಇಲಾಖೆಯಲ್ಲಿದ್ದು ನಿವೃತ್ತರಾಗಿರುವ ಮುನಿರೆಡ್ಡಿ ಸಾಕಷ್ಟು ಅನುಕೂಲಕರ ಸ್ಥಿತಿಯಲ್ಲಿದ್ದಾರೆ. ಅವರ ಮಗ ಶರತ್ ಕುಮಾರ್ ಬಿಲ್ಡಿಂಗ್ ಕಂಪನಿಯೊಂದನ್ನು ನಡೆಸುತ್ತಾನೆ. ಈತನ ಒಡೆತನದಲ್ಲಿ ಶಿಡ್ಲಘಟ್ಟ ಬಳಿ ಫಾರ್ಮ್ ಹೌಸ್ ಕೂಡ ಇದೆ. ಈತ ತಮಿಳುನಾಡಿನ ಈರೋಡ್‌ನಿಂದ ಉಷ್ಟ್ರಪಕ್ಷಿಗಳನ್ನು ತಂದು-ಅವುಗಳನ್ನು ಸಾಕಿ, ಅದರ ಮೊಟ್ಟೆಗಳನ್ನು ಆಸ್ಟ್ರೇಲಿಯಾಕ್ಕೆ ಎಕ್ಸ್‌ಪೋರ್ಟ್ ಮಾಡುವ ಮತ್ತೊಂದು ಕಸುಬನ್ನೂ ಮಾಡುತ್ತಾನೆ. ಫಾರಿನ್ ಟ್ರಿಪ್ ಎಂಬುದು ಶರತ್‌ಕುಮಾರನಿಗೆ ತೀರಾ ಸಲೀಸು.

ಇಂತಹ ಗಂಡ ಕೆಲಸವೆಂದು ಊರುಬಿಟ್ಟರೆ ವಾರಗಟ್ಟಲೆ ಮನೆಗೆ ವಾಪಸ್ ಬರುವುದಿಲ್ಲ, ಜೊತೆಗೆ ಗಂಡನೊಂದಿಗೆ ಚಿಕ್ಕಪುಟ್ಟ ವೈಮನಸ್ಸು. ಬಹುಶಃ ಇವೆಲ್ಲದರಿಂದ ಶ್ವೇತಾಳ ಮನಸ್ಸಿನಲ್ಲಿ ಅದೆಂಥ ರಣ ಬೇಸರ ಗೂಡುಕಟ್ಟಿತ್ತೋ? ತನ್ನ ನೋವನ್ನೆಲ್ಲಾ ತೋಡಿಕೊಳ್ಳಲು ಆಕೆ ಹೊಸದೊಂದು ಸ್ನೇಹವನ್ನು ಅಪೇಕ್ಷಿಸಿದ್ದಳೋ ಏನೋ? ಒಟ್ಟಿನಲ್ಲಿ ಫೇಸ್‌ಬುಕ್‌ನಲ್ಲಿ ನಟ ವಿನೋದ್ ಪ್ರಭಾಕರನ ಪರಿಚಯವಾಯಿತು. ಹಗಲೂ ರಾತ್ರಿಯೆನ್ನದೆ ಚಾಟಿಂಗ್ ಮಾಡುತ್ತಿದ್ದ ಈ ಜೋಡಿಯ ನಡುವಿನ ಸ್ನೇಹ ಮೆಲ್ಲಗೆ ಫೋನ್ ಸಂಪರ್ಕದವರೆಗೆ ಬೆಳೆಯಿತು. ತನ್ನ ಗಂಡನನ್ನು ತೊರೆದು ವಿನೋದ್‌ನ ಸಖ್ಯ ಬೆಳೆಸುವ ಉದ್ದೇಶವಿದ್ದ ಶ್ವೇತಾ ಕಳೆದ ಆಗಸ್ಟ್ 19ರಂದು ಗಂಡನ ಮನೆಯವರೊಂದಿಗೆ ಜಗಳ ಮಾಡಿಕೊಂಡು ತವರಿಗೆ ಹೊರಟುಬಿಟ್ಟಳು.



ಶ್ವೇತಾಳ ಮೊಬೈಲ್ ವಿನೋದ

ತನ್ನ ಪತ್ನಿ ಯಾವುದೋ ಕಾರಣಕ್ಕೆ ತನ್ನನ್ನು ದ್ವೇಷಿ... ಮತ್ತೊಂದು ಸ್ನೇಹಕ್ಕಾಗಿ ಹಾತೊರೆಯುತ್ತಿದ್ದಾಳೆ ಎಂದ... ಮಾನಿಸಿದ ಗಂಡ ಶರತ್ ಕುಮಾರ್ ಸೀದಾ ಉಪ್ಪಾ... ಪೊಲೀಸ್ ಸ್ಟೇಷನ್‌ನಲ್ಲಿ ತನ್ನ ಹೆಂಡತಿ ವಿರುದ್ಧವೇ ... ದಾಖಲಿಸಿದ. ಆ ದೂರಿನ ಪ್ರತಿಯನ್ನು ಏರ್‌ಟೆಲ್‌... ನೀಡಿ ಶ್ವೇತಾಳ ಮೊಬೈಲ್‌ನ ಮೂರು ತಿಂಗಳ ಸಂ... ಕಾಲ್‌ಲಿಸ್ಟ್ ತೆಗೆಸಿದ. ಆಗ ಶ್ವೇತಾಳ 990065... ನಂಬರಿನಿಂದ 9916455566 / 990065... ನಂಬರುಗಳಿಗೆ ಹೋದ ನೂರಾರು ಕಾಲ್ ಡಿಟೇ... ಮೆಸೇಜುಗಳ ವಿವರ ಹೊರಬಿತ್ತು, ಶ್ವೇತಾ ಕರೆ ... ಎರಡೂ ನಂಬರ್‌ಗಳು ಬೇರೆ ಯಾರದ್ದೂ ಅಲ್ಲ, ವಿ... ಪ್ರಭಾಕರ್‌ನ ಎರಡು ಪರ್ಸನಲ್ ನಂಬರ್‌ಗಳು ಎ... ಶರತ್ ಕುಮಾರ್‌ಗೆ ಸ್ಪಷ್ಟವಾಯಿತು.

ಗಂಡ ಮನೆಯಲ್ಲಿಲ್ಲದಾಗ ರಾತ್ರಿ ಹನ್ನೊಂದು, ಹ... ಶುರುವಾದ ಶ್ವೇತಾ ಮತ್ತು ವಿನೋದ್ ನಡುವಿನ ಮೊ... ಸಂಭಾಷಣೆ ಬೆಳಗಿನ ಜಾವ ಮೂರೂವರೆ, ... ಗಂಟೆವರೆಗೂ ನಡೆದಿರುವುದಕ್ಕೆ ಶರತ್ ಕುಮಾ... ಎವಿಡೆನ್ಸಿದೆ. ಶ್ವೇತಾ ಮತ್ತು ವಿನೋದ್‌ರ ಸ್ನೇಹ ... ಗಾಢವಾಗಿತ್ತೆಂದರೆ ತನ್ನ ಗಂಡ ಮನೆಗೆ ಬಂದಿದ್ದು, ಹೊ... ಪ್ರತಿಯೊಂದರ ಬಗ್ಗೆಯೂ ಶ್ವೇತಾ ವಿನೋದ್‌ಗೆ ಮ... ಕಳಿಸಿದ್ದಾಳೆ. 'ನಾನು ಗಂಡನೊಂದಿಗೆ ಲಿಡೋ ಥಿಯೇ... ಹೃತಿಕ್ ರೋಷನ್‌ನ ಸಿನಿಮಾ ನೋಡೋಕೆ ಬಂ... ಪ್ಲೀಸ್ ಡೋಂಟ್ ಕಾಲ್ ಮಿ ಆರ್ ಮೆಸೇಜ್ ಮಿ... ಮೆಸೇಜುಗಳನ್ನು ರವಾನಿಸಿದ್ದಾಳೆ. ಕಡೇ ದಿನ ಗಂಡ... ಬಿಟ್ಟು ಹೋಗುವಾಗಲೂ ಅದನ್ನು ಶ್ವೇತಾ ವಿನೋ... ತಿಳಿಸಿಯೇ ಹೊರಟಿದ್ದಾಳೆ.

ಇದೆಲ್ಲಾ ಗೊತ್ತಿದ್ದೂ ಶ್ವೇತಾಳ ಪ್ರತಿಯೊಂದು... ವಲನವನ್ನು, ಆಕೆ ಹೊರ ಹೋದಾಗ ಆಕೆಯ ಮೊ... ಟವರ್ ಡಿಟೇಲುಗಳನ್ನು ಶರತ್ ಬೆನ್ನತ್ತಿ ಹೋ...

ಕಾರಣಾಂತರದಿಂದಾಗಿ ಈ ಬಾರಿ ಅಣಕ ಪ್ರಕಟವಾಗುತ್ತಿಲ್ಲ. ಮುಂದಿನ ಸಂಚಿಕೆಯಿಂದ ಎಂದಿನಂತೆ ಪ್ರಕಟವಾಗಲಿದೆ. -...

ಭೂಗಳ್ಳ ನಿರಾಣಿ ಜೈಲು ಹಾದಿಯಲ್ಲಿ...

ಶ್ರೀಯುತ ಒಕ್ಕುಂದ ಅವರ 'ಅಡಿಗರ ವಿಮರ್ಶೆ' ಓದಿ ನನಗೆ 'ಕಟುಕನ ಮನೆಯಲ್ಲಿದ್ದ ಗಿಳಿ ಹಾಗೂ ಸಾಧುಮನೆಯ ಗಿಳಿ'ಯ ಕತೆ ನೆನಪಾಯಿತು. ಕಟುಕನ ಮನೆಯಲ್ಲಿದ್ದಾಗ ಅದು 'ಹೊಡಿ, ಕೊಚ್ಚು, ಕೊಲ್ಲು' ಪದಗಳನ್ನೇ ಕಿರುಚಿ ಕಿರುಚಿ ಕಲಿತಂತೆ ಅದು ಸಾಧುಮನೆಗೆ ಬಂದಾಗ ಒಳ್ಳೆ ಮಾತುಗಳನ್ನು ಕಲಿಯಿತಂತೆ. ಒಕ್ಕುಂದ ಅವರಿಗೆ ಕಟುಕನ ಮನೆಯ 'ಅರ್ಥಗಳನ್ನೇ' ಅಡಿಗರು ಹೊಳೆಯಿಸಿದ್ದಾರೆ. ಅನಂತಮೂರ್ತಿ ಅಂಥವರ ಬರಹಗಳಿಗೆ ಮಾತ್ರ ಸಾಧುಮನೆಯ ಗಿಳಿಯ ಅರ್ಥಗಳು ಅನ್ವಯಿಸುತ್ತವೇನೋ ಅಥವಾ ಅಡಿಗರು ಬರೆದ 'ನಾವೆಲ್ಲರೂ ಒಂದೇ ಜಾತಿ, ಒಂದೇ ಮತ, ಒಂದೇ ಕುಲ' ಒಕ್ಕುಂದ ಅವರ ಕಣ್ಣಿಗೆ ಇನ್ನೂ ಬಿದ್ದಿಲ್ಲವೋ? ಇದಕ್ಕೇ 'Selective amnesia' ಅನ್ನುವುದು.


ಅಡಿಗರೇ ಬರೆಯಲಿಲ್ಲವೇ? 'ಕತ್ತಲೆಗೆ ಒಂದೇ ಎರಡೇ ತಲೆ? ಹತ್ತಾರು' ಎಂಬಂತೆ. ಶ್ರೀ ಒಕ್ಕುಂದ ಅವರ ವಿಮರ್ಶೆ ಸಹ ಅದರಲ್ಲೊಂದು. ಅನಂತಮೂರ್ತಿ ಅವರಿಗೆ 'ಶ್ರೀರಾಮನವಮಿಯ ದಿವಸ' ಹೇಗೆ ಕಾಣಿಸುತ್ತದೆ ಎಂಬುದನ್ನು ವಿವರಿಸಿದ್ದಾರೆ. ಒಳ್ಳೆ ಸಾಹಿತ್ಯಕ್ಕೆ ಅವರವರ ಭಾವಕ್ಕೆ ತಕ್ಕಂತೆ ಹೊಳೆಯಿಸುವ ವಿಶಿಷ್ಟ ಶಕ್ತಿಯಿರುತ್ತದೆ. ಒಕ್ಕುಂದ ಅವರಿಗೆ 'Selective amnesia'. ಅಡಿಗರು ಬರೆದ 'ನಾವೆಲ್ಲರೂ ಒಂದೇ ಜಾತಿ' ಪದ್ಯವನ್ನು ಅವರು ಓದಲಿ. ಹೀಗೆ ಅವಸರಕ್ಕೆ ಹಡೆದರೆ ಕೂಸು ಆರೋಗ್ಯವಾಗಿ ಬೆಳೆಯುವ ಬದಲು ಅಲ್ಪಾಯುಷ್ಯ ದಿಂದ ಸಾಯುತ್ತದೆ. ಒಂದು ಕೃತಿಯನ್ನು, ಅದರ ಮೌಲ್ಯವನ್ನು ತಿರುಚಿದರೆ ಅದನ್ನು ಸ್ವೀಕರಿಸುವ ಮಂದಿ ಕೆಲವೇ ಕೆಲವರು.

ಇಂದಿರಾ ಲಂಕೇಶರವರು ಬರೆಯುತ್ತಿರುವ 'ಹುಳಿಮಾವು ಮತ್ತು ನಾನು' ಬರಹ ಅತ್ಯಂತ ಆಪ್ಯಾಯಮಾನವಾದ ಬರಹಗಳಲ್ಲೊಂದು. ಈಗಿನ ಬರೀ ಕಲುಷಿತ, ಕಲಬೆರಕೆ ಬರಹಗಳ ನಡುವೆ ಇದು ಎದ್ದುಕಾಣುವುದೇಕೆಂದರೆ ಅವರ ಯಾವುದೇ ರಾಗ, ದ್ವೇಷವಿಲ್ಲದ ಬರಹ. ಚಿಕ್ಕಚಿಕ್ಕ ವಾಕ್ಯಗಳಲ್ಲಿ ತಮಗೆ ತೋಚಿದ್ದನ್ನು ನೇರವಾಗಿ ಹೇಳಿಬಿಡುತ್ತಾರೆ. ಸ್ನೇಹಿತೆಯರಿಬ್ಬರು ಅಕ್ಕಪಕ್ಕ ಕುಳಿತುಕೊಂಡು ಮಾತಾಡಿಕೊಂಡಷ್ಟು ಆಪ್ತವಾಗಿದೆ ಇಂದಿರಾ ಬರಹ.

ಲಂಕೇಶರ ಬರಹವನ್ನೊಂದೂ ಬಿಡದ ನಾನು ಈಗ ಇವರ ಬರಹಕ್ಕೆ ಫಿದಾ ಆಗಿದ್ದೇನೆ.

-ಮುರಳೀಧರ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ನವೆಂಬರ್ 9ರ ಸಂಚಿಕೆಯಲ್ಲಿ ಭಾರೀ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ಭೂಕಬಳಿಕೆ ಬಗ್ಗೆ ವರದಿ ಓದಿ ಆಶ್ಚರ್ಯವೆನಿಸಿತು.



ಬಿಜೆಪಿ ಪಾಳಯದ ಸಾಲುಸಾಲು ಘಟಾನುಘಟಿ ನಾಯಕರು ಜೈಲು ಪಾಲಾಗುವ ಬೆನ್ನಲ್ಲೇ ಹುಟ್ಟಿಕೊಂಡ ಕಳ್ಳ ನಿರಾಣಿ ತಾನೊಬ್ಬ ಸಮಾಜ ಸುಧಾರಕ ನೆಂದು ಪೋಜು ಕೊಡುತ್ತಾ ಸಾವಿರ ಕೋಟಿ ಸರದಾರನಾದ. ನೂರಾರು ಎಕರೆ ಜಮೀನು ಡಿನೋಟಿಫಿಕೇಷನ್ ಮಾಡಿಸಿ ಕೊಂಡು ಈಗ ಜೈಲುಹಾದಿ ಹಿಡಿದಿರುವ ಈ ಭೂಗಳ್ಳನ ಬಗ್ಗೆ ಲಂಕೇಶ್ ತನ್ನ ತನಿಖಾ ವರದಿ ಮೂಲಕ ಈತನ ಬಂಡವಾಳ ಬಯಲು ಮಾಡಿದ್ದಕ್ಕೆ ಪತ್ರಿಕೆಗೆ ವಂದನೆಗಳು.

-ರಮಜಾನ ಕೆ.ಕೊರ್ತಿ, ಬಾದಾಮಿ

ಹುಬ್ಬಳ್ಳಿ-ಅಂಕೋಲ ರೈಲು ಮಾರ್ಗ ಹಳಿ ತಪ್ಪಿದ ಹುಬ್ಬಳ್ಳಿ-ಅಂಕೋ... ರೈಲುಮಾರ್ಗದ ಬಗೆಗಿನ ಲೇಖನ ಅರ್ಥಪೂರ್ಣವಾಗಿತ್ತು. ... ಹಾರಾಡುವ ವಿಮಾನ ಸ್ವಲ್ಪ ಕೆಳಗೆ ಹಾರಿದರೆ ಯಾವುದೋ ಹೊಸ ಯೋ... ಸರ್ವೆಯಾಗುತ್ತಿದೆ ಎಂದು ಪ್ರತಿಭಟನೆ ನಡೆಸುವವರೂ ಇಲ್ಲಿ ಇಲ್ಲ... ಮಂಗಳೂರು- ಹಾಸನ- ಖಾನಾಪೂರ-ಲೊಂಡ ಮಾರ್ಗಗಳ ದಟ್ಟಡವಿ... ಸಾಗುವಾಗ ಮೌನ ವಾಗಿದ್ದವರು ಈ ಮಾರ್ಗವನ್ನು ಹಳಿ ತಪ್ಪಿಸುವು... ಇದರಲ್ಲಿ ಬಳ್ಳಾರಿಯ ಅದಿರು ಸಾಗಿಸುವ ಲಾರೀ ಮಾಲೀಕರ ಕೈವಾಡವಿ... ಎನ್ನುವ ಸಂದೇಹವಿದೆ. ದಟ್ಟಡವಿಯಲ್ಲಿ ಸಾಗುತ್ತ... ಕಡೂರು-ಚಿಕ್ಕಮಗಳೂರು ಮಾರ್ಗದ ... ಮಾತನಾಡದ ಮಂತ್ರಿ ಜೈರಾಂ ರಮೇ... ಹುಬ್ಬಳ್ಳಿ-ಅಂಕೋಲ ಮಾರ್ಗದ ಬಗೆಗೆ ಈ ನಕಾರ... ಧೋರಣೆ ಅನುಸರಿಸಿದ್ದು ಅರ್ಥವಾಗದ ವಿಷಯ...

-ರಮಾನಂದ ಶರ್ಮಾ, ಬೆಂಗಳ...

ಭ್ರಷ್ಟ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದಂದಿ... ಜನರಿಗೆ ಒಳ್ಳೆಯ ಕನಸುಗಳು ಕೂಡಾ ಬೀಳ... ಕನಸಿನಲ್ಲಿಯೂ ಕೊಳ್ಳಿದೆವ್ವವಾಗಿ ಕಾಡುತ್ತಿದೆ. ... ಅಧಿಕಾರಕ್ಕೆ ಪಾದವೂರಿದೊಡನೇ ರೈತರ ಎದೆಗೆ ಗುಂಡು ಬಿದ್ದವು. ಚರ್ಚ್... ಮಸೀದಿಗಳ ಮೇಲೆ ಬಿದ್ದ ಕಲ್ಲುಗಳಿಗೆ ಲೆಕ್ಕವಿಲ್ಲ, ಸರ್ಕಾರದ ಸುಪರ್ದಿಯ... ಜಮೀನನ್ನು ದೋಸೆಯಂತೆ ಹರಿದು ತಿಂದರೆ, ಕಾಳು ಬೆಳೆವ ... ಭೂಮಿಯನ್ನು ಸುಡುಗಾಡು ಕಂಪನಿಗಳಿಗೆ ಹರಾಜು ಹಾಕಿ ದಿವಾಳಿ ಎಬ... ಮತಗಳನ್ನು ರೂಪಾಯಿಗೆ ಕೊಂಡುಕೊಂಡು ಜನರ ಬಾಯಿಗೆ ಮಣ್ಣು... ದೇಶದಲ್ಲಿಯೇ ನಂ.1 ಭ್ರಷ್ಟ ರಾಜ್ಯ ಎನ್ನುವ ಕೀರ್ತಿ ಪಡೆದುಕೊಂಡಿತು...

ಇಂತಹ ಮಾನಗೆಟ್ಟ ಸರ್ಕಾರಕ್ಕೆ ಸಾಮಾನ್ಯ ಜನರ ಸಂಕಷ್ಟಗಳ ಪ... ಬೇಕಿಲ್ಲ, ತಮ್ಮ ಖಜಾನೆ ತುಂಬಿಸಿಕೊಳ್ಳುವುದಷ್ಟೆ ಬಿಜೆಪಿಗಳಿಗೆ ಮುಖ...

...ಗಾಡಿಯ ತವರು ಮನೆಗೆ ಹೋಗಿದ್ದ ಶ್ವೇತಾಳ ಮೊಬೈಲ್ ...ಗ್ನಲ್ಲು ಬನಶಂಕರಿಯಲ್ಲಿ ಗೋಚರಿಸಲು ಶುರುವಾಗಿದೆ. ಆಕೆ ...ನಶಂಕರಿಯಲ್ಲಿ ವಿನೋದ್‌ನನ್ನೇ ಭೇಟಿಯಾಗಲು ಬಂದಿ...ದ್ದಾಳೆ ಅನ್ನೋದು ಶರತ್‌ನ ಅನುಮಾನ.

ಈ ಗಂಡ ಹೆಂಡಿರ ಜಗಳ ಒಮ್ಮೆ ಸುಮಂಗಲಿ ...ಸೇವಾಶ್ರಮದಲ್ಲಿ ರಾಜಿ ಪಂಚಾಯ್ತಿಗೆ ಒಳಪಟ್ಟಿತ್ತು. ಆ ...ಸಂದರ್ಭದಲ್ಲಿ ಖುದ್ದು ವಿನೋದ್ ಪ್ರಭಾಕರ್ ಶರತ್‌ಗೆ ...ಫೋನು ಮಾಡಿ ಕ್ಷಮೆ ಕೇಳಿದ್ದ. ಇದಾದ ಮೇಲೆ ಶರತ್ ಮತ್ತು ...ಶ್ವೇತಾ ಇಬ್ಬರೂ ವಿಚ್ಛೇದನ ಪಡೆಯುವ ಬಗ್ಗೆ ಮಾತುಕತೆ ...ಆದವು. ಆದರೆ ಶ್ವೇತಾ ಬರೀ ಡಿವೋರ್ಸ್ ಬೇಕೆಂದರೆ ...ದು ಕೋಟಿ ರೂಪಾಯಿ ಕೊಡು, ಮಗು ನಿನಗೇ ಬೇಕಾದರೆ ...ತ್ತು ಕೋಟಿ ರೂಪಾಯಿ ಜೀವನಾಂಶ ಕೊಡು ಎಂಬ ...ಬೇಡಿಕೆ ಇಟ್ಟಳು. ಇದರಿಂದ ಕುಪಿತಗೊಂಡ ಶರತ್ ಮೊನ್ನೆ ...ಸ್ ಕ್ಲಬ್‌ಗೆ ಬಂದು ಎಲ್ಲಾ ಸಾಕ್ಷಿ ಆಧಾರಗಳನ್ನು, ತನ್ನ ಪತ್ನಿ ...ಮತ್ತು ನಟ ವಿನೋದ್ ಪ್ರಭಾಕರ್ ನಡುವಿನ ನಂಟನ್ನು ...ತ್ರಕರ್ತರ ಮುಂದೆ ಬಿಚ್ಚಿಡಲಾರಂಭಿಸಿದ.

ಅಷ್ಟರಲ್ಲಾಗಲೇ ಸಮಯ ಚಾನೆಲ್‌ನವರು "ನೀವು ನಮ್ಮ ...ಚಾನೆಲ್‌ಗೆ ಬನ್ನಿ. ಇಲ್ಲೇ ಮಾತು ಕತೆ ಮಾಡಿ ಬಗೆಹರಿಸು...ವ" ಎಂದು ಶರತ್‌ನನ್ನು ಆಹ್ವಾನಿಸಿದರು. ಶರತ್ ಕೂಡಾ ...ಹೊರಟ. ಆದರೆ ಸಮಯ ಚಾನೆಲ್ ಗೇಟ್ ಬಳಿ ಬಂದಾಗ ...ಶರತ್‌ಗೆ ಆಘಾತವೊಂದು ಕಾದಿತ್ತು. ಅಲ್ಲಾಗಲೆ ಮಾಗಡಿ ...ಪೊಲೀಸರು ಶರತ್‌ನನ್ನು ಬಂಧಿಸಲು ರೆಡಿಯಾಗಿ ನಿಂತಿದ್ದರು. ...ಏನು ಎತ್ತ ಎಂದು ಕೇಳುವಷ್ಟರಲ್ಲಿ ಶರತ್‌ನನ್ನು ಬಂಧಿಸಿದ್ದೂ


...ವ ಮುನ್ನಿರೆಡ್ಡಿಯೊಂದಿಗೆ... ಶ್ವೇತಾ

...ಆಯ್ತು, ಇತ್ತ ಶರತ್ ಕೈಗೆ ಸಿಕ್ಕಿದ್ದಾನೆ ಎಂಬ ಮಾಹಿತಿ ರವಾನೆ ...ಆದ ನಂತರವೇ ಮಾಗಡಿ ಪೊಲೀಸ್ ಠಾಣೆಯಲ್ಲಿ ಈತನ ...ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಇದಾದ ನಂತರ ...ಸಮಯ ಚಾನೆಲ್‌ನವರು ಶರತ್ ಒಬ್ಬನದ್ದೇ ತಪ್ಪು, ಶ್ವೇತಾ ...ಒಳ್ಳೆ ಡೈಮೆಂಡು ಎಂದೆಲ್ಲಾ ಸುದ್ದಿ ಮಾಡಿದರು.

...ಶ್ವೇತಾ ಈಗ ಗಂಡನ ಮನೆಯಲ್ಲಿ ವರದಕ್ಷಿಣೆಗಾಗಿ ತನಗೆ ...ಕಿರುಕುಳ ನೀಡುತ್ತಿದ್ದರು. ನಾನು ತವರಿನಿಂದ ಮೂರು ಕೆಜಿ ಚಿನ್ನ, ...ಹತ್ತು ಕೇಜಿ ಬೆಳ್ಳಿ, ನಲವತ್ತು ಲಕ್ಷದ ಕಾರನ್ನು ತರಬೇಕೆಂದು ...ಪೀಡಿಸುತ್ತಿದ್ದಾರೆ. ಅದನ್ನು ಕೊಡದಿದ್ದರೆ ಕೊಲೆ ಬೆದರಿಕೆ ...ಹಾಕಿದ್ದಾರೆ ಎಂದೆಲ್ಲಾ ಆರೋಪಿಸಿ ಮದುವೆಯಾದ ಭರ್ತಿ ...ಮೂವರೆ ವರ್ಷಗಳ ಬಳಿಕ ದೂರು ದಾಖಲಿಸಿದ್ದಾಳೆ.

...ಪತ್ನಿಯ ಮುನ್ನೂರು ಪೇಜಿನ ಮೊಬೈಲ್ ಜಾತಕ, ...ಇತರು ವಿವರಗಳನ್ನು ಹಿಡಿದು ನಿಂತಿದ್ದ ಪತಿ ಶರತ್ ಈಗ ...ಜೈಲು ಸೇರಿದ್ದಾನೆ. ಇವರಿಬ್ಬರ ಮಧ್ಯೆ ಸಿಲುಕಿದ್ದ ನಟ ...ವಿನೋದ್ ಮಾತ್ರ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿ ...ಕೊಂಡು ಸೈಲೆಂಟಾಗಿಬಿಟ್ಟಿದ್ದಾನೆ.

• ಅರುಣ್ ಕುಮಾರ್.ಜಿ

ತಾವರೆಗೆ ತಗುಲಿಕೊಂಡ ಕಪಿ ಕೊಟ್ರೇಶ

ಇದೊಂಥರಾ ವಿಚಿತ್ರ ಕೇಸು!

ಆಕೆಯ ಹೆಸರು ತಾವರೆ ಗುತ್ತೇದಾರ್.

ಈಕೆ ಬೀದರ್ ಶಾಸಕ ಮಾಲೀಕಯ್ಯ ಗುತ್ತೇದಾರನ ಸಂಬಂಧಿಯಾ? ಎಂದರೆ ಖಂಡಿತವಾಗಿಯೂ ಅಲ್ಲ.

ಈಕೆ ಈಗ ಕನ್ನಡ ಚಿತ್ರರಂಗದ ಉದಯೋನ್ಮುಖ ನಾಯಕನಟಿಯೂ ಹೌದು! ಇತ್ತೀಚೆಗೆ ತೆರೆಕಂಡ 'ಫೈವ್ ಈಡಿಯಟ್ಸ್', ಈಗ ಚಿತ್ರೀಕರಣಗೊಳ್ಳುತ್ತಿರುವ 'ಸುಬ್ರಹ್ಮಣ್ಯಪುರ', 'ಸಿಕ್ಕಾಪಟ್ಟೆ ಇಷ್ಟಪಟ್ಟೆ', ರಂಗಾಯಣ ರಘು ನಾಯಕನಾಗಿ ನಟಿಸಿರುವ 'ಪುಡಾರಿ' ಮತ್ತು ತಮಿಳಿನಲ್ಲಿ ಬಿಡುಗಡೆಗೊಂಡಿರುವ 'ಚಿತ್ತಿರಪೂವೆ' ಚಿತ್ರಗಳಲ್ಲಿ ಈಕೆ ನಾಯಕಿಯಾಗಿ ನಟಿಸಿದ್ದಾಳೆ.

ಈಕೆ ಚಿತ್ರರಂಗಕ್ಕೆ ಬಂದ ಆರಂಭದ ದಿನಗಳಲ್ಲಿ 'ನಾನು ಮಾಲೀಕಯ್ಯ ಗುತ್ತೇದಾರ್ ಅವರ ಮೊಮ್ಮಗಳು. ನಮ್ಮದು ಸಿಕ್ಕಾಪಟ್ಟೆ ದೊಡ್ಡ ಫ್ಯಾಮಿಲಿ' ಎಂದೆಲ್ಲಾ ಹೇಳಿಕೊಂಡಿದ್ದಳು. ಇದನ್ನೆಲ್ಲಾ ಕೇಳಿಸಿಕೊಂಡವರು ಇದು ನಿಜವೇ ಇರಬಹುದು ಎಂದು ನಂಬಿದ್ದರು. ಆದರೆ ತಾವರೆ ಪತ್ರಕರ್ತರ ಕಿವಿಗೇ ಲೋಟಸ್ ಫ್ಲವರ್ ಮಡಗಿರೋದು ಈಗಷ್ಟೇ ಗೊತ್ತಾಗುತ್ತಿದೆ.

'ಏನಮ್ಮಾ ಮಾಲೀಕಯ್ಯ ಗುತ್ತೇದಾರ್ ನಿನ್ನ ತಾತ ಎಂದೆಲ್ಲಾ ಹೇಳಿದ್ದೆಯಲ್ಲ, ನಿಜವಾ?' ಎಂದು ಕೇಳಿದರೆ ತಾವರೆ ಈಗ ಪ್ಲೇಟು ಬದಲಿಸಿ 'ನಮ್ಮ ತಂದೆ ಮಲ್ಲೇಶಯ್ಯ ಮತ್ತು ಮಾಲೀಕಯ್ಯ ಗುತ್ತೇದಾರ್ ಇಬ್ರೂ ಕ್ಲೋಸ್ ಫ್ರೆಂಡ್ಸ್ ಅಷ್ಟೇ. ನಿನ್ನ ಹೆಸರಿನೊಂದಿಗೆ ಗುತ್ತೇದಾರ್ ಎಂಬ ಸರ್‌ನೇಮ್ ಇಟ್ಟುಕೋ ಅಂತಾ ಮಾಲೀಕಯ್ಯನವರು ಹೇಳಿದ್ದರು' ಎಂದು ಬಂಡಲ್‌ನ ಮೇಲೊಂದು ಬಂಡಲ್ ಪೇರಿಸುತ್ತಿದ್ದಾಳೆ.

ಅಸಲೀ ಸಂಗತಿಯೆಂದರೆ ಈ ತಾವರೆ ಲಂಬಾಣಿ ಜನಾಂಗದ ಹುಡುಗಿ. ಮೂಲ ದಾವಣಗೆರೆ ಬಳಿಯ ಕಾರಿಗನೂರಿನವಳು. ಆದರೆ ಈ ತಾವರೆ ಓದಿ ಬೆಳೆದದ್ದೆಲ್ಲಾ ದಾವಣಗೆರೆ ಸಿಟಿಯಲ್ಲಿರುವ ತನ್ನ ಅತ್ತೆ ವಿನೋದಾ ಎಂಬಾಕೆಯ ಮನೆಯಲ್ಲಿ.



ಇಂಥ ತಾವರೆಯ ಬದುಕಿಗೆ ದಾವಣಗೆರೆಯ ಕಪಿ ಮೂತಿಯ ಫೋಟೋಗ್ರಾಫರ್ ಒಬ್ಬ ತಗುಲಿಕೊಂಡಿದ್ದಾನೆ. ದಾವಣಗೆರೆ ಸಿಟಿಯಲ್ಲೇ ಪೂರ್ಣಿಮಾ ಡಿಜಿಟಲ್ ಸ್ಟುಡಿಯೋ ಎಂಬ ಫೋಟೋ ಸ್ಟುಡಿಯೋ ಮಡಗಿಕೊಂಡು ತನ್ನ ಸವೆದುಹೋದ ಕ್ಯಾಮೆರಾದಲ್ಲಿ ಮದುವೆ, ತಿಥಿ ಕಾರ್ಯಕ್ರಮಗಳ ಫೋಟೋ ತೆಗೆದುಕೊಂಡು ಜೀವಿಸುತ್ತಿದ್ದಾನೆ. ಯಾವ ಪ್ರೋಗ್ರಾಂಗಳೂ ಇಲ್ಲವೆಂದಾಗ ತನ್ನ ಸ್ಟುಡಿಯೋದಲ್ಲೇ ಒಂದಿಷ್ಟು ಜನರ ಪಾಸ್‌ಪೋರ್ಟ್ ಸೈಜಿನ ಫೋಟೋ ತೆಗೆದುಕೊಟ್ಟು, ಅದರಿಂದ ಬಂದ ಮುಕ್ಕಾಲು ಪಾಲನ್ನು ಹೆಂಡದಂಗಡಿಗೇ ಸುರಿಯುವ ಪಕ್ಕಾ ಪಿವೋಟು ಗಿರಾಕಿಯಿದು.

ಈ ಮಹಾನುಭಾವನ ಪೂರ್ಣ ನಾಮಧೇಯ ಕೊಟ್ರೇಶ್ ಕುಮಾರ್ ಅಲಿಯಾಸ್ ಕುಮ್ಮಿ.

ಕೊಟ್ರೇಶ್ ಕುಮಾರನ ಹದಿನೈದು ಅಡಿ ಅಗಲದ ಫೋಟೋ ಸ್ಟುಡಿಯೋ ಇರುವುದು ತಾವರೆಯ ಅತ್ತೆಯ ಮನೆಯ ಎದುರೇ. ದಾವಣಗೆರೆಯಲ್ಲಿ ನೆಲೆಸಿರುವ ತಾವರೆಯ ಕುಟುಂಬದ ಯಾವುದೇ ಸಭೆ, ಸಮಾರಂಭ ನಡೆದರೂ ಸದರಿ ಕೊಟ್ರೇಶನನ್ನೇ ಕರೆದು ಫೋಟೋ ತೆಗೆಯಲು ಹೇಳುತ್ತಿದ್ದರು. ಕುಟುಂಬ ಸಮೇತ ಧರ್ಮಸ್ಥಳ, ತಿರುಪತಿ ಎಂದು ಪ್ರವಾಸ ಹೊರಟರೆ ಅಲ್ಲಿಗೂ ಈತನನ್ನು ಕರೆದೊಯ್ಯುತ್ತಿದ್ದರು. ಈ ಸಂದರ್ಭದಲ್ಲಿ ತಾವರೆಯ ಥರಾವರಿ ಫೋಟೋಗಳನ್ನು ತೆಗೆದುಕೊಳ್ಳುತ್ತಿದ್ದ ಕುಮ್ಮಿ ಅದನ್ನು ತನ್ನ ಫೋಟೋಗಳೊಂದಿಗೆ ಮಿಕ್ಸ್ ಮಾಡಿ ಪ್ರಿಂಟು ಹಾಕಿಸಿಕೊಂಡಿದ್ದಾನೆ.

ತಾವರೆ ಇನ್ನೂ ಒಂಭತ್ತನೇ ಕ್ಲಾಸಿನಲ್ಲಿದ್ದಾಗಲೇ ಆಕೆಯ ಬೆನ್ನುಬಿದ್ದ ಕೊಟ್ರೇಶಿ 'ನಾನು ನಿನ್ನನ್ನು ಲವ್ ಮಾಡ್ತಿದೀನಿ. ನನ್ನನ್ನು ಮದುವೆಯಾಗು' ಅಂತಾ ಪೀಡಿಸೋಕೆ ಶುರು ಮಾಡಿದ್ದ. ಅಷ್ಟಕ್ಕೂ ವಯಸ್ಸಿನಲ್ಲಿ ಈ ಕುಮ್ಮಿ ತಾವರೆಗೆ ಹೊಂದುವವನಲ್ಲ. ಈಕೆಗೆ ಆಗ ಹದಿನೈದೋ ಹದಿನಾರೋ ವಯಸ್ಸಾದರೆ ಕೊಟ್ರೇಶನಿಗಾಗಲೇ ಮೂವತ್ತು ದಾಟಿತ್ತು. ಯಾವಾಗ ಕೊಟ್ರೇಶನನ್ನು ತಾವರೆ ಸಂಪೂರ್ಣವಾಗಿ ತಿರಸ್ಕರಿಸಿದಳೋ, ಕುಮ್ಮಿ ಆಕೆಯನ್ನು ಬ್ಲಾಕ್ ಮೇಲ್ ಮಾಡಲು ಆರಂಭಿಸಿದ. ಮಿಕ್ಸ್ ಮಾಡಿದ್ದ ತಮ್ಮಿಬ್ಬರ ಫೋಟೋಗಳನ್ನು ತೋರಿಸಿ ಆಕೆಯಿಂದ ಪದೇ ಪದೇ ದುಡ್ಡು ಪೀಕಿದ. ತಾವರೆ ಎ.ವಿ.ಕೆ. ಕಾಲೇಜ್ ಸೇರಿದ ಮೇಲೂ ಆಕೆಯ ಪೀಡಿಸುವುದನ್ನು ಮುಂದುವರೆಸಿದ.

ಇದಾದ ಮೇಲೆ ಇದ್ದಕ್ಕಿದ್ದ ಹಾಗೆ ಬೆಂಗಳೂರು ಸೇರಿದ ತಾವರೆ ಹೀರೋಯಿನ್ನಾಗಿ ಹೊಸ ಅವತಾರವೆತ್ತಿದ್ದಳು. ಮೆಲ್ಲಗೆ ಕೊಟ್ರೇಶನಿಂದ ಕಳಚಿಕೊಳ್ಳಲು ಆರಂಭಿಸಿದಳು. ಆದರೆ ಕೊಟ್ರೇಶ ಸುಮ್ಮನೆ ಬಿಡಬೇಕಲ್ಲ, ಈಕೆ ಎಲ್ಲೇ ಇದ್ದರೂ ಹಿಂಬಾಲಿಸುತ್ತಿದ್ದ. ಈಕೆಗೆ ಮೇಲಿಂದ ಮೇಲೆ ಫೋನ್ ಮಾಡಿ


ಕೊಟ್ರೇಶ್-ತಾವರೆ

'ಹಣ ಕೊಡು ಇಲ್ಲ ನನ್ನ ಮದುವೆಯಾಗು' ಎಂದು ಕಾಡಲಾರಂಭಿಸಿದ. ಈತನಿಗೆ ಹೆದರಿ ತಾವರೆ ಒಂದೇ ಸಮನೆ ಮನೆಗಳನ್ನು ಬದಲಿಸಿದಳು. ಏನೇ ಮಾಡಿದರೂ ಮತ್ತೆ ಮತ್ತೆ ಈಕೆಯನ್ನು ಹುಡುಕಿ ಬರುತ್ತಿದ್ದ ಕೊಟ್ರೇಶ ಅದ್ಯಾವ ಮಟ್ಟಕ್ಕೆ ಕಾಡಿದನೆಂದರೆ, ಈಕೆ ಚೆನ್ನೈನಲ್ಲಿ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರೆ ಅಲ್ಲಿಗೇ ಹೋಗಿ 'ನಿನ್ನ ಮೇಲೆ ಆ್ಯಸಿಡ್ ಎರಚುತ್ತೇನೆ' ಎಂದು ಬೆದರಿಸಿದ. 'ಯಾಕಪ್ಪಾ ನನ್ನ ಮಗಳ ಬಾಳಲ್ಲಿ ಹೀಗೆಲ್ಲಾ ಆಟವಾಡುತ್ತಿದ್ದೀಯಾ' ಎಂದು ಕೇಳಲು ಹೋದ ತಾವರೆಯ ತಾಯಿ ಚಂದ್ರಮ್ಮನ ಕುತ್ತಿಗೆ ಹಿಸುಕಿದ. ಅದೃಷ್ಟಕ್ಕೆ ಚಂದ್ರಮ್ಮನ ಜೀವಕ್ಕೇನೂ ಆಗಲಿಲ್ಲ.

ಕೊಟ್ರೇಶ್ ಎಂಥಾ ಕೊಳಕ ಮತ್ತು ಧೂರ್ತ ಅನ್ನೋದಕ್ಕೆ ತಾವರೆಯ ಮೊಬೈಲ್‌ನಲ್ಲಿ ರೆಕಾರ್ಡಾಗಿರುವ ಆತನ ಮಾತುಗಳೇ ಸಾಕ್ಷಿಯಾಗಿವೆ.

ಕೊಟ್ರೇಶ ಆರಂಭದಲ್ಲೇ ತಾವರೆಯನ್ನು ಬ್ಲಾಕ್‌ಮೇಲ್ ಮಾಡಲು ಶುರು ಮಾಡಿದಾಗ, ಲವ್ವು-ಗಿವ್ವು ಅಂತಾ ಬೆನ್ನುಬಿದ್ದಾಗ ತಾವರೆ ಹಿಂದೇಟು ಹಾಕಿದ್ದರೆ, ಅಥವಾ ತನ್ನ ಮನೆಯವರಿಗೆ ತಿಳಿಸಿದ್ದರೆ ಯಾವ ಸಮಸ್ಯೆಯೂ ಉದ್ಭವಿಸುತ್ತಿರಲಿಲ್ಲವೇನೋ? ಆದರೆ ಆರಂಭದಲ್ಲಿ ಆತನ ತಾಳಕ್ಕೆ ತಕ್ಕಂತೆ ಕುಣಿದು ಈಗ ಒಲ್ಲೆ ಎಂದಿದ್ದೇ ಆಕೆಯ ತಪ್ಪಾಗಿದೆ.

ಸದ್ಯ ತಾವರೆಯ ತಾಯಿ ದಾವಣಗೆರೆ ಕೆ.ಟಿ.ಜೆ ನಗರ ಠಾಣೆಯಲ್ಲಿ ಕೊಟ್ರೇಶನ ವಿರುದ್ಧ ಕಂಪ್ಲೇಂಟು ಕೊಟ್ಟು ಕಂಬಿ ಎಣಿಸುವಂತೆ ಮಾಡಿದ್ದಾರೆ. ಆದರೆ ಕೊಟ್ರೇಶನ ಸ್ನೇಹಿತರು ಒಂದಿಷ್ಟು ಫೋಟೋಗಳನ್ನು ಮಾಧ್ಯಮಕ್ಕೆ ಕಳುಹಿಸಿದ್ದಾರೆ. 'ಹಳೇ ಪ್ರೇಮಿಗೆ ಕೈಕೊಟ್ಟ ನಟಿ' ಎಂದು ಚಾನೆಲ್‌ಗಳು ಬ್ರೇಕಿಂಗ್ ನ್ಯೂಸ್ ಬಿತ್ತರಿಸುತ್ತಿವೆ. ಬಾಯಿ ತೆರೆದರೆ ಸೊಂಟದ ಕೆಳಗಿನ ಭಾಷೆಯನ್ನೇ ಮಾತಾಡುವ ಸೈಕೋ ಕೊಟ್ರೇಶ ಟೀವಿಗಳಲ್ಲಿ ಹೀರೋ ಆಗಿಬಿಟ್ಟಿದ್ದಾನೆ.

ಚಿತ್ರನಟಿ ತಾವರೆ ಚಾನೆಲ್‌ಗಳಿಗೆ ಸಖತ್ ಸರಕಾಗಿಬಿಟ್ಟಿದ್ದಾಳೆ!

ಇದಕ್ಕೆಲ್ಲಾ ಏನೆನ್ನೋಣ?

...ಸಣ್ಣೂರಿನ ಭಂಗಿ ಕುಟುಂಬಗಳು ಹಲವು ದಶಕಗಳಿಂದ ವಾಸುತ್ತಿದ್ದ ಜಾಗದ ...ಸಿಗೆ ಮುಂದಾದ ಹಿಟ್ಲರ್ ಸರ್ಕಾರದ ವಿರುದ್ಧ ತಮ್ಮ ಮೈಮೇಲೆ ಮಲ ...ಸುರಿದುಕೊಂಡು ಪ್ರತಿಭಟಿಸಿದ್ದು ಮಾನವ ಜನಾಂಗವೇ ತಲೆ ತಗ್ಗಿಸುವಂತಹ ಘಟನೆ. ...ಜೆಪಿಯ ಕಠೋರತೆಗೆ ಇದಕ್ಕಿಂತಲೂ ಬೇರೆ ಸಾಕ್ಷಿ ಬೇಕಿಲ್ಲ. ಘಟನೆ ನಂತರ ...ಓಡಿ ಬಂದು ಬುಳು ಬುಳು ಸೋಗು ಮಾಡಿ ಅತ್ತ ಸಚಿವ ಬಸವರಾಜ ...ಬೊಮ್ಮಾಯಿ, ಒದ್ದರೆ ಬೀಳುವಂತಹ ಮನೆಗಳನ್ನು ಅವರಿಗಾಗಿ ಹೊರಭಾಗದಲ್ಲಿ ...ಕಟ್ಟಿಸಿಕೊಟ್ಟಿರುವುದು ನೋಡಿದರೆ ಬಿಜೆಪಿ ಸರ್ಕಾರಕ್ಕೆ ಮನುಷ್ಯತ್ವವೇ ಇಲ್ಲವೆಂದು ...ಸ್ಪಷ್ಟವಾಗುತ್ತದೆ. ಭಂಗಿ ಕುಟುಂಬಗಳ ಪರವಾಗಿ ಪತ್ರಿಕೆಗಳಲ್ಲಿ ಲೇಖನ ಬರೆದು, ...ಅವರಿಗೆ ಮಾನಸಿಕ ಸ್ಥೈರ್ಯ ತುಂಬುತ್ತಿರುವ ಜೀವಪರ ಕವಿ ವೀರಣ್ಣ ಮಡಿವಾಳರಿಗೆ ...ವಂದನೆಗಳು. 'ಕಂಡಹಾಗೆ' ಅಂಕಣದಲ್ಲಿ ಬಿಜೆಪಿಯ ಮೊಸಳೆ ಕಣ್ಣೀರು, ದ್ವಂದ್ವ ...ನೀತಿಯನ್ನು ಬಟಾಬಯಲುಗೊಳಿಸಿದ ಗೌರಿ ಮೇಡಂ ಅವರಿಗೆ ಕೃತಜ್ಞತೆಗಳು.

- ಬಸವರಾಜ ಹಳ್ಳಿ, ಹಸಮಕಲ್

"ಎಲ್ಲಾ ಹೊಸ ಸಾಹಿತ್ಯ ಚಳವಳಿಗಳೂ ಸಹ ಪಿತೃಹತ್ಯೆಯ ಪಾಪವನ್ನು ತಮ್ಮ ...ಒಡಲೊಳಗೆ ಹೊತ್ತುಕೊಂಡೆ ರೂಪು ತಳೆದಿರುವಂತಹವು. ಹಳೆಯ ಸಾಹಿತ್ಯದ ...ಪ್ರರೂಪಗಳನ್ನೂ ನಾಯಕರೂಪಗಳನ್ನೂ ಹತ್ಯೆಗೈಯದೆ ಹೊಸ ಸಾಹಿತ್ಯವು ...ಹುಟ್ಟಿಬರುವುದು ಅಸಾಧ್ಯ. ಇಂಥ ಪಿತೃಹತ್ಯಾತ್ಮಕ ಕ್ರಿಯೆ ಎಲ್ಲ ಸಾಹಿತ್ಯ ಚಳವಳಿಗಳ ...ಗೂ ಸಾಹಿತ್ಯಕ ವಾಗ್ವಾದಗಳ ಒಂದು ಮೂಲಭೂತ ಅಂಶವಾಗಿರುತ್ತದೆ. ಅಡಿಗರಿಗೆ ...ಇರುವುದು ಒಂದೇ ಬಗೆಯ ಸ್ಮೃತಿ. ಅದು ವೈದಿಕ ಅಥವಾ ಬ್ರಾಹ್ಮಣ ಸ್ಮೃತಿ. ಅವರು ...ಸಂಪ್ರದಾಯ ಪರಂಪರೆಗಳ ಬಗ್ಗೆ ಜಾಗೃತ ಸ್ತರದಲ್ಲಿ ಎಷ್ಟೇ ವಿಶಾಲವಾಗಿ ...ಮಾತನಾಡಿದ್ದರೂ ಸಹ ಅವರ ಪ್ರತಿಮೆಗಳು ಮತ್ತು ವೈಚಾರಿಕ ಪರಿಭಾಷೆ ...ಅಂತಿಮವಾಗಿ ವೈದಿಕ ಸ್ಮೃತಿಯ ಚೌಕಟ್ಟನ್ನು ಮೀರಿ ಹೋಗಲಾರವು."-(ಹೀಗೆ ...ಹೇಳಿದವರು ಡಿ.ಆರ್.ನಾಗರಾಜ್)

...ನಮ್ಮ ನಾಡಿನ ಹೆಮ್ಮೆಯ, ಶ್ರೇಷ್ಠ ಚಿಂತಕರಾದ ಜಿ.ರಾಜಶೇಖರ ಅವರ ...ಮಾತುಗಳಿಗೆ ಸಹಮತ ವ್ಯಕ್ತಪಡಿಸುತ್ತಲೇ ಎಂ.ಡಿ.ಒಕ್ಕುಂದರ ಲೇಖನಕ್ಕೆ ಬೆಂಬಲಿತವಾಗಿ, ಪೂರಕವಾಗಿಯೇ ಚಿಂತಿಸುವ ನಮ್ಮಂತಹವರಿಗೆ ಮತ್ತೆ ಮತ್ತೆ ನೆನಪಾಗುವುದು ಈ ದೇಶದ ಶ್ರೇಷ್ಠ ಲೇಖಕ ಕುವೆಂಪು. ತಮ್ಮ ಅತ್ಯುತ್ತಮ ಸಾಹಿತ್ಯ, ವೈಚಾರಿಕತೆ, ಪುರೋಹಿತಶಾಹಿ ವಿರೋಧಿ ನಿಲುವಿನ ಮೂಲಕ ಒಂದಲ್ಲ, ಎರಡಲ್ಲ ನಾಲ್ಕು ತಲೆಮಾರುಗಳನ್ನು ರೂಪಿಸಿದ ಕುವೆಂಪು ಈಗಲೂ ಮತ್ತೆ ಮತ್ತೆ ಚರ್ಚಿತರಾಗುವ, ಪ್ರಸ್ತುತರಾಗಿರುವ ಲೇಖಕ. ಈ ಹಿನ್ನೆಲೆಯಲ್ಲಿ ತಮ್ಮ ಪ್ರತಿಭೆ, ವಿದ್ವತ್ತನ್ನು ನೆಚ್ಚಿ ಕನ್ನಡದಲ್ಲಿ ಕೆಲವು ಶ್ರೇಷ್ಠ ಕವನಗಳನ್ನು ರಚಿಸಿದ ಅಡಿಗರು ಒಂದು ತಲೆಮಾರನ್ನು ರೂಪಿಸಿದವರೆಂಬುದು ಖಂಡಿತ ಸತ್ಯ. ಈ ರೀತಿ ರೂಪಿತಗೊಂಡ ತಲೆಮಾರಿನ ಕೆಲವು ಪ್ರಮುಖ ಲೇಖಕರು ನಂತರದ ಕಾಲಘಟ್ಟದಲ್ಲಿ ತಮ್ಮನ್ನು ಈ ಅಡಿಗರ ನವ್ಯದ ಧೃತರಾಷ್ಟ್ರ ಆಲಿಂಗನದಿಂದ ಬಿಡಿಸಿಕೊಂಡು ಹಾವು ತನ್ನ ಪೊರೆ ಕಳಚಿದಂತೆ ಸಂಪೂರ್ಣವಾಗಿ ಕಳಚಿಕೊಂಡು ತಮ್ಮನ್ನು ತಾವೇ ರೂಪಾಂತರಗೊಳಿಸಿಕೊಂಡರು. ಇವರು ಯಾವುದೇ ರೀತಿಯ ಶಾಸ್ತ್ರೀಯ ವಿದ್ವತ್ತಿನ ನೆಲೆಗಟ್ಟುಗಳನ್ನು, ಪಂಡಿತ ನುಡಿಗಟ್ಟುಗಳನ್ನು ತಿರಸ್ಕರಿಸಿದರು. ಬದಲಾಗಿ ಇವರು ಭೂತದ ಹೆಳವಂಡವನ್ನು ಸ್ಮರಣೆಯನ್ನು ಕೂಡ ಮಾಡದೆ ಸಾಮಾಜಿಕ ತವತವಕಗಳಿಗೆ, ಸಮಕಾಲೀನ ಸವಾಲುಗಳಿಗೆ ತಮ್ಮ ಸಾಹಿತ್ಯದ ಮೂಲಕ, ಚಳವಳಿಗಳ ಮೂಲಕ, ಪರಸ್ಪರ ವಾಗ್ವಾದದ ಮೂಲಕ ಪ್ರಾಮಾಣಿಕವಾಗಿ ಸ್ಪಂದಿಸುತ್ತ ಗೊಂದಲಗಳಿದ್ದರೂ ಅದನ್ನು ದ್ವಂದವಾಗಿರಿಸದೆ ಒಂದು ಜೀವಪರ ಖಚಿತ ನಿಲುವಿಗೆ ತಮ್ಮನ್ನು ತಾವೇ ತೆತ್ತುಕೊಂಡಿದ್ದರು. ಇದು ಸಾಧ್ಯವಾದದ್ದು ಇವರೆಲ್ಲ ಅಡಿಗರನ್ನು ತಿರಸ್ಕರಿಸಿ ಕುವೆಂಪುರವರನ್ನು ಒಳಗೊಂಡಿದ್ದರಿಂದ. ಈ ಮೂಲಕ ಅಡಿಗರ ಬಹುಪಾಲು ಕವಿತೆಗಳಲ್ಲಿದ್ದ ಪಾಂಡಿತ್ಯದ ಸ್ವಗತಗಳಿಗಿಂತ, ತಲೆದೂಗಿಸುವಂತಹ, ಬೆರಗುಗೊಳಿಸುವಂತಹ ಭಾಷೆಗಿಂತ (ಸಾಹಿತ್ಯಕವಾಗಿ ಅವೆಷ್ಟೇ ಶ್ರೇಷ್ಠವಾಗಿದ್ದರೂ ಕೂಡ), ಟಿಪಿಕಲ್ ಮಧ್ಯಮವರ್ಗಗಳ, ಬ್ರಾಹ್ಮಣ ಸ್ಮೃತಿಯ ಚೌಕಟ್ಟಿಗಿಂತ, ಅನಗತ್ಯ ಹಳಹಳಿಕೆಗಿಂತ ಕುವೆಂಪು, ಲೋಹಿಯಾ ರೂಪಿಸಿದ ಸಮಾಜವಾದದ, ಈ ನೆಲದ ಶೂದ್ರ, ತಳ ಸಮುದಾಯಗಳ ಸಾಮಾಜಿಕ ತವಕ ತಲ್ಲಣಗಳ ತೊದಲು ನುಡಿಗಳೇ ಈ ನಾಡಿನ ಭವಿಷ್ಯತ್ತಿನ ದಿಕ್ಸೂಚಿಗಳಾಗಿ ರೂಪಿಸಿಬಿಟ್ಟರು. ಇದೆಲ್ಲದರ ಜೊತೆಗೆ ಎಲ್ಲೋ ಕಾಫೀ ಕ್ಲಬ್‌ನಲ್ಲಿ ಕುಳಿತುಕೊಂಡು ಕೇವಲ ಉತ್ಕೃಷ್ಟ ಸಾಹಿತ್ಯವನ್ನು ಧ್ಯಾನಿಸುವುದರ ನಿರುಪಯುಕ್ತತೆ ಕೊನೆಗೊಂಡು ಸಾಹಿತ್ಯ ಮತ್ತು ಸಾಮಾಜಿಕತೆ, ಸಾಹಿತ್ಯ ಮತ್ತು ಚಳವಳಿಗಳು ಪ್ರಮುಖತೆಯನ್ನು, ಪ್ರಸ್ತುತತೆಯನ್ನೂ ಪಡೆದುಕೊಳ್ಳತೊಡಗಿದವು. ಈ ಕಟ್ಟುವಿಕೆಯ ಕ್ರಿಯೆಯಲ್ಲಿ ಇವರು ಕಲಾತ್ಮಕತೆಯನ್ನಾಗಲೀ, ಭಾಷೆಯ ಅದ್ಭುತ ಬಳಕೆಯನ್ನಾಗಲಿ ಬಿಟ್ಟುಕೊಡಲಿಲ್ಲ. ಈ ಮೂಲಕ ಕನ್ನಡದಲ್ಲಿ ದಲಿತ, ರೈತ, ಬಂಡಾಯ ಚಳವಳಿಗಳನ್ನು ಹುಟ್ಟು ಹಾಕಿದರು. ಈ ಮೂಲಕ ಒಂದಲ್ಲ ಎರಡು ತಲೆಮಾರನ್ನು ರೂಪಿಸಿದರು. ಇವರಿಂದ ರೂಪಿತಗೊಂಡ ಈ ತಲೆಮಾರಿನ ಬಹುಪಾಲು ಮಂದಿ ಹಳಬರಿರಲಿ, ತರುಣರಿರಲಿ ಇವತ್ತಿಗೂ ಬೌಧಿಕವಾಗಿ ಭ್ರಷ್ಟರಾಗಿಲ್ಲ. ಅನೇಕ ಒತ್ತಡಗಳ, ತಲ್ಲಣಗಳ ಮಧ್ಯೆಯೂ ತಮ್ಮ ಜಾತ್ಯತೀತತೆಯನ್ನಾಗಲೀ, ಸಂಘಪರಿವಾರದ ಕೋಮುವಾದದ ದುಷ್ಟ ಕಾರ್ಯಸೂಚಿಗಳ ಬಗ್ಗೆ ತಮ್ಮೆಲ್ಲರ ನಿರಂತರ ವಿರೋಧವನ್ನು ಎಂತಹ ಬಿಕ್ಕಟ್ಟಿನಲ್ಲಿಯೂ ಬಿಟ್ಟುಕೊಟ್ಟಿಲ್ಲ. ಇದು ಸಾಧ್ಯವಾದದ್ದು ನಾವೆಲ್ಲ ಅಡಿಗರನ್ನು ನೆಚ್ಚದೆ ಕುವೆಂಪುರವರನ್ನು ಅಪ್ಪಿಕೊಂಡಿದ್ದರಿಂದ. ಸಂಘ ಪರಿವಾರದ ಕೋಮುವಾದದ ವಿರುದ್ಧದ ನಮ್ಮ ಚಿಂತನೆಗಳಲ್ಲಿ, ಚಳವಳಿಗಳಲ್ಲಿ ಅಡಿಗರ ಆ ಶ್ರೇಷ್ಠ ಸಾಹಿತ್ಯದ ಸಾಲುಗಳು ನಮಗೆಂದೂ ಪೊರೆಯಲಿಲ್ಲ, ಬೆಳೆಸಲಿಲ್ಲ, ದಿಕ್ಕು ತೋರಿಸಲಿಲ್ಲ, ನೆನಪು ಕೂಡ ಆಗಲಿಲ್ಲ. ಬದಲಾಗಿ ನಮಗೆ ಸ್ಫೂರ್ತಿ ಕೊಟ್ಟಿದ್ದು, ನಾವೆಲ್ಲ ನೆಚ್ಚಿದ್ದು ?ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ?, 'ಸಂಬಂಜವೆಂಬುದು ಬಲು ದೊಡ್ಡದು ಕನ'ವೆನ್ನುವಂತಹ ಸರಳ ಸುಂದರ ಜೀವಪರ ನುಡಿಗಳನ್ನು. ನಮಗೆ ಶ್ರೀರಾಮನವಮಿಯ ದಿವಸ ಕವಿತೆಯ ಶ್ರೇಷ್ಠತೆಗಿಂತ ಶೂದ್ರ ತಪಸ್ವಿಯ, ಬೆರಳ್ಗೆ ಕೊರಳ್‌ನ ಸಮತಾವಾದ ಬಹಳ ಮುಖ್ಯ. ಮುಂದಿನ ತಲೆಮಾರಿಗೂ ಕೂಡ.

- ಬಿ.ಶ್ರೀಪಾದ ಭಟ್, ಬೆಂಗಳೂರು

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 16-11-2011 RNI No. KARKAN200



ಗ್ಲೋಬಲ್ ಶೇಪರ್ ರಮ್ಯಾ

ರಮ್ಯಾಗೆ ಇಂಟರ್‌ನ್ಯಾಷನಲ್ ಅವಾರ್ಡ್ ಒಂದು ಲಭಿಸಿದೆ!

2006ರಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದ ರಮ್ಯಾಗೆ 'ತನನಂ ತನನಂ' ಚಿತ್ರದ ನಟನೆಗಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಲಭಿಸಿತ್ತು. ನಟನೆಯಲ್ಲಾಗಲಿ, ಸೌಂದರ್ಯದಲ್ಲಾಗಲಿ ಕನ್ನಡದಲ್ಲಿ ರಮ್ಯಾಳಿಗೆ ಪರ್ಯಾಯವಾದ ನಟಿಯರಿಲ್ಲ. ಇಂಥ ರಮ್ಯಾಳಿಗೆ ವರ್ಲ್ಡ್ ಇಕನಾಮಿಕ್ ಫೋರಮ್ ಪ್ರಧಾನ ಮಾಡುವ ಗ್ಲೋಬಲ್ ಶೇಪರ್ 2011 ಪ್ರಶಸ್ತಿ ಈ ಬಾರಿ ದಕ್ಕಿದೆ. ಬ್ರಿಟನ್, ಅಮೆರಿಕಾಗಳ ಪ್ರಧಾನಿ-ಅಧ್ಯಕ್ಷರುಗಳು ಪಾಲ್ಗೊಳ್ಳುವ, ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯಲಿರುವ ವರ್ಣರಂಜಿತ ಕಾರ್ಯಕ್ರಮದಲ್ಲಿ ಅಮಿತಾಬ್ ಬಚ್ಚನ್, ಎ.ಆರ್. ರೆಹಮಾನ್‌ರೊಟ್ಟಿಗೆ ರಮ್ಯಾ ಸಹಾ ಈ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾಳೆ.

ಈ ಹಿಂದೆ ಸಿನಿಮಾ-ಕಲೆಗೆ ಸಂಬಂಧಪಟ್ಟಂತೆ ಶಬನಾ ಆಜ್ಮಿ, ಮಲ್ಲಿಕಾ ಸಾರಾಭಾಯ್ ಮುಂತಾದವರು ಈ ಪ್ರಶಸ್ತಿ ಪಡೆದಿದ್ದಾರೆ. ಅಂತಹ ವೇದಿಕೆಯಲ್ಲೇ ಪ್ರಶಸ್ತಿ ಪಡೆಯುವ ಲಕ್ಕು ಲಕ್ಕಿಸ್ಟಾರ್ ರಮ್ಯಾಳಿಗೆ ಕುದುರಿದೆ.

ಅಂದಹಾಗೆ 'ಸಿನಿಮಾ ಮತ್ತು ಸಮಾಜ ಸೇವಾ ವಿಭಾಗಗಳಲ್ಲಿ ರಮ್ಯಾ ಸಾಧನೆ'ಯನ್ನು ಪರಿಗಣಿಸಿ ಆಕೆಗೆ 'ಗ್ಲೋಬಲ್ ಶೇಪರ್ 2011' ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಸಿನಿಮಾದಲ್ಲೇನೋ ರಮ್ಯಾ ಸಾಧನೆ ಮಾಡಿರುವುದು ನಿಜ. ಆದರೆ ಈಕೆ ಮಾಡಿರುವ ಸಮಾಜ ಸೇವೆ ಯಾವುದು ಅಂತಾನೇ ಗೊತ್ತಾಗುತ್ತಿಲ್ಲ!

ಮಂದಾರ ಟೋನಿಯು ನೀನು....

"ಲಾಂಗು-ಮಚ್ಚುಗಳ ಹಂಗಿಲ್ಲದ ಸಿನಿಮಾವನ್ನು ಕನ್ನಡದ 'ಸಭ್ಯ' ... ಗಂಭೀರವಾಗಿ ಪರಿಗಣಿಸಲ್ಲ. ಇದು ನನ್ನದೇ ತಪ್ಪು. ಈ ಚಿತ್ರದಲ್ಲಿ ಕಮ... ಅಂಶಗಳಿಗೆ ಹೆಚ್ಚು ಒತ್ತು ನೀಡಲಿಲ್ಲ. ನನ್ನದೇ ಆದ ದೃಷ್ಟಿಕೋನದಿಂದ ... ಬೆಳೆಸಿದೆ. ನನಗೆ ರಂಗಭೂಮಿ ಹಿನ್ನೆಲೆ ಇದ್ದುದರಿಂದ ಹೀಗಾಯಿತು... ಹೀಗಾಗದಂತೆ ನೋಡಿಕೊಳ್ಳುತ್ತೇನೆ" ಎಂದು ನಿರ್ದೇಶಕ ಜಯತೀರ್ಥ ... ಮಾತನ್ನಾಡಿದ್ದಾರೆ.

'ಒಲವೇ ಮಂದಾರ' ಎಂಬ ಚೆಂದನೆಯ ಸಿನಿಮಾವನ್ನು ಮಾಡಿ... ತೀರ್ಥ ನಂತರದ ಮುಕ್ಕಾಲು ವರ್ಷ ನಾಪತ್ತೆಯಾಗಿದ್ದರು. ಈಗ ಮ... ಚಿತ್ರಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಹಾಜರಾಗಿದ್ದಾರೆ. ಎಲ್ಲಾ ಹೊ... ಹಾಕಿಕೊಂಡು ಮೊದಲ ಚಿತ್ರ ಮಾಡಿದ್ದ ಈತ ಈಗ ಒಂದು ಲೆವೆ... ಮಾಡಿರುವ ಶ್ರೀನಗರ ಕಿಟ್ಟಿಯನ್ನು ಹೀರೋ ಆಗಿ ಆಯ್ಕೆ ಮಾಡಿದ್ದಾರೆ. ಚಿತ್ರಕ್ಕೆ 'ಟೋನಿ' ಎಂಬ ಹೆಸರನ್ನಿಟ್ಟಿದ್ದಾರೆ.



ಎಸ್. ನಾರಾಯಣ್ ನಿರ್ದೇಶನದ 'ಅಯ್ಯಪ್ಪ', ಕಿಪನ್ ರಾವ್ ನಿರ್ದೇಶನದ 'ತ್ಯಾಗರಾಜನಗರ', 'ಕಿಲಾಡಿ ಕಿಟ್ಟಿ' ಸೇರಿದಂತೆ ಹಲವು ಚಿತ್ರಗಳಲ್ಲಿ ಕಿಟ್ಟಿ ನಟಿಸುತ್ತಿದ್ದಾರೆ. ಅದೆಲ್ಲ ಮುಗಿದ ಮೇಲೆ 'ಟೋನಿ' ಟೇಕಾಫ್ ಆಗಬಹುದು.

ಕ್ರಿಕೆಟ್ ಪಿಚ್ಚಲ್ಲಿ ಕಿಚ್ಚಂಗೆ ಟಾಂಗು!

ಹುಬ್ಬಳ್ಳಿಯ ನೆಹರೂ ಕ್ರೀಡಾಂಗಣದಲ್ಲಿ ಸಿನಿಮಾದವರ ಕ್ರಿಕೆಟ್ ಆಟದ ಪ್ರತಿಭಾ ಪ್ರದರ್ಶನದ ಜೊತೆಜೊತೆಗೆ, ಉದ್ಯಮದಲ್ಲಿರುವ ಅಂತಃಕಲಹ ಮತ್ತು ಒಳಜಗಳದ ಪ್ರದರ್ಶನವೂ ಆಗಿದ್ದು ನಿಜಕ್ಕೂ ಶೋಚನೀಯ! ಇಂತಹ ಕ್ರಿಕೆಟ್ ಟೂರ್ನಮೆಂಟನ್ನು ಸಿನಿಮಾದವರು ಆರಂಭಿಸಿದ್ದೇ ತಮ್ಮ ನಡುವಿನ ಪ್ರೀತಿ ಸೌಹಾರ್ದತೆಯನ್ನು ಇನ್ನಷ್ಟು ಗಟ್ಟಿಗೊಳಿಸಲು. ಆದರೆ ಹುಬ್ಬಳ್ಳಿಯಲ್ಲಿ ನಡೆದದ್ದೆಲ್ಲಾ ಅದಕ್ಕೆ ವ್ಯತಿರಿಕ್ತವಾಗಿತ್ತು.

ಮೂರು ದಿನಗಳ ಕಾಲ ನಡೆದ ಈ ಟೂರ್ನಮೆಂಟ್‌ನಲ್ಲಿ ಸುದೀಪ್ ನೇತೃತ್ವದ ಡ್ಯಾನ್ಸರ್ಸ್ ತಂಡ ಮತ್ತು ಶಿವರಾಜ್‌ಕುಮಾರ್ ನೇತೃತ್ವದ ನಿರ್ಮಾಪಕರ ತಂಡ ಫೈನಲ್ಸ್ ತಲುಪಿತು. ಅವತ್ತು ಇಬ್ಬರು ನಟರ ನಿಜ ಅಭಿಮಾನಿಗಳು ಮತ್ತು ಬಾಡಿಗೆ ಅಭಿಮಾನಿಗಳು ಹುಬ್ಬಳ್ಳಿ ಮೈದಾನದಲ್ಲಿ ಜಮಾಯಿಸಿದ್ದರಿಂದ ಏನಾದರೂ ದೊಂಬಿಗಲಭೆ ಆಗೇಆಗುತ್ತದೆ ಎಂಬ ಸೂಚನೆ ಆರಂಭದಲ್ಲೇ ದೊರಕಿತ್ತು. ಕೊನೆಗೆ ಏನು ಆಗಬಾರದಿತ್ತೋ ಅದು ಆಗೇ ಬಿಟ್ಟಿತು.

ಶಿವರಾಜ್‌ಕುಮಾರ್ ನೇತೃತ್ವದ ನಿರ್ಮಾಪಕರ ತಂಡದಲ್ಲಿ ನಿರ್ಮಾಪಕರಲ್ಲದೇ ಅನೇಕ ಯುವ ಲೀಗ್ ಆಟಗಾರರು ಆಡುತ್ತಿರುವುದನ್ನು ಫೈನಲ್ಸ್‌ನ ಹಿಂದಿನ ದಿನವೇ ಶಾಸಕರ ತಂಡದ ನಾಯಕ ಮಿನಿಸ್ಟರ್ ರಾಜುಗೌಡ ವಿರೋಧಿಸಿದ್ದರು. ಈ ಕಾರಣಕ್ಕಾಗಿ ಟಾಸ್ ಹಾಕಿದ ನಂತರ ಸುಮಾರು 45 ನಿಮಿಷಗಳ ಕಾಲ ಆಟ ಆರಂಭವಾಗಲೇ ಇಲ್ಲ. ಮಿನಿಸ್ಟರ್ ರಾಜುಗೌಡ ಮತ್ತು ಶಿವಣ್ಣ ತಂಡದ ಉಪನಾಯಕ ಶ್ರೀಕಾಂತ್ ನಡುವೆ ದೊಡ್ಡ ಮಟ್ಟದ ಮಾತಿನ ಚಕಮಕಿ ನಡೆಯಿತು. ಕೊನೆಗೆ ಶಿವಣ್ಣ ಮತ್ತು ರಾಘಣ್ಣ ಮಧ್ಯಸ್ಥಿಕೆ ವಹಿಸಿ ಈ ವಿವಾದಕ್ಕೆ ತೆರೆಎಳೆದರು.

ಸುದೀಪ್‌ನ ಒಣ ಪ್ರತಿಷ್ಠೆ ಮತ್ತು ಅಹಂಕಾರವನ್ನು ಮಟ್ಟಹಾಕಲೇಬೇಕೆಂದು ಅವತ್ತು ಶಿವಣ್ಣನ ಅಭಿಮಾನಿಗಳು ಸ್ಕೆಚ್ ಹಾಕಿದ್ದರು. ಇದಕ್ಕೆ ಆ ಅಭಿಮಾನಿಗಳು ನೀಡುವ ಕಾರಣವೂ ಕುತೂಹಲಕಾರಿಯಾಗಿದೆ. ಅದೇನೆಂದರೆ ಕಳೆದ ತಿಂಗಳ ಹಿಂದೆ ನಡೆದ ಸೆಲೆಬ್ರಿಟಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಶಿವಣ್ಣನನ್ನು ತಂಡದಲ್ಲಿ ಸೇರಿಸಿಕೊಳ್ಳದೇ ಸುದೀಪ್ ಅವಮಾನ ಮಾಡಿದ್ದರಂತೆ! ಕನ್ನಡ ಚಿತ್ರರಂಗದ ಪರವಾಗಿ ತಂಡವನ್ನು ರಚಿಸಿದ್ದರೂ ಸುದೀಪ್ ತನ್ನ ಹಿಂಬಾಲಕರನ್ನು ತಂಡದಲ್ಲಿ ಸೇರಿಸಿ ಪಕ್ಷಪಾತ ಮಾಡಿದ್ದರು ಎಂಬುದು ಅವರು ಮಾಡುವ ಮತ್ತೊಂದು ಆರೋಪ. ಈ ಕಾರಣಕ್ಕಾಗಿ ಏನೇ ಆದರೂ ಸುದೀಪ್ ತಂಡವನ್ನು ಸೋಲಿಸಿ ಶಿವಣ್ಣ ರಾಜ್‌ಕಪ್ ಕೈಗೆತ್ತಿಕೊಳ್ಳಬೇಕೆಂಬುದು ಅಭಿಮಾನಿಗಳ ಹಠವಾಗಿತ್ತು.

ಶಿವಣ್ಣನ ಅಭಿಮಾನಿಗಳಿಗಿಂತ ಮೊದಲು ಫೈಟರ್ಸ್ ತಂಡದ ನಾಯಕ ವಿಜಿ ಆರಂಭದಲ್ಲೇ ಸುದೀಪ್ ನೇತೃತ್ವದ ಡ್ಯಾನ್ಸರ್ಸ್ ತಂಡದ ಮೇಲೆ ಕೆಂಡ ಕಾರಿದ್ದರು. ಹಾಗೆಯೇ ನಿರ್ದೇಶಕರ ತಂಡದ ನಾಯಕ ದರ್ಶನ್ ಕೂಡಾ ತನ್ನ ಸ್ನೇಹಿತ ವಿಜಿಯ ಬೆಂಬಲಕ್ಕೆ ಪರೋಕ್ಷವಾಗಿ ನಿಂತಿದ್ದರು. ಇದಲ್ಲದೆ ಸಂಕಲನಕಾರರ ತಂಡದ ನಾಗೇಂದ್ರ ಅರಸ್ ಯಾವುದೇ ಕಾರಣಕ್ಕೂ ಸುದೀಪ್ ತಂಡದ ವಿರುದ್ಧ ಸೋಲಲೇಬಾರದೆಂದು



ತನ್ನ ತಂಡದ ಆಟಗಾರರಿಗೆ ಕಟ್ಟಪ್ಪಣೆ ಮಾಡಿದ್ದರು.... ಹೀಗೆ ಹುಬ್ಬಳ್ಳಿಯಲ್ಲಿ ಬಹುತೇಕ ಎಲ್ಲಾ ತಂಡದವರು ಸುದೀಪ್ ನಾಯಕತ್ವದ ಡ್ಯಾನ್ಸರ್ಸ್ ತಂಡದ ಮೇಲೆ ಕಣ್ಣಿಟ್ಟಿದ್ದರು.

ಸುದೀಪ್ ಮತ್ತು ಶಿವರಾಜ್‌ಕುಮಾರ್ ತಂಡದ ಆಟಗಾರರ ನಡುವೆ ಒಂದು ಸಿಲ್ಲಿ ಕಾರಣಕ್ಕಾಗಿ ಮಾತಿನ ಚಕಮಕಿ ಆರಂಭವಾಯಿತು. ಆ ನಂತರ ವಿಕೆಟ್ ಕೀಪಿಂಗ್ ಮಾಡುತ್ತಿದ್ದ ಸುದೀಪ್ ಗ್ಲೌಸ್ ತೆಗೆದು ತಾನೇ ಬೌಲಿಂಗ್ ಮಾಡಲು ಇಳಿದರು. ಆಗ ಅವರು ಚಿಕ್ಕಮಕ್ಕಳಿಗೆ ಬೌಲಿಂಗ್ ಮಾಡಿದಂತೆ ಮಾಡಿದ್ದೇ ಶಿವಣ್ಣನ ಅಭಿಮಾನಿಗಳ ಸಿಟ್ಟು ನೆತ್ತಿಗೇರಲು ಕಾರಣವಾಯಿತು. ಆ ಒಂದು ಸಿಲ್ಲಿ ಓವರ್ ನಂತರ ಸುದೀಪ್ ಮೈದಾನದಿಂದ ನಿರ್ಗಮಿಸಿದಾಗ ಮತ್ತೆ ಜಗಳ ಆರಂಭವಾಯಿತು.

ಒಂದು ಮೂಲದ ಪ್ರಕಾರ ಶಿವಣ್ಣನ ಅಭಿಮಾನಿಗಳು ಸುದೀಪ್ ಜೊತೆ ಮಾತಾಡುವಾಗ ತಳ್ಳಾಟದಲ್ಲಿ ತೊಡಗಿದರಂತೆ! ಕೊನೆಗೆ ಸುದೀಪ್, ರಾಘಣ್ಣ ಮತ್ತು ಶಿವಣ್ಣ ಒಟ್ಟಿಗೆ ಸೇರಿ ಸಮಸ್ಯೆಯನ್ನು ತಮ್ಮತಮ್ಮಲ್ಲೇ ಬಗೆಹರಿಸಿಕೊಂಡರು. ಸುದೀಪ್ ಮೈಕ್ ಹಿಡಿದು ಜನರ ಸಮ್ಮುಖದಲ್ಲೇ ನಡೆದ ಘಟನೆಯ ಬಗ್ಗೆ ಸ್ಪಷ್ಟೀಕರಣ ನೀಡಿದರು.

ಇದಾದ ನಂತರ ಸುದೀಪ್ ಮತ್ತೆ ಫೀಲ್ಡಿಂಗ್ ಮಾಡಲು ಮೈದಾನಕ್ಕೆ ತೆರಳಿದರು. ಆದರೆ ಅಷ್ಟೊತ್ತಿಗೆಲ್ಲಾ ಈ ಗಲಾಟೆಯಿಂದ ಕನ್ನಡ ಚಿತ್ರರಂಗದ ಒಗ್ಗಟ್ಟು ಮತ್ತು ಇಮೇಜಿಗೆ ಸಾಕಷ್ಟು ಹಾನಿಯಾಗಿತ್ತು. ಆದರೂ ಎರಡೂ ತಂಡದ ಆಟಗಾರರು ಒಬ್ಬರನ್ನೊಬ್ಬರು ಗುರಾಯಿಸುತ್ತಾ, ಕಿಚಾಯಿಸುತ್ತಾ ಆಟ ಮುಂದುವರೆಸಿದ್ದರಿಂದ ಅಲ್ಲಿ ಟೆನ್ಸ್ ವಾತಾವರಣ ನಿರ್ಮಾಣವಾಗಿತ್ತು. ನಿರ್ದೇಶಕರ ಸಂಘದ ಅಧ್ಯಕ್ಷ ಎಂ.ಎಸ್.ರಮೇಶ್ ಮತ್ತು ಉಳಿದ ಪದಾಧಿಕಾರಿಗಳು ಈ ಫೈನಲ್ಸ್ ಪಂದ್ಯ ಮುಗಿದು ಹೋದರೆ ಸಾಕು ಎಂದು ಉಸಿರುಬಿಗಿಹಿಡಿದು ಕುಳಿತಿದ್ದರು.

ಈ ಎಲ್ಲಾ ಘಟನೆಗಳಿಂದ ಸುದೀಪ್ ತುಂಬಾ ಮನನೊಂದಿದ್ದರು. ಈ ಕಾರಣಕ್ಕಾಗಿಯೇ ಪಂದ್ಯ ಮುಗಿಯುವ ಮೊದಲೇ ಕ್ರೀಡಾಂಗಣದ ಸುತ್ತ ಕಾಲ್ನಡಿಗೆಯಲ್ಲಿ ಹೋಗಿ ತನಗೆ ಬೆಂಬಲಿಸಿದ ಪ್ರೇಕ್ಷಕರಿಗೆ ಕೃತಜ್ಞತೆ ಸಲ್ಲಿಸಿ ಸೀದಾ ತನ್ನ ರೂಮ್‌ಗೆ ಹೊರಟುಹೋದರು. ಶಿವರಾಜ್‌ಕುಮಾರ್ ತಂಡ ಅಧಿಕೃತವಾಗಿ ಗೆದ್ದಾಗ ಅವರನ್ನು ಅಭಿನಂದಿಸಲು ಅಲ್ಲಿ ಸುದೀಪ್ ತಂಡದ ಯಾವೊಬ್ಬ ಆಟಗಾರನೂ ಇರಲಿಲ್ಲ. ಅಷ್ಟೇ ಅಲ್ಲ, ರನ್ನರ್ಸ್ ಅಪ್ ಪ್ರಶಸ್ತಿಯನ್ನು ಸ್ವೀಕರಿಸಲು ಸುದೀಪ್ ತನ್ನ ತಂಡದ 20ನೆಯ ಆಟಗಾರನನ್ನು ಕಳಿಸಿಕೊಡುವ ಮುಖಾಂತರ ಮತ್ತೊಮ್ಮೆ ತನ್ನ ಬಲವಾದ ಪ್ರತಿಭಟನೆಯನ್ನು ಸಾಂಕೇತಿಕವಾಗಿ ಪ್ರದರ್ಶಿಸಿದರು.

ಹುಬ್ಬಳ್ಳಿಯಲ್ಲಿ ಶಿವರಾಜ್‌ಕುಮಾರ್ ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರಿಂದ ಕ್ರೀಡಾಂಗಣದಲ್ಲಿ ಒಂದು ರೀತಿಯ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿ... ಅದೇ ಸಂದರ್ಭದಲ್ಲಿ ಸಚಿವ ರಾಜುಗೌಡರ ಅ... ಗಳೂ ಅಪಾರ ಸಂಖ್ಯೆಯಲ್ಲಿದ್ದು ಅವರೆಲ್ಲರು... ಪರ ನಿಂತರು. ಅಂದಹಾಗೆ, ರಾಜುಗೌಡ ಮತ್ತು... ಸ್ನೇಹಿತರು ಮಾತ್ರವಲ್ಲ ಅವರಿಬ್ಬರೂ ಒಂದೇ... ಸೇರಿದವರೆಂಬುದನ್ನೂ ಗಮನಿಸಬಹುದು.

ಸಿನಿಮಾದವರ ಈ ಕ್ರಿಕೆಟ್ ಪಂ... ಕಲ್ಪನೆಯನ್ನು ಹುಟ್ಟುಹಾಕಿದ್ದೇ ನೃತ್ಯ ನಿ... ರಾಜೇಶ್. ಕಳೆದ ವರ್ಷ ಅಂಬರೀಶ್ ಈ ಕ್ರಿಕೆ... ಅನ್ನು ವಿರೋಧಿಸಿದ್ದರೂ ಸುದೀಪ್ ಬೆಂ... ರಾಜೇಶ್ ದಾವಣಗೆರೆಯಲ್ಲಿ ಇದನ್ನು ಯ... ನಡೆಸಿದ್ದರು. ಈ ಬಾರಿಯ ಟೂರ್ನ... ಜವಾಬ್ದಾರಿಯನ್ನು ನಿರ್ದೇಶಕರ ತ...



...ವಹಿಸಿಕೊಂಡಿತ್ತು. ಮಾತ್ರವಲ್ಲ ... ಎಲ್ಲ ಸೌಲಭ್ಯಗಳನ್ನೂ ನಿರ್ದೇಶಕರ ತಂ... ಮಾಡಿತ್ತು. ಆದರೂ ಈ ತಾರೆಯರ ... ಜಿದ್ದಾಜಿದ್ದಿಯಿಂದಾಗಿ ಎಲ್ಲವೂ ಕೆಸರು... ಹೋಯಿತು.

ಈ ಬಾರಿಯ ಟೂರ್ನಮೆಂಟ್... ವಾದವಿವಾದ ಮತ್ತು ಟೆನ್‌ಷನ್ ಅನ್ನು... ಸಿನಿಮಾ ತಾರೆಯರ ಕ್ರಿಕೆಟ್ ಮ್ಯಾಚ್ ಮು... ನಡೆಯುವುದು ಸ್ವಲ್ಪ ಡೌಟೇ! ಅದೇನೆ ಇ... ತನಕ ಅತ್ಯಂತ ಸ್ನೇಹದಿಂದ ಇದ್ದ ಶಿವಣ್ಣ ಮ... ನಡುವೆ ಈಗ ಒಂದು ದೊಡ್ಡ ಕಂದಕವೇ ... ಈ ಭಿನ್ನಾಭಿಪ್ರಾಯ ಅವರಿಬ್ಬರಿಗೆ ಮಾತ್ರ... ಉದ್ಯಮದ ಮೇಲೆಯೇ ಕರಿನೆರಳು ಬೀ... ಆದಷ್ಟು ಬೇಗ ಬಗೆಹರಿದರೆ ಎಲ್ಲರಿಗೂ ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -560
Phone : 26676427, Fax : 26604536, E-mail :lankesh70@rediffmail.com